

ಕರ್ನಾಟಕ ಸರ್ಕಾರ

# ನಾ ಕಂಡ ಪುಟ್ಟಣ್ಣ ಕಣಗಾಲ್

ಡಾ. ಡಿ. ಬಿ. ಬಸವೇಗೌಡ

ಕನ್ನಡ ಪುಸ್ತಕ ಪ್ರಾಧಿಕಾರ

# ನಾ ಕಂಡ
# ಪುಟ್ಟಣ್ಣ ಕಣಗಾಲ್

ಡಾ. ಡಿ.ಬಿ. ಬಸವೇಗೌಡ, ಬಿ.ಎ., ಎಲ್.ಎಲ್.ಬಿ., ಡಿ.ಲಿಟ್.

ಕರ್ನಾಟಕ ಸರ್ಕಾರ
**ಕನ್ನಡ ಪುಸ್ತಕ ಪ್ರಾಧಿಕಾರ**
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು-೫೬೦ ೦೦೨

**NAA KANDA PUTTANNA KANAGAL**-A Book Written by **Dr. D.B. Basavegowda** and Published by ***B.H. Mallikarjuna,*** Administrative Officer, Kannada Pustaka Pradhikara, Kannada Bhavana, J.C. Road, Bangalore-560 002.

© ಈ ಆವೃತ್ತಿಯ ಗ್ರಂಥಸ್ವಾಮ್ಯ : **ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು**

| | | |
|---|---|---|
| ಪ್ರಥಮ ಮುದ್ರಣ | : | **೧೯೮೫** |
| ಎರಡನೆ ಮುದ್ರಣ | : | **೧೯೮೬** |
| ತೃತೀಯ ಮುದ್ರಣ | : | **೨೦೧೧** |
| ಪುಟಗಳು | : | **xvi + ೨೬೨ = ೨೭೮** |
| ಪ್ರತಿಗಳು | : | **೧,೦೦೦** |
| ಬೆಲೆ | : | **₹ ೧೫೦/-** |

| | | |
|---|---|---|
| First Print | : | **1985** |
| Second Print | : | **1986** |
| Third Print | : | **2011** |
| Pages | : | **xvi + 262 = 278** |
| Copies | : | **1,000** |
| Price | : | **₹ 150/-** |

ಪ್ರಕಾಶಕರು
**ಬಿ.ಹೆಚ್. ಮಲ್ಲಿಕಾರ್ಜುನ**
ಆಡಳಿತಾಧಿಕಾರಿಗಳು
ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು-೫೬೦ ೦೦೨

ಕರಡು ತಿದ್ದಿದವರು : **ಲೇಖಕರು**

ಮುದ್ರಕರು :
**ಸತ್ಯಶ್ರೀ ಪ್ರಿಂಟರ್ಸ್ ಪ್ರೈ. ಲಿ.,**
ನಂ. ೧೬/೧, ೨ನೇ ಮುಖ್ಯರಸ್ತೆ, ೩ನೇ ಅಡ್ಡರಸ್ತೆ
ಕಸ್ತೂರಿಬಾ ನಗರ, ಮೈಸೂರು ರಸ್ತೆ, ಬೆಂಗಳೂರು-೫೬೦ ೦೨೬
ದೂರವಾಣಿ : ೦೮೦-೨೬೭೪೮೮೧೧; ಮೊ : ೯೩೪೨೮೬೪೬೭೧

# ಅಧ್ಯಕ್ಷರ ಮಾತು

ಕನ್ನಡ ಪುಸ್ತಕ ಪ್ರಾಧಿಕಾರ ಕನ್ನಡ ಪುಸ್ತಕೋದ್ಯಮದ ಅಭಿವೃದ್ಧಿಗಾಗಿಯೇ ಸ್ಥಾಪಿತವಾದ ಸರ್ಕಾರದ ಅಂಗಸಂಸ್ಥೆಯಾಗಿದೆ. ಕನ್ನಡ ಅಪರೂಪದ, ಮೌಲಿಕ, ಗಂಭೀರ ಸ್ವರೂಪದ ಪುಸ್ತಕಗಳನ್ನು ಪ್ರಕಟಿಸುವುದು ಪ್ರಾಧಿಕಾರದ ಹಲವು ಯೋಜನೆಗಳಲ್ಲಿ ಒಂದಾಗಿದೆ. ಅಪರೂಪಕ್ಕೆ ಸೃಜನಾತ್ಮಕ ಸಾಹಿತ್ಯದ ಪ್ರಕಟಣಾ ಕಾರ್ಯವನ್ನು ಕೈಗೆತ್ತಿಕೊಳ್ಳುವುದಾದರೂ, ವಿಶೇಷವಾಗಿ ಜನಪ್ರಿಯ ಸಾಹಿತ್ಯ ಪ್ರಕಾರಕ್ಕೆ ಸೇರದ ಕೃತಿಗಳನ್ನೇ ಅಂದರೆ, ವೈದ್ಯ, ವಿಜ್ಞಾನ, ಜೀವನ ಚರಿತ್ರೆ ಸಾಮಾಜಿಕ ಅಧ್ಯಯನ, ಮುಂತಾದ ಪ್ರಕಾರಗಳಿಗೆ ಸೇರಿದ ಕೃತಿಗಳನ್ನು ಪ್ರಕಟಿಸುತ್ತಾ ಬಂದಿದೆ.

**'ನಾ ಕಂಡ ಪುಟ್ಟಣ್ಣ ಕಣಗಾಲ್'** ಡಾ. ಡಿ.ಬಿ. ಬಸವೇಗೌಡರು ಸುಮಾರು ೨೬ ವರ್ಷಗಳ ಹಿಂದೆಯೇ ಪ್ರಕಟಿಸಿದ ಕೃತಿ. ಶ್ರೀಯುತರು ಅಂದು ನನಗೆ ಈ ಕೃತಿಯ ಪ್ರತಿಯನ್ನು ಕಳುಹಿಸಿದಾಗ ಅದನ್ನು ಮೈ ಮರೆತು ಓದಿದೆ. ಕನ್ನಡದ ಒಬ್ಬ ಚಲನಚಿತ್ರ ನಿರ್ದೇಶಕರ ಬಗ್ಗೆ ೨೫ ವರ್ಷಗಳಷ್ಟು ಹಿಂದೆಯೇ ಬಹಳ ಆತ್ಮೀಯತೆಯಿಂದ ಬರೆದ ಕೃತಿ ಇದು. ಓದಿದ ಎಷ್ಟೋ ಕಾಲ ಈ ಪುಸ್ತಕದ ಗುಂಗಿನಿಂದ ನನಗೆ ಹೊರಬರಲಾಗಲಿಲ್ಲ. ಪ್ರಕಟವಾದ ಒಂದು ವರ್ಷದಲ್ಲೇ ಮರುಮುದ್ರಣಗೊಂಡ ಈ ಕೃತಿಯ ಪ್ರತಿಗಳು ಮುಗಿದುಹೋಗಿ ಕನ್ನಡ ಓದುಗರಿಗೆ ಲಭ್ಯವಿಲ್ಲದಂತಾದವು. ಪುಟ್ಟಣ್ಣ ಕಣಗಾಲ್ ಅಭಿಮಾನಿಗಳಲ್ಲಿ ನಾನೂ ಒಬ್ಬ. ಕನ್ನಡ ಚಿತ್ರನಿರ್ದೇಶಕರಿಗೆ ತಾರಾ ವರ್ಚಸ್ಸನ್ನು ತಂದುಕೊಟ್ಟ ಪ್ರಪ್ರಥಮ ನಿರ್ದೇಶಕರಿವರು ಎಂದರೆ ತಪ್ಪಾಗಲಾರದು. 'ಕ್ಲಾಸ್ ಮತ್ತು ಮಾಸ್' ಎರಡೂ ಬಗೆಯ ಪ್ರೇಕ್ಷಕರ ಮನಸೂರೆಗೊಂಡ ಈ ನಿರ್ದೇಶಕ ಭಾರತೀಯ ಚಿತ್ರರಂಗಕ್ಕೆ ನೀಡಿದ ಕೊಡುಗೆ ಅಪಾರ. ಬಡತನದಲ್ಲಿ ಹುಟ್ಟಿ, ಸ್ವಂತ ಪ್ರತಿಭೆಯಿಂದ ಕನ್ನಡಿಗರ ಮನೆಮಾತಾಗಿದ್ದ ಇವರು ದುರಾದೃಷ್ಟವಶಾತ್ ಅಕಾಲ ಮರಣಕ್ಕೆ ತುತ್ತಾದ ಮಹಾನ್ ಚೇತನ. ಇವರ ಅತ್ಯಂತ ಸಮೀಪವರ್ತಿಯಾಗಿದ್ದ ಲೇಖಕರು ಪುಟ್ಟಣ್ಣನವರ ವ್ಯಕ್ತಿತ್ವವನ್ನು

ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಪುಟ್ಟಣ್ಣನವರು ೧೯೬೭ರಲ್ಲಿ ನಿರ್ದೇಶಿಸಲು ಪ್ರಾರಂಭಿಸಿದ 'ಸಾವಿರ ಮೆಟ್ಟಿಲು' ಚಿತ್ರವು ಅನಿರೀಕ್ಷಿತ ಕಾರಣಗಳಿಂದ ನಿಂತು ಹೋದಾಗ ಅದನ್ನು ೨೦೦೬ರಲ್ಲಿ ಅವರ ನಿಧನಾನಂತರ ಪೂರ್ಣಗೊಳಿಸಿದ ಸಾಹಸಿ ಡಾ. ಡಿ.ಬಿ. ಬಸವೇಗೌಡರು. ಇವರ ಈ ಕೃತಿ ಜನಸಾಮಾನ್ಯರಿಗೆ ದೊರೆಯಲೆಂದು ಮರುಮುದ್ರಿಸಲು ಅನುಮತಿ ಕೋರಿದಾಗ ಅವರು ಒಪ್ಪಿದ್ದಕ್ಕಾಗಿ ಕೃತಜ್ಞನಾಗಿದ್ದೇನೆ.

ಈ ಕೃತಿಯ ಪ್ರಕಟಣೆಯಲ್ಲಿ ಆಸಕ್ತಿ ವಹಿಸಿದ ಪ್ರಾಧಿಕಾರದ ಆಡಳಿತಾಧಿಕಾರಿ -ಗಳಾದ ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ, ಶ್ರೀ ಕೆ. ಮುಕುಂದನ್, ಪ್ರಾಧಿಕಾರದ ಎಲ್ಲಾ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಗೆ ಆಭಾರಿಯಾಗಿ-ದ್ದೇನೆ. ಕನ್ನಡ ವಾಚಕ ಲೋಕ ಈ ಕೃತಿಯನ್ನು ತುಂಬು ಹೃದಯದಿಂದ ಸ್ವಾಗತಿಸಲೆಂದು ಹಾರೈಸುತ್ತೇನೆ.

(ಡಾ. ಸಿದ್ಧಲಿಂಗಯ್ಯ)
ಅಧ್ಯಕ್ಷರು



"ನನಗೆ ಚಿತ್ರ ಮಾಡುವುದನ್ನು ಬಿಟ್ಟು ಬೇರಾವ ವಿದ್ಯೆಯೂ ಗೊತ್ತಿಲ್ಲ. ನನ್ನ ಕೊನೆಯ
ಉಸಿರಿರುವ ತನಕ ಚಿತ್ರಗಳನ್ನು ಮಾಡುತ್ತಲೇ ಇರುತ್ತೇನೆ. ಅದೇ ನನ್ನ ಉಸಿರು,
ಅದೇ ನನ್ನ ಪ್ರಾಣ. ಅದರಿಂದಾಗಿ ನನ್ನ ಕನಸಿನಲ್ಲಿಯೂ ಕ್ಯಾಮರಾ ಕಾಣಿಸುತ್ತದೆ."

-ಪುಟ್ಟಣ್ಣ ಕಣಗಾಲ್

# ತೆರೆ ಸರಿಯುವ ಮುನ್ನ...

ಈ ಪುಸ್ತಕ ತೃತೀಯ ಮುದ್ರಣ ಕಾಣುತ್ತಿರುವುದು ಸಹಜವಾಗಿ ಲೇಖಕನಾದ ನನಗೆ ಹೆಮ್ಮೆಯ ವಿಷಯ.

ಪುಟ್ಟಣ್ಣನವರ ಜೀವನ ಚಿತ್ರವನ್ನು ಕೊಡುವಂತೆ ಪ್ರೇರೇಪಿಸಿದವರು ಒಂದು ವಿಧದಲ್ಲಿ ಪುಟ್ಟಣ್ಣನವರೇ. ನಾನು ಹೊನ್ನಾವರದಲ್ಲಿ ನಡೆದ 'ಮಸಣದ ಹೂವು' ಚಿತ್ರದ ಚಿತ್ರೀಕರಣದ ಸಮಯದಲ್ಲಿ ಪುಟ್ಟಣ್ಣನವರನ್ನು ಹೆಣ್ಣಿನ ಬಗೆಗಿನ ಅವರ ದೌರ್ಬಲ್ಯವನ್ನು ಕುರಿತು ರೇಗಿಸಿದಾಗ 'ನನ್ನ ಜೀವನ ಚರಿತ್ರೆಯನ್ನು ಬರೆಯುತ್ತೇನೆ. ಅದರಲ್ಲಿ ನೀವೂ ಇರ್ತೀರಿ' ಎಂದಿದ್ದರು, ನಸು ಕೋಪವನ್ನು ಪ್ರದರ್ಶಿಸುತ್ತ, ಆ ಮಾತೇ ನನಗೆ ಪ್ರಥಮ ಪ್ರಚೋದನೆಯಾಯಿತು. ಎರಡನೆಯದಾಗಿ ಅವರು ತಮ್ಮ ಜೀವನ ಚರಿತ್ರೆ ಬರೆಯಲು ತುಂಬಾ ಆಸೆ ಹೊಂದಿದ್ದರಿಂದ ಅವರ ಕೊನೆಯ ಆಸೆಯನ್ನು ತೀರಿಸುವ ಬಯಕೆಯೂ ಆಯಿತು.

ಅಲ್ಲದೆ ಅದರ ಅವಶ್ಯಕತೆಯೂ ಇತ್ತು. ಕಾರಣ ಕನ್ನಡ ಚಿತ್ರ ಜಗತ್ತಿನಲ್ಲಿ ಒಂದು ಕ್ರಾಂತಿಯನ್ನೇ ಮಾಡಿದ ಈ ಮಹಾಪುರುಷನ ಪ್ರತಿಭೆ ಚಲನಚಿತ್ರಗಳಲ್ಲಿ ಹೊರ ಹೊಮ್ಮಿ ಅವರ ಚಲನಚಿತ್ರಗಳೇ ಒಂದು ದಾಖಲೆಯಾಗಿದ್ದರೂ ಸಹ ಅವರ ವೈಯಕ್ತಿಕ ಜೀವನದಲ್ಲಿ, ಅವರು ಚಲನಚಿತ್ರ ರಂಗದಲ್ಲಿ ನಡೆದುಬಂದ ದಾರಿಯ ದಾಖಲೆಯು ಮುಂದಿನ ಜನಾಂಗಕ್ಕೆ ಅವಶ್ಯವಾಗಿತ್ತು.

ಕೊನೆಯದಾಗಿ ಇದನ್ನು ಬರೆಯಲು ಇಂಬು ಕೊಟ್ಟವರು ಸಂಗೀತ ನಿರ್ದೇಶಕ ವಿಜಯಭಾಸ್ಕರ್‌ರವರು. ಪುಟ್ಟಣ್ಣನವರ ಪುಣ್ಯತಿಥಿಯ ದಿನ ನಾವೆಲ್ಲ ಒಟ್ಟಿಗೆ ಊಟಕ್ಕೆ ಕುಳಿತಿದ್ದಾಗ ಅವರು ಪುಟ್ಟಣ್ಣನವರ ಗುಣಗಾನ ಮಾಡಿದುದನ್ನು ನೋಡಿ ಅವರ ಜೀವನಚಿತ್ರವನ್ನು ಕೊಡುವ ನನ್ನ ಆಸೆ ದೃಢವಾಗಿ, ಕಾರ್ಯರೂಪಕ್ಕೆ ಬರಲು ಪ್ರಚೋದನೆಯಾಯಿತು.

ಇದೇ ನನ್ನ ಮೊದಲ ಪುಸ್ತಕವಾದರೂ ಪುಟ್ಟಣ್ಣನವರ ಜೀವನ ಚರಿತ್ರೆಯನ್ನು ಬರೆಯಲು ನನಗೆ ಸ್ವಲ್ಪವೂ ಶ್ರಮವೆನಿಸಲಿಲ್ಲ. ಅವರ ಅಗಲುವಿಕೆಯಿಂದ ದುಃಖದಲ್ಲಿದ್ದ ನನಗೆ ಅವರೇ ಬರೆಸಿದಂತೆ ಭಾಸವಾಯಿತು. ಅವರ ಕಷ್ಟದ ಜೀವನ, ಅವರ ಪ್ರತಿಭೆಯ ಉತ್ಕೃಷ್ಟತೆ ಇವುಗಳನ್ನು ಬರೆಯುವಾಗ ಉದ್ದಕ್ಕೂ ನನ್ನ ಕಣ್ಣಲ್ಲಿ ನೀರು ತುಂಬುತ್ತಿತ್ತು. ಹಸ್ತಪ್ರತಿಯಲ್ಲಿ ಸುಮಾರು ಮುನ್ನೂರು ಪುಟಗಳ ಈ ಪುಸ್ತಕವನ್ನು ಕೇವಲ ಇಪ್ಪತ್ತು ದಿನಗಳಲ್ಲಿ ಬರೆದು ಮುಗಿಸಿದೆ.

ಈ ಪುಸ್ತಕ ಡಿಸೆಂಬರ್ ೧೯೮೫ರಲ್ಲಿ ಖ್ಯಾತ ಚಲನಚಿತ್ರ ಕಲಾವಿದ ರಾಜ್‌ಕುಮಾರ್‌ರವರಿಂದ ಬಿಡುಗಡೆಗೊಂಡು, 'ಕರ್ನಾಟಕ ಸಾಹಿತ್ಯ ಅಕಾಡೆಮಿ' ಮತ್ತು 'ಕನ್ನಡ ಸಾಹಿತ್ಯ ಪರಿಷತ್'ಗಳ ಪ್ರಶಸ್ತಿಗಳನ್ನು ಗಳಿಸಿತಲ್ಲದೆ, ಅಮೇರಿಕಾದ ವಾಷಿಂಗ್‌ಟನ್‌ನಲ್ಲಿರುವ ಕಾಂಗ್ರೆಸ್ ಲೈಬ್ರರಿಯಿಂದ ಪ್ರಶಂಸೆಗೊಂಡು, ಅದರ ದಕ್ಷಿಣ ಏಷ್ಯಾದ ಗ್ರಂಥಾಲಯದ ಪುಸ್ತಕ ಪಟ್ಟಿಯಲ್ಲಿ ಸೇರಿಸಲ್ಪಟ್ಟು, ವಿಶ್ವದ ಇತರೆ ಓದುಗರಿಗೆ ಇದನ್ನು ಓದುವ ಅವಕಾಶವನ್ನು ಕಲ್ಪಿಸಿಕೊಂಡಿತು.

ಈ ಪುಸ್ತಕ ಮೂರನೇ ಮುದ್ರಣ ಕಾಣಲು ಕಾರಣ ಕರ್ತರು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಮಾನ್ಯ ಶ್ರೀ ಡಾ. ಸಿದ್ಧಲಿಂಗಯ್ಯನವರು. ಇವರಿಗೆ ಪುಟ್ಟಣ್ಣನವರೆಂದರೆ ಪಂಚಪ್ರಾಣ. ಅವರಿಗೆ ಒಂದು ಪ್ರತಿಯನ್ನು ಕಳುಹಿಸಿದ್ದೆ. ಅದನ್ನು ಓದಿದ ಅವರು ನನಗೆ ದಿನಾಂಕ ೭.೧೧.೧೯೮೬ ರಂದು ಹೀಗೊಂದು ಪತ್ರ ಬರೆದರು.

ಹಿರಿಯರಾದ ಡಿ.ಬಿ. ಬಸವೇಗೌಡರಿಗೆ ನನ್ನ ನಮಸ್ಕಾರಗಳು.

**ನಿಮ್ಮ ಪುಸ್ತಕ 'ನಾ ಕಂಡ ಪುಟ್ಟಣ್ಣ ಕಣಗಾಲ್' ಓದಿದೆ. ಕನ್ನಡದ ಒಬ್ಬ ಶ್ರೇಷ್ಠ ನಿರ್ದೇಶಕನನ್ನು ಆತ್ಮೀಯ ಮಿತ್ರರನ್ನಾಗಿ ಪಡೆದಿದ್ದ ನಿಮ್ಮ ಬಗ್ಗೆ ನನಗೆ ಅಭಿಮಾನ ಮೂಡುತ್ತಿದೆ. ಆ ಮಹಾ ಚೇತನವನ್ನು ತಮ್ಮ ಕೃತಿಯಲ್ಲಿ ಚಿರಸ್ಥಾಯಿಯನ್ನಾಗಿ ಮಾಡಿದ್ದೀರಿ. ಇದಕ್ಕಾಗಿ ನಿಮಗೆ ಅನಂತ ಕೃತಜ್ಞತೆಗಳು. ಮಹಾನ್ ಕಲಾಕಾರ ಪುಟ್ಟಣ್ಣನವರ ಹಲವು ಹತ್ತು ಮುಖಗಳನ್ನು ಕನ್ನಡಿಗರಿಗೆ ಪರಿಚಯಿಸುವುದರ ಮೂಲಕ ತಾವು ಎಲ್ಲಾ ಕನ್ನಡಿಗರ ಕೃತಜ್ಞತೆಗೆ ಪಾತ್ರರಾಗಿದ್ದೀರೆಂದು ಭಾವಿಸುತ್ತೇನೆ.'**

**'ನಾನೂ ಸಹ ಪುಟ್ಟಣ್ಣನವರ ಒಬ್ಬ ಅಭಿಮಾನಿ. ಅವರು ನಿರ್ದೇಶಿಸಿದ 'ಧರಣಿ ಮಂಡಲ ಮಧ್ಯದೊಳಗೆ' ಚಿತ್ರಕ್ಕೆ ಮೂರು ಹಾಡುಗಳನ್ನು ಬರೆದಿದ್ದು, (ಇವುಗಳಲ್ಲಿ ಒಂದು ಹಾಡಿಗೆ ರಾಜ್ಯ**

ಪ್ರಶಸ್ತಿಯೂ ಬಂದಿತು). ಆ ಮಹಾ ಮಾನವನ ಜೊತೆ ಮೂರು ದಿನ ಕಳೆದ ಭಾಗ್ಯ ನನ್ನದಾಗಿದೆ. ತಮ್ಮ ಕೃತಿಯನ್ನು ಓದುತ್ತಿದ್ದಾಗ ಅವರ ಜೊತೆಗಿದ್ದ ಕ್ಷಣಗಳ ನೆನಪಾಗಿ ಕಣ್ಣೀರು ಸುರಿಸಿದೆ. ನಿಮ್ಮ ಕೃತಿಯನ್ನು ಓದುವುದು ನನ್ನ ಪಾಲಿಗೆ ಒಂದು ವಿಶಿಷ್ಟ ಅನುಭವವನ್ನು ತಂದಿದೆ. ಇದಕ್ಕಾಗಿ ತಮಗೆ ಮತ್ತೊಮ್ಮೆ ಕೃತಜ್ಞತೆಗಳು'

ಡಾ. ಸಿದ್ಧಲಿಂಗಯ್ಯ

ಇಂತಹ ಪುಟ್ಟಣ್ಣನವರ ಅಭಿಮಾನಿ ಡಾ. ಸಿದ್ಧಲಿಂಗಯ್ಯನವರು ಈ ನನ್ನ ಪುಸ್ತಕದ ಎಲ್ಲಾ ಪ್ರತಿಗಳು ಮುಗಿದು ಹೋಗಿರುವುದನ್ನೂ ಹಾಗೂ ಪ್ರತಿಗಳಿಗಾಗಿ ಓದುಗರು ಹುಡುಕಾಡುತ್ತಿರುವುದನ್ನೂ ತಿಳಿದು, ನನ್ನನ್ನು ಸಂಪರ್ಕಿಸಿ, ತಾವು ಕನ್ನಡ ಪುಸ್ತಕ ಪ್ರಾಧಿಕಾರದ ವತಿಯಿಂದ ಈ ಪುಸ್ತಕದ ಮರು ಮುದ್ರಣ ಮಾಡುವುದಾಗಿ ತಿಳಿಸಿದರು. ಇದಕ್ಕಾಗಿ ಡಾ. ಸಿದ್ಧಲಿಂಗಯ್ಯನವರಿಗೂ ಮತ್ತು ಕನ್ನಡ ಪುಸ್ತಕ ಪ್ರಾಧಿಕಾರಕ್ಕೂ ನಾನು ಋಣಿಯಾಗಿದ್ದೇನೆ. ಈ ಪುಸ್ತಕ ಇಷ್ಟೊಂದು ಸುಂದರವಾಗಿ ಹೊರಬರಲು ಎಲ್ಲಾ ರೀತಿಯ ಸಲಹೆ, ಸಹಕಾರ ನೀಡಿದ ಹಂಪಿ ಕನ್ನಡ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಹಿ.ಚಿ. ಬೋರಲಿಂಗಯ್ಯನವರಿಗೆ ನಾನು ಆಭಾರಿಯಾಗಿದ್ದೇನೆ.

ಡಾ. ಡಿ.ಬಿ. ಬಸವೇಗೌಡ

# ಮುನ್ನುಡಿ

ಕೆಲವು ದಿನಗಳ ಹಿಂದೆ ಒಂದು ಬೆಳಿಗ್ಗೆ ನಾನು ಮತ್ತು ಖ್ಯಾತ ಸಾಹಿತಿಗಳಾದ ಶ್ರೀ ಚದುರಂಗರು ನನ್ನ ಮನೆಯಲ್ಲಿ ಮಾತನಾಡುತ್ತಾ ಕುಳಿತಿದ್ದಾಗ ಹಾಸನದ ಮಿತ್ರರಾದ ವಕೀಲ ಶ್ರೀ ಡಿ.ಬಿ. ಬಸವೇಗೌಡರು ಬಂದರು. ಶ್ರೀ ಗೌಡರ ಜೊತೆಯಲ್ಲಿ ಉಭಯಕುಶಲೋಪರಿ ಸಾಂಪ್ರತದ ಮಾತು ಮುಗಿದ ನಂತರ ನಾನು ಶ್ರೀ ಗೌಡರನ್ನು ಶ್ರೀ ಚದುರಂಗರಿಗೆ ಪರಿಚಯ ಮಾಡಿಸಲು ಆರಂಭಿಸಿದೆ. ಇಬ್ಬರೂ ಜೋರಾಗಿ ನಕ್ಕರು. ಆಗ ನನಗೆ ಗೊತ್ತಾಯಿತು, ಅವರಿಬ್ಬರಿಗೂ ಬಹಳ ವರ್ಷಗಳ ಪರಿಚಯ ಮತ್ತು ಸ್ನೇಹ ಎಂಬುದು.

"ನಾನು ಶ್ರೀ ಚದುರಂಗರ ಅಭಿಮಾನಿ. ಅವರು ನನಗೆ ಗುರುಗಳು" ಎಂದು ಅಭಿಮಾನದಿಂದ ಶ್ರೀ ಗೌಡರು ನನಗೆ ಹೇಳಿ ಶ್ರೀ ಚದುರಂಗರ ಕಡೆ ತಿರುಗಿ "ನೀವು ಹೇಳಿ ಕಳಿಸಿದ್ದಂತೆ ಇಲ್ಲಿಗೆ ಬಂದಿದ್ದೀರಿ, ನನ್ನ ಕೆಲಸ ಸುಲಭವಾಯ್ತು" ಎಂದು ತಮ್ಮ ಕೈಲಿ ಹಿಡಿದಿದ್ದ ಒಂದು ಕಡತವನ್ನು ನನಗೆ ಕೊಡುತ್ತಾ "ನಮ್ಮ ಮಿತ್ರರಾದ ದಿವಂಗತ ಶ್ರೀ ಪುಟ್ಟಣ್ಣ ಕಣಗಾಲ್‌ರವರ ಜೀವನ ಪರಿಚಯ ಪುಸ್ತಕ ಬರೆದಿದ್ದೇನೆ. ಮದ್ರಾಸಿನಲ್ಲಿ ವೃತ್ತಿ ಬಾಂಧವರಾಗಿದ್ದ ನೀವು ಈ ನನ್ನ ಪುಸ್ತಕಕ್ಕೆ ಮುನ್ನುಡಿ ಬರೆದುಕೊಡಬೇಕು" ಎಂದು ಕೇಳಿಕೊಂಡರು. ಆತ್ಮೀಯ ಮಿತ್ರರಾದ ಪುಟ್ಟಣ್ಣನವರನ್ನು ಅನಿರೀಕ್ಷಿತವಾಗಿ ಕಳೆದುಕೊಂಡು ಕೊರಗುತ್ತಿದ್ದ ನನಗೆ ಎಲ್ಲಾ ಕನಸಿನಂತೆ ಕಂಡಿತು. ತಕ್ಷಣ ಆ ಕಡತವನ್ನು ನೋಡಲಾಗಲಿಲ್ಲ.

ಕೆಲವು ತಿಂಗಳ ಹಿಂದೆ ಪರಿಚಯವಾಗಿದ್ದ ಗೌಡರನ್ನು ಈ ವೇಳೆಗೆ ನಾಲ್ಕೇ ಬಾರಿ ಭೇಟಿಯಾಗಿದ್ದರೂ ಹತ್ತಾರು ವರ್ಷಗಳ ಸ್ನೇಹ–ಆತ್ಮೀಯತೆಯನ್ನು ಬೆಳೆಸುವ ಮೋಡಿಯನ್ನು ಅವರಲ್ಲಿ ಕಂಡಿದ್ದು, ಅವರು ತಂದು ಕೊಟ್ಟಿದ್ದ ಕಡತದ ಹಾಳೆಗಳನ್ನು ಓದಲು ಪ್ರಾರಂಭಿಸಿದೆ. ನಂತರ ಫೈಲನ್ನು ಕೈಯಿಂದ ಕೆಳಗೆ ಬಿಡಲಾಗಲಿಲ್ಲ. ನನ್ನ ಜೀವನದ ಆತ್ಮೀಯ ಮಿತ್ರರೊಬ್ಬರ ಬಗ್ಗೆ ಬರೆದಿರುವ ಸಾಲು ಸಾಲುಗಳನ್ನೂ, ಪುಟಗಳನ್ನೂ ಓದುತ್ತಿದ್ದಾಗ ಶ್ರೀ ಪುಟ್ಟಣ್ಣನವರನ್ನು ಮಾನಸಿಕ

ಚಿತ್ರಣವಾಗಿ ಕಂಡೆ. ಈ ಪುಸ್ತಕದಲ್ಲಿ ಗೌಡರು, ಪುಟ್ಟಣ್ಣನವರು ಚಲನ ಚಿತ್ರರಂಗಕ್ಕೆ ಕಾಲಿಡುವ ಮುನ್ನ ತುಳಿದು ಬಂದಂತಹ ದುರ್ಗಮ ದಾರಿಯನ್ನೂ, ಅವರ ಕುಟುಂಬದ ಬಡತನದ ಬೇಗೆಯನ್ನೂ ಮತ್ತು ಅವರ ಜೀವನದ ಕೆಲವು ಕಹಿಸಿಹಿ ಅನುಭವನಗಳನ್ನೂ, ಅಲ್ಲದೆ ಅವರ ನೈಜ ಗುಣಗಳನ್ನೂ ಯತಾವತ್ತಾಗಿ ವಿವರಿಸಿದ್ದಾರೆ. ಲೇಖಕರು ಮತ್ತು ಪುಟ್ಟಣ್ಣನವರು ಗೊರೂರಿನ ಹೇಮಾವತಿ ಅತಿಥಿ ಗೃಹದಲ್ಲಿದ್ದಾಗ ಚಿತ್ರದಲ್ಲಿ ಪಾತ್ರ ಕೇಳಿಕೊಂಡು ಬಂದಿದ್ದ ಒಂದು ಅಸಹಾಯಕ ಹೆಣ್ಣಿನ ಆತ್ಮಕಥೆ ಕೇಳಿದ ಪುಟ್ಟಣ್ಣನವರು ಮನಕರಗಿ ಆಕೆಗೆ ಆದ ಅನ್ಯಾಯದ ಬಗ್ಗೆ ಅನುಕಂಪ, ಸಮಾಜದ ಬಗ್ಗೆ ಕೋಪ ವ್ಯಕ್ತಗೊಳಿಸಿದ್ದನ್ನೂ, ಪುಟ್ಟಣ್ಣನವರ ಮಾನವೀಯ ಗುಣಗಳನ್ನೂ ಲೇಖಕರು ಹೃದಯಂಗಮವಾಗಿ ನಿರೂಪಿಸಿದ್ದಾರೆ.

ಪುಟ್ಟಣ್ಣನವರ ತಮ್ಮ ನರಸಿಂಹಯ್ಯನವರನ್ನು ಭೇಟಿಮಾಡಿ, ಪುಟ್ಟಣ್ಣನವರ ಬಾಲ್ಯದ ಬಡತನದ ಬದುಕು, ಶ್ರಮದ ದುಡಿತ, ಈ ಬಗ್ಗೆ ಅವರು ಹೇಳಿರುವ ವಿವರಣೆಯನ್ನು ಮನಮಿಡಿಯುವಂತೆ ವಿವರಿಸಿದ್ದಾರೆ. ಲೇಖಕ ಗೌಡರು ಪುಟ್ಟಣ್ಣನವರ ಕೆಲವು ಬಂಧುಗಳನ್ನು ಮತ್ತು ಕನ್ನಡ ಚಿತ್ರರಂಗದ ಕೆಲವು ಆತ್ಮೀಯರನ್ನು ಭೇಟಿ ಮಾಡಿ ಪುಟ್ಟಣ್ಣನವರ ಜೀವನ ಪರಿಚಯವನ್ನು ಅವರುಗಳು ನೋಡಿದ ರೀತಿಯಲ್ಲಿ ವಿವರಿಸಿದ್ದಾರೆ.

ಪುಟ್ಟಣ್ಣನವರು ಆಗಾಗ್ಗೆ ಪತ್ರಿಕಾ ಸಂದರ್ಶನಗಳಲ್ಲಿ, ಸಮಾರಂಭಗಳಲ್ಲಿ ಮತ್ತು ಚರ್ಚಾ ಸಮಯಗಳಲ್ಲಿ ನೀಡಿದ್ದ ಹೇಳಿಕೆಗಳು ಪತ್ರಿಕೆಗಳಲ್ಲಿ ಮತ್ತು ಸಂಕೀರ್ಣ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದು, ಅವುಗಳನ್ನು ಆಯ್ದು ಸೇರಿಸಿರುವುದು ಹೆಚ್ಚು ಸೂಕ್ತವಾಗಿದೆ.

ಈ ದಿಸೆಯಲ್ಲಿ ಲೇಖಕ ಶ್ರೀ ಬಸವೇಗೌಡರು ನಾಡಿನ ನೆಚ್ಚಿನ ಚಿತ್ರ ನಿರ್ದೇಶಕರಾದ ಶ್ರೀ ಪುಟ್ಟಣ್ಣ ಕಣಗಾಲ್‌ರವರ ಜೀವನ ಪರಿಚಯ ಮಾಡುವ ಈ ಪುಸ್ತಕ ಹೊರತರುವ ಮೂಲಕ ಕನ್ನಡಿಗರ ಮೆಚ್ಚುಗೆ ಕೆಲಸ ಮಾಡಿದ್ದಾರೆ. ಶ್ರೀ ಪುಟ್ಟಣ್ಣ ಕಣಗಾಲ್ ಅವರ ಹೆಸರು, ಅವರ ಕೃತಿಗಳು ಚಿರಾಯುವಾಗಲಿ.

**ಎನ್. ಲಕ್ಷ್ಮಿನಾರಾಯಣ್**
ಚಲನಚಿತ್ರ ನಿರ್ದೇಶಕ



ಪುಟ್ಟಣ್ಣ ಕಣಗಾಲ್



ಲೇಖಕ ಡಾ. ಡಿ.ಬಿ. ಬಸವೇಗೌಡ ಮತ್ತು ಪುಟ್ಟಣ್ಣ ಕಣಗಾಲ್

# ಮಡಿಲೊಳಗೆ


| | | |
|---|---|---|
| ೧. | ಅವರೇ ಬರೆದದ್ದು | ೧-೧೮ |
| ೨. | ನಾನು ನೋಡಿದ್ದು | ೧೯-೯೦ |
| ೩. | ನಾನು ಕೇಳಿದ್ದು | ೯೧-೧೦೭ |
| ೪. | ಅವರೇ ಹೇಳಿದ್ದು | ೧೦೮-೧೫೭ |
| ೫. | ಅವರಿವರು ಹೇಳಿದ್ದು | ೧೫೮-೨೨೬ |
| ೬. | ನಾನು ಓದಿದ್ದು, ತಿಳಿದಿದ್ದು | ೨೨೭-೨೬೨ |


❀ ❀ ❀ ❀



# ಅವರೇ ಬರೆದದ್ದು

ಪುಟ್ಟಣ್ಣನವರು ನನಗೆ ಆಗ ಬರೆದ ಪತ್ರ ಈಗ ನಿಮ್ಮೆದುರಿಗಿದೆ. ಅದು ಕೇವಲ ಪತ್ರವಲ್ಲ. ಒಂದು ಪ್ರಮಾಣ ಪತ್ರ.

೧೯೬೭ರಲ್ಲಿ ರಾಜ್ಯದ ವಿವಿಧ ಭಾಗದ ಹನ್ನೊಂದು ಮಿತ್ರರು ಸೇರಿ 'ಮೈಸೂರು ಮೈತ್ರಿ ಫಿಲಂಸ್' ಎಂಬ ಚಿತ್ರ ನಿರ್ಮಾಣ ಸಂಸ್ಥೆಯನ್ನು ಮೈಸೂರಿನಲ್ಲಿ ಆರಂಭಿಸಿದ್ದೆವು. ಈ ಸಂಸ್ಥೆಯ ಪ್ರಥಮ ಕಾಣಿಕೆ 'ಸಾವಿರ ಮೆಟ್ಟಿಲು' ಚಿತ್ರದ ನಿರ್ದೇಶನ ಮಾಡುತ್ತಿದ್ದ ಪುಟ್ಟಣ್ಣನವರಿಗೂ ನಮಗೂ ಸ್ವಲ್ಪ ಭಿನ್ನಾಭಿಪ್ರಾಯ ಉಂಟಾಗಿತ್ತು. ಚಿತ್ರೀಕರಣದಲ್ಲಿ ಅವರ ಕಟ್ಟುನಿಟ್ಟಿನ ಸೂಚನೆ ಪಾಲಿಸಲು ನಮಗಾಗಿರಲಿಲ್ಲ. ಅದೇ ಕಾರಣ 'ಚಿತ್ರೀಕರಣದ ಕೆಲಸ ನಿರೀಕ್ಷೆಯಂತೆ ಸಾಗಿಲ್ಲ' ಎಂದು ನಾನು ಪುಟ್ಟಣ್ಣನವರಿಗೆ ೨೦.೪.೧೯೬೮ರಂದು ಖಾರವಾಗಿ ಒಂದು ಕಾಗದ ಬರೆದಿದ್ದೆ. ಅದಕ್ಕೆ ಉತ್ತರವಾಗಿ ೧.೮.೧೯೬೮ ರಂದು ಪುಟ್ಟಣ್ಣನವರು ಪತ್ರ ಬರೆದರು.

ವೈಯಕ್ತಿಕ ಮತ್ತು 'ಸಾವಿರ ಮೆಟ್ಟಿಲು' ಚಿತ್ರಕ್ಕೆ ಕುರಿತಂತೆ ಈ ಪತ್ರ ಬರೆದಿದ್ದರೂ, ಒಟ್ಟಾರೆ ಇದು ಕನ್ನಡ ಚಿತ್ರಪ್ರಪಂಚಕ್ಕೊಂದು ದಿಕ್ಸೂಚಿ. ಚಲನಚಿತ್ರ ಮಾಧ್ಯಮದ ಮಹತ್ವ ತಿಳಿಯದವರಿಗೆ ದಾರಿ ದೀಪ, ಅವರ ಪತ್ರ ಇಲ್ಲಿ ಪ್ರಕಟಿಸಲು ಇದೇ ಕಾರಣ.

ದಿನಾಂಕ ೧೬.೬.೧೯೮೫ ರಂದು 'ಕನ್ನಡ ಪ್ರಭ'ದಲ್ಲಿ ಈ ಪತ್ರವನ್ನು ಪ್ರಕಟಿಸಿದ ಪತ್ರಕರ್ತ ಕೆ.ಎಸ್. ನಾರಾಯಣಸ್ವಾಮಿಯವರು 'ಈ ಪತ್ರದಿಂದ ಪುಟ್ಟಣ್ಣನವರಿಗೆ ಕನ್ನಡದ ಬಗ್ಗೆ, ಕನ್ನಡ ಚಿತ್ರಗಳ ಬಗ್ಗೆ, ನಿರ್ಮಾಪಕ ಹಾಗೂ ನಿರ್ದೇಶನದ ಬಗ್ಗೆ ಇದ್ದ ಕಾಳಜಿ ಮತ್ತು ಅಭಿಮಾನಕ್ಕೆ ಕನ್ನಡಿ ಹಿಡಿದಂತಿದೆ' ಎಂದಿದ್ದಾರೆ.

ಖ್ಯಾತ ಚಲನಚಿತ್ರ ನಿರ್ದೇಶಕ ಎನ್. ಲಕ್ಷ್ಮಿನಾರಾಯಣ್ 'ಇದು ಕೇವಲ ವೈಯಕ್ತಿಕ ಪತ್ರವಲ್ಲ, ಚಿತ್ರರಂಗಕ್ಕೆ ಸಂಬಂಧಿಸಿದ ಒಂದು ಚಾರಿತ್ರಿಕ ದಾಖಲೆ' ಎಂದು ಅಭಿಪ್ರಾಯಿಸಿದ್ದಾರೆ.

ಈ ಪತ್ರದಲ್ಲಿ ಹೆಸರಿಸಿರುವ ಶ್ರೀಯುತರಾದ ಹೆಚ್.ಪಿ. ನಾಗೇಂದ್ರಯ್ಯ, ಎಂ.ಸಿ. ಪುಟ್ಟಸ್ವಾಮಿ ಮತ್ತು ಪಿ.ವಿ. ನಂಜರಾಜ ಅರಸು ಅವರುಗಳು ನಮ್ಮ ಮೈತ್ರಿ ಮಿತ್ರರು.

ಪುಟ್ಟಣ್ಣನವರಿಗೆ ನನ್ನನ್ನು 'ರೋಮಿಯೋ' ಎಂದು ಕರೆದರೇನೆ ಪ್ರೀತಿ. ಆ ಸಲಿಗೆಯಿಂದಲೇ ಈ ಪತ್ರದಲ್ಲೂ ನನ್ನನ್ನು 'ರೋಮಿಯೋ' ಎಂದು ಕರೆದಿದ್ದಾರೆ.

ಅವರೊಂದಿಗಿದ್ದ ನೆನಪಿನ ಹೂರಣ ಈ ಪುಸ್ತಕ. ಮೈತ್ರಿ ಫಿಲಂಸ್ ಹುಟ್ಟಿನೊಂದಿಗೆ ಬೆಳೆದು ಬಂದ ನನ್ನ–ಪುಟ್ಟಣ್ಣನವರ 'ಮೈತ್ರಿ' ಎಂದಿಗೂ ಹಸಿರು. ಈ ಪುಸ್ತಕದ ರಕ್ಷಾ ಕವಚವೂ ಇದೇ ಪತ್ರ.

ಪುಟ್ಟಣ್ಣನವರ, ನೋವು–ನಲಿವು, ಆಸೆ–ನಿರಾಸೆ, ಅಭಿರುಚಿ ಕನಸು–ನನಸು, ಕೀರ್ತಿ ಹಾಗೂ ಪ್ರತಿಭೆಯ ಪರಿಚಯ ಈ ಬರಹ.

ಇವೆಲ್ಲಾ ಮುಂದಿವೆ....

**ಡಿ.ಬಿ. ಬಸವೇಗೌಡ**

S. R. PUTTANNA KANAGAL
FILM DIRECTOR

(1) 1 August 68

35, 2nd MAIN ROAD,
C. I. T. COLONY,
MADRAS-4

ನನ್ನ ಅಚ್ಚುಮೆಚ್ಚಿನ ಸ್ನೇಹಿತರಿಗಿಂತ ಈ ಬಿಸಿಲೇ ನಾಡಿನಿಂದ ತ್ರಿಕರಣಪೂರ್ವಕ ನಮಸ್ಕಾರಗಳು.
ನಾನು ಇಲ್ಲಿ ಕ್ಷೇಮ.. ನಿಮ್ಮ ಕ್ಷೇಮ ಸಮಾಚಾರಕ್ಕೆ ಒಂದು ಕಾರ್ಡ್ ಹಾಕಿ ಸಾಕು...
ನಮ್ಮ ಸ್ನೇಹ ಕೇವಲ "Railway friendship" ಆಗುವುದು ಬೇಡ.....
ನಿಮಗೆ ನನ್ನ ಅನಿರೀಕ್ಷಿತ ಕಾಗದ ನೋಡಿ ಆಶ್ಚರ್ಯವಾಗಬಹುದು..... ಹೌದು। ಅದನ್ನೆ
ನಾನೂ ಬಯಸುವುದು... ನಿಧಾನ ತಾವು ಈ ಕಾಗದವನ್ನು ಕಡೇವರೆಗೂ ಓದದೇ ಬಿಡದೇ
ದಯವಿಟ್ಟು ಓದಬೇಕೆಂದು ಬೇಡಿಕೊಳ್ಳುತ್ತೇನೆ

ಈ ಕಾಗದ ಬರೆಯಲು ಕಾರಣ. ತಾವು ನನಗೆ ಈ ಹಿಂದೆ
ತಾ: ದಿ: 4: 68 ರಲ್ಲಿ, (ಅಂದ್ರೆ) ಸುಮಾರು ನಾಲ್ಕು ತಿಂಗಳುಗಳಿಂದೆ ಒಂದು ಪೋಸ್ಟ್ ಪತ್ರ
ಬರೆದಿದ್ದೀರಿ... ನೆನಪಿರಬಹುದು.. ನೆನಪಿರಲೇಬೇಕು ಕಾರಣ ಆ ಪತ್ರ ಪುಟ್ಟಣ್ಣ ಕಣಗಾಲ್
ರವರಿಗೆ ಬರೆದದ್ದು... ಏಕೆಂದರೆ ಅವರು ನಿಮ್ಮ ಮೆಚ್ಚಿನ ವ್ಯಕ್ತಿಯಲ್ಲವೇ ??.....
ಆ ದಿನವೇ ಆ ಪತ್ರಕ್ಕೆ ಮಾರುತ್ತರ ಬರೆಯಬೇಕೆಂದಿದ್ದೆ... ಮುಹೂರ್ತ ಕೂಡಿ
ಬಂದಿರಲಿಲ್ಲ... ಇಂದು ಆ ಸುಮುಹೂರ್ತ ಕೂಡಿಬಂದಿದೆ. ಮುಹೂರ್ತ

ಕೂಡಿ ಬಂದಾಗ ಕಾರ್ಯ ಕೈಗೂಡಿಸದೆ ಇರುವುದು ಶುದ್ಧ ಹೇಡಿತನವಲ್ಲವೇ..?.
ಇದ್ದರಿಂದ ಉತ್ತರ ಬರೆಯುತ್ತಿದ್ದೇನೆ ಗೆಳತೀ! ನಿಧಾನವಾಗಿ ಓದಿ !!

ನಿಮ್ಮ ಪತ್ರದ ಒಕ್ಕಣೆಯ ಒಂದೊಂದು ಪಂಕ್ತಿಗೂ ಉತ್ತರ ನಾನು ಕೊಡುತ್ತಿದ್ದೇನೆ.. ಅದನ್ನು ಓದಲು ಪ್ರಾರಂಭಿಸುವುದಕ್ಕೆ ಮುಂಚೆ ನೀವು ದಯವಿಟ್ಟು ಒಂದು ಸತ್ಯವನ್ನು ಒಪ್ಪಿಕೊಳ್ಳಲೇಬೇಕು. ಅದೇನೆಂದರೆ ನಾನು ಸುಮಾರು ಇಪ್ಪತ್ತೈದು ವರ್ಷಗಳಿಂದ, ಅನ್ನ ನೀರಿಲ್ಲದೆ, ಬಿಸಿಲು ಮಳೆ ಎನ್ನದೆ, ಹಗಲು ರಾತ್ರಿಗಳೆನ್ನದೆ, ಸಿನಿಮಾ ಪ್ರಪಂಚದಲ್ಲಿ ದುಡಿದು ಕಷ್ಟಪಟ್ಟು ಯಶಸ್ಸುಗಳಿಸಿರುವ ಒಬ್ಬ ಸಾಮಾನ್ಯ ವ್ಯಕ್ತಿ... ನೀವೂ ಸಹಾ ನಿಮ್ಮ ವೃತ್ತಿಯಲ್ಲಿ ಹಲವಾರು ವರುಷ, ಹಲವಾರು ತರಹ ಕಷ್ಟನಷ್ಟಗಳನ್ನು ಅನುಭವಿಸಿ, ಅವಿಶ್ರಾಂತ ಹಗಲಿರುಳು ಶ್ರಮಿಸಿ, ನ್ಯಾಯಾಲಯದ ರಂಗದಲ್ಲಿ ನಿಂತು, ತರ್ಕಮಾಡಿ, ವಾಗ್ಯುದ್ಧ ಮಾಡಿ ಗೆಲ್ಲುವ ಶಕ್ತಿ ಸಾಮರ್ಥ್ಯಗಳನ್ನು ಪಡೆದು, ಸಮಾಜದಲ್ಲಿ ಒಂದು ಸ್ಥಾನಮಾನಗಳನ್ನು ಗಳಿಸಿರುವ ಪ್ರತಿಷ್ಠಿತ ವ್ಯಕ್ತಿ !!

ನನ್ನ ಕೋರಿಕೆಯೊಂದು!! ಒಂದು ಪಕ್ಷ ನಾನು ಹಠಾತ್ತನೆ, ಈ ಚಿತ್ರ ಪ್ರಪಂಚವನ್ನು ಬಿಟ್ಟು, ನಿಮ್ಮ ನ್ಯಾಯಾಲಯದ ರಂಗವನ್ನು ಹತ್ತಿ, ನಿಮ್ಮ ವೃತ್ತಿಯನ್ನು ಹಿಡಿದು, ಒಂದೇ ದಿನದಲ್ಲಿ, ನಿಮ್ಮಷ್ಟೇ ಪ್ರತಿಷ್ಠೆ, ಸ್ಥಾನ-

ಗಳನ್ನು ಸಂಪಾದಿಸುತ್ತೇನೆಂದು ಮೂರ್ಖನಂತೆ ಮುನ್ನುಗ್ಗಿಸಿದರೆ, ಆಗ ನನ್ನ ವರ್ತನೆ ಅನುಭವಶಾಲಿಯಾದ ನಿಮಗೆ, ಹಾಸ್ಯಾಸ್ಪದವಾಗಿಯೂ, ಹೀಗಾ ವಿಚಿತ್ರವಾಗಿಯೂ ಕಾಣುವುದಿಲ್ಲವೇ?... ಕಾರಣ ಅದರ, ಆ ವ್ಯಕ್ತಿಯ ಅನುಭವ ನನಗಿಲ್ಲ.... ಹಾಗೆಯೇ ನಿಮಗೂ ಈ ಚಿತ್ರ ತೆಗೆಯುವ ಅನುಭವ ಇಲ್ಲದ ಚಿತ್ರರಂಗ ನಿಮ್ಮ ದೃಷ್ಟಿಯಲ್ಲಿ ವಿಚಿತ್ರವಾಗಿ ಕಾಣುವುದು ಸಹಜ.... ಬುದ್ಧಿವಂತರಾದ, ವಿದ್ಯಾವಂತರಾದ ನೀವು ಈ ಸತ್ಯವನ್ನು ಅಕ್ಷರಶಃ ಒಪ್ಪುತ್ತೀರೆಂದು ನಂಬುತ್ತೇನೆ. ಗಾಬರಿ! ನಾನು ನಿಮ್ಮನ್ನು ಕುಚೇಷ್ಟೆಮಾಡುತ್ತಿಲ್ಲ; ಕ್ಷಮಿಸಿ

ನೀವು ನಿಮ್ಮ ಪತ್ರದ ಮೊದಲ ಪಂಕ್ತಿಯಲ್ಲೇ "ನಿಮಗೆ ಬರೆಯುವುದೂ ಒಂದು ತರಹ ಭಯವೇ! ನಿಮಗೆ ತುಂಬಾ ಸಿಟ್ಟು ಇತ್ಯಾದಿ" ಎಂದು ಬರೆದಿದ್ದೀರಿ.

(A) ಭಯ:-? ನನ್ನ ಪ್ರೀತಿಯ ಗಾಬರಿ! ಅದನ್ನು ನೀವು ತಮಾಷೆಗೂ, ಕೀಟಲೆಗೋಸ್ಕರ ಬರೆದಿದ್ದರೂ, ಅದು ನನ್ನ ಮನಸ್ಸಿನ ಮೇಲೆ ನನಗರಿವಾಗದಂತೇ ಪರಿಣಾಮ ಬೀರುತ್ತದೆ.. ಯಾತಕ್ಕಾಗಿ ಇವರು ನನ್ನನ್ನು ನೋಡಿ ಹೆದರಬೇಕು? ನನ್ನಿಂದ ಅವರಿಗೆ ಯಾವ ಅಪಚಾರವಾಗಿದೆ!!? ಹೀಗೆ ಹಲವಾರು ಪ್ರಶ್ನೆಗಳು ಅತಿಸೂಕ್ಷ್ಮಪ್ರವೃತ್ತಿಯುಳ್ಳ ನನ್ನಲ್ಲಿ ಉದ್ಭವಿಸುತ್ತವೆ... Mr. Romeo, ಆಗಾಗ ಒಮ್ಮೊಮ್ಮೆ ನೀವು ಒಂದು ಮಾತು ಅನ್ನುತ್ತೀರಿ ಪ್ರಾಮಾಣಿಕವಿರಬಹುದು ಅದೇನು ಗೊತ್ತೇ?

ನಿಮ್ಮನ್ನು ಕೊಂಡಾಡಬೇಕು ಅನ್ನಿಸುತ್ತೆ... ಆದ್ರೆ ನೀವು ಕೆಲಸಮಾಡೋವಾಗ ನೋಡಿದ್ರೆ ಎಲ್ಲಾ ಮರೆತುಹೋಗುತ್ತೇಂತ." ......... ಅಂಥಹ ಸಮಯದಲ್ಲಿ ನನಗನ್ನಿಸುತ್ತೆ, ನನ್ನ ಶ್ರೇಯಸ್ಸನ್ನು ಬಯಸುವ ನೀವು, ನನ್ನನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲಿಲ್ಲ ಎಂದು ನನಗೆ ದುಃಖವಾಗುತ್ತೆ!!...... ನೋಡಿ! ನನ್ನ ಹೃದಯ ಸದಾಕಾಲ, ತನ್ನ ಸುತ್ತಮುತ್ತ ಇರುವ ಸ್ನೇಹಿತರ, ಹಿರಿಯರ, ಕಿರಿಯರ, ಎಲ್ಲರ ಪ್ರೀತಿ, ಗೌರವ, ಸೌಹಾರ್ದ, ಔದಾರ್ಯಗಳ ಸವಿಯನ್ನು ಅನುಭವಿಸಬೇಕೆಂದು, ಉದಾತ್ತತೆಯ ಮಧ್ಯದ ವ್ಯಕ್ತಿ[illegible]ಗಾಗಿ, ಹಾತೊರೆಯುತ್ತದೇ ವಿನಃ, ಅನ್ಯರ ಮನಸ್ಸಿನಲ್ಲಿ ಹೆದರಿಕೆಯ ಭಾವವನ್ನಿಟ್ಟು, ಅದರಿಂದ ಹುಟ್ಟುವ ಕೌತುಕಲವನ್ನು ಉಂಡು ಆನಂದಪಡುವ ಉದ್ಧಟತನ ಅದಕ್ಕಿಲ್ಲ.

೮. ಸಿಟ್ಟು:-? ಮಿತ್ರರೇ! ಹೌದು.. ನನ್ನ ವೃತ್ತಿಯಲ್ಲಿ ನಾನು ಬಹಳ ಕಠಿಣನಾಗ್ತೀನಿ! ಇದನ್ನು ಒಪ್ಪಿಕೊಳ್ಳುತ್ತೇನೆ. ಎಷ್ಟು ಕಠಿಣವೆಂದರೆ, ಅದಕ್ಕಾಗಿ ನಾನೊಂದು ಸಣ್ಣ ಉದಾಹರಣೆಯನ್ನು ಕೊಡಬೇಕಾಗಿದೆ...... ಬಂಗಾಳದಲ್ಲಿ "ರಾಣಿ ರಾಸಮಣಿ" ಎಂಬ ಮಹಾಶ್ರೀಮಂತೆ ಗಂಗಾನದಿ ದಡದಲ್ಲಿ, ಲಕ್ಷಾಂತರ ರೂಪಾಯಿ ಖರ್ಚುಮಾಡಿ "ಮಹಾಕಾಳಿ" ದೇವಸ್ಥಾನವೊಂದನ್ನು ಕಟ್ಟಿಸಿದ್ದಳಂತೆ.... ದೇವಿಯ ಪೂಜೆಗೆ ಒಬ್ಬ ಪೂಜಾರಿ ಅವಶ್ಯಕತೆ ಇತ್ತು.- ಆಗ ಶ್ರೀ ರಾಮಕೃಷ್ಣ ಪರಮಹಂಸರನ್ನು ಪೂಜಾರಿಯನ್ನಾಗಿ ನೇಮಕಮಾಡಿದರು.

ಶ್ರೀ ರಾಮಕೃಷ್ಣರಿಗೆ ಒಳ್ಳೆ ಕಂಠಮಾಧುರ್ಯವಿತ್ತಂತೆ. ಅವರು ದೇವರನಾಮಗಳನ್ನು ಬಹಳ ಮಧುರವಾಗಿ ಹಾಡುತ್ತಿದ್ದರಂತೆ. ದೇವರ ಧ್ಯಾನದಲ್ಲಿ ಏಕಾಗ್ರತೆ ಎಷ್ಟರಮಟ್ಟಿಗಿತ್ತೆಂದರೆ ಜಗತ್ತನ್ನೇ ಮರೆತುಬಿಡುತ್ತಿದ್ದರಂತೆ. ಹೀಗಿರುವಾಗ ಒಂದುದಿನ ಸಂಧ್ಯಾಸಮಯದಲ್ಲಿ, ರಾಣಿ ರಾಸಮಣಿ ದೇವಾಲಯಕ್ಕೆ ಬಂದಳಂತೆ. ಬಂದವಳೇ, ಶ್ರೀ ರಾಮಕೃಷ್ಣರನ್ನು ಏನಾದರು ದೇವರನಾಮ ಹಾಡಬೇಕೆಂದು ಆಜ್ಞೆಮಾಡಿದಳಂತೆ.... ದೇವಾಲಯದ ಒಡೆಯರೆ! ಒಡತಿ! ಕೇಳಿದರೆ "ಒಲ್ಲೆ" ಎನ್ನಲು ಸಾಧ್ಯವೇ?

ಶ್ರೀ ರಾಮಕೃಷ್ಣರು ಹಾಡಲು ಮೊದಲು ಮಾಡಿದರು. ಕಣ್ಣುಮುಚ್ಚಿ ಧ್ಯಾನಪರವಶರಾಗಿ, ಹಾಡುತ್ತಿದ್ದ ರಾಮಕೃಷ್ಣರು ಇದ್ದಕ್ಕಿದ್ದಂತೆ ಕಣ್ತೆರೆದು, ರಾಣಿ ರಾಸಮಣಿಯ ಕಪಾಲಕ್ಕೆ ಹೊಡೆದರು! ಎಲ್ಲರೂ ದಂಗುಬಡಿದರು. ರಾಮಕೃಷ್ಣರ ಪಕ್ಕನೆ ನೋಡಿ.

ಕಾರಣ, ಇಷ್ಟೆ...! ರಾಣಿ ರಾಸಮಣಿಯ ಮನಸ್ಸು ಗೀತೆಯಲ್ಲಿ, ಭಕ್ತಿಯಲ್ಲಿ ಏಕಾಗ್ರವಾಗಿ ಇಲ್ಲ. ಅವಳ ಎದುರಾಳಿಗಳು, ಅವಳ ಮೇಲೆ "[illegible]" ವಿಷಯವಾಗಿ ಹೂಡಿದ್ದ ಕೇಸ್ ಒಂದನ್ನು ಕುರಿತು ಯೋಚಿಸುತ್ತಿತ್ತು ರಾಣಿಯ ಮನಸ್ಸು...... ಲಕ್ಷಾಂತರ ರೂಪಾಯಿ ಬೆಲೆಬಾಳುವ ದೇವಸ್ಥಾನದ ಒಡತಿ ರಾಸಮಣಿಯೇ ಕಿರಿಕಿರಿಪಡುವುದು...... ಇದು! ಶ್ರೀ ರಾಮಕೃಷ್ಣರಿಗೆ ಬೇಕಾದದ್ದು, ರಾಸಮಣಿಯ ಏಕಾಗ್ರಚಿತ್ತತೆ.

ಹಾಗೇ, ನನ್ನ ಮೈತ್ರಿ ಸಂಸ್ಥೆಯ ಮಿತ್ರರು ಲಕ್ಷಾಂತರ ರೂಪಾಯಿ ಹುಡುಕುಮಾಡಿ ಕೊಟ್ಟಿರಲು ಬಹುದು. ಅವರು ನನ್ನ ಋಣಿಗಳಾಗಿರಬಹುದು. ಇವರೆ ಎಲ್ಲರಿಂದ ನಾನು ಬಯಸುವುದು, "ಕರ್ಮನಿಷ್ಠೆ"... ಆ ನಿಷ್ಠೆಯಲ್ಲಿ ಶ್ರದ್ಧೆ ... ಭಕ್ತಿ ತ್ಯಾಗ!! ಇದರಲ್ಲಿ ತಪ್ಪಾದರೆ ನಾನು ಬಯ್ಯುವುದು ತಿಂಬಿಕೆ, ನನ್ನ ಮನಸ್ಸು ನೋವಿನಿಂದ ಕಾಣಿಸ್ದು ಸಿಟ್ಟಿಲ್ಲದೆ ಮುದುಡಿಕೊಳ್ಳುವುದು ಸತ್ಯ - - - ಅದಕ್ಕಾಗಿ ನಾನು ರಾಂಗ್ಲಾಗುವುದೂ ಉಂಟು ... ಅದನ್ನು ಅರ್ಥಮಾಡಿಕೊಳ್ಳದೆ. "Director" ನೆ ಸಿಟ್ಟು!! ಎಂಬ ಬಿರುದು ಕೊಡುವುದು ಯಾವ ನ್ಯಾಯ ಹೇಳಿರಿ ??... ನನ್ನ ಜವಾಬ್ದಾರಿ ಸ್ಥಾನದಲ್ಲಿದ್ದಾಗ ನನ್ನನ್ನು ನಾನೇ ಹುಡುಕುತ್ತೇನೆ. ಇದನ್ನ ನೀವು ಸಹಾ ನಿಮ್ಮ ಪತ್ರದಲ್ಲಿ ಬರೆದಿದ್ದೀರಿ. ಅದಕ್ಕಾಗಿ ನಾನು ತಮ್ಮ ಹಡುತ್ತೇನೆ. ನನ್ನ ಸ್ಥಾನಕ್ಕೆ ನಾನು ಎಲ್ಲರಿಂದಲೂ ಗೌರವ, ಅದಕ್ಕಿಂತ ಮಿಗಿಲಾಗಿ, ನನ್ನ ಮಾತಿಗೆ "ಬೆಲೆ" ಎದುರುನೋಡುತ್ತೇನೆ - ಅದನ್ನು ಬಲವಂತ ಮಂತ್ರಸ್ಥಾನದಿಂದ ಪಡೆಯಲು ನಾನು ಇಚ್ಛೆಪಡುವುದಿಲ್ಲ...

ಎರಡನೆಯದಾಗಿ ಬರೆದಿದ್ದೀರಿ; A) ಇದುವರೆಗಿನ ನಾವು ಮಾಡಿರುವ ಹುಡುಗಿಗೆ ಕೆಲಸವಾಗಿಲ್ಲ. B) ಇದೇ ಗತಿಯಲ್ಲಿ ನಡೆದರೆ ಈ ಕಲ್ಪನೆಯು ಭಯವಾಗುತ್ತದೆ.. ಇದು ನಮ್ಮ ಹೊಂಬಲ ಪ್ರಯತ್ನ. ಈಗ ನಾವು ಉಳಿದರೆ ಮತ್ತಾವುದಕ್ಕಾದರೂ ಸ್ಥೈರ್ಯವಾಗಿ ಮುನ್ನುಗ್ಗುವ ಶಕ್ತಿ ನಮಗೆ ಬರುತ್ತದೆ. ನಮಗೆ ಆಗದವರೂ ಇದ್ದಾರೆ. ನಮ್ಮ ಪ್ರಯತ್ನ ವಿಫಲವಾದರೆ, ಅವರ ನಡುವೆಯೇ ನಿಂತರೆ ನಾವು ಮುಳ್ಗಾದಂತೆಯೇ.. C) ಹಾಗೆ ನೀವು ನಮಗೆ ಫೋರ್ಸ್ ಆಗಿಲ್ಲ. ಎಲ್ಲವೂ ನಿಮ್ಮ ಮೇಲೆ. ನಿಮ್ಮ ಪ್ರಯತ್ನದ ಮೇಲೆ ನಿಂತಿದೆ.. ಎಂದು ಬರೆದಿದ್ದೀರಿ.

ಈ ನಿಮ್ಮ ವಾಕ್ಯಗಳು, ನನ್ನ ಮೇಲಿನ ಔದಾರ್ಯದ ಪ್ರೋತ್ಸಾಹವೇ ವಿನಃ ಮತ್ತೇನೂ ಅಲ್ಲ, ಎಂದು ನಾನು ತಿಳಿಯಬೇಕಾಗಿದೆ...

A) "ಇದುವರೆವಿಗೆ ನಾವು ಮಾಡಿರುವ ಚಿತ್ರಗಳ ಸಾರ್ಥಕ ಕೆಲಸವಾಗಿಲ್ಲವೆ?"

ಈ ನಿಮ್ಮ, ನನ್ನ ಮೇಲಿನ ಸಂದೇಹದ ಮಾತು, ನಿಮ್ಮ ಅಹಂಕಾರವಲ್ಲ... ಸ್ವಯಂ ಪ್ರೇರಿತವಲ್ಲ... ಇದು ನನ್ನ... ಯಾರೋ ಸಿನಿಮಾ ತಯಾರಕರುಗಳು "ಬೆಳ್ಳಿ ತಟ್ಟೆಯಲ್ಲಿ ತಿನ್ನುವ, ಲಕ್ಷಾಧಿಪತಿಗಳು ನಿಮ್ಮ ಕಿವಿಯಲ್ಲಿ ಊದಿರುವ ಮಾತು. ಅವರು ಯಾಕೆ ಹೀಗೆ, ಹೀಗೆ ಹೇಳುತ್ತಾರೆಂದರೆ, ಈ ದಿನ ಕನ್ನಡ ಚಿತ್ರ ಪ್ರಪಂಚ, ಕೊಳ್ಳೆ ಹೊಡೆಯುವವರಿಗೆ ಬಲಿಪಶುವಾಗಿ ಸಾಯುತ್ತಿದೆ... ನಿಮ್ಮ ಸಂಸ್ಥೆಯನ್ನು ನಾನು ಹೇಗೆ ಏನು ಮಾರ್ಗದರ್ಶನ ಮಾಡುತ್ತಿದ್ದೇನೆ ಯಾರಿಗೆ ಎಷ್ಟು ಕೊಡುತ್ತಿದ್ದೀರಿ!... ನಿಮ್ಮ ಸಂಸ್ಥೆಯಲ್ಲಿ ಎಷ್ಟು ಹಣವಿದೆ?? ಒಂದೂ ನಿಮಗೆ ನಾನು ಎಂದೂ ಕೇಳಿದವನಲ್ಲ... ನೀವೂ ಸಹಾ ನನಗೆ ಎಂದೂ ಹೇಳಿದವರೂ ಇಲ್ಲ... ಅದು ನನಗೆ ಬೇಕಾಗಿಯೂ ಇಲ್ಲ...

ಇದ್ದರೂ, ಮುಂದೆ ನನ್ನ ಕೆಲಸವಾಗಲಿ ಎಂಬುದಕ್ಕೆ ಅದೇನೇನೋ ಗ್ರಹಿಸಲಾರದೆ ಒದ್ದಾಡುತ್ತೇನೆ...

ಎಷ್ಟೋ ಬಾರಿ ತಮ್ಮ ಸಂಸ್ಥೆಯ ವ್ಯವಹಾರದ ಸ್ಥಿತಿಯನ್ನು ನಿಮ್ಮ Estimate. ಎಷ್ಟು ಎಂದು ಕೇಳಿದರೆ, ಅದಕ್ಕೆ ಉತ್ತರವೂ ಬರುತ್ತಿರಲಿಲ್ಲ... ಅದೂ ಅಲ್ಲದೆ ನೀವೆಷ್ಟು ಖರ್ಚು ಮಾಡುತ್ತಿದ್ದೀರಿ?... ಏತಕ್ಕೆ? ಏನು? ಎಂದು ಕೇಳುವುದಕ್ಕೆ ನಾನೇನು ನಿಮ್ಮ Company ಯ ಒಡೆಯನೇ?.... ಕೇವಲ ನೀವು ಕೊಡುವ ಸಂಬಳಕ್ಕಾಗಿ ದುಡಿಯುತ್ತಿದ್ದೇನೆ... ನಿಮ್ಮ ಚಿತ್ರಗಳು ನಿಮಗೆ ಒಳ್ಳೆಯ ಹೆಸರು ತಂದುಕೊಡಲು, ನನ್ನ ಬುದ್ಧಿಶಕ್ತಿಗೆ ತೋರಿದಷ್ಟು ಉತ್ತಮ ಕೆಲಸವನ್ನು ಮಾಡಲು ಪ್ರಯತ್ನಿಸುತ್ತಿದ್ದೇನೆ.... ಹೀಗಿರುವಾಗ, ನಾನು ನಿಮಗೆ ವಿಶ್ವಾಸದ್ರೋಹಿ... ಅದಕ್ಕೆ ತಕ್ಕ ಕೆಲಸಗಾರನಲ್ಲ ಎಂದು ಹೇಳುವುದು ನನಗೆ ಸಂಕಟದ ವಿಷಯವಾಗಿದೆ. ಅದೂ ಅಲ್ಲದೆ, ನೀವು ನನ್ನನ್ನು, "ನಾವು ಹೀಗೆ ಮಾಡುತ್ತಿರುವುದು ಸರಿಯೇ?! ತಪ್ಪೆ??... ಈ ಹೊತ್ತಿನಲ್ಲಿ

ಗೆ ಎಷ್ಟು ದುಡ್ಡಾಗುತ್ತದೆ? ಎಷ್ಟು ಖರ್ಚು ಬೀಳುತ್ತದೆ?.. ಅಂತ ನನ್ನ ಬಳಿ ನಿಮ್ಮ Finance ವಿಷಯವನ್ನು ಹೇಳಬೇಕಾದವರಲ್ಲ... ಯಾಕೆಂದರೆ ನಿಮ್ಮ ಸಂಸ್ಥೆಯಲ್ಲೇ ಅದನ್ನೆಲ್ಲಾ ಬಲ್ಲ ಮೇಧಾವಿಗಳಿದ್ದಾರೆ!! ಅದಕ್ಕೋಸ್ಕರ ಯಾವ ದೃಷ್ಟಿಯಲ್ಲಿ ನೀವು ಈ ಪ್ರಶ್ನೆಯನ್ನು ನನ್ನ ಮೇಲೆ ಹೇರುತ್ತಿದ್ದೀರೆಂಬುದು ನನ್ನ ತಲೆಗೆ ಹೊಳೆಯುತ್ತಿಲ್ಲ ಕ್ಷಮಿಸಿ!.... ಈ ಪ್ರಶ್ನೆಗೆ ನನ್ನ ಉತ್ತರ [illegible].
ಮೈತ್ರಿಫಿಲಂಸ್ ನವರು "ಬಿಜಿನೆಸ್" ಕುರಿತು ಚರ್ಚೆ ಮಾಡಿಕೊಳ್ಳುತ್ತಾರೆ; ಅವರು ಬಂದು ನನ್ನ [illegible] ಕರ್ತವ್ಯಕ್ಕೆ ಕುಂದು ಬಂದಿದ್ದಾರೆ.. ಇದರಿಂದ ನನಗೆ, ನನ್ನ ರಂಗದಲ್ಲಿ, ನನ್ನ ವೃತ್ತಿಗೆ ಹಾನಿಯುಂಟಾಗಿದೆ. ಅವರ ವಿಷಯವಾಗಿ ಎಷ್ಟು ಬರೆದರೂ ಕಡಿಮೆ... ನನ್ನ ರಂಗದಲ್ಲಿ ಬರೆದಷ್ಟೂ ಕಡಿಮೆ...

೮) "ಚಿತ್ರೋದ್ಯಮದಲ್ಲಿ ನೋಡಿದರೆ ಕಲ್ಪನೆಯ ಭಾಗವಾಗುತ್ತದೆ. ಇದು ನಮ್ಮ ಜೀವನದಲ್ಲಿ ಸತ್ಯ. ನಮ್ಮ ಪ್ರಯತ್ನ ವಿಫಲವಾದರೆ ಅದರ ನಷ್ಟ ನಿರ್ಮಾಪಕ ನಾವು ಮುಖ್ಯವಾದಂತೆಯೇ" ಎಂದು ಬರೆದಿದ್ದೀರಿ... [ಬರೆದ ಕೂಡಲೆ ನಿಮ್ಮ ನನ್ನ ಸಂಬಂಧ [illegible]... ಅಷ್ಟಕ್ಕೆ ನಗಿಸಿ]
ಅಂದರೆ ನಿಮ್ಮ ಉದ್ದೇಶ ಮೈತ್ರಿಫಿಲಂಸ್ ಮುಖ್ಯವಾದರೆ, ಅದಕ್ಕೆ ನಾನು ಕಾರಣನಾಗುತ್ತೇನೆ? ನನಗೆ ಅರ್ಥವಾಗುತ್ತಿಲ್ಲ. ನಿಮ್ಮ ಪ್ರಶ್ನೆ ನನಗೆ ಹೇಳಲು ಇಷ್ಟವಿದ್ದರೂ, ಇವತ್ತಿಗೆ ಚಿತ್ರಕ್ಕೆ ಎಷ್ಟು ಖರ್ಚಾಗಿದೆ! ಎಷ್ಟು film ಆಗಿದೆ!! ಎಷ್ಟು ಕಾಲ್‌ಶೀಟ್ ಆಗಿದೆ!! ಇನ್ನೂ ಎಷ್ಟು ದುಡ್ಡು ಬೇಕಾಗಿದೆ!! ಎಲ್ಲವೂ ನನಗೆ ಗೊತ್ತಿದೆ...
ನಿಜಕ್ಕೂ! ನಾನು, ತಿಳಿದಿರುವುದನ್ನು ತಿಳಿದಿದೆ ಎನ್ನುತ್ತೇನೆ! ತಿಳಿಯದಿದ್ದನ್ನು ಖಂಡಿತ ತಿಳಿಯದು ಎಂದು ಹೇಳುತ್ತೇನೆ!... ಎಲ್ಲವೂ ನನಗೆ ತಿಳಿದಿದೆ. ನನಗೆ ತಿಳಿಯದ [illegible] ಸರ್ವಜ್ಞರಿಗಳೆಲ್ಲಾ ನನ್ನ ಜನ್ಮಾಗತ" ಎಂದು ಹೆಮ್ಮೆಪಟ್ಟುಕೊಂಡು, ಎಲ್ಲರನ್ನು ಹಾರಿಸಿಕೊಳ್ಳ

ನನ್ನಿಂದೇನೂ ಕಷ್ಟವಿಲ್ಲವೆಂದು, ಯಾವ ಕೊಳ್ಳುವ ಕಡೆಯೋ ಹೈಕೋರ್ಟಿನ ಜೀವನ ಜೀವನವೇ!...
ಜೀವನ ಜಿಗುಪ್ಸೆ!! ಜೀವನದಲ್ಲೇ ನಮ್ಮ ಜೀವನವೇ!! ಅದಕ್ಕಾಗಿ ಜೀವನವನ್ನು ಬಿಡುಗಡೆ
ಎಂದು, ಪ್ರಪಂಚವನ್ನೇ ಬದಿಗೊತ್ತುವ ಬಂಡಾಯತನದ ಸೇರಿಸುವವನಲ್ಲ ನಾನು - ಕ್ಷಮಿಸಿ!!...

೧) ಇನ್ನು ಕೊನೆಯ ಪ್ರಶ್ನೆಗೆ ಉತ್ತರ ಕೊಡುತ್ತೇನೆ...
" ನೀವು ನನಗೆ ಪೂರ್ಣ ಅಧಿಕಾರ.. ಎಲ್ಲವೂ ನಿಮ್ಮ ಮೇಲೆ, ನಿಮ್ಮ ಪ್ರಾಮಾಣಿಕತೆಯ ಮೇಲೆ ನಿಂತಿದೆ"
ಎಂದು ಬರೆದಿದ್ದೀರಿ.

ನನ್ನ Romeo! ನೀವು ನನ್ನ ಮೇಲೆ ಇಟ್ಟಿರುವ, ಸಂಪೂರ್ಣ ಭರವಸೆ, ವಿಶ್ವಾಸ ನಂಬಿಕೆ, ಇದಕ್ಕಾಗಿ ನಾನು ನಿಮಗೆ ಕರಗಿಹೋಗಿ ನಮಸ್ಕರಿಸುತ್ತೇನೆ.... ಪ್ರಿಯರೆ, ನಾನೇ ನಿಮಗೆ ಪೂರ್ಣ ಅಧಿಕಾರ, ಎಲ್ಲವೂ ನನ್ನ ಮೇಲೆ, ನನ್ನ ಪ್ರಾಮಾಣಿಕತೆಯ ಮೇಲೆ ನಿಂತಿದೆ" ಎಂಬುದನ್ನು ಮಾತ್ರ ನಾನು ಒಪ್ಪಿಕೊಳ್ಳಲು ಸಿದ್ಧನಿಲ್ಲ... ಇದು ಶುದ್ಧ ಸುಳ್ಳು...


ಗೆಳತಿ! ಈಗ ನಾನು ಬರೆದಿರುವ, ಬರೆಯುತ್ತಿರುವ ವಿಷಯ ಕೇವಲ ನಿಮ್ಮ ಪತ್ರಕ್ಕೆ ನನ್ನ ನೇರವಾದ ಉತ್ತರ.. ಯಾರನ್ನೂ ದೂಷಿಸ ಹೊರಟಿಲ್ಲ.....
ಕ್ಷಮಿಸಿ! ನಾಳೆ ಬೆಳಗಾದರೆ ನಿಮ್ಮ ಮನೆಯಲ್ಲಿ ಮದುವೆ... ಮದುವೆಗೆ ಬರುವ ಜೋಡಿಗಳೆಲ್ಲ, ಅಮೃತಪ್ರಾಯವಾದ ಊಟವನ್ನು ಹಾರೈಸಿಕೊಂಡು ಇಷ್ಟಪಟ್ಟರೆ.. ಅಂಥ ಅಡಿಗೆಯವ ನನ್ನನ್ನು

ಚಿತ್ರರಂಗ[illegible]ಕೆಂದು [illegible] ನನ್ನಂತ ಒಬ್ಬ ನಿಮ್ಮ ಮನಸ್ಸಿಗೆ ಬಂದ... ದೇವರೊಬ್ಬ ಒಬ್ಬಂಟಿ
[illegible]... ಅವನನ್ನು ನಿಮ್ಮ ಮನಸಿಗೆ ಬಿಂಬ್ಬ, [illegible] ಮನೆಯೊಳಕ್ಕೆ ದಬ್ಬು [illegible]...
ಬಂದು ನೋಡಿದಾಗ [illegible] ಮನೆ [illegible].... ನಂತರ ನೀವು [illegible] ಗ್ರಾಮವನು, ರಾತ್ರಿ, [illegible]
ಎಲ್ಲವನ್ನೂ ಬಿಡಬಹುದ ವೇಳೆಗೆ, [illegible] [illegible] ಬಂದು ಊರಿಗೆ [illegible].
ಹೀಗ ನೀವು [illegible]," ಎಂಥಾ [illegible] ಏನು ?.. ಎಲ್ಲರೂ ಊರಿಗೆ ಬಂದು [illegible]
ಇನ್ನೂ ನಿನ್ನ [illegible] ?.. ನವುಗೆ [illegible], ನಿನ್ನನ್ನು ನಂಬಿ ನಮ್ಮ [illegible]
[illegible]" ಎಂದು ಈ [illegible] ಗುಡುಗಿದರೆ [illegible]. ??
[illegible] ಕಾಲಾ ಕಾಲದಲ್ಲಿ [illegible], ನೀವು [illegible] ನಿರುವ ಮೂರ್ತಿಗಳಲ್ಲ ? ನಿಮ್ಮ ಇಷ್ಟದ [illegible]
[illegible] [illegible] ಕಲ್ಲುಮುಳ್ಳುಗಳಲ್ಲಿ [illegible]?] [illegible]
[illegible], ಎಲ್ಲರನ್ನೂ, ಎಲ್ಲವನ್ನೂ, [illegible] ಬಿಡಬಹುದ,... [illegible]
[illegible] ಅವನಿಗೆ [illegible] [illegible]... ರಾಣಿ...." ಎಲ್ಲರಾ [illegible]
ಮೇಲೆ [illegible], [illegible] ನಾನು ಏನು ಹೇಳಬೇಕೋ ಗೊತ್ತಿಲ್ಲ.
ಚಿತ್ರದ [illegible], [illegible] ನಡೆಯಬೇಕಾದರೆ [illegible]
Director [illegible].. ನಿಮ್ಮ [illegible] Director ಗೆ [illegible] ಜವಾಬ್ದಾರಿ,
ಈ SET ಬೇಕು - ಈ [illegible] ಬೇಕು! ಈ Dress ಬೇಕು! ಇಷ್ಟು ದಿನ ಬೇಕು! ಎಂದು [illegible]
[illegible], [illegible] cent percent [illegible] ಮಾಡಬೇಕು..
[illegible] Schedule [illegible], [illegible] [illegible] ತಪ್ಪು !!

ಆಸ್ಪತ್ರೆಗೆ(?) ಹಾಗೆ ಸ್ವಲ್ಪ [illegible] ಕೆಲಸವಿದ್ದರೆ ಅದು ಅನಿವಾರ್ಯವೇ ಹೊರತು.
ಒಬ್ಬ ಶ್ರೇಷ್ಠ ಕಲಾವಿದನಾಗಿ(?) "ನನ್ನಂಥ Director ಮಾಡುವುದಿಲ್ಲ... ಈಗ ಇದ್ದು ನಾನು ಹೇಳುವಾಗ
ಕ್ಷಣಕ್ಷಣ... ಎಂದು ತಿಳಿಯಬಹುದು(?), ನಂತರ ನಾನು ಹೇಳಿದ್ದೇ ಒಂದು, ನಡೆಯುವುದೇ ಒಂದು ಆಗಿ,
ಯುದ್ಧಕಾಂಡ ಪತ್ರಿಕೆಗಳು(?)" ಎಂದು ಹೀಗೆ ಗಡಿಬಿಡಿಯಿಂದ ಓಡಾಡಿ, ಕೆಲಸ ನಡೆಯುತ್ತಿದ್ದರೆ.
ಈಗ Director ನ್ನು "ಎಲ್ಲವೂ ನಿಮ್ಮ ಮೇಲೆ ನಿಂತಿದೆ!! - ಎಂದರೆ ಆತ ನಾನು ಮಂತ್ರಿ(?)ನೇ??
ಆತನೇನು ಮಂತ್ರವಾದಿಯೇ [illegible]?? ಅಥವಾ ಆತನೇನಾದರೂ ಎಲ್ಲ ಸಂಸ್ಥೆಯನ್ನು ರಕ್ಷಿಸಬಲ್ಲ
ಅಧಿಕಾರ ಪಡೆದಿದ್ದೀರಾ...??

ಮುಂದೆ ಬರೆದಿದ್ದೀರಿ!.. "ಆ ದಿನ ಬೆಟ್ಟದ ಮೇಲಿಂದ ಕತ್ತಲೆಯೇ ಬಂದಿತು(?)!
ಬಳಿಕ(?) ಪುನಃ ಮೇಲೆ ಹೋದಿರಿ... ಬಿದ್ದಾಗ(?) ಮೇಲೆ ಅದು ಕಲ್ಲುಗಳ(?) ಹೊಡೆದರು!
ನಿಜ ಹೇಳಬೇಕಾದರೆ ಚಿತ್ರ(?) ಇದ್ದರು" ಎಂದು ಬರೆದಿದ್ದೀರಿ...

ನಿಜ ಹೇಳಬೇಕಾದರೆ ಕ್ಷಮೆ ಕೇಳಬೇಕಾದ್ದು ಶ್ರೀ ಅರಸುರವರಲ್ಲ.... ನಾನು!!..
ಶ್ರೀ ಅರಸುರವರಿಗೆ ಈ ಚಿತ್ರದ ಮೂಲಕ ಬಿಡುಗಡೆಗೆ(?) ಬರಲಿ ಎಂದು, ನಾನು ಪ್ರಾರ್ಥಿಸುತ್ತೇನೆ(?).
ಈ ಎಲ್ಲಾ ಮಾತುಗಳ(?) ಕಷ್ಟ ಪಡುತ್ತಿದ್ದೀರಲ್ಲ, ಅದು ನನ್ನ ಮೂರ್ಖತನ!! ಅದಕ್ಕಾಗಿ ನಾನು ಕ್ಷಮೆ...
ಸ್ವಾಮಿ! [illegible]ನನ್ನೂ, ಸರ್ಕಾರದವರನ್ನೂ ನಂಬುವವರು(?) ಆತ ದೊಡ್ಡವರ [illegible]...
ಕ್ಷಮಿಸಿ(?) [illegible] ನಾನು ಶ್ರೀ ಅರಸುರವರನ್ನು [illegible]... ಹೀಗಾಗಿ, ಅವರ ಈ
ಚಿತ್ರ ಪತ್ರಿಕೆಗಳಿಗಾಗಿ(?) ನಾನು ಮರುಕಪಡುತ್ತೇನೆ.. ನಾನು ಕತ್ತಲೆಯ ಬಂದು, ಪುನಃ ಮೇಲೆ ಹೋದದ್ದು


ಯಾಕೆ ? ಎಂಬುದನ್ನು ನೀವು ಗ್ರಹಿಸಲಾರಿರಿ....

ನೀವು ಸದಾ ಕಲಾವಿದರು। ಇತರ ಎಲ್ಲರಂತೆ ಇರಲಾರದ ಸದಾ ಕಾಲ

ಕಾಂತಿಗುತ್ತಿರುವವರು!!... ಆದ್ದರಿಂದಲೇ ಮೈತ್ರಿಸಂಪತ್ತಿಯನ್ನು ಕಳ್ಕೊಳ್ಳುವವರು.......

ಆದರೆ ನಿಮ್ಮ ವೃತ್ತಿರಂಗ "ನ್ಯಾಯಾಲಯ".... ನೀವು "ಲಾಯರ್"... ಆ ನನ್ನ ಲಿಂಗನ ಪತ್ರ ನೋವು

ಕಾರಣ ನಿಮಗೆ ಬೇಸರವಾಗಬೇಕಾದರೆ, ನಾನು ನಿಮ್ಮ ವ್ಯಕ್ತಿತ್ವಕ್ಕೆ ಅವಮಾನವಾಗಿ ತೋರುತ್ತಿದ್ದರೆ

ಬೇಕಾದಷ್ಟು ಕ್ಷಮೆ ಕೇಳುತ್ತೇನೆ.... Sorry. ಬಹುಶಃ ನಿಮ್ಮ ಕಕ್ಷಿಗಾರರನ್ನೇ ನೀವು ಹೇಳುತ್ತಿದ್ದ

ಅಯ್ಯ, ಇವತ್ತು ನಿನ್ನ Case ಮುಗಿಸಿಬಿಟ್ಟೆನಯ್ಯ, ಓ! ... ನಿಮಗೂ ಸದಾ ಲಾ ಉದ್ದೇಶ್ಯದಿಂದ

ನೀವು ಕೋರ್ಟ್ Argue ಮಾಡೋವಾಗ, ಯಾವುದೋ ಒಂದು Point ನಲ್ಲಿ, ಕೇಸ್

ಮಂಕಾಗಿ ಏನಲ್ಲೋ "Attention" ತಿರುಗುತ್ತೆ... ಆಗ ಆ ಕಕ್ಷಿದಾರ ನಿಮ್ಮನ್ನು ಮತ್ತು ಕೋರ್ಟನ್ನು:

ನಮ್ಮ ಲಾಯರ್ ಹೀಗೆ ಮಾಡಿದ್ದಾರೆ, ಎಂದು ನಿಮ್ಮನ್ನು ನೋಡಿದ ಆತ ಚಿತ್ರ, ಆ ಚಿತ್ರವಿನ

ಏನಾದರೂ ಬೇಸರಪಡುವಿರಾ?... ಕೇವಲ ಅವನನ್ನು ನೀವು ಪ್ರೀತಿಸುತ್ತೀರಿ ನಿಮಗೆ ಬೇಸರವಾಗೋ

ಹಾಗೇ, ನನಗೆ ಯಾರನ್ನೂ ನೋಯಿಸುವ ಉದ್ದೇಶವಿಲ್ಲ... ತಪ್ಪಾಗಿ ಬಂದಿದ್ದು ಲಿಂಗಮಯ್ಯನ

ಕೃಪೆಯ ತಿಳಿಯಲು. ಆದರೆ ಆ ಲಿಂಗಮಯ್ಯ [ಟೀಕೆ ಮಾಡುವವರಾರೂ ಇಲ್ಲ....] ಹಾಗೂ ಆತ ಹೋತ್ತಿ ಇತ್ತ

ಕೋರನ್ನು ಬೆಟ್ಟದ ಅಡಿಯಾಗಿರಲಿಲ್ಲ.... ಕೇವಲ ನಿಮ್ಮ ಕಕ್ಷಿಗಳೆಲ್ಲ ಕರೆಯುವ ನೀವು ತರುವ

ಚಿತ್ರಿಯಾಗಿತ್ತು... ನಾನು ಬೆಟ್ಟದಿಂದ ಬಂದು ಆ ಕೃಷ್ಣ ತಿಳಿಸಿದ್ದಾರೆ, ಕಾರಣರಾದವರಾದರೆ, ಮೇಲಿನೋಟಕ್ಕೆ

ಮತ್ತೊಂದು ಕೃಪ್ಯತೆ ನೋಡಿ... ಆಶ್ಚರ್ಯ ಆದರೂ ಕವರು ಏಕೆ ಬೇಕಾಗಿದೆ ಇದು ನನ್ನದು. P.T.O.

ಎರಡನೇ Schdule ನಲ್ಲಿ... [ಅಂದರೆ 6:4:68 ರಿಂದ 12:4:68 ರವರೆಗಿನ ನಡೆದದ್ದು]
ನಾನು ಮೊದಲನೇ Schdule ನಿ ಬಂದಾಗಲೇ, ನಿಜವಾದ ಜಂಗಮಯ್ಯನನ್ನೇ ಕೇಳಿ, ಇವರೇ ಆಲಿ
ಹೋಟೆಲ್. ಆಕ್ಷಿ. ಎಲ್ಲಾ ಇರಬೇಕೆಂದು ಹೇಳಿದ್ದೆ... ನಂತರ: America ದಿಂದ ಬಂದಿದ್ದೆಂದು ಹೇಳ್ದಿಲ್ಲ,
[ದಾನಿ ಹೇಳಿದ ರೀತಿ ಆ ಕೆಲಸ ನಡೆದಿರಲಿಲ್ಲ. ಆದಾಗ್ಯೂ ನಾನು ಒಂದು ಟಿಪ್ಪಣಿ ಮಾಡಿ, ಅದು ನಡೆದಿದ್ದರೆ
ಆ ಭಾಗಕ್ಕೆ ಸಾಧ್ಯ ಕಿ ??] ಅದಲ್ಲದೆ ನೀವು, ಶ್ರೀ ನಾಗೇಂದ್ರಯ್ಯನವರು ಕಾರಣರಾಗಿದ್ದುಕೊಂಡು,
ನನ್ನ ಕಡೆಗೆ ಎರಡು ಪತ್ರದ ಪ್ರಶ್ನೆಗಳನ್ನು ಬಿಟ್ಟರಿ... ಅದಕ್ಕೆ ಉತ್ತರ! ನನ್ನಿಂದ ಮೇಲೆ ಪ್ರಶ್ನಿಸ್ತೀರೇ ??


"ನಮ್ಮನ್ನು ಅನುಸರಿಸಿಕೊಂಡು ನಡೆಯುತ್ತಿ" ಎಂದು ಬರೆದಿದ್ದೀರಿ..
ನಾನು ನಿಮ್ಮನ್ನು ಯಾವ ವಿಧದಲ್ಲೂ ಅನುಸರಿಸಲಿಲ್ಲ... ಚಿತ್ರದ ಆತ್ಮ ಮುಖ್ಯವಾದ ಬೇಕಾಗಿದ್ದ SGT ಒಂದನ್ನು
ಬಿಂಬಿಸಿ ಸಾಧಿಸಿದೆನೆಂದುಕೊಂಡಿದ್ದೇನೆ ಎಂದು ಹೇಳ್ತೀ. ಕೆಲವನ್ನು ಬಿಟ್ಟರೆ, ಕತ್ತರಿ, ಸನ್ನಿವೇಶಗಳಿಗೆ Heavy ಆಗದ ಹಾಗೆ ನನ್ನ
ನನ್ನನ್ನು Control ಮಾಡಿ ಎಂದಾಗ, ನನಗಿಷ್ಟವಿಲ್ಲದಿದ್ದರೂ, ನಿಮ್ಮ ಮಾತಿಗೆ ಬೆಲೆಕೊಟ್ಟು, ನಾನು ಚಿತ್ರ
Shoot ಮಾಡಿ, ಆದರಲ್ಲಿ ಒಳ್ಳೆ Quility work Create ಮಾಡಿಲ್ಲವೇ ?.... ಈಗ ಅನಿಸುತ್ತಿದೆ ನಾನು
ಹಾಗೆ ಮಾಡಿದ್ದು ತಪ್ಪೆಂದು..... ನಾನು ನಿಮ್ಮ ಸಂಸ್ಥೆಗೆ ಇದ್ದದ್ದು ಎಲ್ಲಾದರೂ Chance ಕೊಡಲಿಲ್ಲವೇ ?
ಯಾವ ವಿಧದಲ್ಲೂ ನಿಮ್ಮೆಲ್ಲರ ಮನಸ್ಸಿಗೆ ಬೇಜಾರು ಉಂಟುಮಾಡಿದ್ದೇನೆ. ದಯವಿಟ್ಟು ಹೇಳಿ...
ಎಲ್ಲಾದರೂ ನನ್ನ ಕೆಲಸದ ಬಗ್ಗೆ ಹೇಳಿದರೆ ಹೇಳಿ... ಆದರೆ, ಇಷ್ಟು ಸತ್ಯ.. ನನ್ನ ಮಗುವನ್ನು ನಾನು ಕೊಲ್ಲಲಾರೆ!


ಹೊಂದುಕೊಳ್ಳಬೇಕು... ಬೇರೆಯವರಾದರೂ ಅವರನ್ನ ಒಪ್ಪಿಕೊಂಡರೆ ಏನು ಅಪರಾಧವಿದೆ...

ನೋಡಿದರೆ, ನಾನು ಕನ್ನಡಿಗ!! ತಮಿಳು ಚಿತ್ರ ಮಾಡಲು ಹೋದರೆ 'ಕನ್ನಡಕ್ಕಾರ' ಎಂಬ ತಿರಸ್ಕಾರ!... ಮಲೆಯಾಳಂ ಚಿತ್ರ ಮಾಡಲು ಹೋದರೆ 'ನಾನು Malayalee' ತೆಲುಗು ಚಿತ್ರ ಮಾಡಲು ಹೋದರೆ "ವಾಡು, ಮನವಾಡು ಕಾದು!! ವಾಡೆವಡುರಾ? ಮನವಾಳ್ಳು ಲೇರಾ? ಅನ್ನುತ್ತಾರೆ. ಸರಿ! ಈ ಮಲತಾಯಿಯರ ಸಹವಾಸವೇ ಬೇಡ!.. ನನ್ನ ಸ್ವಂತ ತಾಯಿ ಬಳಿ ಹೋದರೆ: ಆ ನನ್ನ ತಾಯಿ ನನ್ನನ್ನ ಬಹಿಷ್ಕಾರ ಮಾಡ್ಬಿಟ್ಟಿದ್ದಾಳೆ!! ಮಲತಾಯಿಯರ ಹಾಗಲ್ಲ, ಇಂತಹ ಅವ್ವ ಬಳಿ ಹೋಗಿ ಹೇಳಿಕೊಂಡರೆ, ಆ ತಾಯಿ ನನ್ನನ್ನು ಬೆಳ್ಳನೆಯ ಅಪ್ಪುಗೆಯಿಂದ, ದೂರ-ದೂರ-ಬಹುದೂರ ತಬ್ಬಿ ಬಿಡುತ್ತಾಳೆ... ನಾನು ಯಾರಲ್ಲಿ? ಎಲ್ಲಿ? ಹ್ಯಾಗೆ?.. ಬದುಕಲಿ. ನೀವು ಹೇಳಬಹುದೆ ನೀವೇ!

ನಿಮ್ಮಂಥ, ಕಲೆಯಲ್ಲಿ ಆಸಕ್ತಿಯುಳ್ಳ, ಭಕ್ತಿಯುಳ್ಳ ಈತನ್ನ ವ್ಯಕ್ತಿಗಳೇ ನನ್ನ ಉದ್ಧಾರ ಮಾಡಬೇಕು.. ನನ್ನ ಆದರ್ಶ ಮಾಡ್ಕೊಳ್ಳಬೇಕು.. ಈ ಬಡ್ಡ ಯಾರದೋ ಮಾತು ಕೇಳ್ಕೊಂಡು ನನ್ನಲ್ಲಿ ಏನು ಮಾನ ಹಿಡಿದು... ತಮ್ಮ ತಪ್ಪನ್ನ ಮುಚ್ಚಿಕೊಳ್ಳಲು ಪ್ರಸ್ತಾಪ ನಮ್ಮಕ್ಕನ ಬೆಳ್ಳು ಮಾಡುವುದು.. ಇದು ನ್ಯಾಯವೇ? ಮೈತ್ರಿ ಶ್ರೀಲಂಕ ಮಿತ್ರರಲ್ಲಿ ನಾನೊಬ್ಬ ಬಿನ್ನಗಳನ್ನ ತುಂಬಿಕೊಂಡಿದ್ದೀನಿ.. ಏನ್ಮಾಡ್ಲಿ ಮರೆತು ಬಿಟ್ಟೆಲ್ಲ..?? ನೀವು ದಯವಿಟ್ಟು ನನ್ನನ್ನ ತಪ್ಪಾಗಿ ತಿಳಿದುಕೊಳ್ಳಕೂಡದು.

P.T.O.







# ನಾನು ನೋಡಿದ್ದು

ನನ್ನ-ಪುಟ್ಟಣ್ಣನವರ ಸ್ನೇಹದ ಪತ್ರ ಹಿಂದಿನ ಪುಟಗಳಲ್ಲಿ ಓದಿದಿರಿ. ಅವರ ಅಕ್ಷರಗಳಲ್ಲಿ ಅದು ಎಂಟು ಪುಟಗಳ ಕಾಗದ. ಪುಟ್ಟಣ್ಣನವರು ನನಗೆ ಸಿಕ್ಕಿದ್ದು ಹೇಗೆ? ನನ್ನ ಅವರ ಮೈತ್ರಿ ಕೊನೆಯವರೆಗೂ ಉಳಿದಿದ್ದು, 'ಸಾವಿರ ಮೆಟ್ಟಿಲು' ಏರಲು ಹೋಗಿ ಮುಗ್ಗರಿಸಿದ್ದು! 'ಬೆಳ್ಳಿ ಮೋಡ'ದಲ್ಲಿ ಮಿಂಚಿದ ಪುಟ್ಟಣ್ಣನವರ ಜೀವನದಲ್ಲಿ ಹೊಸ ಪ್ರತಿಭೆಯ ಪುಟಗಳಾಗಿದ್ದ ಕಲ್ಪನಾ, ಆರತಿಯರ ಆಗಮನ. ಅಜ್ಞಾತವಾಸ, ಮಾನಸಿಕವಾಗಿ ಬಳಲಿದ್ದಾಗಲೂ ಜ್ಞಾನಾರ್ಜನೆ, ಜೀವನದೆಡೆ ಹೊಸದೃಷ್ಟಿ, ಪಕ್ವವಾದ ಮನ, ಅವರ ನಿರ್ದೇಶನದ ಕೊನೆಯ ಚಿತ್ರ 'ಮಸಣದ ಹೂವು'ಗೆ ಪ್ರಚೋದಕ ಶಕ್ತಿಯಾದ ಒಂದು ಹೆಣ್ಣಿನ ಕಥೆ, ಅವರು ಚಿತ್ರೀಕರಣದ ವೇಳೆಯಲ್ಲಿ ತೋರುತ್ತಿದ್ದ ನಿಷ್ಠೆ, ಉತ್ಸಾಹ, ತಂಡದವರಿಗೆಲ್ಲಾ ನೀಡುತ್ತಿದ್ದ ಪ್ರೋತ್ಸಾಹ, ಅವರ ಕೊನೆಯ ದಿನಗಳ ನೋವು-ನಲಿದಾಟ.

ಇವೆಲ್ಲಾ ಮುಂದಿವೆ....

# ವಿಜಯ ಭಾಸ್ಕರ್ ಭವಿಷ್ಯ

ನಾನು ಹುಟ್ಟಿದ್ದು ಹಳ್ಳಿಯಲ್ಲಿ. ಚಿಕ್ಕಂದಿನಿಂದಲೂ ಕಲೆ ಬಗ್ಗೆ ಆಸಕ್ತಿ. ಕಾಲೇಜು ಸೇರುವ ಹೊತ್ತಿಗೆ ಕಲೆ ನನಗೆ ಚಟವಾಯಿತು. ೧೯೬೦ರ ವೇಳೆಗೆ ಹಾಸನದಲ್ಲಿ ಏಳು ವರ್ಷ ವಕೀಲನಾಗಿ ದುಡಿದಿದ್ದೆ. ಅಲ್ಲದೆ ಚನ್ನರಾಯಪಟ್ಟಣದ ತಾಲ್ಲೂಕು ಅಭಿವೃದ್ಧಿ ಮಂಡಲಿ ಸದಸ್ಯನಾಗಿ, ವ್ಯವಸಾಯ ನಿಯಂತ್ರಿತ ಮಾರುಕಟ್ಟೆಯ ಅಧ್ಯಕ್ಷನಾಗಿ, ಹಾಸನ ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿಯಾಗಿ, ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಸದಸ್ಯನಾಗಿ ಕೆಲಸ ಮಾಡುತ್ತಿದ್ದೆ. ಆದರೆ ಇದಾವುದೂ ತೃಪ್ತಿ ಕೊಟ್ಟಿರಲಿಲ್ಲ. ಮನಸ್ಸು ಚಿತ್ರರಂಗದೆಡೆಗೆ ಎಳೆಯುತ್ತಿತ್ತು.

ನನ್ನೊಂದಿಗೆ ಕಾಲೇಜು ಸಹಪಾಠಿಗಳೂ ಮತ್ತು ಕಲಾವಿದರೂ ಆಗಿದ್ದ ಶ್ರೀ ಹೆಚ್.ಪಿ. ನಾಗೇಂದ್ರಯ್ಯ, ಶ್ರೀ ಪಿ.ವಿ. ನಂಜರಾಜ ಅರಸು, ಶ್ರೀ ಎಂ.ಸಿ. ಪುಟ್ಟಸ್ವಾಮಿ, ರಾಜಕೀಯ ರಂಗದಲ್ಲಿ ಅತ್ಯಂತ ಪ್ರಭಾವಿಗಳಾಗಿದ್ದ ಇಬ್ಬರು ಶಾಸಕರು, ನಾಲ್ವರು ವಕೀಲರು, ಒಬ್ಬ ಚಲನಚಿತ್ರ ಮಂದಿರದ ಒಡೆಯರು ಮತ್ತು ಸಮಾಜದ ಗಣ್ಯರಾಗಿದ್ದ ಇನ್ನೂ ಹಲವರು ಸೇರಿ ಕನ್ನಡ ಚಿತ್ರ ತೆಗೆಯುವ ಸಲುವಾಗಿ ಮೈಸೂರು ನಗರದಲ್ಲಿ 'ಮೈಸೂರು ಮೈತ್ರಿ ಫಿಲಂಸ್' ಎಂಬ ನೋಂದಾಯಿಸಿದ ಸಂಸ್ಥೆಯನ್ನು ಸ್ಥಾಪಿಸಿದೆವು.

ಚಿತ್ರರಂಗಕ್ಕೆ ಹೊಸದಾಗಿ ಕಾಲಿಟ್ಟ ನಮಗೆ ಸ್ವಾಭಾವಿಕವಾಗಿಯೇ ಹೆಚ್ಚು ಅನುಭವವಿರಲಿಲ್ಲ. ನಿರ್ದೇಶಕರು, ತಂತ್ರಜ್ಞರು ಮತ್ತು ನಟನಟಿಯರನ್ನು ಗೊತ್ತು ಮಾಡುವ ಸಲುವಾಗಿ ೧೯೬೦ರ ಕೊನೆಯಲ್ಲಿ ನಾವು ನಾಲ್ವರೂ ಮೈತ್ರಿ ಮಿತ್ರರು ಮದರಾಸಿಗೆ ಹೋದೆವು. ವಿಚಿತ್ರವೆಂದರೆ ನಮಗೆ ಎಲ್ಲಿಂದ ಹೇಗೆ ಪ್ರಾರಂಭಿಸಬೇಕೆಂಬುದು ಸ್ಪಷ್ಟವಾಗಿ ಗೊತ್ತಿರಲಿಲ್ಲ. ಆಗ ಕನ್ನಡ ಚಿತ್ರರಂಗದಲ್ಲಿ ಉಚ್ಛ್ರಾಯ ಸ್ಥಿತಿಯ ಕಡೆಗೆ ಭರದಿಂದ ಸಾಗುತ್ತಿದ್ದ ರಾಜ್‌ಕುಮಾರ್ ಅವರ ಮನೆಗೆ ಹೋದೆವು. ಅವರು ನಮ್ಮನ್ನು ಪ್ರೀತಿಯಿಂದ ಕಂಡು, ಈಗಾಗಲೇ ಹಲವು ಚಿತ್ರಗಳು

ಕೈಯಲ್ಲಿರುವುದರಿಂದ ಇನ್ನು ಆರು ತಿಂಗಳು ಕಳೆದ ಮೇಲೆ ತಮ್ಮ ಕಾಲ್‌ಷೀಟ್ ಕೊಡುವುದಾಗಿ ತಿಳಿಸಿದರು. ಇದರಿಂದ ನಮಗೆ ತೃಪ್ತಿಯಾಗಲಿಲ್ಲ.

ರಾಜ್‌ಕುಮಾರ್‌ರವರ ಮನೆಯಿಂದ ಸಂಗೀತ ನಿರ್ದೇಶಕ ವಿಜಯಭಾಸ್ಕರ್‌ರವರ ಮನೆಗೆ ಹೋದೆವು. ಅಲ್ಲಿ ಅವರು ಕೇಳಿದ ಮೊದಲ ಪ್ರಶ್ನೆಯೆಂದರೆ "ಚಿತ್ರದ ನಿರ್ದೇಶಕರು ಯಾರು?" ಎಂಬುದು. ಆಗ ನಾವು ಒಬ್ಬರ ಮುಖವನ್ನೊಬ್ಬರು ನೋಡಿಕೊಂಡೆವು. ಅದರ ಬಗ್ಗೆ ನಾವು ಚಿಂತಿಸಿಯೇ ಇರಲಿಲ್ಲ. ಅದನ್ನರಿತ ಅವರು ಚಿತ್ರ ತಯಾರಿಕೆಯಲ್ಲಿ ನಿರ್ದೇಶಕ ಎಷ್ಟು ಮುಖ್ಯ ಎಂಬುದನ್ನು ವಿವರಿಸಿ "ಮೊದಲು ನಿರ್ದೇಶಕರನ್ನು ಆಯ್ಕೆ ಮಾಡಿಕೊಳ್ಳಿ" ಎಂದು ಮಾರ್ಗದರ್ಶನ ನೀಡಿದರು "ನಾವು ಹೊಸಬರು ನೀವೇ ಯಾರನ್ನಾದರೂ ಸೂಚಿಸಿ" ಎಂದಾಗ ಅವರು ಸ್ವಲ್ಪ ಹೊತ್ತು ಯೋಚಿಸಿ "ನನಗೆ ತಿಳಿದ ಮಟ್ಟಿಗೆ ಇಲ್ಲಿ ಒಬ್ಬ ಪ್ರತಿಭಾನ್ವಿತ ಕನ್ನಡ ಯುವ ನಿರ್ದೇಶಕರು ಇದ್ದಾರೆ. ಆದರೆ ಅವರು ಸ್ವಲ್ಪ ಕಠಿಣ ವ್ಯಕ್ತಿಯಂತೆ ಕಾಣುತ್ತಾರೆ. ಅವರು ಒಪ್ಪಿದರೆ ನೀವು ಧೈರ್ಯದಿಂದ ನಿಮ್ಮ ಹೊಣೆಯನ್ನು ಅವರ ಮೇಲೆ ಹೊರಿಸಬಹುದು. ಅವರು ಕನ್ನಡ ಚಲನಚಿತ್ರರಂಗದಲ್ಲಿ ಒಂದು ಕ್ರಾಂತಿಯನ್ನೇ ಮಾಡುವರೆಂಬ ಭರವಸೆ ನನಗಿದೆ" ಎಂದು ಕಣಗಾಲ್ ಪುಟ್ಟಣ್ಣನವರ ಹೆಸರು ಹೇಳಿದರು. ಅವರು ಈಗ ಚಿಕ್ಕಮಗಳೂರಿನಲ್ಲಿ 'ಬೆಳ್ಳಿ ಮೋಡ'ದ ಅವತರಣಿಕೆಯಲ್ಲಿ ನಿರತರಾಗಿರುವುದಾಗಿಯೂ ತಿಳಿಸಿದರು.

ನಟ ನಟಿಯರ ವರ್ಗಕ್ಕೆ ಕಲ್ಯಾಣ್‌ಕುಮಾರ್, ಅಶ್ವತ್ಥ್, ಜಯಂತಿ, ಪಂಡರೀಬಾಯಿ, ಮುಂತಾದವರನ್ನೂ, ಸಂಗೀತ ನಿರ್ದೇಶನಕ್ಕೆ ವಿಜಯಭಾಸ್ಕರ್ ಅವರನ್ನೂ, ಆಯ್ಕೆ ಮಾಡಿಕೊಂಡು ನಾವು ನಾಲ್ವರೂ ಒಂದು ಸಂಜೆ ಮದರಾಸ್ ಬಿಟ್ಟು ಚಿಕ್ಕಮಗಳೂರು ಸೇರಿದೆವು.

◆

# ಚಿಕ್ಕಮಗಳೂರಿನಲ್ಲಿ

ಚಿಕ್ಕಮಗಳೂರಿನಲ್ಲಿ ಇಡೀ ಒಂದು ವಸತಿಗೃಹ ಪುಟ್ಟಣ್ಣನವರ ಚಲನಚಿತ್ರ ತಂಡದವರಿಂದ ಜಗಜಗಿಸುತ್ತಿತ್ತು. ವಿಜಯಭಾಸ್ಕರ್ ಅವರು 'ಪುಟ್ಟಣ್ಣನವರು ಸ್ವಲ್ಪ ಕಠಿಣ ವ್ಯಕ್ತಿ' ಎಂದು ತಿಳಿಸಿದ್ದರಿಂಧ ಅಂಜಿಕೊಂಡೇ ಅವರನ್ನು ಭೇಟಿ ಮಾಡಿದೆವು.

ಆದರೆ ನಾವು ಅಲ್ಲಿ ಕಂಡದ್ದು ನಮ್ಮ ಭಾವನೆಗೆ ತದ್ವಿರುದ್ಧ ವ್ಯಕ್ತಿಯನ್ನು. ಅವರು ಓಡಿ ಬಂದು ಎರಡೂ ಕೈ ಮುಗಿದು ತೆರೆದ ಹೃದಯದಿಂದ, ಬಾಯಿತುಂಬ ನಗುತ್ತಾ ನಮ್ಮನ್ನು ಸ್ವಾಗತಿಸಿ, ನಮ್ಮ ಉದ್ದೇಶ ಮತ್ತು ನಮ್ಮ ಮೈತ್ರಿ ಸಂಸ್ಥೆಯ ನಿರ್ದೇಶಕರುಗಳ ವೈಯಕ್ತಿಕ ಸ್ಥಾನಮಾನಗಳ ಬಗ್ಗೆ, ಕೂಲಂಕಷವಾಗಿ ವಿಚಾರಿಸಿದರು. ಅದನ್ನೆಲ್ಲಾ ಕೇಳುತ್ತಾ ಭಾವುಕರಾದರು. ಕುಳಿತಲ್ಲಿ ಕೂರದಾದರು. ಅವರ ಕಣ್ಣುಗಳು ತೇವಗೊಂಡವು. ಮುಗಿದ ಕೈಯನ್ನು ಹಾಗೆಯೇ ಹಿಡಿದುಕೊಂಡು "ಸಾರ್ ಧನ್ಯನಾದೆ. ನನ್ನ ಕನ್ನಡ ತಾಯಿ ನಿಮ್ಮನ್ನು ನನ್ನಲ್ಲಿಗೆ ಕಳುಹಿಸಿದ್ದಾಳೆ, ನೀವಾಗಿ ಇಲ್ಲಿ ಬಂದಿಲ್ಲ. ಈ ಯಕಃಶ್ಚಿತ್ ಮನುಷ್ಯ ಅವಳ ಸೇವೆಗಾಗಿ ಹಂಬಲಿಸುತ್ತಿದ್ದಾನೆ. ಆದರೆ ಅವನಿಗೆ ಆಶ್ರಯದಾತರಿಲ್ಲ. ಚಿತ್ರರಂಗ ಇಂದು ಹೊಲಸಾಗಿ ಹೋಗಿದೆ. ಅಯೋಗ್ಯರಿಂದ, ವಂಚಕರಿಂದ ತುಂಬಿಹೋಗಿದೆ. ನಿಮ್ಮ ಸ್ಥಾನಮಾನಗಳನ್ನು ಕೇಳಿ ನನಗೆ ಆನಂದದಿಂದ ಕಣ್ಣೀರು ಬರುತ್ತಿದೆ. ಈ ಹೊಲಸು ಚಿತ್ರರಂಗ ಶುದ್ಧೀಕರಣವಾಗಬೇಕಾದರೆ ನಿಮ್ಮಂಥವರು ಚಿತ್ರರಂಗಕ್ಕೆ ಬರಬೇಕು" ಎಂದೆಲ್ಲಾ ತಮ್ಮ ಅಳಲು ತೋಡಿಕೊಂಡು ನಮ್ಮ ಚಿತ್ರದ ನಿರ್ದೇಶನಕ್ಕೆ ಪ್ರೀತಿಯಿಂದ ಒಪ್ಪಿಕೊಂಡರು. ನಮಗೆ ಹಿಡಿಸಲಾರದಷ್ಟು ಸಂತಸವಾಯಿತು.

ಆದರೆ ಆ ಆನಂದ ಹೆಚ್ಚು ಹೊತ್ತು ನಮ್ಮಲ್ಲಿ ಉಳಿಯಲಿಲ್ಲ. ಪುಟ್ಟಣ್ಣನವರು ತಾನು ನಿರ್ದೇಶನಕ್ಕೆ ಒಪ್ಪಿಕೊಂಡ ತಕ್ಷಣ ನಿರ್ದೇಶಕ ಹುದ್ದೆಯನ್ನು ವಹಿಸಿಕೊಂಡ–ವರಂತೆ ತಮ್ಮದೇ ಆದ ಅಧಿಕಾರವಾಣಿಯಿಂದ ಪ್ರಶ್ನೆಗಳ ಸರಿಮಾಲೆಯನ್ನೇ ಪ್ರಾರಂಭಿಸಿದರು.

ಅವರ ಮೊದಲ ಪ್ರಶ್ನೆ "ಇದುವರೆಗೆ ನೀವು ಏನೇನು ನಡೆಸಿದ್ದೀರಿ....?" ಎಂಬುದು. ನಾವು ನಟ ನಟಿಯರನ್ನು ಆಯ್ಕೆ ಮಾಡಿರುವುದನ್ನು ತಿಳಿಸಿದೆವು. ಅವರ ಹುಬ್ಬು ನಿಧಾನವಾಗಿ ಗಂಟಿಕ್ಕಿರುವುದನ್ನು ನಾನು ಗಮನಿಸಿದೆ. ಅಷ್ಟು ಹೊತ್ತಿಗಾಗಲೇ ಅವರ ಮುಖದ ಮೇಲಿನ ನಗೆ ಮೆಲ್ಲನೆ ಮಾಯವಾಗುತ್ತಿತ್ತು. ಅವರ ಎರಡನೇಯ ಪ್ರಶ್ನೆ "ಕಥೆ ಯಾವುದು?" ಎಂಬುದು, ಬಿರುಗಾಳಿಯಂತೆ ಬಂತು.. "ಕಥೆ....ಕಥೆ ಕಥೆಯನ್ನು ಇನ್ನೂ ಆಯ್ಕೆ ಮಾಡಿಲ್ಲ" ಎಂದೆ ಮೆಲ್ಲನೆ ನಾನು. ಅವರ ಮುಖ ತಕ್ಷಣ ಉಗ್ರವಾಯಿತು. "ಏನು ಕಥೆ ಗೊತ್ತಿಲ್ಲದೆ ನಟನಟಿಯರನ್ನು ಆಯ್ಕೆ ಮಾಡಿರುವಿರಾ?" ಗುಡುಗು, ಸಿಡಿಲು, ಮಿಂಚು ಒಂದೇ ಸಮನೆ ಅವರ ಬಾಯಿಂದ ಎಗರಿದವು. ನಮಗೆ ನಮ್ಮ ತಪ್ಪು ಎಲ್ಲಿದೆ ಎಂಬುದು ಗೊತ್ತಾಯಿತು. ಸುಮಾರು ಅರ್ಧ ಗಂಟೆ ನಾವು ಬಾಯಿ ಬಿಚ್ಚಲಿಲ್ಲ. ಅವರು ಜರ್‍ರೆಂದು ಸುರಿಯುವ ಮಲೆನಾಡಿನ ಮಳೆಯಂತೆ ವಟಗುಡುವುದನ್ನು ಬಿಡಲೇ ಇಲ್ಲ.

ಕಡೆಗೊಮ್ಮೆ ಬಿರುಗಾಳಿ, ಗುಡುಗು, ಸಿಡಿಲು ಮಿಂಚು, ಮಳೆ ಎಲ್ಲಾ ನಿಂತು ವಾತಾವರಣ ತಣ್ಣಗಾಯಿತು. ನಾನು ಅಂಜುತ್ತಾ " ಏನೋ ಗೊತ್ತಿಲ್ಲದೆ ತಪ್ಪು ಮಾಡಿದ್ದೇವೆ. ಅದನ್ನು ಕ್ಷಮಿಸಿಬಿಡಿ. ಮುಂದೆ ನಿಮ್ಮ ನಿರ್ದೇಶನದಂತೆಯೇ ಎಲ್ಲಾ ನಡೆಸುತ್ತೇವೆ" ಎಂದೆ. ಪುಟ್ಟಣ್ಣನವರು ಎಲ್ಲಾ ಹಲ್ಲುಗಳನ್ನು ತೋರುತ್ತಾ ಬಿದ್ದು ಬಿದ್ದು ನಕ್ಕರು. "ಗೌಡ್ರೇ ನೀವಿದ್ದೀರಲ್ಲಾ ಬಹಳ ಬುದ್ಧಿವಂತರು. ಎಷ್ಟಾದರೂ ವಕೀಲರಲ್ಲವೇ?" ಎಂದು ನನ್ನನ್ನು ಅಪ್ಪಿಕೊಂಡು ಅಲುಗಾಡಿಸಿದರು. ಮುಂದುವರಿದು "ನಿಮ್ಮಂಥವರೆಲ್ಲಾ ಚಿತ್ರರಂಗಕ್ಕೆ ಬಂದದ್ದು, ಅದರಲ್ಲೂ ನಿಮ್ಮಗಳ ಸಂಪರ್ಕ ನನ್ನ ಜೊತೆ ಬೆಳೆದದ್ದು, ನನ್ನ ಅದೃಷ್ಟ. ನಿಮ್ಮ ಸಂಸ್ಥೆಯ ಬಗ್ಗೆ ನಾನು ಅಪಾರ ಆಸೆ ತುಂಬಿಕೊಳ್ಳುತ್ತೇನೆ" ಎಂದರು. ನಮ್ಮ ಚಿತ್ರದ ಪ್ರಾರಂಭದ ಬಗ್ಗೆ ನಾವು ಬಹಳ ಕೂಲಂಕಷವಾಗಿ ಚರ್ಚಿಸಿದೆವು. ಅಂದು ಏಕೋ ಏನೋ ಹಿಂದಿನ ಜನ್ಮದಲ್ಲಿ ಕಳೆದು ಕೊಂಡಿದ್ದ ಒಬ್ಬ ಮಿತ್ರನನ್ನು ಮರಳಿ ಪಡೆದಂತೆ ಎನಿಸಿತು ನನಗೆ.

◆

# ಬಡತನದಲ್ಲಿ ಬೆಳ್ಳಿಮೋಡ

ಪುಟ್ಟಣ್ಣನವರಿಗೆ ಕನ್ನಡದ ಬಗ್ಗೆ ಇಷ್ಟೊಂದು ಕಾಳಜಿ ಇರಲು ಪ್ರಬಲವಾದ ಕಾರಣಗಳಿದ್ದವು. ಅವರಿಗಾಗಲೇ ಚಿತ್ರರಂಗದ ಸುಮಾರು ೧೫ ವರ್ಷಗಳ ಅನುಭವ ತುಂಬಿತ್ತು. ಅದು ಸಾಮಾನ್ಯ ಅನುಭವವಾಗಿರಲಿಲ್ಲ. ಅದುವರೆವಿಗೂ ಅವರು ನಡೆದು ಬಂದ ದಾರಿ ಅತ್ಯಂತ ಕಠಿಣವಾಗಿತ್ತು. ಬಡತನದ ಬೇಗೆ, ಬಡವರ ಬಗ್ಗೆ ಸಮಾಜದ ತಿರಸ್ಕಾರ, ವೃತ್ತಿರಂಗದ ಕರುಬುತನ, ಪ್ರಾಂತೀಯ ಮನೋಭಾವನೆ ಇವುಗಳಿಂದ ಅವರ ಮನಸ್ಸು ಕಲಕಿಹೋಗಿತ್ತು. ಈ ವೇಳೆಗಾಗಲೇ ಅವರು ಮಲೆಯಾಳಂ ಮತ್ತು ತೆಲುಗು ಭಾಷೆಗಳಲ್ಲಿ ಹಲವು ಚಿತ್ರಗಳನ್ನು ನಿರ್ದೇಶಿಸಿ ಯಶಸ್ವಿ ನಿರ್ದೇಶಕರೆನಿಸಿಕೊಂಡಿದ್ದರೂ, ಕನ್ನಡಕ್ಕಾಗಿ ಅವರ ಮನ ತುಡಿಯುತ್ತಿತ್ತು. ಕನ್ನಡ ಮಾತೃಭಾಷೆಯಲ್ಲಿ ಚಿತ್ರ ನಿರ್ದೇಶಿಸಲು ಅವರಿಗೆ ಅದಮ್ಯವಾದ ಆಸೆಯಿತ್ತು. ಆದರೆ ಯಾವ ಕನ್ನಡಿಗರೂ ಅವರತ್ತ ಕಣ್ಣು ಹಾಯಿಸಿರಲಿಲ್ಲ.

ಇಂತಹ ಡೋಲಾಯಮಾನ ಸ್ಥಿತಿಯಲ್ಲಿ ಅವರಿದ್ದಾಗ ತಮಿಳು ನಿರ್ಮಾಪಕರೊಬ್ಬರಿಂದ ಕನ್ನಡದ "ಬೆಳ್ಳಿಮೋಡ" ಚಿತ್ರವನ್ನು ನಿರ್ದೇಶಿಸುವ ಅವಕಾಶ ಒದಗಿ ಬಂತು. ಬಹಳ ಆಸೆಹೊತ್ತು ಕಷ್ಟಪಟ್ಟು ಆ ಚಿತ್ರ ಮುಗಿಸಿದ್ದರು. ಚಿತ್ರ ಅತ್ಯಂತ ಮನೋಜ್ಞವಾಗಿ ಮೂಡಿ ಬಂದಿದ್ದರೂ, ಕನ್ನಡದ ಸಿನಿಮಾ ತವರಾದ ಬೆಂಗಳೂರಿನ ಗಾಂಧಿನಗರದಲ್ಲಿ ಅದಕ್ಕೆ ಬೆಲೆ ಇರಲಿಲ್ಲ. ಕೇವಲ ಹಿಂದಿ, ತಮಿಳು, ತೆಲುಗು ಚಿತ್ರಗಳಿಗೆ ಮಾರುಹೋಗಿದ್ದ ಗಾಂಧಿನಗರದ ವಿತರಕರು "ಬೆಳ್ಳಿಮೋಡ" ಚಿತ್ರವನ್ನು ಬಿಡುಗಡೆ ಮಾಡಲು ತಿರಸ್ಕರಿಸಿದರು. "ಬೆಳ್ಳಿ ಮೋಡ" ಡಬ್ಬ ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ಓಡಿಯಾಡಿ ಗಾಂಧಿನಗರವನ್ನು ಸುತ್ತಿ ಸುಸ್ತಾಯಿತು. ಚಿತ್ರ ಚೆನ್ನಾಗಿಲ್ಲವೆಂದರು. ಇದಕ್ಕೆ ಹಾಕಿದ ಹಣ ವಾಪಸ್ ಬರುವುದಿಲ್ಲವೆಂದರು. ಕೊನೆಗೆ ಚಿತ್ರ ಹಾಗೂ ಹೀಗೂ ಬಿಡುಗಡೆಯಾಗಿ ಅತ್ಯಂತ ಜನಪ್ರಿಯವಾಯಿತು.

ವಿಚಿತ್ರವೆಂದರೆ ಈ ಚಿತ್ರದ ವಿಶೇಷ ಪ್ರದರ್ಶನದ ಸಂದರ್ಭದಲ್ಲಿ ನಡೆದ ಪ್ರಸಂಗವೊಂದು ಕರುಣಾಜನಕವಾದದ್ದು. ಆ ವಿಶೇಷ ಪ್ರದರ್ಶನವನ್ನು ಬೆಂಗಳೂರಿನ ಅಲಂಕಾರ್ ಚಿತ್ರಮಂದಿರದಲ್ಲಿ ಏರ್ಪಡಿಸಲಾಗಿತ್ತು. ಸಹಜವಾಗಿ ಪುಟ್ಟಣ್ಣನವರು ಈ ಪ್ರದರ್ಶನದಲ್ಲಿ ಹಾಜರಿರಬೇಕಾಗಿತ್ತು. ನಿರ್ಮಾಪಕರು, ಪುಟ್ಟಣ್ಣನವರಿಗೆ ಇದಕ್ಕಾಗಿ ಹಣ ಕೊಟ್ಟಿರಲಿಲ್ಲ. ಮದರಾಸಿನಿಂದ ಬೆಂಗಳೂರಿಗೆ ಹೋಗಿ ಪ್ರದರ್ಶನದಲ್ಲಿ ಭಾಗವಹಿಸಲು ಅವರ ಹತ್ತಿರ ಹಣವಿರಲಿಲ್ಲ. ಮೊದ ಮೊದಲು ಈ ಪರಿಸ್ಥಿತಿಯಲ್ಲಿ ಹೇಗೆ ಹೋಗುವುದು ಎಂಬ ಯೋಚನೆ ಬಂದು ಹೋಗುವುದನ್ನೇ ಕೈಬಿಟ್ಟರು. ಆದರೆ ಮನಸ್ಸು ತಡೆಯಲಿಲ್ಲ. ಬರಿಗೈಯಲ್ಲಿ ರೈಲು ಹತ್ತಿ, ಹಾಗೂ ಹೀಗೂ ಟಿಕೇಟ್ ಕಲೆಕ್ಟರ ಕಣ್ಣು ತಪ್ಪಿಸಿ ಬೆಂಗಳೂರು ಸೇರಿದರು.

ಇವರು ಚಿತ್ರಮಂದಿರದ ಹತ್ತಿರ ಹೋಗುವ ಹೊತ್ತಿಗಾಗಲೇ ಚಿತ್ರ ಪ್ರಾರಂಭವಾಗಿತ್ತು. ಇವರು ಚಿತ್ರ ಮಂದಿರದ ಬಾಗಿಲಿಗೆ ಬಂದಾಗ ಬಾಗಿಲು ಕಾಯುವವ ಇವರನ್ನು ಒಳಗೆ ಬಿಡಲಿಲ್ಲ, ತಾನೇ ಈ ಚಿತ್ರದ ನಿರ್ದೇಶಕನೆಂದು ಹೇಳಿದರೂ ಆತ ನಂಬಲಿಲ್ಲ. ಕೊನೆಗೆ ಇನ್ನೊಂದು ಬಾಗಿಲಿನ ಹತ್ತಿರ ಹೋಗಿ ತನ್ನನ್ನು ಜೆಮಿನಿ ಲ್ಯಾಬ್‌ನವರು ಪ್ರೊಜೆಕ್ಷನ್ ನೋಡಿಕೊಂಡು ಬರಲು ಕಳುಹಿಸಿದ್ದಾರೆಂದು ಸುಳ್ಳು ಹೇಳಿದ ಮೇಲೆ ಪ್ರೊಜೆಕ್ಷನ್ ಕೊಠಡಿಗೆ ಪ್ರವೇಶ ಸಿಕ್ಕಿತು. ಅಲ್ಲಿಂದಲೇ ಜನಗಳ ಪ್ರತಿಕ್ರಿಯೆಯನ್ನು ವೀಕ್ಷಿಸಿದ ಪುಟ್ಟಣ್ಣನವರು ಆನಂದ ಪುಳಕಿತರಾದರು.

ನಾವು ಪುಟ್ಟಣ್ಣನವರನ್ನು ಕಂಡದ್ದು, ಕನ್ನಡಕ್ಕೆ ನೆಲೆಯಾಗಿ ನಿಲ್ಲಬೇಕೆಂದು ಕರೆದದ್ದು, ಅವರು ಸೋತು ನಿಂತ ಈ ಸಂದರ್ಭದಲ್ಲಿ. "ಬೆಳ್ಳಿ ಮೋಡ"ದ ಬಿಡುಗಡೆಯ ಕಹಿ ಅನುಭವದಿಂದ ನಿರಾಶೆ ಹೊಂದಿ ಪುನಃ ಕನ್ನಡತಾಯಿಯ ಸಂಪರ್ಕವೆಲ್ಲಿ ತನಗೆ ತಪ್ಪಿಹೋಗುವುದೋ? ಎಂಬ ಭ್ರಂತುದ ವಾತಾವರಣದಲ್ಲಿದ್ದಾಗ, ನಮ್ಮ ಮೈತ್ರಿ ಸಂಸ್ಥೆಯಿಂದ ಪ್ರಭಾವಿತರಾದ ಪುಟ್ಟಣ್ಣನವರು ಕನ್ನಡ ಚಿತ್ರರಂಗದಲ್ಲಿ ಭದ್ರವಾಗಿ ನೆಲೆಯೂರಿ ಕ್ರಾಂತಿ ಮಾಡುವ ಕನಸು ಕಂಡರು. ಅನೇಕ ಸಂದರ್ಭಗಳಲ್ಲಿ ಬಿಚ್ಚು ಮನಸ್ಸಿನಿಂದ "ಸೋತು ನಿರಾಶರಾಗಿ ಮದರಾಸಿಗೆ ಹೋಗಿದ್ದ ನನ್ನನ್ನು ಕನ್ನಡಮ್ಮನ ಸೇವೆ ಸಲ್ಲಿಸಲು ಪುನಃ ಕರೆತಂದವರು ನೀವಲ್ಲವೆ? ನಿಮ್ಮನ್ನು ಹೇಗೆ ಮರೆಯಲಿ?" ಎಂದು ಕೃತಜ್ಞತಾ ಭಾವನೆಯಿಂದ ನುಡಿಯುತ್ತಿದ್ದರು.

ಚಿಕ್ಕಮಗಳೂರು ಭೇಟಿಯಾದ ಮೇಲೆ ಪುನಃ ನಾನು ಅವರೊಡನೆ ಒಂದೆರಡು ಸಲ ಮೈಸೂರಿನಲ್ಲಿ ನಮ್ಮ ಚೊಚ್ಚಲ ಚಿತ್ರ "ಸಾವಿರ ಮೆಟ್ಟಿಲು"ವಿನ ಚಿತ್ರಕಥೆ, ಸಂಭಾಷಣೆ ರಚನೆಯ ವೇಳೆಯಲ್ಲಿ ಕಳೆದೆ. ಹೇಗೋ ನಾವಿಬ್ಬರೂ ಒಬ್ಬರೊಡನೊಬ್ಬರು ಆಕರ್ಷಿಸುತ್ತಿದೆವು. ನಮ್ಮ ಸಂಸ್ಥೆಗೆ ಎಂ.ಸಿ. ಪುಟ್ಟಸ್ವಾಮಿಯವರು ನಿರ್ವಾಹಕ ನಿರ್ದೇಶಕರಾಗಿ ಎಲ್ಲಾ ಕೆಲಸವನ್ನೂ ನಿರ್ವಹಿಸುತ್ತಿದ್ದರು. ವಕೀಲಿ ಕೆಲಸದಲ್ಲಿ ನನಗೆ ಹೆಚ್ಚು ಬಿಡುವಿಲ್ಲದ್ದರಿಂದ ನಾನು ತಕ್ಷಣ ಹಾಸನಕ್ಕೆ ಹೊರಟು ಬಂದೆ.

◆



'ನಾ ಕಂಡ ಪುಟ್ಟಣ್ಣ ಕಣಗಾಲ್' ಪುಸ್ತಕದ ಪ್ರಥಮ ಮುದ್ರಣದ ಕೃತಿಯ ಬಿಡುಗಡೆ ಸಮಾರಂಭದಲ್ಲಿ ಲೇಖಕ ಡಾ॥ ಡಿ.ಬಿ. ಬಸವೇಗೌಡ, ಡಾ॥ ರಾಜ್‌ಕುಮಾರ್ ಮತ್ತು ಅಂದಿನ ಸಚಿವರು ಹಾಗೂ ಇಂದಿನ ಮಾಜಿ ಪ್ರಧಾನಿಗಳೂ ಆದ ಎಚ್.ಡಿ. ದೇವೇಗೌಡ.

# ಮದರಾಸಿನಲ್ಲಿ

ಪುಟ್ಟಣ್ಣನವರನ್ನು ನಾನು ಆಳವಾಗಿ ನೋಡುವಂತಹ ಸನ್ನಿವೇಶ ಒದಗಿ ಬಂದದ್ದು "ಸಾವಿರ ಮೆಟ್ಟಿಲು"ವಿನ ಹಾಡುಗಳನ್ನು ಧ್ವನಿಮುದ್ರಣ ಮಾಡುವ ಸಂದರ್ಭದಲ್ಲಿ. ನನ್ನ ಮತ್ತು ಪುಟ್ಟಣ್ಣನವರಲ್ಲಿ ಬೆಳೆಯುತ್ತಿದ್ದ ಸ್ನೇಹ ಮತ್ತು ಸಲಿಗೆಯನ್ನು ಗಮನಿಸಿದ ಪುಟ್ಟಸ್ವಾಮಿಯವರು ಆ ಸಲ ಹಾಡುಗಳ ಧ್ವನಿಮುದ್ರಣದ ಬಗ್ಗೆ ಪೂರ್ವಭಾವಿ ವ್ಯವಸ್ಥೆ ಮಾಡಲು ನನ್ನನ್ನು ಮದರಾಸಿಗೆ ಹೋಗಬೇಕೆಂದು ಕೇಳಿಕೊಂಡರು. ಪುಟ್ಟಣ್ಣನವರಿಗೆ ಪತ್ರ ಬರೆದು ನನ್ನ ಬರುವಿಕೆಯನ್ನು ತಿಳಿಸಿದೆ.

ನಾನು ಮದರಾಸು ರೈಲು ನಿಲ್ದಾಣದಲ್ಲಿ ಇಳಿದು ಪುಟ್ಟಣ್ಣನವರ ವಿಳಾಸದ ಚೀಟಿಗಾಗಿ ನನ್ನ ಜೇಬಿನಲ್ಲಿ ತಡಕಾಡುತ್ತಿದ್ದಾಗ "ಅದರ ಅವಶ್ಯಕತೆ ಇಲ್ಲ, ಬಿಡಿ ಗೌಡರೇ" ಎಂಬ ಆತ್ಮೀಯವಾದ ಪರಿಚಿತ ಕಂಠ ಕೇಳಿಸಿತು. ಆ ಕಡೆ ತಿರುಗಿ ನೋಡಿದಾಗ ಮುಗುಳು ನಗೆಯ ಪುಟ್ಟಣ್ಣ ನನ್ನನ್ನು ಆಲಂಗಿಸಿದರು. ರಿಕ್ಷಾ ಹಿಡಿದು ಅವರ ಸಿಐಟಿ ಕಾಲೋನಿಯ ನಿವಾಸದ ಕಡೆ ಹೊರಟೆವು. ಚಲನಚಿತ್ರರಂಗದ ಬಗ್ಗೆ ಏನೇನೋ ಕಲ್ಪನೆಯಿದ್ದ ನಾನು ಅವರು ವಾಸಿಸುತ್ತಿರುವ ಭವ್ಯ ಬಂಗಲೆ, ಮನೆಯ ಅಲಂಕಾರ ಇವುಗಳ ಬಗ್ಗೆ ಕಲ್ಪಿಸಿಕೊಳ್ಳುತ್ತಿದ್ದೆ.

ಕಡೆಗೊಮ್ಮೆ ಒಂದು ಭವ್ಯ ಬಂಗಲೆಯ ಮುಂದೆ ರಿಕ್ಷಾ ನಿಂತಿತು, ಆ ಬಂಗಲೆಯ ಮುಖ್ಯ ಗೇಟ್ ತೆರೆಯಲು ನಾನು ಕೈಹಾಕಿದೆ. ಅದನ್ನು ಕಂಡ ಪುಟ್ಟಣ್ಣ ನಸುನಗೆ ಸೂಸುತ್ತಾ "ಹೀಗೆ ಬನ್ನಿ" ಎಂದು ಆ ಬಂಗಲೆಯ ವಿಕೆಟ್ ಗೇಟಿನ ಕಡೆ ಹೊರಟರು. ಅದು ಬಂಗಲೆಯ ಹಿಂಭಾಗದಲ್ಲಿರುವ ಗ್ಯಾರೇಜಿಗೆ ಹೋಗುವ ದಾರಿಯಾಗಿತ್ತು. ಗ್ಯಾರೇಜನ್ನು ಪ್ರವೇಶಿಸಿ ಸೂಕ್ಷ್ಮವಾಗಿ ಅವಲೋಕಿಸಿದ ಮೇಲೆ ನನಗೆ ಗೊತ್ತಾಯಿತು. ಅದೇ ಪುಟ್ಟಣ್ಣನವರ ವಾಸದ ಮನೆ ಎಂದು! ಮನೆ ಚಿಕ್ಕದಾದರೇನು? ಅದು ಗ್ಯಾರೇಜ್ ಆದರೇನು? ಮನೆಯಲ್ಲಿ ಸಂತೋಷ ತುಂಬಿತುಳುಕಾಡುತ್ತಿತ್ತು. ಪುಟ್ಟಣ್ಣನವರ ನೆಚ್ಚಿನ ಸೇವಕ, ಅಡಿಗೆಯವ ಅಂಗರಕ್ಷಕ

ಮತ್ತು ಸುಖದುಃಖ ಪಾಲುದಾರರಾಗಿ, ಆಮೇಲೆ ಪುಟ್ಟಣ್ಣನವರ ಕಾಳಜಿ ಮತ್ತು ಆಶೀರ್ವಾದದಿಂದ "ಶರಪಂಜರ" ಮತ್ತು "ಕಥಾಸಂಗಮ"ದ ನಿರ್ಮಾಪಕರಾದ ಸಿ.ಎಸ್. ರಾಜ ಎಲ್ಲರು ಆ ಗ್ಯಾರೇಜಿನಲ್ಲಿಯೇ ಸುಖ ಕಾಣುತ್ತಿದ್ದರು. ಇವೆಲ್ಲರ ಜೊತೆಯಲ್ಲಿ ಕೇವಲ ಒಂದು ಗಂಟೆ ಕಳೆಯುವಲ್ಲಿ ನಾನೂ ಸಹ ಅವರ ಮನೆಯವನೇ ಆಗಿ, ಶ್ರೀಮತಿ ನಾಗಲಕ್ಷ್ಮೀ ಪುಟ್ಟಣ್ಣನವರು ತಯಾರಿಸಿದ ಬಿಸಿ ಬಿಸಿ ಊಟವನ್ನು ಎಲ್ಲರೂ ಒಂದೇ ಪಂಕ್ತಿಯಲ್ಲಿ ಕುಳಿತು ಮುಗಿಸಿದೆವು.

ಪುಟ್ಟಣ್ಣನವರು ಅವರ ಮನೆಯ ಹತ್ತಿರವೇ ಇದ್ದ "ಉಡ್ ಲ್ಯಾಂಡ್ಸ್" ವಸತಿ ಗೃಹದಲ್ಲಿ ನನಗೆ ಒಂದು ಕೊಠಡಿ ಕಾಯ್ದಿರಿಸಿದ್ದರು. ನನ್ನನ್ನು ನನ್ನ ಕೊಠಡಿಗೆ ತಲುಪಿಸಿದಾಗ "ನೀವು ನನಗೆ ತುಂಬಾ ಹಿಡಿಸಿದಿರಿ. ನಿಮ್ಮೊಡನೆ ನಾನು ತುಂಬಾ ಮಾತನಾಡಬೇಕೆನಿಸಿದೆ. ನನ್ನ ಕಷ್ಟಗಳನ್ನೆಲ್ಲಾ ನಿಮ್ಮಲ್ಲಿ ಹೇಳಿಕೊಳ್ಳಬೇಕೆನಿಸಿದೆ. ಈಗ ಮಲಗಿ, ನಾಳೆ ಬೆಳಗಿನ ಜಾವ ೪.೦೦ ಗಂಟೆಗೆ ಬಂದು ಎಬ್ಬಿಸುತ್ತೇನೆ. ಸಮುದ್ರ ತೀರದ ಕಡೆ ಹೋಗೋಣ" ಎಂದು ಸುಖರಾತ್ರಿ ಹೇಳುತ್ತಾ ಹೊರಟರು.




"ಪುಟ್ಟಣ್ಣನವರೊಬ್ಬ ಮಹಾನ್ ಕಲಾವಿದ ಹಾಗೂ ಅತಿ ಶ್ರೇಷ್ಠ ಸೃಜನಾತ್ಮಕ ನಿರ್ದೇಶಕ. ಅಸಂಖ್ಯ ಕಲಾವಿದರನ್ನು ರೂಪಿಸಿದ ರೂವಾರಿ. ಅನರ್ಘ್ಯ ಚಲನಚಿತ್ರ ರತ್ನಗಳನ್ನೇ ನೀಡಿ ಕನ್ನಡ ಚಿತ್ರರಂಗವನ್ನು ವಿಶ್ವದರ್ಜೆಗೇರಿಸಿದವರು. ಅವರು ದೈಹಿಕವಾಗಿ ಇಂದು ಇಲ್ಲದಿರಬಹುದು ಆದರೆ ಅವರ ಸ್ಫೂರ್ತಿ ಜೀವಂತ."

– ಡಾ॥ ರಾಜ್‌ಕುಮಾರ್

# ಕಡಲ ತೀರದಲ್ಲಿ

ಬೆಳಗಿನ ಜಾವ ೪.೦೦ ಘಂಟೆಗೆ ಬಂದು ಅವರು ಕೊಠಡಿಯ ಬಾಗಿಲು ಬಡಿಯುವ ವೇಳೆಗಾಗಲೇ ನಾನು ಸಿದ್ಧನಾಗಿದ್ದೆ, ಕಾರಣ, ಪುಟ್ಟಣ್ಣನವರ ಬಗ್ಗೆ ಏಕೋ ನನಗೆ ಸಂಕಟವೆನಿಸಿ ರಾತ್ರಿಯೆಲ್ಲಾ ಸರಿಯಾಗಿ ನಿದ್ರೆಯೇ ಬಂದಿರಲಿಲ್ಲ. ಸಮುದ್ರ ತೀರದವರೆಗೆ ನಡೆಯುತ್ತಾ ಹೊರಟೆವು. ಪುಟ್ಟಣ್ಣನವರು ಒಂದು ಅರ್ಧ ತೋಳಿನ ಶರಟು ಮತ್ತು ಬಿಳಿಯ ಚಡ್ಡಿ ತೊಟ್ಟು, ಬಿಳಿಯ ಆಟದ ಬೂಟು ಹಾಕಿ ಟೆನಿಸ್ ಆಡಲು ಬಂದ ಯುವಕರಂತೆ ಕಾಣಿಸುತ್ತಿದ್ದರು. ಸಮುದ್ರ ತೀರ ಸಮೀಪಿಸುತ್ತಿದ್ದಂತೆ ವಿಶಾಲವಾದ ಸಮುದ್ರದ ನೀರಿನ ಕಡೆ ತಮ್ಮ ದೂರದ ನೋಟ ನೆಟ್ಟು "ಗೌಡರೇ ಇಂದು ನನ್ನ ದುಃಖವನ್ನೆಲ್ಲಾ ನಿಮ್ಮಲ್ಲಿ ತೋಡಿಕೊಳ್ಳ-ಬೇಕೆನಿಸಿದೆ." ಎಂದು ಪ್ರಾರಂಭಿಸಿದರು. ತಾವು ಚಿಕ್ಕದಿಂದನಿಂದ ಅನುಭವಿಸಿದ ಬಡತನದ ಬೇಗೆ, ಆ ಬೇಗೆಯ ಬೆಂಕಿಯಲ್ಲಿ ಅರಳುವ ಹೂವಿನಂತೆ ತಾನೊಬ್ಬ ದೊಡ್ಡ ಕನ್ನಡದ ನಿರ್ದೇಶಕನಾಗಬೇಕೆಂದು ಹೊತ್ತಿರುವ ಹೆಬ್ಬಯಕೆ ಇದನ್ನೆಲ್ಲಾ ತೋಡಿಕೊಂಡು –"ನಿಮ್ಮಲ್ಲಿ ಮುಚ್ಚಿಡುವಂತಹುದು ಏನೂ ಇಲ್ಲವೆಂದು ಭಾವಿಸುತ್ತೇನೆ. ನಾವು ಒಂದು ಹೊತ್ತು ತೃಪ್ತಿಯಿಂದ ಉಣ್ಣಲೂ ಅಸಮರ್ಥರಾಗಿದ್ದೇವೆ. ಉಡುವ ಬಟ್ಟೆಗೂ ಕ್ಷಾಮ" ಎಂದು ಮಾತು ಮುಗಿಸಿದರು. ಆಗ ವೇಳೆ ಸೂರ್ಯ ಹುಟ್ಟುವ ಸಮಯ.

ಅವರ ಪರಿಸ್ಥಿತಿಯನ್ನು ಅರಿತು ನಾನು ನಡುಗಿ ಹೋದೆ. ಮದರಾಸಿನಿಂದ ಬಹು ದೂರ ಇರುವ ಕರ್ನಾಟಕದ ಒಂದು ಮೂಲೆಯ ಹಳ್ಳಿಗನಿಗೂ ಅಸಮಾನ್ಯವಾಗಿ ಕಾಣುವ ಪುಟ್ಟಣ್ಣ, ತನ್ನ ವೈಯಕ್ತಿಕ ಜೀವನದಲ್ಲಿ ಎಷ್ಟೊಂದು ಕುಗ್ಗಿ ಹೋಗಿದ್ದಾರೆಂದು ಒದ್ದಾಡಿದೆ. ಆದರೆ ಅದಕ್ಕಾಗಿ ಧೃತಿಗೆಡಲಿಲ್ಲ. ಅವರಿಗೆ ಧೈರ್ಯ ಹೇಳಿದೆ. "ಪುಟ್ಟಣ್ಣ ನೀವು ನಿಮ್ಮನ್ನೇ ಅರ್ಥಮಾಡಿಕೊಂಡಿಲ್ಲ. ನೀವು ಒಂದು ಶಕ್ತಿ, ನಿಮ್ಮ ಹಿಂದೆ ಲಕ್ಷಾಂತರ ಜನರಿದ್ದಾರೆ. ನಾವೆಲ್ಲ ಇಲ್ಲವೇನು? ಕಾಲವು ಹೀಗೆಯೇ ಇರುವುದಿಲ್ಲ." ಎಂದು ಧೈರ್ಯ ತುಂಬಿದೆ. ಅಂದೇ ಸಂಜೆ ನಾವಿಬ್ಬರೂ ಮೌಂಟ್ ರಸ್ತೆಗೆ ಹೋಗಿ ಅವರಿಗೆ ಇಚ್ಛೆಯಾದ ಬಟ್ಟೆಗಳನ್ನು ಕೊಂಡೆವು.

◆

# ಮೈಸೂರಿನಲ್ಲಿ

೨೫.೨.೧೯೬೭ರ ರಂದು ಪ್ರೀಮಿಯರ್ ಸ್ಟುಡಿಯೋವಿನಲ್ಲಿ ನಮ್ಮ ಸಂಸ್ಥೆಯ ಚೊಚ್ಚಲು ಚಿತ್ರ "ಸಾವಿರ ಮೆಟ್ಟಿಲು" ವಿನ ಪ್ರಥಮ ಹಂತದ ಚಿತ್ರೀಕರಣ ಆರಂಭ. ಚಿತ್ರ ತಂಡದವರಿಗೆ ದಾಸ್ ಪ್ರಕಾಶ್ ವಸತಿ ಗೃಹದಲ್ಲಿ ಇಳಿದುಕೊಳ್ಳಲು ಏರ್ಪಾಟಾಗಿತ್ತು. ಚಿತ್ರೀಕರಣ ಮುಗಿಯುವವರೆಗೂ ನಾನೂ ಅವರ ಕೊಠಡಿಯಲ್ಲೇ ಇರಬೇಕೆಂದು ಪುಟ್ಟಣ್ಣ ಒತ್ತಾಯಿಸಿದರು. ಆತ್ಮೀಯತೆಗೆ ಮಾರುಹೋಗಿ ಒಪ್ಪಿದೆ. ನಮ್ಮಿಬ್ಬರಿಗೆ ಎರಡು ಕಾಟಿನ ಕೊಠಡಿಯೊಂದರ ವ್ಯವಸ್ಥೆಯಾಯಿತು.

ಇಲ್ಲಿಂದ ಪುಟ್ಟಣ್ಣನವರ ಕಲಾ ಪ್ರತಿಭೆಯ ಒಂದು ಮುಖ ಮತ್ತು ಅವರಿಗಿದ್ದ ದೌರ್ಬಲ್ಯದ ಮತ್ತೊಂದು ಮುಖ ನನಗೆ ಪರಿಚಯವಾಗತೊಡಗಿತು. ಅವರು ಚಿತ್ರೀಕರಣಕ್ಕೆ ಮುನ್ನ ಪ್ರತಿಯೊಂದೂ ಹಾಗೆಯೇ ಇರಬೇಕು, ಆಗಬೇಕು ಎಂಬುದಾಗಿ ಸ್ಪಷ್ಟವಾದ ನಿರ್ದೇಶನವೀಯುತ್ತಿದ್ದರು. ಅದರಲ್ಲಿ ಕಿಂಚಿತ್ತು ವ್ಯತ್ಯಾಸವಾದರೂ ಎಗರಿ ಬೀಳುತ್ತಿದ್ದರು. ಸೆಟ್‌ನಲ್ಲಿ ಅವರು ಬೇರೆಯೇ ಪುಟ್ಟಣ್ಣನಾಗಿ ತಮ್ಮನ್ನು ತಾವೇ ಮರೆಯುತ್ತಿದ್ದರು. ಅವರೊಡನೆ ಅತ್ಯಂತ ಸದರದಿಂದಿರುತ್ತಿದ್ದ ನಾನೂ ಸಹ ಅವರನ್ನು ಮಾತನಾಡಿಸಲು ಹೆದರುತ್ತಿದ್ದೆ. ಎರಡು–ಮೂರು ಸಲ ಕಲಾವಿದರಿಗೆ ಮಗುವಿಗೆ ತಿಳಿಸುವಂತೆ ಹೇಳಿಕೊಡುತ್ತಿದ್ದರು. ಆಮೇಲೆ ವ್ಯಾಘ್ರರೂಪ ತಾಳುತ್ತಿದ್ದರು. ಕೊನೆಗೆ ತಾವೇ ಪಾತ್ರಧಾರಿಯಾಗುತ್ತಿದ್ದರು. ಆಗ ಅವರನ್ನು ನೋಡಿ ಕೇವಲ ಅನುಕರಣೆ ಮಾಡಿದರೆ ಸಾಕಾಗಿತ್ತು, ನಿಜವಾದ ಅವರ ಕಲ್ಪನೆಯ ಚಿತ್ರ ಒಡಮೂಡುತ್ತಿತ್ತು. ನಮ್ಮ "ಸಾವಿರ ಮೆಟ್ಟಿಲು" ಕಲಾವಿದರಲ್ಲಿ ಆ ಗುಟ್ಟು ಗೊತ್ತಿದ್ದುದು ಕೇವಲ ಜಯಂತಿಯವರಿಗೆ ಮಾತ್ರ, ಅವರು ನಗುನಗುತ್ತಲೇ ಪುಟ್ಟಣ್ಣನವರು ರೇಗುವಂತೆ ಮಾಡುತ್ತಿದ್ದರು. ಪುಟ್ಟಣ್ಣನವರು ಕೋಪದಿಂದ ನಟರಾಗಿ ಅಭಿನಯಿಸಿ ತೋರಿಸಿದ ಕ್ಷಣದಲ್ಲೇ ಅನುಕರಣೆ ಮಾಡಿ, ಅವರಿಂದ 'ಭೇಷ್' ಎನಿಸಿಕೊಂಡು, "ನೀನೊಬ್ಬಳೇ ಮಹಾನ್ ಕಲಾವಿದೆ" ಎನಿಸಿಕೊಳ್ಳುತ್ತಿದ್ದರು. ಷೂಟಿಂಗ್ ಮುಗಿದು ಕೊಠಡಿಗೆ ಬಂದಮೇಲೆ ಪುಟ್ಟಣ್ಣನವರು ನಿಜಸ್ಥಿತಿಗೆ ಬರುತ್ತಿದ್ದರು. ಇದು ಅವರ ಸಾಮರ್ಥ್ಯದ ಒಂದು ಮುಖವಾಗಿತ್ತು.

◆

# ಕಾಲಿಟ್ಟ ಕಲ್ಪನ

ಅವರ ದೌರ್ಬಲ್ಯದ ಮತ್ತೊಂದು ಮುಖವೂ ಇತ್ತು. "ಸಾವಿರ ಮೆಟ್ಟಿಲು" ಚಿತ್ರೀಕರಣ ಕಾಲದಲ್ಲಿ ನಟಿ ಕಲ್ಪನ ಅವರು ಬೇರೊಂದು ಚಿತ್ರದ ಚಿತ್ರೀಕರಣಕ್ಕಾಗಿ ಆಗ ಮೈಸೂರಿಗೆ ಬಂದು ಸುಜಾತ ವಸತಿ ಗೃಹದಲ್ಲಿ ಇಳಿದಿದ್ದರು. ಕಲ್ಪನ ಅವರಿಗೂ, ಪುಟ್ಟಣ್ಣನವರಿಗೂ ತುಂಬಾ ಗೆಳೆತನವಿದೆ ಎಂದು ಆ ವೇಳೆಗಾಗಲೇ ನಾನು ಕೇಳಿದ್ದೆ. ಆದರೆ ಈ ಬಗ್ಗೆ ಪುಟ್ಟಣ್ಣನವರನ್ನು ಕೇಳುವ ಧೈರ್ಯ ನನಗಿನ್ನೂ ಬಂದಿರಲಿಲ್ಲ. ಆದರೆ ತಾನಾಗಿಯೇ ತಿಳಿಯುವ ಆ ಸಂದರ್ಭವೂ ಒದಗಿ ಬಂತು

ಪ್ರತಿದಿನ ಚಿತ್ರೀಕರಣ ಮುಗಿದ ಮೇಲೆ ಕೊಠಡಿಗೆ ಬಂದ ತಕ್ಷಣ ಮುಖವನ್ನೂ ತೊಳೆಯದೆ, ಬಟ್ಟೆಯನ್ನೂ ಬದಲಿಸದೆ, ಕಾಫಿಯನ್ನೂ ಕುಡಿಯದೆ ಪುಟ್ಟಣ್ಣನವರು ಮಾಡುತ್ತಿದ್ದ ಕೆಲಸವೆಂದರೆ ಕಲ್ಪನ ಅವರನ್ನು ದೂರವಾಣಿಯಲ್ಲಿ ಸಂಪರ್ಕಿಸುವುದು. ಅವರು ಪ್ರತಿ ದಿನ ಮಾತಾಡುತ್ತಿದ್ದುದು ಒಂದೇ ವಿಷಯ. ಒಂದೇ ತರಹದ ಸಂಭಾಷಣೆ. ಅವರು ಈ ಕಡೆಯಿಂದ "ಮರಿ ಹೇಗಿದ್ದೀಯಾ? ನೋಡು ನಾನಿಲ್ಲಿ ಎಷ್ಟು ಕಷ್ಟ ಪಡುತ್ತಿದ್ದೇನೆ. ನನ್ನನ್ನು ಯಾರೂ ಕೇಳುವವರಿಲ್ಲ" ಎಂದು ಹಲುಬುತ್ತಿದ್ದರೆ, ಆ ಕಡೆಯಿಂದ ಕಲ್ಪನ ಅವರು "ಅಯ್ಯೋ ಪಾಪ! ನನಗೆ ನಿಮ್ಮ ಕಷ್ಟವೆಲ್ಲಾ ಅರ್ಥವಾಗುತ್ತೆ. ಯಾವುದನ್ನೂ ತಲೆಗೆ ಹಚ್ಚಿಕೊಳ್ಳದೆ ಚೆನ್ನಾಗಿ ನಿದ್ರೆ ಮಾಡಿ" ಎನ್ನುವ ಅನುಕಂಪದ ಮಾತು, ಅವರ ಈ ವರ್ತನೆಯ ಬಗ್ಗೆ ಮೊದ ಮೊದಲು ಏನೂ ಅರ್ಥವಾಗುತ್ತಿರಲಿಲ್ಲ. ಕಾಲ ಕಳೆದಂತೆ ಈ ಬಗ್ಗೆ ಅವರನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದೆ.

ಈ ವೇಳೆಗಾಗಲೇ ಚಿತ್ರರಂಗ ಪುಟ್ಟಣ್ಣನವರನ್ನು ಘಾಸಿಮಾಡಿತ್ತು. ನೆಲೆ ತಪ್ಪುತ್ತಿರುವಂತೆ ಅವರಿಗೆ ಭಾಸವಾಗುತ್ತಿತ್ತು. ಚಿತ್ರರಂಗದಲ್ಲಿ ಅವರಿಗೆ ಆಗದವರು ಆಗಲೇ ಬಹಳ ಜನರಿದ್ದರು. ಇಂತಹ ವೇಳೆಯಲ್ಲೀ ತನ್ನವರು ತನ್ನ ಬಗ್ಗೆ ಕೃತಜ್ಞತೆ ಇಟ್ಟಿರುವವರು, ತನ್ನನ್ನು ಪೂರ್ತಿ ಅರ್ಥಮಾಡಿಕೊಂಡು ಸಾಂತ್ವನಗೊಳಿಸುವವರು ಇದ್ದಾರೆ ಎಂಬುದನ್ನು ತಮ್ಮ ಮನಸ್ಸಿಗೆ ತಾವೇ ಮನನ ಮಾಡಿಕೊಳ್ಳಲು, ಅವರು ಹೀಗೆ ಮಾಡುವರೆಂದು ನಾನು ಅರ್ಥ ಮಾಡಿಕೊಂಡೆ.

ಪ್ರತಿದಿನ ಸಾಮಾನ್ಯವಾಗಿ ಪುಟ್ಟಣ್ಣನವರು ಸಹಾಯಕ ನಿರ್ದೇಶಕ, ಈಗಿನ ಚಿತ್ರನಟ ಸುಂದರಕೃಷ್ಣ ಅರಸ್ ಅವರಿಗೆ ಕೆಲವು ಸೂಚನೆ ನೀಡಿ, ಸಿದ್ಧವಾಗುವವರೆಗೆ ಸ್ಟುಡಿಯೋ ಫ್ಲೋರ್ ಮುಂಭಾಗದಲ್ಲಿ ನಾನು, ಪುಟ್ಟಣ್ಣ ಮತ್ತಾರಾದರೂ ಇದ್ದರೆ ಅವರೂ ಸೇರಿ ಕುಳಿತು ಹರಟೆ ಹೊಡೆಯುತ್ತಿದ್ದೆವು. ಅಲ್ಲಿ ಕೇವಲ ಹರಟೆಗಾಗಿ ಇದ್ದದ್ದು ಮೂರು ಕುರ್ಚಿಗಳು ಮಾತ್ರ.

ಅದೊಂದು ದಿನ ಪುಟ್ಟಣ್ಣ ಮತ್ತು ನಾನು ಹರಟೆ ಹೊಡೆಯುತ್ತಾ ಕುಳಿತಿದ್ದಾಗ ನಮ್ಮ ಕಾರ್ಯನಿರ್ವಾಹಕ ನಿರ್ದೇಶಕರು ಸೆಟ್‌ನೊಳಗೆ ಬರುವಂತೆ ನನ್ನನ್ನು ಕರೆದರು. ಅಲ್ಲಿ ಹೋದ ನಾನು ಅರ್ಧ ಗಂಟೆಯಾದ ಮೇಲೆ ವಾಪಸು ಬಂದಾಗ ಪುಟ್ಟಣ್ಣನವರು ಒಂದು ಕುರ್ಚಿಯಲ್ಲಿ ಕುಳಿತು ಇನ್ನೊಂದು ಕುರ್ಚಿ ಮೇಲೆ ತಮ್ಮ ಕಾಲನ್ನು ಚಾಚಿದ್ದರು. ಮಗದೊಂದು ಕುರ್ಚಿಯಲ್ಲಿ ಕಲ್ಪನ ಕುಳಿತಿದ್ದರು. ನನಗೆ ಕುರ್ಚಿ ಖಾಲಿ ಇರಲಿಲ್ಲ. ನಾನು ಅಲ್ಲಿಗೆ ಬಂದರೂ ಅವರು ತಮ್ಮ ಕಾಲನ್ನು ತೆಗೆಯಲಿಲ್ಲ. ನನ್ನನ್ನು ಕುಳಿತುಕೊಳ್ಳಿ ಎನ್ನಲಿಲ್ಲ. ಕಂಡೂ ಕಾಣದಂತೆ ನಡೆದುಕೊಂಡರು. ಅವರ ಈ ತರಹದ ವರ್ತನೆ ಬಹಳ ಅನಿರೀಕ್ಷಿತವಾಗಿತ್ತು. ನನಗೆ ಬಹಳ ಕೋಪ ಬಂತು. ಸ್ವಾಭಿಮಾನ ಉಕ್ಕಿ ಬಂತು. ಸರ್ರೆಂದು ಅಲ್ಲಿಂದ ಪುನಃ ಸೆಟ್‌ನೊಳಗೆ ಹೊರಟುಹೋದೆ. ಶಾಟ್‌ರೆಡಿಯಾದ ಮೇಲೆ ಪುಟ್ಟಣ್ಣನವರು ಫ್ಲೋರ್‌ಗೆ ಬಂದರು. ನಾನು ಮುಖ ಗಂಟುಹಾಕಿಕೊಂಡಿದ್ದೆ. ನನ್ನನ್ನು ಮಾತನಾಡಿಸಲು ಪ್ರಯತ್ನಿಸಿದರು. ನಾನು ಮಾತನಾಡಲಿಲ್ಲ. ಅಂದು ಚಿತ್ರೀಕರಣ ಮುಗಿಯಲು ರಾತ್ರಿ ಹತ್ತು ಗಂಟೆಯಾಯಿತು.

ನಾವಿಬ್ಬರೂ ನಮ್ಮ ಕೊಠಡಿಗೆ ಬಂದೆವು. ಆಗ ನನ್ನನ್ನು ಒಲಿಸಲು ಪುಟ್ಟಣ್ಣ ಒಂದು ನಾಟಕವನ್ನೇ ಆಡಿದರು. ನಾನು ಪುಟ್ಟಣ್ಣನವರಿಗೆ "ನೀವು ದೊಡ್ಡ ನಿರ್ದೇಶಕರಿರಬಹುದು. ನಾನು ಒಬ್ಬ ನಿರ್ಮಾಪಕ ಎನ್ನುವುದನ್ನು ಮರೆಯಬೇಡಿ. ಕಲ್ಪನ ಮುಂದೆ ನನಗೆ ಅಪಮಾನ ಮಾಡಿದಿರಿ" ಎಂದು ಕೂಗಾಡಿದೆ. ಅವರು ನಗುತ್ತಾ ಬಂದು ಅಪ್ಪಿಕೊಂಡು "ಗೌಡರೇ, ನನ್ನನ್ನು ನೀವಲ್ಲದೆ ಮತ್ತಾರು ಅರ್ಥ ಮಾಡಿಕೊಳ್ಳಬೇಕು" ಎಂಬುದಾಗಿ ಹಲುಬಿದರು. "ನಾನೊಬ್ಬನೇ ಇದ್ದಾಗ ನಾನು ನಿಮಗೆ ಪರಮ ಮಿತ್ರ, ಆದರೆ ಸುಂದರ ಹೆಣ್ಣು ನಿಮ್ಮೆದುರಿಗಿದ್ದಾಗ?" ಎಂದೆಲ್ಲ ಛೇಡಿಸಿದ ಮೇಲೆ ನಗುತ್ತಾ ಒಂದಾದೆವು.

ಅಂದು ರಾತ್ರಿ ಪುಟ್ಟಣ್ಣ ಮತ್ತು ಕಲ್ಪನಾರವರ ವೈಯಕ್ತಿಕ ಸಂಬಂಧದ ಬಗ್ಗೆ ಕೇಳಬೇಕೆನಿಸಿತು. ಅಂಜುತ್ತಾ ವಿಷಯವನ್ನು ಪ್ರಸ್ತಾಪಿಸಿದೆ. "ನಾನೇ ನಿಮಗೆ ಹೇಳಬೇಕೆಂದಿದ್ದೆ. ನನ್ನ ಇದುವರೆಗಿನ ಚಿತ್ರರಂಗದ ಅನುಭವವನ್ನು

ಯಾವುದಾದರೊಂದು ಶಿಲ್ಪದಲ್ಲಿ ಕಡೆಯಬೇಕೆಂಬ ಮಹದಾಸೆಯಿತ್ತು. ಆ ಯೋಗ್ಯತೆಯನ್ನು ಕಲ್ಪನಾಳಲ್ಲಿ ಗುರುತಿಸಿದೆ. ಆಕೆಗೆ ನನ್ನ ಶಕ್ತಿಯನ್ನು ಧಾರೆಯೆರೆದೆ. ಅವಳು ಅದನ್ನು ಪ್ರೀತಿಯಿಂದ ಸ್ವೀಕರಿಸಿ ನನ್ನ ಕಲ್ಪನೆಯ ಶಿಲ್ಪವಾಗಿದ್ದಾಳೆ. ಅಲ್ಲದೆ ನನ್ನ ಬಗ್ಗೆ ಅತ್ಯಂತ ಕೃತಜ್ಞತಾ ಭಾವ ಇರಿಸಿದ್ದಾಳೆ" ಎಂದರು. ನಾನು "ಅದು ಕಲೆಗೆ ಸಂಬಂಧಿಸಿದ ಮಾತಾಯಿತು. ಆದರೆ ಇದಕ್ಕೂ ಮೀರಿದ ಸಂಬಂಧವೇನಾದರೂ.... ನಾನೇ ಎಲ್ಲವನ್ನೂ ಬಾಯಿಬಿಟ್ಟು ಕೇಳಬೇಕೇ?" ಎಂದೆ. "ಅದರಲ್ಲಿ ಗುಟ್ಟೇನಿಲ್ಲ" ನಾನು ಅವಳನ್ನು ಪ್ರೀತಿಸುತ್ತೇನೆ. ಅವಳು ನನ್ನನ್ನು ಪ್ರೀತಿಸುತ್ತಾಳೆ, ಇದಕ್ಕಿಂತ ಹೆಚ್ಚಿನ ಯಾವ ಸಂಬಂಧವೂ ಇಲ್ಲ" ಎಂದು ಸಹಜವಾಗಿ ಹೇಳಿ, ತಕ್ಷಣವೇ ಕಠಿಣರಾದರು.

ಎತ್ತರದ ಧ್ವನಿಯಲ್ಲಿ "ನೋಡಿ ನಾನು ಅವಳನ್ನು ಮೆಚ್ಚುತ್ತೇನೆ. ಆದರೆ ಅವರ ಸಂಬಂಧಿಕರೊಬ್ಬರು ನಾನು ಆಕೆಯನ್ನು ಮದುವೆಯಾಗುತ್ತೇನೆಂದು ಭಾವಿಸಿ ಕಲ್ಪನಾಳಿಗೆ "ನೀನು ಚಿತ್ರರಂಗದಲ್ಲಿರುವವರನ್ನು ಮದುವೆಯಾಗುವುದಾದರೆ ನಾಯಕ ನಟನನ್ನು ಮದುವೆಯಾಗು, ಯಾವ ಕಾರಣಕ್ಕೂ ನಿರ್ದೇಶಕನನ್ನು ಮಾತ್ರ ಆಗಬೇಡ, ಅವನು ನಿರ್ದೇಶಿಸಿದ ಒಂದು ಚಿತ್ರ ಸೋತರೆ ಅವನನ್ನು ಯಾರೂ ಮೂಸುವುದಿಲ್ಲ" ಎಂದರಂತೆ, ನೋಡಿದಿರಾ ಅವರ ಧಿಮಾಕನ್ನು? ನಿರ್ದೇಶಕ ಎಂದರೆ ಇವರೆಲ್ಲ ಏನು ತಿಳಿದಿದ್ದಾರೆ" ಹಾಗೆ ಹೀಗೆ ಎಂದು ಜೋರಾಗಿ ಕೂಗಾಡಿದರು. "ಹೋಗಲಿ ಬಿಡಿ, ಕಲ್ಪನಾ ಆ ಮಾತನ್ನಾಡಿಲ್ಲವಲ್ಲ?" ಎಂದು ನಾನು ಸಂತೈಸಬೇಕಾದರೆ ಅರ್ಧ ರಾತ್ರಿಯಾಗಿತ್ತು.

◆

# ಸ್ವಾರ್ಥ

ಇಷ್ಟು ಹೊತ್ತಿಗಾಗಲೇ ಪುಟ್ಟಣ್ಣನವರ ಪ್ರತಿಭೆ ನನಗೆ ಅರ್ಥವಾಗಿತ್ತು. ಅವರಿಗೆ ಇರುವ ಈ ಶಕ್ತಿಯನ್ನು ಹೇಗಾದರೂ ಮಾಡಿ ಬಳಸಿಕೊಳ್ಳಬೇಕೆಂದು ನನ್ನ ಮನಸ್ಸು ಹೇಳುತ್ತಿತ್ತು. ಅದಕ್ಕೆ ನನಗೆ ಎರಡು ಮಾರ್ಗಗಳು ಕಾಣುತ್ತಿದ್ದವು. ಒಂದು ಸ್ವಾರ್ಥದ್ದು, ಮತ್ತೊಂದು ವಿಶಾಲವಾದದ್ದು.

ಮೊದಲನೆಯದಾಗಿ ನನಗೆ ಅವರಿಂದ ನಿರ್ದೇಶನ ಕಲಿಯಬೇಕೆಂಬ ಆಸೆ ಇತ್ತು. ಅದನ್ನು ನಾನು ಅವರಲ್ಲಿ ಹೇಳುತ್ತಲೇ ಇದ್ದೆ. ಅದಕ್ಕೆ ಅವರು "ನಿಮಗೆ ಮಾತ್ರ ನಿರ್ದೇಶನ ಕಲಿಸುವುದಿಲ್ಲ. ಏಕೆಂದರೆ ನೀವು ಕಲಿತರೆ ನನಗೆ ಸ್ಥಾನ ಇರುವುದಿಲ್ಲ" ಎಂದು ನಗುತ್ತಿದ್ದರು. "ಹೋಗಲಿ, ಒಂದು ಪಾತ್ರವನ್ನಾದರೂ ಕೊಡಿ" ಎನ್ನುತ್ತಿದ್ದೆ. "ನೋಡಿ ನೀವೊಬ್ಬ ನಿರ್ಮಾಪಕ ಎಂಬುದನ್ನು ಮರೆಯಬೇಡಿ. ನಿಮಗೆ ತಕ್ಕ ಪಾತ್ರ ಈ ಚಿತ್ರದಲ್ಲಿಲ್ಲ. ಸಮಯ ಬಂದಾಗ ಮಾಡಿಸುವೆ" ಎನ್ನುತ್ತಿದ್ದರು. ನನಗಿಂತಲೂ ಹಲವು ಮೈತ್ರಿ ಮಿತ್ರರಿಗೆ ನನ್ನಿಂದ ಒಂದು ಪಾತ್ರವನ್ನಾದರೂ ಮಾಡಿಸಬೇಕೆಂಬ ಹಂಬಲವಿತ್ತು. ಅವರ ಒತ್ತಾಯಕ್ಕೆ ಮಣಿದು ಪುಟ್ಟಣ್ಣನವರು ನನಗಾಗಿ ಒಂದು ಚಿಕ್ಕ ಪಾತ್ರವನ್ನು ಸೃಷ್ಟಿಸಿದರು.

ಚಿತ್ರದಲ್ಲಿ ಜಯಂತಿಯ ಜೊತೆ ನಾನೂ ಒಬ್ಬ ಕಾಲೇಜು ವಿದ್ಯಾರ್ಥಿ ಹಾಗೂ ಜಯಂತಿಯ ರೋಮಿಯೋ ಪಾತ್ರ. ಚಿತ್ರೀಕರಣದ ವೇಳೆಯಲ್ಲಿ ಆ ಸನ್ನಿವೇಶ ಅಲ್ಲಿನ ಪರಿಸರ ನನ್ನನ್ನು ಆಗ ತುಂಬ ಭ್ರಾಮಕನನ್ನಾಗಿ ಮಾಡಿತ್ತು. ಏಕೆಂದರೆ ಆ ದೃಶ್ಯವನ್ನು ನಾನು ಓದಿದ ಮಹಾರಾಜಾ ಕಾಲೇಜಿನ ಸೀನಿಯರ್ ಬಿ.ಎ. ಕೊಠಡಿಯ ಮುಂಭಾಗದಲ್ಲಿ ಚಿತ್ರೀಕರಣ ಮಾಡಲು ಬಂದಿದ್ದು, ಅದು ನನ್ನ ಜೀವನದ ಹಿನ್ನೋಟ ಆಗಿತ್ತು. ಪುಟ್ಟಣ್ಣನವರನ್ನು ರೇಗಿಸಿ, ಅವರಿಂದ ಸ್ಫೂರ್ತಿ ಪಡೆದು ಒಂದೇ ಟೇಕ್‌ನಲ್ಲಿ ಅವರು ಮೆಚ್ಚುವಂತೆ ನಟಿಸಿದೆ. ದೃಶ್ಯ ಮುಗಿದ ಮೇಲೆ "ಹೇಗಿತ್ತು ನನ್ನ ಪಾತ್ರ? ಒಂದೇ ಟೇಕ್‌ನಲ್ಲಿ ಓಕೆ

ಎನಿಸಿಕೊಳ್ಳಲಿಲ್ಲವೇ?" ಎಂದು ನಾನು ಜಂಬ ಹೊಡೆದೆ. ಅವರು "ಅದಕ್ಕೇ ನಿಮಗೆ ನಿರ್ದೇಶನ ಕಲಿಸುವುದಿಲ್ಲ ಎಂದದ್ದು" ಎಂದು ನಕ್ಕರು. ಇದರಿಂದಾಗಿ ನಿರ್ದೇಶನ ಕಲಿಯದಿದ್ದರೂ ಅವರಿಂದ ನಟನಂತೂ ಆಗಿ ನನ್ನ ಸ್ವಾರ್ಥ ಸಾಧಿಸಿದ್ದೆ!

ಎರಡನೆಯದಾಗಿ ಪುಟ್ಟಣ್ಣನವರ ಶಕ್ತಿ ಕನ್ನಡ ನಾಡಿನಲ್ಲೇ ಉಳಿದು ಬೆಳೆಯಬೇಕೆಂಬುದು ನನ್ನ ಆಸೆಯಾಗಿತ್ತು. ನಾನು ಅವರ ಪೂರ್ಣ ಶಕ್ತಿಯನ್ನು ಅರಿತಿದ್ದೆ. ಒಂದು ದಿನ ವಿರಾಮವಿದ್ದಾಗ ನನ್ನ ಆಸೆಯನ್ನು ಅವರಲ್ಲಿ ತೋಡಿಕೊಳ್ಳುತ್ತಾ "ನೋಡಿ ಪುಟ್ಟಣ್ಣನವರೆ, ಚಿತ್ರರಂಗ ಒಂದು ಅದ್ಭುತವಾದ ಮಾಧ್ಯಮ. ಯಾವ ಶಕ್ತಿಯೂ, ವ್ಯಕ್ತಿಯೂ ಅನೇಕ ವರ್ಷಗಳು ಅನೇಕ ಪ್ರಯತ್ನಗಳ ಮೂಲಕ ದುಬಾರಿ ಖರ್ಚಿನಲ್ಲಿ ತನ್ನ ಸಮಾಜಕ್ಕೆ, ದೇಶಕ್ಕೆ ಬೇಕಾದುದನ್ನು ಕೊಡಲು ಸಮರ್ಥವಿಲ್ಲದಿರುವಾಗ ಚಲನಚಿತ್ರ ಮಾಧ್ಯಮಕ್ಕೆ ಮಾತ್ರ ಕೇವಲ ಅತ್ಯಲ್ಪ ಖರ್ಚಿನಲ್ಲಿ ಅತ್ಯಲ್ಪ ವೇಳೆಯಲ್ಲಿ ಅಸಂಖ್ಯ ಜನರಿಗೆ ಬೋಧಿಸಿ ಅರಿವು ಮೂಡಿಸುವಂಥ ಶಕ್ತಿ ಇದೆ. ಆದರೆ ಈ ಶಕ್ತಿಯನ್ನು ಹಿಡಿತದಲ್ಲಿ ಇಟ್ಟುಕೊಂಡಿರುವ ವ್ಯಕ್ತಿಗಳಲ್ಲಿ ಆ ಕಾಳಜಿ ಅಥವಾ ಯೋಗ್ಯತೆ ಇಲ್ಲದಿದ್ದರೆ ಇದರಿಂದ ಸಮಾಜ ಮತ್ತು ದೇಶಕ್ಕೆ ಹೇಗೆ ಉಪಯೋಗವಾದೀತು?" ಎಂದು ಕೇಳಿದೆ.

ಅವರು "ಇನ್ನೂ ಸ್ವಲ್ಪ ಬಿಡಿಸಿ ಹೇಳಿ" ಎಂದರು. "ನೋಡಿ ನಮ್ಮ ದೇಶದ ತುಂಬಾ ಅವಿದ್ಯಾವಂತರೂ, ಮೂಢನಂಬಿಕೆಗಳಿಗೆ ಜೋತುಬಿದ್ದ ಮುಗ್ಧರೂ ಇದ್ದಾರೆ. ಏನೂ ಅರಿಯದ ಎಳೆಯರಿದ್ದಾರೆ ಮತ್ತು ಸ್ವಲ್ಪ ತಿಳಿದು ಇನ್ನೂ ಉತ್ತಮವಾದುದನ್ನು ತಿಳಿಯಬೇಕೆಂಬ ಜ್ಞಾನದಾಹಿಗಳೂ ಇದ್ದಾರೆ. ಇವರಿಗೆಲ್ಲಾ ಅವಶ್ಯಕವಾಗಿ ಬೇಕಾದುದನ್ನು ಕೊಡುವ ನಿರ್ದೇಶಕರಾಗಲಿ, ನಿರ್ಮಾಪಕರಾಗಲಿ ಕನ್ನಡ ನಾಡಿನಲ್ಲಿ ವಿರಳ. ತದ್ವಿರುದ್ಧವಾಗಿ ಹೂಣಕ್ಕಾಗಿ ಅಜ್ಞಾನಿಗಳ ಮೂಢತನವನ್ನೂ, ಎಳೆಯರ ಸದಭಿರುಚಿಯನ್ನೂ ದುರುಪಯೋಗಪಡಿಸಿಕೊಳ್ಳುವಂತಹ ಮತ್ತು ಪ್ರಾಜ್ಞರಿಗೆ ಅಸಹ್ಯವಾಗುವಂತಹ ಅಶ್ಲೀಲ ಚಿತ್ರ ತಯಾರಿಸುವ ನಿರ್ಮಾಪಕರು ನಿರ್ದೇಶಕರಿಂದ ಈ ದೇಶ ಎತ್ತ ಸಾಗೀತು?" ಎಂದೆ.

ಅವರು ನನ್ನ ಮಾತನ್ನು ನಿಧಾನವಾಗಿ, ಗಮನವಿಟ್ಟು ಕೇಳಿ ಥಟ್ಟನೆ "ಇದಕ್ಕೆ ನಿಮ್ಮ ಪರಿಹಾರವೇನು?" ಎಂದರು. ಅದು ಸರಳ. ನಿಮ್ಮಂತವರು ಕನ್ನಡ ಚಲನಚಿತ್ರ ಉದ್ಯಮದಲ್ಲಿ ಉಳಿದು ಆಳವಾಗಿ ಬೇರೂರಬೇಕು. ತಿಳಿದವರು, ಒಳ್ಳೆಯವರು, ಸುಸಂಸ್ಕೃತರು, ಈ ರಂಗಕ್ಕೆ ಬರಬೇಕು. ಇಂದು ರಾಜಕೀಯಕ್ಕೂ, ಚಲನಚಿತ್ರಕ್ಕೂ ಏನೂ ವ್ಯತ್ಯಾಸವಿಲ್ಲ. ಎರಡನ್ನೂ ಕೆಟ್ಟ ಹೆಚ್ಚು ಜನ ಆಳುತ್ತಿದ್ದಾರೆ.

ಒಳ್ಳೆಯವರು ದೂರವಿದ್ದಲ್ಲಿ ಪರಿಣಾಮ ಭಯಂಕರ" ಎಂದು ಹೇಳಿ ವಿಶ್ವದ ರಾಜಕೀಯ ಪಿತಾಮಹ 'ಹಾಬ್ಸ್' ಅವರ ಎಚ್ಚರಿಕೆಯನ್ನು ಉದ್ಗರಿಸಿದೆ. ಶ್ರೀಯುತ ಹಾಬ್ಸ್ ಅವರು "ರಾಜಕೀಯ ಹೊಲಸೆಂದು ರಾಜಕೀಯದಿಂದ ದೂರವಿರುವು-ದಾದರೆ ಹೊಲಸು ವ್ಯಕ್ತಿಗಳಿಂದ ಆಳಿಸಿಕೊಳ್ಳುವಂತಹ ಕಾಲ ಬಂದೀತು ಎಂದಿದ್ದಾರೆ" ಎಂದೆ. ಸಣ್ಣಗೆ ಕಣ್ಣು ಮುಚ್ಚಿ ನನ್ನ ಮಾತನ್ನು ಕೇಳುತ್ತ ಕೇಳುತ್ತ ಭಾವುಕರಾದರು.

ಆಮೇಲೆ ಎದ್ದು ಬಂದು ನನ್ನ ಎರಡು ಕೈಗಳನ್ನೂ ಹಿಡಿದುಕೊಂಡು "ಗೌಡರೇ, ಈ ಚಲನಚಿತ್ರರಂಗದ ಬಗ್ಗೆ ಎಷ್ಟೊಂದು ಆಸೆಯನ್ನು ಹೊಂದಿದ್ದೀರಿ. ಇದನ್ನು ಸಾಧಿಸಲು ನೀವು ಏನಾದರೂ ಮಾಡಬೇಕು, ಏನಾದರೂ ಮಾಡಲೇಬೇಕು" ಎಂದು ಒತ್ತಿ ಹೇಳಿದರು. "ಅದನ್ನು ಮಾಡಬೇಕಾದವನು ನಾನಲ್ಲ. ನೀವು" ಎಂದೆ. "ಹಾಗಾದರೆ ಅದರಲ್ಲಿ ನಿಮಗೆ ಪಾತ್ರ ಬೇಡವೇನು?" ಎಂದು ಪ್ರಶ್ನಿಸಿದರು. ನನ್ನ ಪಾತ್ರ ಖಂಡಿತ ಇರುತ್ತೆ. ಈಗಾಗಲೇ ಈ ಬಗ್ಗೆ ನನ್ನ ಒಂದು ಸಣ್ಣ ಯೋಜನೆ ಇದೆ. ನಾನು ರಾಜಕಾರಣದಲ್ಲೂ ಇದ್ದೇನೆ. ಈಗ ನಮ್ಮ ಪಕ್ಷದ ಸರ್ಕಾರವೇ ಇದೆ. ನಮ್ಮ ಜಿಲ್ಲೆಯವರೇ ಆದ ಶ್ರೀ ಕೆ. ಲಕ್ಕಪ್ಪನವರು ಲೋಕೋಪಯೋಗಿ ಇಲಾಖೆಯ ಸಚಿವರಾಗಿದ್ದಾರೆ, ಅವರಲ್ಲಿ ಆಗಲೇ ನಿಮ್ಮನ್ನೇ ಗುರಿಯಗಿಟ್ಟುಕೊಂಡು ಮಾತನಾಡಿದ್ದೇನೆ. ಬೆಂಗಳೂರು ಮಧ್ಯದಲ್ಲಿ ಒಂದು ಸ್ಟುಡಿಯೋ ಕಟ್ಟಬೇಕೆಂಬ ಆಸೆ ನನಗೆ. ಅದಕ್ಕಾಗಿ ಒಂದೈದು ಎಕರೆ ಜಮೀನನ್ನು ಕೊಡಲು ಮತ್ತು ಅದಕ್ಕಾಗುವ ಆರ್ಥಿಕ ಸಹಾಯವನ್ನು ನೀಡಲು ಭರವಸೆ ನೀಡಿದ್ದಾರೆ. ದೇವರು ಶಕ್ತಿ ಕೊಟ್ಟಲ್ಲಿ ನಮ್ಮ ಸಂಸ್ಥೆ ನಿಮಗೆ ಶಾಶ್ವತ ನಿರ್ಮಾಪಕ, ನೀವು ನಮ್ಮ ಸಂಸ್ಥೆಗೆ ಶಾಶ್ವತ ನಿರ್ದೇಶಕ" ಎಂದು ನನ್ನ ಮಾತು ಮುಗಿಸಿ ತಲೆಯೆತ್ತಿ ಅವರೆಡೆಗೆ ನೋಡಿದಾಗ ಅವರ ಕಣ್ಣಿನಲ್ಲಿ ಧಾರಾಕಾರವಾಗಿ ನೀರು ಹರಿಯುತ್ತಿತ್ತು. ತಮ್ಮ ಎರಡೂ ಕೈಗಳನ್ನೆತ್ತಿ ಆಶೀರ್ವಾದಿಸುವಂತೆ ಮೆಲ್ಲಗೆ ಆಡಿಸುತ್ತ ಭಾವುಕರಾಗಿ "ಆಗಲಿ, ಆಗಲಿ" ಎಂದಷ್ಟೇ ನುಡಿದರು.

ಈ ಕಾರಣಕ್ಕಾಗಿ ಪುಟ್ಟಣ್ಣನವರಿಗೆ ಮೈತ್ರಿ ಸಂಸ್ಥೆಯ ಬಗ್ಗೆ ಹೆಚ್ಚು ನಿರೀಕ್ಷಣೆ ಇತ್ತು. ಅದಕ್ಕಾಗಿಯೇ ಅವರ ತಾರೀಖು ೨೦.೪.೧೯೭೮ರ ಪತ್ರದಲ್ಲಿ "ನಾನು ಮೈತ್ರಿ ಸಂಸ್ಥೆಯ ಬಗ್ಗೆ ಅಪಾರವಾದ ಆಸೆಯನ್ನು ತುಂಬಿಕೊಂಡಿದ್ದೆ" ಎಂದು ಬರೆದಿದ್ದಾರೆ. ಆದರೆ ಅದು ಆದದ್ದೇ ಬೇರೆ.

◆

# ಟೀಚರಮ್ಮ

ನಮ್ಮ ಚಿತ್ರದ "ಸಾವಿರ ಮೆಟ್ಟಿಲು ಹತ್ತಿ, ಬನ್ನಿ, ದೇವಿಯ ಗುಡಿಯ ಸುತ್ತಿ ಬನ್ನಿ, ಭಕ್ತಿಯ ಕಾಣಿಕೆ ಮರೆಯದೆ ತನ್ನಿ" ಎಂಬ ಬಹಳ ಮುಖ್ಯವಾದ ಹಾಡಿನ ಧ್ವನಿಮುದ್ರಿಕೆ ಆಗಬೇಕಿತ್ತು. ಆಗ ಪುಟ್ಟಣ್ಣನವರು ಮದರಾಸಿನಲ್ಲಿ 'ಟೀಚರಮ್ಮ' ಎಂಬ ತೆಲುಗು ಚಿತ್ರವನ್ನು ಚಿತ್ರೀಕರಿಸುತ್ತಿದ್ದರು. ಚಿತ್ರೀಕರಣವೆಲ್ಲ ಮುಗಿದ ಮೇಲೆ ಅದರ ಬಿಡುಗಡೆಯ ದಿನ ನನಗೆ ಮದರಾಸಿಗೆ ಬರುವಂತೆ ಪತ್ರ ಬರೆದಿದ್ದರು. ಕೇವಲ ಚಿತ್ರದ ಬಿಡುಗಡೆಗಾಗಿ ಮದರಾಸಿಗೆ ಹೋಗುವ ವ್ಯವಧಾನವಿಲ್ಲವಾದ್ದರಿಂದ ಅಂದು ನಾನು ಹೋಗಲಾಗಲಿಲ್ಲ.

ಒಂದು ವಾರದ ಮೇಲೆ ಪುನಃ ಅವರಿಂದ ಪತ್ರ ಬಂತು. ಬಹಳ ಖುಷಿಯಾಗಿ ಬರೆದಿದ್ದರು. "ಚಿತ್ರ ತುಂಬಾ ಚೆನ್ನಾಗಿ ಬಂದಿದೆ. ಜನ ಸಾಲುಗಟ್ಟಿ ನಿಂತು ಟಿಕೆಟ್ ಸಿಗದೆ ಹೋಗುತ್ತಿದ್ದಾರೆ. ಪ್ರತಿ ಪ್ರದರ್ಶನವೂ ಹೌಸ್‌ಫುಲ್ ಆಗುತ್ತಿದೆ. ನೀವು ಬಂದು ನೋಡಲೇಬೇಕು. ಈ ಆನಂದವನ್ನು ನಾನು ನಿಮ್ಮೊಡನೆ ಹಂಚಿಕೊಳ್ಳಬೇಕು" ಹೀಗೆಲ್ಲ ಬರೆದಿದ್ದರು. ಹೇಗೂ ಹಾಡಿನ ಧ್ವನಿಮುದ್ರಣವನ್ನು ಮುಗಿಸಿ "ಟೀಚರಮ್ಮ"ನನ್ನೂ ಸಹ ನೋಡಬಹುದಲ್ಲ? ಎಂಬ ಉದ್ದೇಶದಿಂದ ಪಿ.ವಿ. ನಂಜರಾಜ ಅರಸ್ ಅವರ ಜೊಗೆ ಮದರಾಸಿಗೆ ಹೋದೆ. ವುಡ್‌ಲ್ಯಾಂಡ್ಸ್ ವಸತಿಗೃಹದಲ್ಲಿ ಕೊಠಡಿಯನ್ನು ಕಾಯ್ದಿರಿಸಲಾಗಿತ್ತು.

ನಾನು ಅರಸ್, ಪುಟ್ಟಣ್ಣ, ವಿಜಯಭಾಸ್ಕರ್ ಮತ್ತು ಅವರ ಪಕ್ಕವಾದ್ಯದವರು ಹಾಡಿಗೆ ರಾಗ ಸಂಯೋಜನೆ ಸಲುವಾಗಿ ಕುಳಿತೆವು. ಬೆಳಿಗ್ಗೆ ೮.೦೦ ಗಂಟೆಗೆ ಪ್ರಾರಂಭಿಸಿದರೂ ಮುಗಿಯಲು ಸಂಜೆ ೬.೦೦ ಗಂಟೆಯಾಯಿತು. ಮಧ್ಯಾಹ್ನ ಊಟದ ವೇಳೆಯಲ್ಲಿ ಪುಟ್ಟಣ್ಣನವರನ್ನು " ಈದಿನ ಸಂಜೆ "ಟೀಚರಮ್ಮ" ತೋರಿಸುವಿರಲ್ಲ?" ಎಂದು ಕೇಳಿದ್ದಕ್ಕೆ ಉತ್ಸಾಹವಿಲ್ಲದೆ ಆಗಲೆಂದಿದ್ದರು. ಅದರ ಸಲುವಾಗಿಯೇ ಬೇಗ ಬೇಗ ರಾಗ ಸಂಯೋಜನೆ ಮುಗಿಸಿ, ಬೆಳಿಗ್ಗೆ ಧ್ವನಿಮುದ್ರಿಕೆಗೆ ವ್ಯವಸ್ಥೆ ಮಾಡುವಂತೆ ಸೂಚಿಸಿದರು.

ಕೊಠಡಿಯಿಂದ ಮೊದಲು ವಿಜಯಭಾಸ್ಕರ್ ಮತ್ತು ಅವರ ವೃಂದದವರು ಹೊರಟು ಹೋದರು. ಇನ್ನು ಉಳಿದವರು ನಾನು, ಪುಟ್ಟಣ್ಣ, ನಂಜರಾಜ ಅರಸು. ಚಿತ್ರಕ್ಕೆ ಹೋಗಲು ತಡವಾಗಬಾರದೆಂದು ಅವಸರವಾಗಿ ನಾನು ಮುಖ ತೊಳೆಯಲು ಸ್ನಾನದ ಕೋಣೆಗೆ ಹೋದೆ, ಸ್ನಾನದ ಕೋಣೆ ಚಿಕ್ಕದಿತ್ತು. ನಾನು ಒಳಗೆ ಹೋದ ತಕ್ಷಣ ಪುಟ್ಟಣ್ಣನವರು ನನ್ನ ಹಿಂದೆಯೇ ಬಂದರು. ನಾನು "ಸ್ನಾನದ ಕೋಣೆಯನ್ನು ಒಂದು ಸಲಕ್ಕೆ ಒಬ್ಬರೇ ಉಪಯೋಗಿಸಬೇಕಲ್ಲವೆ?" ಎಂದು ತಮಾಷೆ ಮಾಡಿದೆ. ಅವರು ಬಾಗಿಲು ಮುಚ್ಚುತ್ತಾ ಖಿನ್ನರಾಗಿ "ನನಗೆ ೨೫ ರೂಪಾಯಿ ಬೇಕಾಗಿತ್ತು ಗೌಡರೆ" ಎಂದರು. ಅದನ್ನು ಕೇಳಿ ನನ್ನ ಮನಸ್ಸಿಗೆ ಆಘಾತವಾಯಿತು. "ಏಕೆ ಪುಟ್ಟಣ್ಣ" ಅಂದೆ. "ನಿಮಗೆ "ಟೀಚರಮ್ಮ" ಚಿತ್ರವನ್ನು ತೋರಿಸುತ್ತೇನೆಂದು ಹೇಳಿದ್ದೆನಲ್ಲ? ಅದಕ್ಕಾಗಿ. ನನ್ನಲ್ಲಿ ಹಣವಿಲ್ಲ" ಎಂದರು. ಅವರ ಆರ್ಥಿಕ ಪರಿಸ್ಥಿತಿ ಅರಿವಾಗಿ ದುಃಖ ಒತ್ತರಿಸಿ ಬಂತು, ಹಾಗೆಯೇ ನನಗೆ ಸಂತೋಷದ ಕಣ್ಣೀರು ಬಂತು. "ಈ ಸ್ವಾಭಿಮಾನಿ ನನ್ನಲ್ಲಿ ಇಷ್ಟೊಂದು ವಿಶ್ವಾಸವಿಟ್ಟಿರುವನಲ್ಲ" ಎಂದು.

"ಟೀಚರಮ್ಮ" ಚಿತ್ರ ಮೌಂಟ್‌ರೋಡಿನ "ವಿಲ್ಲಿಂಗ್ಟನ್" ಚಿತ್ರಮಂದಿರದಲ್ಲಿ ನಡೆಯುತ್ತಿತ್ತು. ನಾವು ನಾಲ್ವರೂ ಅಲ್ಲಿ ಹೋಗುವ ಹೊತ್ತಿಗೆ ನೂರಾರು ಕಾರುಗಳೂ, ಸ್ಕೂಟರುಗಳೂ, ಮೋಟಾರ್ ಸೈಕಲ್ಲುಗಳೂ ನಿಂತಿದ್ದವು. ಚಿತ್ರಮಂದಿರ ಭರ್ತಿಯಾಗಿತ್ತು. ಸಾಲುಗಟ್ಟಿ ನಿಂತ ಜನ ಟಿಕೇಟ್ ಸಿಗದೆ ನಿರಾಶರಾಗಿ ಹೊರಬರುತ್ತಿದ್ದರು. ನಾನು ಅದನ್ನು ನೋಡಿ ಪುಳಕಿತನಾದೆ. ಲಕ್ಷಾಂತರ ಜನ ನೋಡುವಂತಹ ಚಿತ್ರವನ್ನು ಕೊಟ್ಟ ಮಹಾನ್ ನಿರ್ದೇಶಕನಿಗೆ ಕೇವಲ ರೂ. ೨೫-೦೦ ರೂಪಾಯಿಗಳಿಗೆ ಗತಿಯಿಲ್ಲವೆ? ಎಂದು ನನ್ನ ಮನಸ್ಸು ಒದ್ದಾಡಿತು. ಚಿತ್ರವನ್ನು ಆಗಲೇ ನೋಡುವ ಆಸೆ. ಆದರೆ ಚಿತ್ರಮಂದಿರ ತುಂಬಿದ "ಫಲಕ" ತೂಗು ಹಾಕಿದ್ದರು. ಪುಟ್ಟಣ್ಣನವರು ೨ನೇ ಪ್ರದರ್ಶನಕ್ಕೆ ಹೋಗೋಣವೆಂದರು. ನಾನು "ನೀವೇ ಚಿತ್ರದ ನಿರ್ದೇಶಕರು ಎಂದು ಹೇಳಿ. ಹೇಗಾದರೂ ವ್ಯವಸ್ಥೆ ಮಾಡುತ್ತಾರೆ" ಎಂದೆ. ಸ್ವಾಭಿಮಾನಿ ಪುಟ್ಟಣ್ಣ ಒಪ್ಪಲಿಲ್ಲ. ಟಿಕೇಟ್ ಕೊಂಡೇ ಎರಡನೇ ಪ್ರದರ್ಶನ ತೋರಿಸಿದರು. ಚಿತ್ರ ತುಂಬಾ ಚೆನ್ನಾಗಿ ಮೂಡಿ ಬಂದಿತ್ತು.

◆

# ರೋಗಗ್ರಸ್ಥ ಮಗು

ಮೈತ್ರಿ ಸಂಸ್ಥೆಯ ಹೆಮ್ಮೆಯ ಚಿತ್ರ 'ಸಾವಿರ ಮೆಟ್ಟಿಲು' ಕಾರಣಾಂತರಗಳಿಂದ ಕೇವಲ ಏಳು ಸಾವಿರದ ಐದುನೂರು ಮೆಟ್ಟಿಲುಗಳನ್ನು ಮಾತ್ರ ಹತ್ತಿ ಮುಂದೆ ಬೆಟ್ಟ ಹತ್ತಲಾರದೆ ನ್ಯಾಯಾಲಯದ ಕಟ್ಟೆ ಹತ್ತಿ ನಿಂತುಹೋಯಿತು. ಆದರೆ ಪುಟ್ಟಣ್ಣನವರ ಭವಿಷ್ಯ ಭವ್ಯವಾಗಿತ್ತು. ಅವರಾಗಲೇ "ಮಲ್ಲಮ್ಮನ ಪವಾಡ" ಚಿತ್ರಕ್ಕೆ ಕೈ ಹಾಕಿದ್ದರು. ಏಕಕಾಲಕ್ಕೆ ಹತ್ತು ಹತ್ತು ಮೆಟ್ಟಿಲುಗಳನ್ನು ನೆಗೆನೆಗೆದು ಮೇಲೇರತೊಡಗಿದ್ದರು. ಹೇಗಾದರೂ ಮಾಡಿ 'ಸಾವಿರ ಮೆಟ್ಟಿಲ'ನ್ನು ಮುಗಿಸಬೇಕೆಂಬುದು ನನ್ನ ಏಕೈಕ ಆಸೆಯಾಗಿತ್ತು. ಮೈತ್ರಿ ಮಿತ್ರರೆಲ್ಲ ಸೇರಿದೆವು. ಸಾಧಕ-ಬಾಧಕಗಳನ್ನು ಚರ್ಚಿಸಿದೆವು. ಬಗೆಹರಿಯಲಿಲ್ಲ. ಕೊನೆಗೆ ನನ್ನ ಉತ್ಸಾಹವನ್ನು ಕಂಡು ನನ್ನ ಮೈತ್ರಿ ಮಿತ್ರರು ನನ್ನನ್ನು ಸಂಸ್ಥೆಯ ಕಾರ್ಯ ನಿರ್ವಾಹಕ ನಿರ್ದೇಶಕನನ್ನಾಗಿ ಆಯ್ಕೆಮಾಡಿ ಅದರ ಹೊಣೆಯನ್ನು ನನಗೆ ವರ್ಗಾಯಿಸಿದರು.

ಆಗ ಪುಟ್ಟಣ್ಣನವರು ಮದರಾಸಿನಲ್ಲಿದ್ದರು. ಇದುವರೆಗೂ ತೆಗೆದಿದ್ದ ಡಬ್ಬಗಳನ್ನು ಹೊತ್ತುಕೊಂಡು ಮದರಾಸಿಗೆ ಹೋದೆ. ಹೇಗಾದರೂ ಚಿತ್ರವನ್ನು ಪೂರ್ಣಗೊಳಿಸಬೇಕೆಂದು ಪುಟ್ಟಣ್ಣನವರನ್ನು ಕೇಳಿಕೊಂಡೆ. ಮುಂದುವರಿಯುವ ಮುನ್ನ ಚಿತ್ರವನ್ನೊಮ್ಮೆ ನೋಡೋಣವೆಂದರು. ಅವರೇ ಪ್ರೊಜೆಕ್ಷನ್ ವ್ಯವಸ್ಥೆ ಮಾಡಿದರು. ಏಳು ಸಾವಿರದ ಐನೂರು ಅಡಿ ಸಂಕಲನವಾದ ಚಿತ್ರವನ್ನು ನೋಡಿ ಕಣ್ಣಲ್ಲಿ ನೀರು ತಂದುಕೊಂಡರು. "ಈ ನನ್ನ ಮಗುವಿಗೆ ನನ್ನ ರಕ್ತಮಾಂಸವನ್ನೆಲ್ಲಾ ತುಂಬಿದೆ. ಆದರೆ ಮಗು ರೋಗಗ್ರಸ್ಥವಾಗಿ ಮಲಗಿದೆಯಲ್ಲ?" ಎಂದು ಪರಿತಪಿಸಿದರು.

"ಸಾವಿರ ಮೆಟ್ಟಿಲು" ಚಿತ್ರದ ಬಗ್ಗೆ ಪುಟ್ಟಣ್ಣನವರಿಗೆ ಅಪಾರ ಅಭಿಮಾನವಿತ್ತು. ಅವರ ಸಂಭಾವನೆ ಅಂದು ಕೇವಲ ಆರು ಸಾವಿರ ರೂಪಾಯಿಗಳಾಗಿದ್ದರೂ ಸಹ ಪ್ರತಿ ಹಂತದ ಬಗ್ಗೆಯೂ ಅವರು ತೋರುತ್ತಿದ್ದ ಕರ್ತವ್ಯನಿಷ್ಠೆ ಬೆಲೆ ಕಟ್ಟಲಾಗದ್ದು.

"ಸಾವಿರ ಮೆಟ್ಟಿಲು" ಅರ್ಧಕ್ಕೆ ನಿಂತಿದ್ದರೂ ಅದರ ಮೂಲಕ ಕನ್ನಡ ಚಲನಚಿತ್ರ ಜಗತ್ತಿಗೆ ಅನೇಕರು ಪ್ರಥಮ ಪರಿಚಯವಾದರು. ೧೯೭೩ರಲ್ಲಿ "ಸಂಕಲ್ಪ" ಚಿತ್ರದ ನಿರ್ದೇಶನಕ್ಕೆ ಪ್ರಶಸ್ತಿ ಪಡೆದ ಪಿ.ವಿ. ನಂಜರಾಜ ಅರಸುರವರು ಆಗಲೇ "ಸಾವಿರ ಮೆಟ್ಟಿಲು"ವಿನಿಂದ ಚಿತ್ರಸಾಹಿತಿಯಾಗಿದ್ದರು, ಈಗ ಪೋಷಕ ನಟರಾಗಿ ಹೆಸರು ಮಾಡಿರುವ ಸುಂದರಕೃಷ್ಣ ಅರಸುರವರು "ಸಾವಿರ ಮೆಟ್ಟಿಲು"ವಿನಲ್ಲಿ ಸಹ ನಿರ್ದೇಶಕರಾಗಿ ಮೂಡಿ ಬಂದಿದ್ದರು. ಹೆಸರಾಂತ ಖಳನಾಯಕ ವಜ್ರಮುನಿ ಚಿತ್ರರಂಗ ಪ್ರವೇಶ ಮಾಡಿದ್ದೂ "ಸಾವಿರ ಮೆಟ್ಟಿಲು"ವಿನಿಂದಲೇ, ಅದರಲ್ಲಿ ಅವರು ಪ್ರಣಯವಂಚಿತ ನಾಯಕ. ಜಯಂತಿ ಕಲ್ಯಾಣ್‌ಕುಮಾರ್, ವಜ್ರಮುನಿ ಈ ಮೂವರೂ ನಟಿಸಿರುವ ಒಂದು ಪರಾಕಾಷ್ಠತೆ ಮುಟ್ಟುವ ದೃಶ್ಯದಲ್ಲಿ ಪುಟ್ಟಣ್ಣನವರ ಕ್ಯಾಮರಾ ಕೈಚಳಕ ಈ ಮೂವರೂ ಕಲಾವಿದರ ಕೇವಲ ಕಣ್ಣುಗಳ ಮೇಲೆಯಷ್ಟೇ ಓಡಿಯಾಡಿ ಅದ್ಭುತವಾದ ದೃಶ್ಯವನ್ನು ನಿರ್ಮಿಸಿದೆ. ಕಲಾವಿದೆ ಜಯಂತಿಯವರಿಗೂ ಕೂಡ ಪುಟ್ಟಣ್ಣನವರ ನಿರ್ದೇಶನದ ಪ್ರಥಮ ಚಿತ್ರ ಇದಾಗಿತ್ತು. ಚಿತ್ರದಲ್ಲಿ ಇವರದು ಒಂದು ವಿಶಿಷ್ಟ ಪಾತ್ರ, ಕಾಲೇಜು ವಿದ್ಯಾರ್ಥಿನಿಯಾಗಿ, ಬೆಟ್ಟದ ಕುದುರೆಯಾಗಿ ಮೆರೆದು, ರಂಜಿಸಿ ಸುಖಿಪಡುವ ವಯಸ್ಸಿನಲ್ಲಿ ಸಮಾಜದ ಮೂಢನಂಬಿಕೆಗೆ, ಮೋಸಕ್ಕೆ, ಸಂಘರ್ಷಕ್ಕೆ ಬಲಿಯಾಗಿ, ಮದುವೆಯಿಂದ ವಂಚಿತಳಾಗಿ, ತನ್ನ ಇಳಿವಯಸ್ಸಿನಲ್ಲಿ ಬೆಟ್ಟದಲ್ಲಿ ಚಾಮುಂಡೇಶ್ವರಿ ದೇವಿಯ ಸೇವೆ ಮಾಡುತ್ತಾ ಹುತಾತ್ಮಳಾದ ಒಂದು ಅಬಲೆಯ ದಾರುಣ ಕಥೆ.

ಕನ್ನಡ ಚಲನಚಿತ್ರರಂಗ ಬಡವಾಗಿದ್ದ ಕಾಲದಲ್ಲಿ ಪುಟ್ಟಣ್ಣನವರ ಮೂಸೆಯಿಂದ "ಸಾವಿರ ಮೆಟ್ಟಿಲು" ಮೂಲಕ ಹೊರಬಿದ್ದ ಇಷ್ಟೊಂದು ಕಲಾರತ್ನಗಳ ಬಗ್ಗೆ ಮೈತ್ರಿ ಸಂಸ್ಥೆಗೆ ಹೆಮ್ಮೆಯೆನಿಸಿದರೂ ಚಿತ್ರ ಮುಂದುವರೆಯುವ ಸೂಚನೆ ಕಾಣಬರಲಿಲ್ಲ. ಪುಟ್ಟಣ್ಣ ತುಂಬಾ ಬಿಡುವಿಲ್ಲದವರಾದರು. ಅವರು ಎಷ್ಟು ಕೆಲಸದ ಒತ್ತಡದಿಂದ ಇದ್ದರೆಂದರೆ ತಮ್ಮ ಕೈಯಲ್ಲಿರುವ ಚಿತ್ರಗಳನ್ನು ಬಿಟ್ಟು ನಮ್ಮ ಇಂತಹ ನಿಂತ ಚಿತ್ರದ ಬಗ್ಗೆ ಚಿಂತಿಸಲು ಅವರಿಗೆ ವಿರಾಮವಿರಲಿಲ್ಲ. ಆಗ ಅವರಿಂದ ನಿರ್ದೇಶಿಸುತ್ತಿದ್ದ ೨-೩ ಚಿತ್ರಗಳ ಚಿತ್ರೀಕರಣದ ಜಾಗಗಳಿಗೆ ಹೋದೆ. ಅವರು ನನ್ನನ್ನು ಕಂಡ ತಕ್ಷಣ 'ಓಹ್', ಗೌಡರು ಬಂದಿದ್ದಾರೆ. ಬ್ರೇಕ್' ಎಂದು ಕೂಗಿ ಸಂತೋಷದಿಂದ ಆಲಂಗಿಸುತ್ತಿದ್ದರು.

ಕಾಫಿಯಾದ ಮೇಲೆ ನಾನು ಇನ್ನೇನು ವಿಷಯವನ್ನೆತ್ತಬೇಕೆನ್ನುವಾಗ "ಶಾಟ್ ರೆಡಿ....?" ಎಂದು ಕೂಗುತ್ತಾ ಸೆಟ್‌ಗೆ ಹೋಗಿಬಿಡುತ್ತಿದ್ದರು. ಕೊನೆಕೊನೆಗೆ ಪುಟ್ಟಣ್ಣನವರಿಗೆ ಈ ಚಿತ್ರವನ್ನು ಮುಂದುವರಿಸುವ ಇಚ್ಛೆ ಇಲ್ಲವೇನೋ ಎಂಬ ಶಂಕೆ ನನ್ನಲ್ಲಿ ಬಂತು. ಅವರ ಭೇಟಿ ನಿಲ್ಲಿಸಿದೆ. ◆

# ಆರತಿ ಆಗಮನ

ಪುಟ್ಟಣ್ಣ ಅವರ ಪ್ರತಿಭೆ ಮತ್ತು ಏಳಿಗೆಯನ್ನು ಕೇಳಿ ನನಗೆ ಸಂತಸವಾಗುತ್ತಿತ್ತು. ಮೂರು ವರ್ಷ ಅವರನ್ನು ಭೇಟಿಯಾಗಿರಲಿಲ್ಲ. ೧೯೭೭ರಲ್ಲಿ ಅವರನ್ನು ಭೇಟಿಯಾಗಲೇಬೇಕಾಯಿತು. ಕಾರಣ ಮೈಸೂರಿನಲ್ಲಿ ನನ್ನ ದೊಡ್ಡ ಮಗಳ ಮದುವೆ ನಡೆಯಲಿತ್ತು. ಅವರು "ಹೈವೇ" ವಸತಿ ಗೃಹದಲ್ಲಿದ್ದಾರೆಂದು ತಿಳಿದು ಕರೆಯೋಲೆ ಕೊಡಲು ಹೋದೆ. ಕೊಠಡಿ ಹೊರಗೆ ಒಬ್ಬರೇ ಕುರ್ಚಿಯಲ್ಲಿ ಕುಳಿತಿದ್ದರು. ಮುಖದಲ್ಲಿ ಹಿಂದೆ ನಾನು ಕಂಡಿದ್ದ ಹೊಳಪಿರಲಿಲ್ಲ. ಸ್ವಲ್ಪ ಖಿನ್ನರಾಗಿದ್ದಂತೆ ಕಂಡರು. ಅಲ್ಲಿದ್ದದ್ದು ಒಂದೇ ಕುರ್ಚಿ. ಎದ್ದು ನನ್ನನ್ನು ಎಂದಿನಂತೆ ಸ್ವಾಗತಿಸಿದರು. "ಕೊಠಡಿಯೊಳಗೆ ಕೂರೋಣ" ಎಂದೆ. ಪುಟ್ಟಣ್ಣ "ಒಳಗೆ ನನ್ನ ಹೆಂಡತಿ ಇದ್ದಾಳೆ" ಎಂದರು, ನಾನು ಅವರ ಹೆಂಡತಿ ನಾಗಲಕ್ಷ್ಮಿಯವರನ್ನು ಮಾತಾಡಿಸಿ ಬಹಳ ದಿನಗಳಾಗಿತ್ತು. ಮದುವೆಗೆ ಅವರನ್ನೂ ಕರೆಯುವ ಅವಕಾಶ ಸಿಕ್ಕಿತಲ್ಲಾ ಎಂದುಕೊಂಡು 'ನಾಗಲಕ್ಷ್ಮಿಯವರೇ' ಎಂದು ಕೂಗುತ್ತ ಕೊಠಡಿಯ ಬಾಗಿಲು ತಲುಪುವಷ್ಟರಲ್ಲಿ ಪುಟ್ಟಣ್ಣನವರು "ಅವರಲ್ಲ. ಎರಡನೆಯವರು" ಎಂದರು.

ಮತ್ತೇನನ್ನೂ ನಾನು ಕೇಳಲಿಲ್ಲ. ಅಲ್ಲಲ್ಲಿ ಗುಸು ಗುಸು ಸುದ್ದಿ ಕೇಳಿದ ನೆನಪು ಬಂತು. "ಮದುವೆಗೆ ಬನ್ನಿ" ಎಂದು ಹೇಳಿ ಹೋಟೆಲಿನಿಂದ ಹೊರಬಿದ್ದೆ. ಪುಟ್ಟಣ್ಣ ಮದುವೆಗೆ ಬಂದು ಹೋದರು.

"ಸಾವಿರ ಮೆಟ್ಟಿಲು" ಚಿತ್ರದ ಅಪೂರ್ಣತೆಯಿಂದಾಗಿ ನನ್ನ ಮನಸ್ಸು ಕಲಕಿತ್ತು. ನನ್ನ, ಪುಟ್ಟಣ್ಣನವರ ಸ್ನೇಹದಲ್ಲಿ ಕೊಂಚ ಅಸಮಾಧಾನ ಉಂಟಾಗಿತ್ತು. ಈ ಮಧ್ಯೆ ಪುಟ್ಟಣ್ಣನವರು ಆರತಿಯವರನ್ನು ಮದುವೆಯಾದ ಬಗ್ಗೆ ಪತ್ರಿಕೆಗಳಲ್ಲಿ ಓದಿದ್ದೆ. ಇದಾದ ಕೆಲವು ವರ್ಷಗಳ ನಂತರ ಆರತಿಯವರ ಮನೆಯಿಂದ ಪುಟ್ಟಣ್ಣ ಹೊರಬಿದ್ದ ಸುದ್ದಿ ಬಂತು. ಪುಟ್ಟಣ್ಣ-ಆರತಿಯವರ ಪ್ರೇಮದ ಆಳ ಎಷ್ಟೆಂದು ನನಗೆ ಗೊತ್ತಿತ್ತು. ಒಬ್ಬರನ್ನೊಬ್ಬರು ಬಹುವಾಗಿ ಪ್ರೀತಿಸುತ್ತಿದ್ದರು. ಅವರ ಅಗಲಿಕೆ

ನನಗೂ ದುಃಖ ತಂದಿತು. ಅವರಿಬ್ಬರ ಬಗ್ಗೆ ಆಲೋಚಿಸುತ್ತಿದ್ದಾಗ ಹಿಂದಿನ ಒಂದು ಘಟನೆ ನೆನಪಿಗೆ ಬಂತು.

ಅದೊಂದು ದಿನ ಪುಟ್ಟಣ್ಣನವರು ಪಾರಿಜಾತದ ವಿತರಕ ಶ್ರೀ ಮುದ್ದುಕೃಷ್ಣ ಅವರಿಗಾಗಿ ಮೈಸೂರಿನ ಪ್ರೀಮಿಯರ್ ಸ್ಟುಡಿಯೋದಲ್ಲಿ 'ಬಿಳಿಹೆಂಡ್ತಿ' ಚಿತ್ರದ ಚಿತ್ರೀಕರಣ ಮಾಡುತ್ತಿದ್ದರು. ಆಗ ನಾನು ಅಲ್ಲಿಗೆ ಹೋದೆ. ಎಂದಿನಂತೆ ಚಿತ್ರೀಕರಣ ಬ್ರೇಕ್ ಆಯಿತು. ನಾನು, ಮುದ್ದುಕೃಷ್ಣ, ಪುಟ್ಟಣ್ಣ ಹೊರಗಡೆ ಕುಳಿತೆವು. ಅಷ್ಟರಲ್ಲಿ ನಿರ್ಮಾಣ ತಂಡದ ಹುಡುಗ ಕಾಫಿ ತಂದ. ಪುಟ್ಟಣ್ಣ ಅವನ ಕಡೆ ನೋಡಿ "ಯಾವನೋ ನಿನ್ನ ಕಾಫಿ ತಗೊಂಡು ಬಾ ಎಂದು ಹೇಳಿದವನು, ಮುಠ್ಠಾಳ" ಎಂದು ರೇಗಿದರು. ಮಾಮೂಲಿನಂತೆ ಕಾಫಿ ತರುತ್ತಿದ್ದ ಆ ಹುಡುಗ ಬೆಚ್ಚಿ ಬೆಪ್ಪನಂತೆ ನಿಂತ. "ಕಾಫಿ ಯಾಕೆ ತಂದೆಯೆಂದರೆ ನಿಂತಿದ್ದೇಕೋ?" ಎಂದು ಮತ್ತೆ ಗದರಿದರು. ನಾನು ಆ ಹುಡುಗನ ಕಡೆ ತಿರುಗಿ "ಕಾಫಿ ಬೇಡ. ಹೋಗಪ್ಪ" ಎಂದು ಹೇಳಿ "ಯಾಕ್ರಿ ಕಾಫಿ ಬೇಡ ಅಂತೀರಿ?" ಅಂದೆ. ಅದಕ್ಕವರು "ಇನ್ನು ಸ್ವಲ್ಪ ಹೊತ್ತು ಇರಿ ಗೌಡರೆ. ನನ್ನ ಆರತಿ ಆಂಬೊಡೆ, ಕೀರು ತರ್ತಾಳೆ. ಅವಳು ಮಾಡಿದರೆ ಹೇಗಿರುತ್ತೆ ಅಂತೀರಾ?" ಎಂದು ಮೂಗು ಅರಳಿಸಿ, ಉಸಿರು ಎಳೆಯುತ್ತಾ "ನೋಡಿ, ವಾಸ್ನೆ ಹೇಗೆ ಬರ್ತಿದೆ" ಎಂದರು. "ಎಲ್ಲಿ ಮಾಡ್ತಾ ಇದ್ದಾರೆ?" ಎಂದೆ. ಮುದ್ದುಕೃಷ್ಣ ನಗುತ್ತಾ "ಅವರು ಇಳಿದುಕೊಂಡಿರೋ ಹೋಟೆಲ್‌ನಲ್ಲಿ" ಎಂದರು ಪಿಸುಮಾತಿನಲ್ಲಿ.

ಅಷ್ಟರಲ್ಲಿ ಆರತಿಯವರು ಟಿಫನ್ ಕ್ಯಾರಿಯರ್ ಹಿಡಿದುಕೊಂಡು ಕಾರಿನಿಂದ ಇಳಿದು ಬಂದರು. ಆರತಿಯವರು ನಮಸ್ತೆ ಹೇಳಿ, ಕ್ಯಾರಿಯರ್ ಬಿಚ್ಚಿ ಎಲ್ಲರಿಗೂ ಆಂಬೊಡೆ, ಕೀರು ಕೊಟ್ಟರು. ಪುಟ್ಟಣ್ಣನವರು ತಾವು ಒಂದು ಲೋಟ ಕೀರನ್ನು ಎಡಗೈಯಲ್ಲಿ ಹಿಡಿದುಕೊಂಡು, ಬಲಗೈಯಲ್ಲಿ ಆಂಬೊಡೆ ಹಿಡಿದು "ಆಹಾ, ಏನು ರುಚಿಯಾಗಿದೆ ಅಂತೀರಿ. ನನ್ನ ಅಮ್ಮು ಅಡಿಗೆ ಮಾಡಿದಳು ಎಂದರೆ ತಿನ್ನೋದೇ ಬೇಕಾಗಿಲ್ಲ" ಎಂದರು. ನಾನು ಬೆಪ್ಪನಂತೆ ಪುಟ್ಟಣ್ಣನವರ ಕಡೆ ನೋಡಬೇಕಾಯಿತು. ಏಕೆಂದರೆ ಅವರು ತಿನ್ನದೇನೆ, ಕುಡಿಯದೇನೆ ಆ ಬಗ್ಗೆ ರುಚಿ ವ್ಯಾಖ್ಯಾನ ಮಾಡುತ್ತಿದ್ದರು. ಆರತಿಯವರೂ ಸಹ ಪುಟ್ಟಣ್ಣನವರು ತಿಂದರೋ, ಇಲ್ಲವೋ ಎಂದು ನೋಡುವ ಶ್ರಮ ತೆಗೆದುಕೊಳ್ಳಲಿಲ್ಲ. ಪುಟ್ಟಣ್ಣನವರ ಹೊಗಳಿಕೆಯನ್ನು ಸವಿಯುತ್ತ ಕಿಲ ಕಿಲ ನಗುವಿನಲ್ಲೇ ಮಗ್ನರಾಗಿದ್ದರು. ನಮ್ಮಿಬ್ಬರನ್ನೂ ಮರೆತು ಅವರ ಆನಂದದಲ್ಲೇ ಮಗ್ನರಾಗಿದ್ದ ಅವರಿಗೆ ಕೇಳಿಸದಂತೆ ಮುದ್ದುಕೃಷ್ಣ ನನ್ನೊಡನೆ ಪುನಃ ಪಿಸು ಮಾತಿನಲ್ಲಿ "ಇದು ಆರತಿಯವರು

ಮಾಡಿದ್ದಲ್ಲ ಸಾರ್, ಹೋಟೆಲ್‌ನಲ್ಲಿ ಮಾಡಿದ್ದು. ಈ ಗುಟ್ಟು ಆರತಿಗೊಬ್ಬರಿಗೆ ಗೊತ್ತು" ಎಂದು ಮುಸು ಮುಸು ನಕ್ಕಿದ್ದನ್ನು ಕೇಳಿ ನಾನು ಮತ್ತೊಮ್ಮೆ ಬೆಪ್ಪನಾದೆ.

ಇನ್ನೊಂದು ದಿನ ಪುಟ್ಟಣ್ಣನವರು ಆರತಿಯವರ ಸಂಬಂಧದ ಬಗ್ಗೆ ಬಹಳ ಭಾವುಕರಾಗಿ ಹೇಳುತ್ತಾ" ಏನೋ ನನ್ನ ನಂಬಿ ಬಂದಿದ್ದಾಳೆ. ಆದರೆ ಈ ಚಿತ್ರರಂಗ ಕೆಟ್ಟ ಕ್ಷೇತ್ರ, ಒಂದು ವೇಳೆ ಈ ರಂಗದಲ್ಲಿ ಸೋತರೆ ನನ್ನನ್ನು ನಂಬಿದ ಆಕೆ ಹಾಳಾಗಬಾರದು. ಅದಕ್ಕಾಗಿ ಆಕೆಯ ಜೀವನಕ್ಕೆ ಒಂದು ಶಾಶ್ವತ ಮಾರ್ಗ ಹುಡುಕಬೇಕೆನಿಸಿದೆ, ಚಿತ್ರರಂಗ ಬಿಟ್ಟು ಇನ್ನೇನಾದರೂ ನಿಮಗೆ ಹೊಳೆಯುತ್ತಾ?" ಎಂದರು. ಮಾರ್ಗ ಬೇಕಾದಷ್ಟಿದ್ದರೂ ಪುಟ್ಟಣ್ಣನವರ ಆರ್ಥಿಕ ಪರಿಸ್ಥಿತಿಯ ಅರಿವು ನನಗಿತ್ತು. "ಶಕ್ತಣಕ್ಕೆ ಹೆಚ್ಚು ಹಣ ಇಲ್ಲದೆ ಮಾಡುವ ಕೆಲಸವೆಂದರೆ ಸರ್ಕಾರದಿಂದ ಒಂದು ನಾಲ್ಕು ಎಕರೆ ಜಮೀನು ಮಂಜೂರು ಮಾಡಿಸುವುದು. ಅದಕ್ಕೆ ತೆಂಗಿನ ಗಿಡ ಹಾಕಿ ತೋಟ ಮಾಡಿಸುವುದು" ಎಂದು ಸಲಹೆ ಇತ್ತೆ. ಏಕೆಂದರೆ ನನ್ನ ಹಳ್ಳಿಯಲ್ಲಿ ನನಗೆ ತೋಟವಿದ್ದು, ನನ್ನ ತೋಟದ ಪಕ್ಕದಲ್ಲೇ ಬೇಕಾದಷ್ಟು ಸರ್ಕಾರಿ ಜಮೀನಿತ್ತು. "ಜಮೀನು ಮಂಜೂರು ಮಾಡಿಸಿ" ಎಂದರು. "ನಾನು ಅರ್ಜಿ ಕಳುಹಿಸಿ" ಎಂದೆ ಆದರೆ ಅವರ ಆಮೇಲಿನ ಚಿತ್ರಗಳು ದಿಗ್ವಿಜಯ ಹೊಡೆದು ಇದು ಅವರಿಗೆ ಬೇಕೆನಿಸಲಿಲ್ಲ. ಆತ ತನ್ನನ್ನು ನಂಬಿದ್ದವರ ಬಗ್ಗೆ ಇಟ್ಟಿದ್ದ ಅಭಿಮಾನ ಮತ್ತು ಕಾಳಜಿಗಾಗಿ ಮುದಗೊಂಡೆ.

ಆಮೇಲೆ ಅವರಿಗೆ ಆರೋಗ್ಯ ಕೆಟ್ಟು ಚಿತ್ರರಂಗದಿಂದ ಸರಿದು ಅಜ್ಞಾತವಾಸಕ್ಕೆ ಹೋದದ್ದು ತಿಳಿಯಿತು. ಆಗಾಗ್ಗೆ ಅವರನ್ನು ನೋಡಬೇಕೆಂದು, ಮನಸ್ಸು ಎಳೆಯುತ್ತಿತ್ತು. ಆದರೆ "ಸಾವಿರ ಮೆಟ್ಟಿಲು" ನಿಲ್ಲುವಿಕೆಯಿಂದ ನನ್ನ ಭೇಟಿಯನ್ನು ಅವರು ಹೇಗೆ ತೆಗೆದುಕೊಳ್ಳುತ್ತಾರೋ ಎಂಬ ಶಂಕೆ ನನ್ನನ್ನು ಹಿಡಿದಿಟ್ಟಿತ್ತು.

◆

# ಹೆಡ್ಡನ ಹಟ್ಟಿ

"ಅಮೃತ ಘಳಿಗೆ" ಬಿಡುಗಡೆ ಆಗಿತ್ತು. ಬೇರೊಂದು ಕೆಲಸದ ಮೇಲೆ ಬೆಂಗಳೂರಿಗೆ ಹೋಗಿದ್ದಾಗ ಪುಟ್ಟಣ್ಣನವರನ್ನು ಏಕೆ ನೋಡಬಾರದು? ಎನಿಸಿತು. ಅವರ ಜಯನಗರದ 'ಹೆಡ್ಡನ ಹಟ್ಟಿ'ಗೆ ಹೋದೆ. ಆಗಲೇ ಸಂಜೆಗತ್ತಲು, ಪುಟ್ಟಣ್ಣನವರ ಪತ್ನಿ ಶ್ರೀಮತಿ ನಾಗಲಕ್ಷ್ಮಿಯವರು ಬಾಗಿಲಲ್ಲಿ ನಿಂತಿದ್ದವರು "ಯಾರು ಬೇಕಿತ್ತು?" ಎಂದರು. "ನಾನಮ್ಮ..." ಎಂದೆ. ತಕ್ಷಣ ಗುರುತು ಹಿಡಿದು "ಅಯ್ಯೋ ಬಸವೇಗೌಡರು. ಬನ್ನಿ, ಬನ್ನಿ, ಹೇಗಿದ್ದೀರಿ? ಅವರು ಈಗ ತಾನೆ ಪ್ರವಾಸದಿಂದ ಬಂದು ಮಲಗಿದ್ದಾರೆ. ಎಬ್ಬಿಸುತ್ತೇನೆ" ಎಂದರು. "ಆಮೇಲೆ ಬರುತ್ತೇನೆ. ಎಬ್ಬಿಸಬೇಡಿ" ಎಂದರೂ ಕೇಳಲಿಲ್ಲ.

ಪುಟ್ಟಣ್ಣನವರು ಆರತಿಯವರಿಂದ ಹೊರಬಂದ ನಂತರ ಬೆಂಗಳೂರು ಜಯನಗರ ಬಡಾವಣೆಯಲ್ಲಿ ಒಂದು ಮನೆ ಮಾಡಿ, ಅದನ್ನೇ ತಮ್ಮ ವಸತಿ ಮತ್ತು ಕಛೇರಿಯನ್ನಾಗಿಸಿಕೊಂಡು ತಮ್ಮ ಮನಸ್ಸಿಗಾದ ಆಘಾತವನ್ನು ಮರೆತು ಹೊಸ ಜೀವನವನ್ನು ಇಲ್ಲಿಂದ ಪ್ರಾರಂಭಿಸಿದರು. ಆ ಮನೆಯ ಒಂದು ಗೋಡೆಯಲ್ಲಿ ಶೃಂಗೇರಿ ಶಾರದೆಯ ಚಿತ್ರ, ಅಕ್ಕ ಪಕ್ಕದಲ್ಲಿ ಹಿರಿಯ ಮತ್ತು ಕಿರಿಯ ಜಗದ್ಗುರುಗಳ ಚಿತ್ರಗಳು. ಮತ್ತೊಂದು ಗೋಡೆಯಲ್ಲಿ ಶ್ರೀ ಶಿರಡಿ ಸಾಯಿಬಾಬಾರವರ ಚಿತ್ರ ಅದರ ಕೆಳಗೆ ಪುಟ್ಟಣ್ಣನವರ ಆರಾಧ್ಯ ದೇವತೆ ಭಗವತಿಯ ಚಿತ್ರ, ಅದರ ಪಕ್ಕದಲ್ಲಿ ರಮಣ ಮಹರ್ಷಿಯವರ ಚಿತ್ರ ಅಲಂಕರಿಸಿದ್ದವು. ಭಗವತಿಯ ಚಿತ್ರದ ಮುಂದೆ ಪೂಜಾ ದ್ರವ್ಯಗಳು, ಊದುಬತ್ತಿಯ ಸುವಾಸನೆ, ಈ ವ್ಯವಸ್ಥೆಯ ನಡುವೆ ಪುಟ್ಟಣ್ಣನವರ ಧ್ಯಾನ, ಚಿಂತನೆ, ಅಧ್ಯಯನ ಎಲ್ಲವೂ ನಡೆಯುತ್ತಿದ್ದವು. ಈ ಮನೆಯ ವೈಶಿಷ್ಟ್ಯ ಅವರು ಅದಕ್ಕಿಟ್ಟಿದ್ದ "ಹೆಡ್ಡನ ಹಟ್ಟಿ" ಎಂಬ ಹೆಸರಿನಲ್ಲಿತ್ತು. ಯಾರಾದರೂ ಅವರನ್ನು "ಇದೇನು ನೀವು ಈ ಮನೆಗೆ ಇಂತಹ ಹೆಸರಿಟ್ಟಿದ್ದೀರಿ" ಎಂದು ಕೇಳಿದರೆ ಅವರು ಹೇಳುತ್ತಿದ್ದ ಉತ್ತರ "ಯಾರಿಗೆಲ್ಲಾ ಏನೇನೋ ಮಾಡಲು ಹೋಗಿ ಪೆಟ್ಟು ತಿಂದ ನನಗಿಂತ ಹೆಡ್ಡರು ಯಾರಿದ್ದಾರೆ?" ಎಂಬುದು.

ಆ ಮನೆಯ ವೈಶಿಷ್ಟ್ಯವೆಂದರೆ ಕೂರಲು ಕುರ್ಚಿಗಳಿರಲಿಲ್ಲ. ಚಾಪೆಯ ಮೇಲೆ ಕುಳಿತು ಗೋಡೆಗೆ ಒರಗಿದೆ. ಕೆಲವು ಕ್ಷಣಗಳಲ್ಲೇ ಪುಟ್ಟಣ್ಣನವರು ಬಂದರು. ಬಾಡಿ ಪಂಚೆಯಲ್ಲೇ ಇದ್ದರು, ಮುಖದ ತುಂಬ ಬಿಳಿ, ಕಪ್ಪು ಮಿಶ್ರಿತವಾದ ಬೆಳೆದ ಗಡ್ಡ. ಪೂರ್ಣ ನರೆತಂತೆ ಕಾಣುವ ತಲೆಗೂದಲು. ನನ್ನೆಡೆಗೆ ಬರುವಾಗ ಪ್ರತಿ ಹೆಜ್ಜೆಯನ್ನು ಯೋಚಿಸಿ ಇಟ್ಟಂತಿತ್ತು. ಅಂದರೆ, ಅಷ್ಟು ಸೊರಗಿದ್ದರು. ಆದರೆ ನಗೆ, ಆತ್ಮೀಯತೆ ಮಾಸಿರಲಿಲ್ಲ. ಎಂದಿನಂತೆಯೇ ಎರಡು ಕೈ ನೀಡುತ್ತಾ ಆಲಂಗಿಸಲು ಬಂದರು. ನಾನೂ ಎದ್ದು ನಿಂತು ಕೈ ಚಾಚಿದೆ. ಕಣ್ಣಲ್ಲಿ ನೀರನ್ನು ತಂದುಕೊಂಡರು. "ಎಷ್ಟೊಂದು ಸೊರಗಿದ್ದೀರಾ, ಪುಟ್ಟಣ್ಣ" ಎಂದೆ. ಅವರನ್ನು ನೋಡಿ ನನ್ನ ಕರುಳು ಕಿತ್ತು ಬಂದಂತಾಗಿತ್ತು. "ಹೌದು, ಮುದುಕನಾಗಿಬಿಟ್ಟೆ" ಎಂದರು. ಮುಂದುವರೆದು "ನೀವು ನೋಡಿ, ನನ್ನ ವಯಸ್ಸಿನವರೇ. ಆದರೆ ಎಷ್ಟೊಂದು ಕಳಕಳಿಯಾಗಿದ್ದೀರಿ" ಎಂದು ನನ್ನನ್ನು ಛೇಡಿಸಿದರು. ಸಿಹಿ–ಖಾರ ತರಿಸಿದರು. ಇನ್ನು ಪುನಃ ಪುನಃ ಬರುತ್ತಿರಬೇಕೆಂಬ ಅಣತಿಯ ಮೇಲೆ ಆತ್ಮೀಯತೆಯಿಂದ ಬೀಳ್ಕೊಟ್ಟರು.

ಪುಟ್ಟಣ್ಣನವರು 'ಹೆಡ್ಡನಹಟ್ಟಿ'ಯಲ್ಲಿದ್ದ ದುರ್ದಿನಗಳಲ್ಲಿ ಅನೇಕ ಅಹಿತಕರ ಘಟನೆಗಳು ನಡೆದವು. ಆಗ ಅವರ ಕೈಯಲ್ಲಿ ಕಾಸಿರಲಿಲ್ಲ. ತಿನ್ನಲು ಅನ್ನವಿರಲಿಲ್ಲ ಎಂದೂ ಯಾರಿಗೂ ದೇಹಿ ಎನ್ನದ ಆತ ತನ್ನಿಂದ ಹಣ ಮಾಡಿದ ನಿರ್ಮಾಪಕರ ಮನೆಯ ಬಾಗಿಲಿಗೆ ಹೋಗಿ ತನಗೊಂದು ಚಿತ್ರಮಾಡಲು ಅವಕಾಶಕೊಡಿ, ಕೊನೆಗೆ ಚಿತ್ರಮಾಡಲು ಸಾಲವನ್ನಾದರೂ ಕೊಡಿ ಎಂದು ಅಂಗಲಾಚಿದರೂ ಯಾರೂ ಅವರಿಗೆ ಸಹಾಯ ಹಸ್ತ ನೀಡಲಿಲ್ಲ. ಅಂತಹ ವೇಳೆಯಲ್ಲಿ ಅವರ ಹಳೆಯ ನಿರ್ಮಾಪಕರೊಬ್ಬರು ಅವರಲ್ಲಿ ಬಂದರು. ಆ ನಿರ್ಮಾಪಕರು ಪುಟ್ಟಣ್ಣನವರು ಅತ್ಯಂತ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಕಾಲದಲ್ಲಿ ಅವರಲ್ಲಿಗೆ ಬಂದು ಚಿತ್ರದ ಕಥೆ ಯಾವುದು ಎಂದೂ ಕೇಳಲೂ ಧೈರ್ಯವಿಲ್ಲದೆ, ತಾವು ತೆಗೆದ ಚಿತ್ರಕ್ಕೆ ೨೦ ಲಕ್ಷ ರೂಪಾಯಿ ಹಣ ಹಾಕಿ ಪುಟ್ಟಣ್ಣನವರ ಶ್ರಮದಿಂದ ೫೦ ಲಕ್ಷ ರೂಪಾಯಿ ಸಂಪಾದಿಸಿದವರು.

ಆದರೆ ಈಗಿನ ಪುಟ್ಟಣ್ಣನವರ ಕಷ್ಟದ ಪರಿಸ್ಥಿತಿಯನ್ನರಿತ ಇದೇ ನಿರ್ಮಾಪಕರು ಪುಟ್ಟಣ್ಣನವರಿಗೆ ದೊಡ್ಡ ಉಪಕಾರ ಮಾಡುವವರಂತೆ "ಪುಟ್ಟಣ್ಣನವರೇ ನೀವು ಕಷ್ಟದಲ್ಲಿದ್ದೀರಿ. ಆದುದರಿಂದ ನಿಮಗೊಂದು ಚಿತ್ರ ನಿರ್ದೇಶಿಸಲು ಅವಕಾಶ ಕೊಡಬೇಕು ಅಂತ ಮನಸ್ಸು ಮಾಡಿದ್ದೀನಿ. ಮೊದಲು ಚಿತ್ರಕಥೆ ಮತ್ತು ಸಂಭಾಷಣೆಗಳನ್ನು ಕನ್ನಡಿಯಂತೆ ಸಿದ್ಧಮಾಡಿ ಕೊಡಬೇಕು. ಇದನ್ನು ನನಗೆ ಬೇಕಾದ ಕಡೆ ನಾನು ಬದಲಾಯಿಸಿಕೊಳ್ಳುವ ಸ್ವಾತಂತ್ರ್ಯವಿರಬೇಕು.

ನಾನು ಹೇಳಿದ ಕಲಾವಿದರನ್ನೇ ಹಾಕಿಕೊಳ್ಳಬೇಕು ಮತ್ತು ನಾಲ್ಕು ಲಕ್ಷ ರೂಪಾಯಿಯೊಳಗೆ ಮೊದಲನೇ ಪ್ರತಿ ರೆಡಿಯಾಗಬೇಕು. ಈ ನಾಲ್ಕು ನಿಬಂಧನೆಗೆ ನೀವು ಒಪ್ಪುವುದಾದರೆ ನಾಳೆಯೇ ಮುಂಗಡ ಕೊಡುತ್ತೇನೆ" ಎಂದರು. ಅದಕ್ಕೆ ಪುಟ್ಟಣ್ಣನವರು ತಮ್ಮ ಕೈಲಿದ್ದ ಚಿತ್ರಕಥೆಯ ಪ್ರತಿಯೊಂದನ್ನು ಪರಪರ ಹರಿದು ಆತನ ಮುಖದ ಮೇಲೆ ಎಸೆದದ್ದೇ ಉತ್ತರವಾಗಿತ್ತು.

ಆಗಿನ್ನು ಪುಟ್ಟಣ್ಣನವರು ಮೊದಲ ಸ್ಥಿತಿಗೆ ಬಂದಿರಲಿಲ್ಲ. ದಿನಕಳೆದಂತೆ ಹೆಚ್ಚು ಹೆಚ್ಚಾಗಿ ಪಾರಮಾರ್ಥಿಕದತ್ತ ಸರಿಯುತ್ತಿದ್ದರು. ಒಮ್ಮೆ ತಮ್ಮ ಮತ್ತು ಆರತಿಯವರ ಮಗಳು ಯಶಸ್ವಿನಿಯೊಂದಿಗೆ ಮಾತನಾಡಲಾಗದಿದ್ದ ಸಂದರ್ಭದಲ್ಲಿ ಗೆಳೆಯರೊಬ್ಬರೊಂದಿಗೆ ದುಃಖ ತೋಡಿಕೊಳ್ಳುತ್ತಾ ತಮ್ಮ ಖಾಸಗಿ ಜೀವನದಲ್ಲಿ ಬೇಸರ ಬಂದಿದ್ದು ಶೃಂಗೇರಿಗೆ ಹೋಗಿ ಅವದೂತನಂತೆ ಇದ್ದುಬಿಡುತ್ತೇನೆಂದು ಹೇಳಿದರಂತೆ. ಆದರೆ ಹೋಗಲಿಲ್ಲ. ಇದ್ದಲ್ಲಿಯೇ ನಿರ್ಲಿಪ್ತರಾಗಬಯಸುತ್ತಿದ್ದರು. ಭೋಗ ಜೀವನದ ತುತ್ತ ತುದಿಯನ್ನು ಮುಟ್ಟಿದ್ದ ಪುಟ್ಟಣ್ಣ ಕೊನೆ ಕೊನೆಯಲ್ಲಿ ನೆಲದ ಮೇಲೆ ದಿಂಬು ಹಾಕಿಕೊಂಡು ಮಲಗುತ್ತಿದ್ದ ದಿನಗಳೂ ಇದ್ದವಂತೆ.



"ಪಡುವಾರಹಳ್ಳಿ ಪಾಂಡವರು" ಚಿತ್ರದ ಹಾಡುಗಳ ಧ್ವನಿ ಮುದ್ರಣ ಸಂದರ್ಭದಲ್ಲಿ ಆರ್ಥಿಕ ನೆರವು ನೀಡಿದ ತಿಪ್ಪಣ್ಣ, ಪುಟ್ಟಣ್ಣ ಕಣಗಾಲ್, ಸಂಗೀತ ನಿರ್ದೇಶಕ ವಿಜಯ ಭಾಸ್ಕರ್, ಹಿನ್ನೆಲೆ ಗಾಯಕಿ ಕಸ್ತೂರಿ ಶಂಕರ್, ಸಾಹಿತಿ ದೊಡ್ಡರಂಗೇಗೌಡ.

## ಆರತಿ ಸಹಿತ ಆರತಿ ರಹಿತ


೧೯೮೫ನೇ ಜನವರಿ ೨೭ನೇ ತಾರೀಖು ನನ್ನ ಎರಡನೇ ಮಗಳ ಮದುವೆಯನ್ನು ಹಾಸನದಲ್ಲಿ ನಡೆಸಲು ನಿಶ್ಚಯಿಸಲಾಗಿತ್ತು. ಸಹಜವಾಗಿ ಪುಟ್ಟಣ್ಣನವರು ಈ ಮದುವೆಯಲ್ಲಿ ಬಹಳ ಮುಖ್ಯ ಅತಿಥಿಯಾಗಬೇಕಾಗಿತ್ತು. ಅವರ ಬೆಂಗಳೂರಿನ ಕಛೇರಿಗೆ ದೂರವಾಣಿ ಮಾಡಿದೆ. ಅವರು ಗೊರೂರಿಗೆ "ಮಸಣದ ಹೂವು" ಚಿತ್ರದ ಚಿತ್ರಕಥೆ ರಚನೆಗಾಗಿ ಹೋಗಿರುವುದಾಗಿ ತಿಳಿಯಿತು. ಅಷ್ಟರಲ್ಲಿ ನನ್ನ ಪುಟ್ಟಣ್ಣನವರ ಮಿತ್ರರಾದ ಡಾ: ಸತ್ಯ ಮನೆಗೆ ಬಂದು "ಪುಟ್ಟಣ್ಣನವರು ಗೊರೂರಿನಿಂದ ದೂರವಾಣಿ ಮಾಡಿದ್ದರು. ನಿಮಗೆ ವಿರಾಮವಿದ್ದರೆ ಹೋಗಿ ನೋಡಬೇಕಂತೆ" ಎಂದು ತಿಳಿಸಿದರು. ಮದುವೆಗೆ ಇನ್ನೂ ಒಂದು ವಾರ ಕಾಲಾವಕಾಶವಿತ್ತು. ಮದುವೆಯ ಕರೆಯೋಲೆಯೊಡನೆ ನನ್ನ ಇಬ್ಬರು ಮೊಮ್ಮಕ್ಕಳೊಡನೆ ಹೋದೆ.

ಗೊರೂರಿನ ಆಣೆಕಟ್ಟೆಯ ಸುಂದರ ತಾಣದಲ್ಲಿ ಅತಿಥಿಗೃಹ. ಪುಟ್ಟಣ್ಣನವರು 'ಮಸಣದ ಹೂವು' ನಿರ್ಮಾಪಕರಾದ ತಿಪಟೂರು ಸುಬ್ಬಣ್ಣ ಮತ್ತು 'ಕನ್ನಡಪ್ರಭ' ದಿನಪತ್ರಿಕೆಯ ಟಿ.ಜಿ. ಅಶ್ವತ್ಥನಾರಾಯಣ ಅವರೊಡನೆ ಚಿತ್ರಕಥೆ ಬರೆಯುವುದರಲ್ಲಿ ನಿರತರಾಗಿದ್ದರು. ಬಹಳ ಖುಷಿಯಲ್ಲಿದ್ದರು. ನಮ್ಮನ್ನು ಅವರಿಬ್ಬರಿಗೆ ಪರಿಚಯ ಮಾಡಿಸಿದರು. ಸಕ್ಕರೆಯಿಲ್ಲದ ಕಾಫಿಯ ಆತಿಥ್ಯವಾಯಿತು. ನಮ್ಮಿಬ್ಬರ ಸ್ನೇಹವನ್ನರಿತ ಸುಬ್ಬಣ್ಣ ಮತ್ತು ಅಶ್ವತ್ಥನರಾಯಣ ಅವರು ರೂಮಿನಲ್ಲಿ ನಮ್ಮಿಬ್ಬರನ್ನೇ ಬಿಟ್ಟು ಹೊರ ಹೋದರು.

ಪುಟ್ಟಣ್ಣನವರು "ನೋಡಿ, ಗೌಡರೇ ಯೋಗಾ ಯೋಗ ಹೇಗಿದೆ? ನಿಮ್ಮ ದೊಡ್ಡ ಮಗಳ ಮದುವೆ ೮ ವರ್ಷದ ಹಿಂದೆ ಮೈಸೂರಿನಲ್ಲಾಯಿತು. ಆಗ ನನ್ನ ಕೆಲಸಕ್ಕಾಗಿ ಮೈಸೂರಿನಲ್ಲಿದ್ದೆ, ಈಗ ನಿಮ್ಮ ೨ನೇ ಮಗಳ ಮದುವೆ ಹಾಸನದಲ್ಲಿ ಆಗುತ್ತಿದೆ. ಈಗಲೂ ನನ್ನ ಕೆಲಸಕ್ಕಾಗಿ ಇಲ್ಲಿಯೇ ಬಂದಿದ್ದೇನೆ. ಇದು ಯೋಗಾ ಯೋಗವಲ್ಲದೆ ಮತ್ತೇನು?" ಎಂದರು. ಮುಂದುವರೆದು "ಅಂದು ಆರತಿ ಸಹಿತ

ಪುಟ್ಟಣ್ಣನಾಗಿ ಮೈಸೂರಿಗೆ ಬಂದಿದ್ದೆ, ಇಂದು ಆರತಿ ರಹಿತ ಪುಟ್ಟಣ್ಣನಾಗಿ ಬಂದಿದ್ದೇನೆ" ಎಂದು ಶುಷ್ಕ ನಗೆ ನಕ್ಕರು.

ಪುಟ್ಟಣ್ಣನವರಿಗೆ ಆತ್ಮೀಯರು ಸಿಕ್ಕಾಗ ತಮ್ಮ ಗತಕಾಲದ ನೋವನ್ನೆಲ್ಲ ಹೆಕ್ಕಿ ತೆಗೆದು ನೋಡಿ ಒಂದು ಬಗೆಯ ಸುಖ ಕಾಣುತ್ತಿದ್ದರು. ಅಂದೂ ಸಹ ಅವರು ಅವರ ಮತ್ತು ಆರತಿಯವರ ಸಂಬಂಧ ಪ್ರಾರಂಭವಾದಾಗಿನಿಂದ ಬಿಡುಗಡೆಯಾಗುವವರೆಗೆ ನಡೆದ ಎಷ್ಟೋ ಘಟನೆಗಳನ್ನು ಹೇಳಿದರು. ಹೇಳಿಕೊಳ್ಳುತ್ತಾ ಅತ್ತರು, ನಕ್ಕರು, ಗುಡುಗಿದರು, ತಣ್ಣಗಾದರು.



೧೯೭೧ರಲ್ಲಿ ಟೈಲೋ ರಷ್ಯಾದಲ್ಲಿ ನಡೆಯಲಿದ್ದ ಪ್ರಥಮ ಕನ್ನಡ ಚಲನ ಚಿತ್ರೋತ್ಸವದಲ್ಲಿ "ಶರಪಂಜರ" ಚಿತ್ರ ಪ್ರದರ್ಶನಗೊಳ್ಳಲಿದ್ದು, ಅದರಲ್ಲಿ ಭಾಗವಹಿಸಲು ಹೊರಟಿದ್ದ ನಾಯಕ ನಟಿ ಕಲ್ಪನಾರವರಿಗೆ ಬೀಳ್ಕೊಡುಗೆ ಸಂದರ್ಭದಲ್ಲಿ ಶ್ರೀಕಾಂತ್, ನಿರ್ಮಾಪಕ ಸಿ.ಎಸ್. ರಾಜ, ಕಲ್ಪನಾ, ಸ್ವರ್ಣಮ್ಮ, ಪುಟ್ಟಣ್ಣ ಕಣಗಾಲ್, ಛಾಯಾಗ್ರಾಹಕ ಡಿ.ವಿ. ರಾಜಾರಾಮ್, ನಟ ಶಿವರಾಂ.

# ಅಜ್ಞಾತವಾಸದಲ್ಲಿ ಜ್ಞಾನಾರ್ಜನೆ

ಪುನಃ ಮಾತು ಪ್ರಾರಂಭಿಸಿ "ಸುಮಾರು ೨ ವರ್ಷಗಳ ಕಾಲ ಅಜ್ಞಾತವಾಸದಲ್ಲಿದ್ದೆ. ಎಲ್ಲರೂ ನನ್ನನ್ನು ಕೈಬಿಟ್ಟಿದ್ದರು. ಆರ್ಥಿಕವಾಗಿ ಛಿದ್ರ ಛಿದ್ರವಾಗಿದ್ದೆ. ಆದರೂ ನನ್ನ ಶ್ರೀಮತಿಗೆ ನಮ್ಮ ಸರ್ವಸ್ವವೂ ನಾಶವಾದರೂ ಚಿಂತೆಯಿಲ್ಲ. ಮಕ್ಕಳ ವಿದ್ಯಾಭ್ಯಾಸವನ್ನು ಮಾತ್ರ ನಿಲ್ಲಿಸಬೇಡ ಎಂದು ಹೇಳಿದ್ದೆ. ಸರ್ವಸ್ವ ತಾನೇ ನಮ್ಮಲ್ಲೇನಿತ್ತು? ನನ್ನ ಹೆಂಡತಿಯ ಮೈಮೇಲೆ ಸ್ವಲ್ಪ ಒಡವೆ ಇತ್ತು. ಅದನ್ನು ಮಾರಿಯಾದರೂ ಮಕ್ಕಳ ವಿದ್ಯಾಭ್ಯಾಸವನ್ನು ಮುಂದುವರಿಸುವುದು ನನ್ನ ಉದ್ದೇಶವಾಗಿತ್ತು. ಆದದ್ದೆಲ್ಲಾ ಒಳ್ಳೆಯದಕ್ಕೇ ಆಯಿತೆನ್ನಿ. ನಾನು ಅಜ್ಞಾತವಾಸವಿದ್ದ ಕಾಲದಲ್ಲಿ ಮತ್ತೊಮ್ಮೆ ವಿದ್ಯಾರ್ಥಿಯಾಗಿ ಜ್ಞಾನ ಸಂಪಾದಿಸಿಕೊಂಡೆ" ಎಂದರು.

ಈ ಸಂದರ್ಭದಿಂದ ನಮ್ಮ ವಯಸ್ಸಿನ ಮಾತು ಬಂತು. ಅದನ್ನನುಸರಿಸಿ ನನಗೆ ಯಾವುದೋ ಹಳೆಯ ನೆನಪಾಗಿ "ನೋಡಿ ಪುಟ್ಟಣ್ಣನವರೇ, ನಿಮ್ಮ ಭರವಸೆಯೂ ಏಕೋ ನಮ್ಮ ಮಂತ್ರಿಗಳ ಭರವಸೆಯಂತಾಯಿತಲ್ಲಾ" ಎಂದೆ. 'ಅಂದರೆ' ಎಂದು ಹುಬ್ಬು ಏರಿಸಿದರು. "ನೀವು ನನ್ನನ್ನು ದೊಡ್ಡ ಸ್ಟಾರ್ ಮಾಡ್ತೇನೆ ಎಂದು ಈಗ್ಗೆ ಸುಮಾರು ಹದಿನಾರು ವರ್ಷಗಳ ಹಿಂದೆ ಹೇಳಿದ್ದೀರಿ. ಆ ನಿಮ್ಮ ಮಾತು ನಮ್ಮ ಮಂತ್ರಿಗಳು ಅಡಿಪಾಯದ ಕಲ್ಲುಹಾಕಿ ಕಟ್ಟಡ ಕಟ್ಟದೆ ಕೈಬಿಟ್ಟಂತಾಗಿದೆ. ನಿಮ್ಮ ಭರವಸೆಯನ್ನು ನಂಬಿದ ನಾನೂ, ಭರವಸೆಯಿತ್ತ ನೀವೂ ಮುದುಕರಾದೆವು" ಎಂದೆ. ಕುಳಿತಿದ್ದವರು ಛಂಗನೆ ಮೇಲೆದ್ದು "ಯಾವನ್ರೀ ಅವ್ನು ಮುಠ್ಠಾಳ. ನಮ್ಮನ್ನು ಮುದುಕರು ಅಂದೋನು?" ಎಂದು ಕೂಗಿದರು. ಆ ಕೂಗು ಎಷ್ಟು ಜೋರಾಗಿತ್ತು ಅಂದರೆ, ಅದನ್ನು ಕೇಳಿ ಹೊರಗಡೆ ಇದ್ದ ಸುಬ್ಬಣ್ಣನವರೂ, ಅಶ್ವತ್ಥನಾರಾಯಣರೂ ಗಾಬರಿಯಿಂದ ರೂಮಿನೊಳಕ್ಕೆ ಓಡಿ ಬಂದರು. ಪುಟ್ಟಣ್ಣನವರು ನನ್ನ ಮೊಮ್ಮಕ್ಕಳನ್ನು ಮುದ್ದಿಸಿ ಹಣ್ಣು ಕೊಟ್ಟು ನಮ್ಮನ್ನು ಬೀಳ್ಕೊಟ್ಟರು.

◆

## ಅರಕಲಗೂಡು ಪ್ರವಾಸಿಮಂದಿರದಲ್ಲಿ

ಮದುವೆಗೆ ಇನ್ನೂ ಎರಡು ದಿನವಿದ್ದಾಗ ಈ ಪೂರ್ಣ ಸಂಜೆಯನ್ನು ಪುಟ್ಟಣ್ಣನವರ ಜೊತೆ ಏಕೆ ಕಳೆಯಬಾರದು? ಎನಿಸಿತು. ಅಂತೆಯೇ ದೂರವಾಣಿ ಮೂಲಕ ತಿಳಿಸಿ ಅವರಲ್ಲಿಗೆ ಹೋದೆ. ಗೊರೂರಿನ ಹೇಮಾವತಿ ಅತಿಥಿ ಗೃಹದಲ್ಲಿ ಪುಟ್ಟಣ್ಣನವರನ್ನು ನೋಡಲು ಆಗಾಗ್ಗೆ ಅಭಿಮಾನಿಗಳು, ಚಲನಚಿತ್ರ ರಂಗದವರು, ಬಂಧುಗಳು ಬರುತ್ತಲೇ ಇದ್ದರು. ಆದುದರಿಂದ ಅಂದು ಸಂಜೆ ಅರಕಲಗೂಡು ಪ್ರವಾಸಿಮಂದಿರದಲ್ಲಿ ಒಂದು ರೂಮು ಕಾದಿರಿಸಿದ್ದೆ. ಆಗ ಜನವರಿ ತಿಂಗಳ ಕೊನೆಯ ವಾರವಾಗಿದ್ದು ಬಡವರ ಊಟಿ ಎನಿಸಿದ ಹಾಸನ ಜಿಲ್ಲೆಯಲ್ಲೂ ಸಾಕಷ್ಟು ಸೆಖೆ ಇತ್ತು. ನಾವಿಬ್ಬರೂ ಹರಟೆ ಹೊಡೆಯುತ್ತಾ ಕುಳಿತಿದ್ದೆವು. ಆಗ ಸುಮಾರು ರಾತ್ರಿ ೮ ಗಂಟೆ....

◆



"ರಂಗನಾಯಕಿ" ಚಿತ್ರದ ಚಿತ್ರೀಕರಣದ ಸಂದರ್ಭದಲ್ಲಿ ಪುಟ್ಟಣ್ಣ ಕಣಗಾಲ್ ಮತ್ತು ಆರತಿ ಚಿತ್ರಕಲಾವಿದೆಯೊಬ್ಬರೊಡನೆ.

# ಒಂದು ಹೆಣ್ಣಿನ ಸತ್ಯಕಥೆ

ಅಷ್ಟರಲ್ಲಿ ಪುಟ್ಟಣ್ಣನವರ ಪರಿಚಿತರೊಬ್ಬರು ಹೇಗೋ ನಾವಲ್ಲಿರುವುದನ್ನು ಪತ್ತೆಹಚ್ಚಿ ಅವರನ್ನು ನೋಡಲು ಬಂದರು. ಆದರೆ ಅವರು ಒಬ್ಬರೇ ಬಂದಿರಲಿಲ್ಲ. ಕಣ್ಣು ಕುಕ್ಕುವ ಸೌಂಧರ್ಯದಿಂದೊಡಗೂಡಿದ ಒಬ್ಬ ಯುವತಿ ಕೂಡ ಅವರೊಡನಿದ್ದಳು. ನಮ್ಮ ಈ ಏಕಾಂತದ ಸುಂದರ ಸಂಜೆಯಲ್ಲಿ ಅವರಿಬ್ಬರೂ ಬಂದಿದ್ದು ಪುಟ್ಟಣ್ಣನವರಿಗೆ ಹಿಡಿಸಿದಂತಿರಲಿಲ್ಲ. ಆದರೂ ಅವರನ್ನು ಗೌರವದಿಂದ ಕಂಡರು. ಕುಳ್ಳಿರಿಸಿ ಕ್ಷೇಮ ಸಮಾಚಾರ ವಿಚಾರಿಸಿ ನನಗೂ ಪರಿಚಯಿಸಿದರು. ಬಂದ ಉದ್ದೇಶವೇನೆಂದು ಅವರ ಪರಿಚಿತರನ್ನು ಕೇಳಿದರು. ಅವರು "ಒಂದು ಹುಡುಗಿಗೆ ನಿಮ್ಮ "ಮಸಣದ ಹೂವು"ನಲ್ಲಿ ಒಂದು ಪಾತ್ರ ಕೊಡಬೇಕೆಂದು ಈ ಹಿಂದೆಯೇ ನಿಮ್ಮನ್ನು ಕೇಳಿಕೊಂಡಿದ್ದೆ. ಅದೇ ಈ ಹುಡುಗಿ. ದಯವಿಟ್ಟು ಒಂದು ಅವಕಾಶ ಕೊಡಬೇಕು. ಅಪ್ಪಣೆಯಾದರೆ ಈಗ ೮.೩೦ ಮೈಸೂರಿಗೆ ಬಸ್ಸಿದೆ" ಎಂದು ಕೈಮುಗಿದು ಕಷ್ಟಪಟ್ಟು ತಮ್ಮ ಮಾತನ್ನು ಮುಗಿಸಿದರು. ಆಗ ನನಗೆ ಅರ್ಥವಾಯಿತು. ಇವರೂ ಪುಟ್ಟಣ್ಣನವರನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದಾರೆಂದು. ಪುಟ್ಟಣ್ಣನವರು ದೀರ್ಘವಾಗಿ ಆ ಯುವತಿ ಕಡೆ ನೋಡಿದರು, ಯುವತಿಗೆ ಸುಮಾರು ೨೮ ವರ್ಷ ವಯಸ್ಸಿರಬಹುದು. ಕುಳ್ಳವೂ ಅಲ್ಲದ, ಎತ್ತರವೂ ಅಲ್ಲದ ಮಟ್ಟಸದ ನಿಲುವು. ಹಾಲು ಬಣ್ಣದ ಸುಂದರ ಮೈಕಟ್ಟು, ವಿಶಾಲವಾದ ಆದರೆ ಹೊಳಪು ಕಳೆದ ಸೋತ ಕಣ್ಣುಗಳು. ಫಳ ಫಳ ಹೊಳೆಯುವ ದಂತಪಂಕ್ತಿ, ಅತಿ ಸೌಮ್ಯವಾದ ಮುಖ, ಕೊರಳಲ್ಲಿ ತಾಳಿ. ಪುಟ್ಟಣ್ಣನವರ ನೋಟವನ್ನು ಎದುರಿಸಲಾರದೆ ಆಕೆ ತಲೆ ತಗ್ಗಿಸಿದಳು.

ಪುಟ್ಟಣ್ಣನವರು ಮೃದುವಾಗಿ "ಯಾವುದಾದರೂ ಚಿತ್ರದಲ್ಲಿ ಅಭಿನಯಿಸಿದ್ದೀಯೇನಮ್ಮ?" ಎಂದು ಕೇಳಿದರು. ಆಕೆ ಇಲ್ಲವೆಂಬಂತೆ ತಲೆಯಾಡಿಸಿದಳು. "ನಾಟಕದಲ್ಲಿ..?" ಪುನಃ ಕೇಳಿದರು. ಮೆಲ್ಲನೆ 'ಇಲ್ಲ' ಎಂದಳು, "ಹೋಗಲಿ ಸಂಸಾರದಲ್ಲಿಯಾದರೂ ಸರಿಯಾಗಿ ಪಾತ್ರ ನಿರ್ವಹಿಸಿದ್ದೀಯಾ?"

ಎಂದರು. "ಖಂಡಿತ" ಎಂದು ಆಕೆ ಥಟ್ಟನೆ ನುಡಿದಳು. ಪುಟ್ಟಣ್ಣನವರು ಕೊಂಚ ತಡೆದು "ಹಾಗಿದ್ದಲ್ಲಿ ಚಿತ್ರರಂಗಕ್ಕೆ ಬರಲು ಏಕೆ ಇಚ್ಛಿಸುತ್ತೀಯೇ?" ಎಂದರು. ಅವಳು ತಕ್ಷಣ "ಹೊಟ್ಟೆಗಾಗಿ" ಎಂದಳು. ಪುಟ್ಟಣ್ಣನವರು ಆಕೆಯನ್ನು ಕೆಕ್ಕರಿಸಿನೋಡಿದರು. "ಹಾಗಾದರೆ ನೀನು ಕಲಾವಿದೆಯಲ್ಲ. ನಿಮ್ಮಂಥವರು ಚಿತ್ರರಂಗಕ್ಕೆ ಬಂದೇ ಈ ರಂಗ ಹೊಲಸಾಗಿದೆ. ನಿನ್ನಂಥವರನ್ನು ಪುಟ್ಟಣ್ಣ ತಿರುಗಿಯೂ ನೋಡುವುದಿಲ್ಲವೆಂಬುದು ನಿನಗೆ ಗೊತ್ತಿರಲಿಲ್ಲವೇನು? ಈ ಮನೋಭಾವನೆ ಹೊತ್ತು ನನ್ನನ್ನು ನೋಡಲು ಎಷ್ಟು ಧೈರ್ಯ ನಿನಗೆ?" ಎಂದು ಅಬ್ಬರಿಸಿದರು.

ಆ ಹುಡುಗಿಯನ್ನು ಕರೆದುಕೊಂಡು ಬಂದಿದ್ದವರು ಆಗಲೇ ಜಾಗ ಖಾಲಿ ಮಾಡಲು ಹೊಂಚು ಹಾಕುತ್ತಿದ್ದರು. ಅವರಿಗೆ ನಾನೇ ಪಿಸುಮಾತಿನಲ್ಲಿ ಧೈರ್ಯ ಹೇಳಿದೆ. "ಇನ್ನು ಸ್ವಲ್ಪ ಹೊತ್ತು ಇದ್ದು ಪೂರಾ ನೋಡಿಕೊಂಡು ಹೋಗಿ" ಎಂದು. ಪುಟ್ಟಣ್ಣನವರ ಅಬ್ಬರದಿಂದ ಹುಡುಗಿ ಧೈರ್ಯಗೆಟ್ಟಂತೆ ಕಾಣಲಿಲ್ಲ. ಸೆಟೆದು ಕುಳಿತು ಕೇಳಿದಳು. "ಹೆಣ್ಣಿನ ಗೋಳನ್ನು ಕೇಳಿ ಅವಳನ್ನು ಉದ್ಧರಿಸಲೆಂದೇ ನೀವು ಚಿತ್ರರಂಗದಲ್ಲಿ ಉದ್ಭವಿಸಿರುವಿರೆಂದು ತಿಳಿದಿದ್ದೆ. ಈಗ ನನ್ನ ತಿಳುವಳಿಕೆಗೆ ನನಗೇ ನಾಚಿಕೆಯಾಗುತ್ತಿದೆ. ಹೆಣ್ಣಿನ ಹಾಳಾದ ಬಾಳನ್ನು ಕರುಣೆಯಿಂದ ನೋಡಿ ಅದನ್ನು ಚಿತ್ರಿಸಿ ಅವಳಿಗಾಗಿ ಲಕ್ಷಾಂತರ ಜನ ಮರುಗುವಂತೆ ಮಾಡುವ ನಿಮಗೆ ಹೆಣ್ಣು ನಿಜ ಜೀವನದಲ್ಲಿ ಪಡುವ ನರಕಯಾತನೆಯನ್ನು ಕೇಳುವ ಹೃದಯವೇ ಇಲ್ಲವೆ?" ಎಂದಳು ದಿಟ್ಟತನದಿಂದ.

ಪುಟ್ಟಣ್ಣ ಈ ಮಾತನ್ನು ಕೇಳಿ ಸ್ಥಂಭೀಭೂತರಾದರು. ಸುಮಾರು ಹೊತ್ತು ಮಾತನಾಡಲಿಲ್ಲ, ಕೊನೆಗೊಮ್ಮೆ ಶಾಂತರಾದರು. ದೀರ್ಘವಾಗಿ ಅವಳನ್ನು ಕರುಣೆಯಿಂದ ನೋಡಿ "ಹಾಗಾದರೆ ಸಮಾಜದಲ್ಲಿ ನೀನೂ ಸಹ ನೊಂದಿರುವ ಹೆಣ್ಣು...ಅನ್ನು...ದಯವಿಟ್ಟು ನಿನ್ನ ಸಮಸ್ಯೆ, ಏನು ಹೇಳು?" ಎಂದರು. ಆಕೆ ಸುತ್ತ ಒಮ್ಮೆ ಮೌನವಾಗಿ ಕಣ್ಣಾಡಿಸಿದಳು. ಅವಳ ಮನಸ್ಸಿನ ಇಂಗಿತವನ್ನು ಅರಿತ ಪುಟ್ಟಣ್ಣನವರು "ಪರವಾಗಿಲ್ಲ ಹೇಳು ತಾಯಿ, ಅವರು ನನ್ನ ಆತ್ಮೀಯರು" ಎಂದಾಗ ತನ್ನ ಕಥೆಯನ್ನು ಪ್ರಾರಂಭಿಸಿದಳು ಆಕೆ.

◆

# ವಿದುರನೊಡನೆ ಮದುವೆ

"ನಾನು ಹುಟ್ಟಿದ್ದು ಒಳ್ಳೆಯ ವಂಶದಲ್ಲೆ. ಆದರೆ ನಮ್ಮದು ಬಡ ಕುಟುಂಬ. ನಮ್ಮ ತಂದೆಗೆ ೧೩ ಜನ ಬರೀ ಹೆಣ್ಣು ಮಕ್ಕಳು. ನಮಗೆಲ್ಲಾ ಚೆನ್ನಾಗಿ ಓದಿ ಒಳ್ಳೇ ಗಂಡನನ್ನು ಪಡೆದು ಸುಖವಾಗಿ ಬದುಕಬೇಕೆಂಬ ಆಸೆ ಇತ್ತು. ಆದರೆ ಬಡತನದಿಂದ ಆದದ್ದು ಬೇರೆಯೇ, ನನ್ನೆಲ್ಲ ಸೋದರಿಯರ ಕಥೆಯನ್ನು ಹೇಳಲು ನನಗೆ ಇಚ್ಛೆಯಿಲ್ಲ. ನನ್ನ ಕಥೆಯನ್ನು ಮಾತ್ರ ಹೇಳುತ್ತೇನೆ".

"ನನ್ನ ತಂದೆಗೆ ನನ್ನನ್ನು ಸರಿಯಾದ ವರನಿಗೆ ಕೊಟ್ಟು ಮದುವೆ ಮಾಡಲು ಶಕ್ತಿ ಇರಲಿಲ್ಲ. ನನ್ನ ಹತ್ತೊಂಭತ್ತನೇ ವಯಸ್ಸಿನಲ್ಲೇ ಒಬ್ಬ ವಿದುರನಿಗೆ ಕೊಟ್ಟು ಮದುವೆ ಮಾಡಿದರು. ಅವನಿಗಾಗಲೇ ನಲವತ್ತು ವರ್ಷ ವಯಸ್ಸು, ಮೊದಲನೇ ಹೆಂಡತಿಯ ಮೂರು ಮಕ್ಕಳಿದ್ದರು. ಆದರೂ ನಾನು ಅವನನ್ನು ಕರುಣೆಯಿಂದ ನೋಡಿದೆ. ಅವನ ಮಕ್ಕಳನ್ನು ನನ್ನ ಮಕ್ಕಳಂತೆ ನೋಡಲು ಪ್ರಯತ್ನಿಸಿದೆ. ನನಗೂ ಆತನಿಂದ ಮೂರು ಮಕ್ಕಳಾದವು. ಆದರೆ ನಾನು ನಿರೀಕ್ಷಿಸಿದ ಅಲ್ಪ ಸುಖವೂ ನನಗೆ ಅವನಿಂದ ಸಿಗಲಿಲ್ಲ" ಎಂದು ಕೊನೆಗೊಮ್ಮೆ ಮಾತು ನಿಲ್ಲಿಸಿದಳು. ಕುತೂಹಲದಿಂದ ಕೇಳುತ್ತಿದ್ದ ಪುಟ್ಟಣ್ಣನವರು ಥಟ್ಟನೆ "ಏಕೆ ತಾಯಿ ನಿಲ್ಲಿಸಿದೆ? ಹೇಳು, "ಹೇಳು" ಎಂದರು.

## ಆಕೆ ಪುನಃ ಪ್ರಾರಂಭಿಸಿದಳು.

"ನನ್ನ ಗಂಡ ಮಹಾ ಕುಡುಕ. ಅವನು ಹೆಚ್ಚು ಓದಿಲ್ಲವಾದ್ದರಿಂದ ಯಾವುದೋ ಖಾಸಗಿ ಕಛೇರಿಯಲ್ಲಿ ಕಡಿಮೆ ಸಂಬಳ ತರುವ ಬಡ ನೌಕರ. ಅವನ ಸಂಬಳವೆಲ್ಲಾ ಅವನ ಕುಡಿತಕ್ಕೆ ಸಾಲುತ್ತಿಲ್ಲ. ಸಂಸಾರ ಬೆಳೆದಂತೆ ನಮ್ಮ ಆರ್ಥಿಕ ಪರಿಸ್ಥಿತಿ ಬಿಗಡಾಯಿಸಿತು. ನಾನು ಪಿ.ಯು.ಸಿ ವರೆಗೆ ಓದಿದ್ದೆ. ಒಂದು ಸಲ ನೀನೇಕೆ ಕೆಲಸಕ್ಕೆ ಸೇರಬಾರದು? ಎಂದು ನನ್ನ ಗಂಡ ಕೇಳಿದ. ಗೃಹಿಣಿಯಾಗಿಯೇ ಇರಬೇಕೆಂದು ನನಗೆ ಆಸೆ ಇತ್ತು. ನನ್ನ ಗಂಡನಿಚ್ಛೆಯನ್ನು ನಾನು ತಿರಸ್ಕರಿಸಿದೆ. ಒಂದು ದಿನ ಕಂಠಪೂರ್ತಿ ಕುಡಿದು ಬಂದು ನಾನು ಕೆಲಸಕ್ಕೆ ಸೇರಲೇಬೇಕೆಂದು ಒತ್ತಾಯಿಸಿದ, ನಾನು ಒಪ್ಪಲಿಲ್ಲ. ನನ್ನನ್ನು ದನಕ್ಕೆ ಚೆಚ್ಚುವ ಹಾಗೆ ಚಚ್ಚಿದ".

"ಅಂದು ರಾತ್ರಿಯೆಲ್ಲಾ ಯೋಚಿಸಿ ಕೆಲಸಕ್ಕೆ ಸೇರಲು ನಿರ್ಧರಿಸಿದೆ. ಆದರೆ ನಿಮಗೆ ಗೊತ್ತಲ್ಲ, ಕೆಲಸ ಸಿಗುವುದು ಎಷ್ಟು ಕಷ್ಟ ಎಂಬುದು. ತಕ್ಷಣ ಸರ್ಕಾರಿ ಕೆಲಸ ಸಿಗುವುದು ಅಸಂಭವವಾಗಿತ್ತು. ಖಾಸಗಿ ಕಛೇರಿಗಳಲ್ಲಿ ಕೆಲಸ ಮಾಡಲು ನನಗೆ ಇಚ್ಛೆ ಇರಲಿಲ್ಲವಾದರೂ ಒಂದು ವಾರ ಕಳೆದ ಮೇಲೆ ಒಂದು ಖಾಸಗಿ ಶಾಲೆಯಲ್ಲಿ ಉಪಾಧ್ಯಾಯಿನಿ ಕೆಲಸ ಸಿಕ್ಕಿತು. ಅದು ಒಬ್ಬ ಮಹಿಳೆಯೇ ನಡೆಸುವ, ಎಲ್ಲಾ ಮಹಿಳೆಯರೇ ಕೆಲಸ ಮಾಡುವ ಸಂಸ್ಥೆಯಾಗಿತ್ತು. ಎಲ್ಲವೂ ನನ್ನ ಮನಸ್ಸಿನಂತೆಯೇ ಇತ್ತು. ದೇವರೇ ನನ್ನ ಮೇಲೆ ಕರುಣೆ ತೋರಿದೆಯಲ್ಲ ಎಂದು ದೇವರನ್ನು ವಂದಿಸಿದೆ. ಕೆಲಸ ಸಿಕ್ಕಿದ ದಿನ ತುಂಬ ಸಂತೋಷಪಟ್ಟೆ. ಆದರೆ ಆ ಸಂತೋಷ ಹೆಚ್ಚು ದಿನ ಉಳಿಯಲಿಲ್ಲ".

"ಆ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ಹುಡುಗಿಯರೆಲ್ಲ ಒಬ್ಬರಿಗಿಂತ ಒಬ್ಬರು ಸುಂದರಿಯರಾಗಿದ್ದರು. ಸೌಂದರ್ಯದ ಆಧಾರದ ಮೇಲೆಯೇ ಇಲ್ಲಿ ಅಭ್ಯರ್ಥಿಗಳನ್ನು ಆರಿಸುತ್ತಾರೆಂಬ ಸತ್ಯ ಸಂಗತಿ ಆಮೇಲೆ ನನಗೆ ತಿಳಿಯಿತು. ಸಂಬಳದ ದಿನ ನಾಲ್ಕುನೂರು ರೂಪಾಯಿಗಳಿಗೆ ರುಜು ತೆಗೆದುಕೊಂಡು

ನೂರಾಐವತ್ತು ರೂಪಾಯಿಗಳನ್ನು ಮಾತ್ರ ಕೊಟ್ಟರು. "ಕೇಳುವ ಮೊದಲೇ ಬಾಯಿ ಮುಚ್ಚಿಸಿದರು. ನನಗೆ ಬೇರೆ ಮಾರ್ಗವಿಲ್ಲವಾಗಿ ಅಲ್ಲಿಯೇ ಮುಂದುವರಿಯ-ಬೇಕಾಯಿತು. ಮುಂದುವರಿದಂತೆ ಆ ಸಂಸ್ಥೆ ನನಗೆ ಹೆಚ್ಚು, ಹೆಚ್ಚು ವಿಚಿತ್ರವಾಗಿ ಕಾಣತೊಡಗಿತು. ದಿನಕಳೆದಂತೆ ನನ್ನ ಸಹ ಉಪಾಧ್ಯಾಯಿನಿಯರಲ್ಲಿ ಕೆಲವರು ಹೇಳದೆ ಕೇಳದೆ ಕೆಲಸ ಬಿಟ್ಟು ಹೋಗುತ್ತಿದ್ದರು. ಹಾಗೆಯೇ ಕೆಲವರು ಹೊಸಬರು ಬರುತ್ತಿದ್ದರು. ನನಗೆ ಒಂದೂ ಅರ್ಥವಾಗುತ್ತಿರಲಿಲ್ಲ".

"ಒಂದು ದಿನ ನನ್ನ ಸಂಸ್ಥೆಯ ಮುಖ್ಯಸ್ಥೆಯಿಂದ ನನಗೆ ಕರೆ ಬಂತು. ಕಛೇರಿಯಲ್ಲಿ ಅವರನ್ನು ಭೇಟಿ ಮಾಡಿದೆ. ಮುಗುಳ್ನಗುತ್ತಾ ಸ್ವಾಗತಿಸಿದರು. ಕ್ಷೇಮ ಸಮಾಚಾರ ವಿಚಾರಿಸಿದರು. "ನೀನು ತುಂಬಾ ಒಳ್ಳೆಯ ಹುಡುಗಿ ಎಂದೂ ಎಲ್ಲರೂ ಹೊಗಳುತ್ತಾರೆ" ಎಂದರು. ನಂತರ "ಇಂದು ರಾತ್ರಿ ನಮ್ಮಮನೆಯಲ್ಲಿ ಒಂದು ಚಿಕ್ಕ ಸಮಾರಂಭವಿದೆ. ಸಚಿವರೊಬ್ಬರು ಬರಲಿದ್ದಾರೆ. ಇಂದೇ ನಮ್ಮ ಅಡಿಗೆಯವಳು ರಜೆ ಹಾಕಿದ್ದಾಳೆ. ಅತಿಥಿಗಳನ್ನು ಸರಿಯಾಗಿ ನೋಡುವವರಿಲ್ಲ. ಆದ್ದರಿಂದ ಇಂದು ಸಂಜೆ ಸ್ವಲ್ಪ ನಮ್ಮ ಮನೆಗೆ ಬಂದುಬಿಡಮ್ಮ" ಎಂದರು. ನನಗೆ ಏನೂ ಹೇಳಲು ತೋಚಲಿಲ್ಲ. ಅವರೇ ಕ್ಷಣ ಬಿಟ್ಟು "ದೊಡ್ಡ ದೊಡ್ಡವರೆಲ್ಲ ಬರ್‍ತಾರಮ್ಮ. ಬರುವಾಗ ಚೆನ್ನಾಗಿ ಅಲಂಕಾರ ಮಾಡಿಕೊಂಡು ಬಾ. ಒಂದು ವೇಳೆ ಸಮಾರಂಭ ಮುಗಿಯೋದು ವಿಳಂಬವಾದರೆ ನಮ್ಮ ಮನೆಯಲ್ಲೇ ಉಳಿಯಬೇಕಾಗುತ್ತೆ" ಎಂದು ಮಾತು ಮುಗಿಸಿ ನನ್ನ ಉತ್ತರಕ್ಕೂ ಕಾಯದೆ ಎದ್ದು ಹೊರಟು ಹೋದರು".

◆

# ಕುಡುಕನಿಂದ ಪಾರು

"ನನಗೆ ಬೇರೆ ಮಾರ್ಗವಿರಲಿಲ್ಲ. ಸಂಜೆ ಅವರ ಮನೆಗೆ ಹೋದೆ. ಅದೊಂದು ಭವ್ಯ ಬಂಗಲೆ. ಅದರಲ್ಲಿ ಹತ್ತಾರು ಸುಸಜ್ಜಿತ ಕೊಠಡಿಗಳು. ಅದನ್ನು ಮನೆ ಎನ್ನುವುದಕ್ಕಿಂತ ವಸತಿಗೃಹ ಎಂದರೆ ಹೆಚ್ಚು ಸಮಂಜಸ. ಮನೆಯಲ್ಲಿ ಸಹ ಹೆಚ್ಚು ಆಳುಕಾಳು ಇದ್ದಂತಿರಲಿಲ್ಲ. ಅವಶ್ಯವಾದಷ್ಟೇ ಇದ್ದರು. ನಾನು ಅಡಿಗೆ ಮನೆ ಸೇರಿದೆ. ರಾತ್ರಿ ಸುಮಾರು ೮.೩೦ರ ಹೊತ್ತಿಗೆ ಮಂತ್ರಿಗಳೊಬ್ಬರು ಬಂದರು. ಅವರನ್ನು ಇಳಿಸಿದ ಕಾರು ತಕ್ಷಣ ಹೊರಟುಹೋಯಿತು. ನಮ್ಮ ಸಂಸ್ಥೆಯ ಮುಖ್ಯಸ್ಥೆ ಮತ್ತು ಮಂತ್ರಿಗಳು ಮಹಡಿಯಲ್ಲಿ ಒಂದು ವಿಶಾಲವಾದ ಕೊಠಡಿ ಸೇರಿದರು. ಬಾಟಲಿಗಳು ಓಡಿಯಾಡಿದವು"

"ರಾತ್ರಿ ಸುಮರು ೯.೩೦ಕ್ಕೆ ನಮ್ಮ ಸಂಸ್ಥೆಯ ಮುಖ್ಯಸ್ಥೆಯ ಗಂಡ ನನ್ನ ಕೋಣೆಗೆ ಬಂದ. ಆಗಲೇ ಕುಡಿದಿದ್ದರಿಂದ ಅವನು ತೂರಾಡುತ್ತಿದ್ದ. ಯಾವ ಭಯವೂ ಇಲ್ಲದೆ ನನ್ನನ್ನು ತಬ್ಬಲು ಬಂದ. ನಾನು ದಿಗ್ಭ್ರಮೆಗೊಂಡೆ. ನನ್ನ ಶಕ್ತಿಯನ್ನೆಲ್ಲಾ ಒಟ್ಟು ಸೇರಿಸಿ ನೂಕಿದೆ. "ನೀನು ಮಂತ್ರಿಗಳ ಕೊಠಡಿಯೊಳಗೆ ಹೋಗೋಕೆ ಮುಂಚೆ ನನ್ನ ಆಸೆ ತೀರಿಸು" ಎಂದು ಬಡ ಬಡಿಸುತ್ತ ಮೇಲೇಳತೊಡಗಿದ. ಇಲ್ಲಿಂದ ಓಡಲು ನನ್ನ ಮನಸ್ಸಾಗಲೇ ನಿರ್ಧರಿಸಿತ್ತು. ಓಡಿದೆ, ಓಡಿ ಒಂದು ರಿಕ್ಷಾ ಹಿಡಿದು ಮನೆ ಸೇರಿದೆ" ಎಂದು ಬಿಕ್ಕಿ ಬಿಕ್ಕಿ ಅಳಲು ಪ್ರಾರಂಭಿಸಿದಳು.

ನಾವು ಮೂವರೂ ಮೂಕರಾಗಿ ಕೇಳುತ್ತಿದ್ದೆವು. ಪುಟ್ಟಣ್ಣನವರ ಕಣ್ಣಿನಲ್ಲಿ ನೀರು ಬರುತ್ತಿದ್ದು ಅವರಾಗಲೇ ಭಾವುಕರಾಗಿದ್ದರು. ಎದ್ದು ಆಕೆಯ ಬಳಿಗೆ ಹೋಗಿ "ಅಳಬೇಡ ತಾಯಿ ಅಳಬೇಡ, ಆದರೆ ನಿನ್ನ ಕಥೆಯನ್ನು ಹೇಳುವುದನ್ನು ಮಾತ್ರ ನಿಲ್ಲಿಸಬೇಡ. ಇದನ್ನೇ.... ಇದನ್ನೇ.... ನನ್ನ "ಮಸಣದ ಹೂವು"ನಲ್ಲಿ ತರಬೇಕೆಂದಿದ್ದೇನೆ. ಈಗ ನನಗೆ ಅರಿವಾಯ್ತು, ನನ್ನನ್ನು ನೋಡಲು ನೀನಾಗಿ ಬರಲಿಲ್ಲ. ನನ್ನ ಕನ್ನಡ ತಾಯಿ ನಿನ್ನನ್ನು ಇಲ್ಲಿಗೆ ಕಳುಹಿಸಿದ್ದಾಳೆ. ನಿನ್ನ ಕಥೆಯನ್ನು

ಮುಂದುವರಿಸು ತಾಯಿ, ನಿಲ್ಲಿಸಬೇಡ" ಎಂದು ಅವಳ ಪಕ್ಕದ ಸೋಫಾದಲ್ಲಿ ಕುಳಿತು ಹೇಳಿದರು.

ಆಕೆ ಕಣ್ಣು ಒರೆಸಿಕೊಳ್ಳುತ್ತಾ, ಮುಂದುವರಿಸಿದಳು. "ನಾನು ಮನೆಗೆ ಹೋದಾಗ ನನ್ನ ಮಕ್ಕಳೆಲ್ಲಾ ಮಲಗಿದ್ದರು. ಗಂಡ ಕಂಠಪೂರ್ತಿ ಕುಡಿದಿದ್ದು, ಅರೆ ಎಚ್ಚರವಾಗಿ ಏನನ್ನೋ ಬಡಬಡಿಸುತ್ತಿದ್ದ. ನಾನು ಒಳಗೆ ಕಾಲಿಟ್ಟ ತಕ್ಷಣ ಅವನ ಬಾಯಿಂದ ಬಂದ ಮೊದಲನೇ ಪ್ರಶ್ನೆ "ಹಾದರಗಿತ್ತಿ, ಇಷ್ಟು ಹೊತ್ತಿನ ತನಕ ಯಾವನ ಹತ್ತಿರ ಮಲಗಲು ಹೋಗಿದ್ದೆ?" ಎಂಬುದು. ಅವನ ಈ ಸ್ಥಿತಿಯಲ್ಲಿ ನನ್ನ ಯಾವ ವಿವರಣೆಯೂ ಅವನಿಗೆ ಹಿಡಿಸುವುದಿಲ್ಲವೆಂಬುದು ನನಗೆ ಗೊತ್ತಿತ್ತು. ಅವನ ಸೌದೆ ಏಟುಗಳಿಗೆ ಮೈಯೊಡ್ಡಿದೆ".

◆



"ಬಿಳಿ ಹೆಂಡ್ತಿ" ಚಿತ್ರದ ಪಾತ್ರಧಾರಿ ಅಮೆರಿಕಾದ ಮಾರ್ಗರೇಟ್ ಥಾಂಸನ್ ಅವರಿಗೆ ಬೀಳ್ಕೊಡುಗೆ ಸಮಾರಂಭದಲ್ಲಿ ಪುಟ್ಟಣ್ಣ ಕಣಗಾಲ್ ಮತ್ತಿತರರು.

# ನಮ್ಮ ಸಮಾಜ

"ಬೆಳಿಗ್ಗೆ ಎದ್ದಾಗ ನನ್ನ ಮೈಮನಸ್ಸೆಲ್ಲಾ ಚೂರಾಗಿತ್ತು. ಆದರೆ ನನ್ನ ಗಂಡನ ಮನಸ್ಸು ಒಂದು ಹತೋಟಿಯಲ್ಲಿತ್ತು. ನನ್ನ ಹರಿದ ಮೈಯನ್ನು ನೋಡಿ ಕನಿಕರ ಬಂತೆಂದು ಕಾಣುತ್ತದೆ. ಓಲೈಸುವ ದನಿಯಲ್ಲಿ ರಾತ್ರಿ ನಡೆದದ್ದಕ್ಕೆ ಕ್ಷಮಿಸು ಎಂದು ಕೇಳಿದ. ಅವನ ಈ ಬದಲಾವಣೆ ನನಗೆ ಅನಿರೀಕ್ಷಿತವಾಗಿತ್ತು. ಎದ್ದು ಹೋಗಿ ನನ್ನ ಗಂಡನನ್ನು ತಬ್ಬಿಕೊಂಡು ಬಿಕ್ಕಿದೆ. ಅವನ ಎದೆಯಲ್ಲಿ ನನ್ನ ತಲೆ ಇಟ್ಟು ರಾತ್ರಿ ನಡೆದುದನ್ನೆಲ್ಲ ಹೇಳಿ ನಾನು ಇಂದಿನಿಂದ ಅಲ್ಲಿ ಕೆಲಸಕ್ಕೆ ಹೋಗುವುದಿಲ್ಲ ಎಂದೆ. ಅವನು ಒರಟಾಗಿ ಎರಡೂ ಕೈಗಳಿಂದ ನನ್ನ ಮುಖವನ್ನು ಎತ್ತಿ ತನ್ನ ಮುಖದೆದುರಿಗೆ ಹಿಡಿದುಕೊಂಡು ಬಿಗಿದ ನೋಟದಿಂದ ನನ್ನನ್ನ ದಿಟ್ಟಿಸಿದ, ಆಮೇಲೆ ಅವನ ಮುಖದ ಬಿಗಿ ಸಡಿಲಿಸುತ್ತಾ ಹೋಗಿ ನಸುನಗೆ ಮೂಡಿತು. "ಹಾಗೆ ಮಾತ್ರ ಮಾಡಬೇಡ. ಹೇಗೂ ಸುಖವಾಗಿ ಜೀವನ ನಡೆಯುತ್ತೆ. ಅವರ ಜೊತೆ ಹೊಂದಿಕೊಂಡು ಬಿಡು" ಎಂದ. ಆತನ ಈ ಸಲಹೆ ನನಗೆ ಅಸಹ್ಯವಾಗಿತ್ತು. ಅತ್ತೆ, ಆತ್ಮಹತ್ಯೆ ಮಾಡಿಕೊಳ್ಳುತ್ತೇನೆಂದು ಹೆದರಿಸಿದೆ. ಅದಕ್ಕಾಗಿ ನಾನು ಎದುರಿಸಿದ್ದು ಎದುರಿಸುತ್ತಿರುವುದು ಅಪಾರ" ಎಂದು ಅವಳ ಕಥೆಯನ್ನು ಮುಗಿಸಿದಳು.

ಕಥೆ ಅಪೂರ್ಣಗೊಂಡಂತೆ ಭಾವಿಸಿದ ಪುಟ್ಟಣ್ಣನವರು ಥಟ್ಟನೆ "ಈಗ ನಿನ್ನ ಜೀವನಕ್ಕೆ ಏನು ಮಾಡಿಕೊಂಡಿದ್ದೀಯ"? ಎಂದು ಕೇಳಿದರು. ಆಕೆ "ಅದನ್ನೇ ಮಾಡಬೇಕಾಗಿದೆ. ನನ್ನ ಗಂಡ ಮತ್ತು ಈ ಸಮಾಜ ಬಯಸಿದ್ದನ್ನೇ ಮಾಡಬೇಕಾಗಿದೆ" ಎಂದು ನಿರ್ವಿಕಾರವಾಗಿ ನುಡಿದಳು. ಪುಟ್ಟಣ್ಣನವರು ಆವೇಶ ಬಂದವರಂತೆ ಮೇಲೆದ್ದರು. ನಿಂತಲ್ಲಿ, ನಿಲ್ಲದಾದರು. ಅವರ ಕೈಕಾಲುಗಳು ಅತ್ತ ಇತ್ತ ಗೊತ್ತು ಗುರಿ ಇಲ್ಲದೆ ಚಲಿಸಲಾರಂಭಿಸಿದವು. "ನೋಡಿ, ಗೌಡರೆ ನೋಡಿ... ನೋಡಿ... ನಮ್ಮ ಸಮಾಜವನ್ನು, ಈ ಸಮಾಜವನ್ನೂ, ಈ ದೇಶವನ್ನೂ ಗುಂಡಿಟ್ಟು ಹೊಡೆಯಬೇಕು...ಗುಂಡಿಟ್ಟು ಹೊಡೆಯಬೇಕು." ಎಂದು ಬಡಬಡಿಸಿದರು.

ಆಗಲೇ ರಾತ್ರಿ ಹನ್ನೊಂದೂವರೆ ಗಂಟೆಯಾಗಿತ್ತು. ಜಗತ್ತೆಲ್ಲ ನಿದ್ರಿಸುವಾಗ ಪ್ರಕೃತಿಯ ನಡುವೆ ಕೇವಲ ಒಂಟಿಯಾಗಿ ನಿಂತಿದ್ದ ಆ ಪ್ರವಾಸಿಮಂದಿರದಲ್ಲಿ ನಾವು ನಾಲ್ವರು ಮಾತ್ರ ದಿಕ್ಕೆಟ್ಟಿದ್ದೆವು. ಮೇಟಿ ತಂದಿಟ್ಟಿದ್ದ ಊಟ ತಣ್ಣಗಾಗಿತ್ತು. ಆ ಉದ್ವಿಗ್ನತೆಯ ನಡುವೆ ಕರ್ತವ್ಯ ಪ್ರಜ್ಞೆಯಿದ್ದ ಪುಟ್ಟಣ್ಣನವರು ಆಕೆಯ ಕಡೆಗೆ ತಿರುಗಿ "ಹಸಿದಿದ್ದೀಯಾ ತಾಯಿ, ಊಟ ಮಾಡು" ಎಂದರು. ಎದ್ದು ತಾವೇ ಎಲ್ಲರಿಗೂ ಊಟದ ತಟ್ಟೆಗಳನ್ನು ಇಟ್ಟು "ಊಟ ಮಾಡಿ" ಎಂದರು. ತಾವು ಆಮೇಲೆ ಊಟ ಮಾಡುತ್ತೇನೆಂದರು.

ನಾವು ಊಟ ಮಾಡುವಾಗ ಆ ಯುವತಿ ಊಟ ಮಾಡುವುದನ್ನೇ ನೋಡುತ್ತಿದ್ದರು. ಆಕೆ ತುಂಬ ಹಸಿದಿದ್ದಳೇನೊ, ತಟ್ಟೆಯಲ್ಲಿ ಒಂದು ಚೂರೂ ಬಿಡದಂತೆ ಊಟ ಮಾಡಿದಳು. ಅದನ್ನರಿತ ಪುಟ್ಟಣ್ಣನವರು ಟೇಬಲ್ಲಿನ ಮೇಲಿದ್ದ ತಮ್ಮ ತಟ್ಟೆಯನ್ನೂ ಸಹ ಆಕೆಯ ಮುಂದೆ ಹಿಡಿದು "ಇದನ್ನೂ ತೆಗೆದುಕೋ" ಎಂದರು. ಆಕೆ "ಸಾಕು" ಎಂದರೂ ಬಿಡಲಿಲ್ಲ. ಆಕೆಯ ಊಟವಾದ ಮೇಲೆ "ಏಕೆ ಮಧ್ಯಾಹ್ನ ಊಟ ಮಾಡಲಿಲ್ಲವೇ?" ಎಂದು ಕೇಳಿದರು. ಆಕೆ ಇಲ್ಲವೆಂಬಂತೆ ತಲೆ ಅಲ್ಲಾಡಿಸುತ್ತಾ "ಮಧ್ಯಾಹ್ನದ ಊಟಕ್ಕೆ ದುಡ್ಡಿರಲಿಲ್ಲ" ಎಂದಳು. ಆಗ ಆಕೆಯನ್ನು ಕರೆದುಕೊಂಡು ಬಂದಿದ್ದಾತ "ನಾನು ಬಸ್ಸಿನ ದರ ಮತ್ತು ಊಟ-ತಿಂಡಿಗೆಲ್ಲ ದುಡ್ಡು ಕೊಟ್ಟು ಬಂದಿದ್ದೇನಲ್ಲ?" ಎಂದ. "ನೀವು ಕೊಟ್ಟ ದುಡ್ಡಿನಲ್ಲಿ ನನ್ನ ಗಂಡನಿಗೆ ಮಾಂಸದ ಅಡಿಗೆ ಮಾಡಿ, ರಮಿಸಿ, ಅಪ್ಪಣೆ ಪಡೆದು ಇಲ್ಲಿಗೆ ಬರಬೇಕಾಯಿತು" ಎಂದಳು.

ಪುಟ್ಟಣ್ಣನವರ ಸಿಟ್ಟು ನೆತ್ತಿಗೇರಿತು. ಮತ್ತೊಮ್ಮೆ ಉದ್ವಿಗ್ನರಾದರು. "ಆ ನಿನ್ನ ಗಂಡ, ಚಂಡಾಲನನ್ನು ಕೊಲ್ಲದೇ ಇನ್ನೂ ಬಿಟ್ಟು ಕೊಂಡಿದ್ದೀಯಲ್ಲಾ?"... ಎಂದು ನನ್ನ ಕಡೆ ತಿರುಗಿ "ನೋಡಿ ಗೌಡರೇ, ನಮ್ಮ ಭಾರತೀಯ ತಾಯಂದಿರ ಸಂಕಟವನ್ನು" ಎಂದರು. ನಾವಾರೂ ಮಾತನಾಡಲಿಲ್ಲ. ಆಕೆ ಇನ್ನು ಹೊತ್ತಾಯಿತೆಂದು ಮೇಲೆದ್ದು ಪುಟ್ಟಣ್ಣನವರ ಪಾದಕ್ಕೆ ನಮಸ್ಕರಿಸಿ "ನಿಮ್ಮನ್ನು ನೋಡಿ ನನ್ನ ತಂದೆಯನ್ನು ಕಂಡಂತಾಯಿತು. ನನಗೆ ಹರಸಿ" ಎಂದಳು. ಪುಟ್ಟಣ್ಣನವರು "ನೀನು ಮಹಾತಾಯಿ, ಎಷ್ಟೇ ಕಷ್ಟ ಬಂದರೂ ಅಡ್ಡದಾರಿ ಹಿಡಿಯಬೇಡ. ಋಜು ಮಾರ್ಗದಲ್ಲಿ ಗುರಿ ಸಾಧನೆ ಮಾಡಿ, ಕನ್ನಡತಾಯಿಯಾಗು, ಕರ್ನಾಟಕ ಮಾತೆಯಾಗು, ಭಾರತಮಾತೆಯಾಗು, ಜಗದಂಬೆಯಾಗು" ಎಂದು ಹರಸಿದರು. "ನನ್ನ ಮಸಣದ ಹೂವಿಗೆ ನೀನೂ ಸಹ ಒಂದು ತುಣುಕು ಪ್ರಚೋದಕ ಶಕ್ತಿಯಾದೆ. ಇದನ್ನೆಲ್ಲ ನನ್ನ ಚಿತ್ರಗಳಲ್ಲಿ ತರಬೇಕೆಂದಿದ್ದೇನೆ. ನಿನ್ನ

ಕೈಯಲ್ಲಿ ಒಂದು ಸಣ್ಣ ಪಾತ್ರವನ್ನೂ ಮಾಡಿಸುತ್ತೇನೆ. ನನ್ನ ಕರೆ ಬಂದಾಗ ಬಾ" ಎಂದು ಆಕೆಯನ್ನು ತನ್ನ ಪರಿಚಿತರನ್ನೂ ಬೀಳ್ಕೊಟ್ಟರು.

ಅವರಿನ್ನೂ ವಾಸ್ತವ ಪ್ರಪಂಚಕ್ಕೆ ಬಂದಿರಲಿಲ್ಲ. "ಕೇಳಿದಿರಾ ಗೌಡರೇ, ನಮ್ಮ ಭಾರತೀಯ ಸ್ತ್ರೀಯ ನಿಸ್ಸಹಾಯಕತೆಯನ್ನ...? ಈ ಸಮಾಜವನ್ನು...? ಈ ದೇಶವನ್ನು...?" ಎಂದು ಮುಂದೆ ಏನನ್ನೋ ಹೇಳಲು ಒದ್ದಾಡುತ್ತಿದ್ದರು. ನಾನು "ಗುಂಡಿನಿಂದ ಹೊಡೆಯಬೇಕಲ್ಲವೆ?" ಎಂದು ಹಾಸ್ಯ ಚಟಾಕಿ ಹಾರಿಸಿದೆ. ಅವರಿಗೆ ನನ್ನ ಮೇಲೂ ಸಿಟ್ಟು ಬಂತು. "ನಿಮ್ಮನ್ನೂ ಹೊಡೆಯಬೇಕು" ಎಂದರು "ಏಕೆ ನನ್ನ ಹೆಂಡತಿ–ಮಕ್ಕಳನ್ನು ಕೇಳಿ, ನಾನು ಅವರನ್ನು ಎಷ್ಟು ಚೆನ್ನಾಗಿ ನೋಡಿಕೊಂಡಿದ್ದೇನೆ ಎಂದು" ಎಂದೆ. ಅವರು ಫಕ್ಕನೆ ನಕ್ಕು "ನೀವು ನನ್ನ ಕ್ಲೈಮ್ಯಾಕ್ಸ್ ಹಾಳು ಮಾಡ್ತೀರಾ" ಎಂದರು. "ನಿಮ್ಮ ಕ್ಲೈಮ್ಯಾಕ್ಸ್ ಹಾಳಾದರೂ ಚಿಂತೆಯಿಲ್ಲ, ನಿಮ್ಮ ಆರೋಗ್ಯ ಹಾಳು ಮಾಡ್ಕೋಬೇಡಿ" ಎಂದೆ. ಹಾಗೇ ವಾತಾವರಣ ತಿಳಿಯಾಯಿತು.

ಮರುದಿನದ ಮುಂದಿನ ದಿನ ಪುಟ್ಟಣ್ಣನವರು, ಅವರ ಹಿರಿಯ ಮಗ ಸರ್ವೋತ್ತಮ "ಮಸಣದ ಹೂವು" ನಿರ್ಮಾಪಕ ಸುಬ್ಬಣ್ಣ ಮತ್ತು "ಧರಣಿ ಮಂಡಲ"ದ ನಿರ್ಮಾಪಕರಲ್ಲೊಬ್ಬರಾದ ನರಸಿಂಹಮೂರ್ತಿ ಇವರೆಲ್ಲಾ ಮದುವೆಗೆ ಬಂದುಹೋದರು.

◆



ಪುಟ್ಟಣ್ಣ ಕಣಗಾಲ್ ನಿರ್ದೇಶಿಸುತ್ತಿದ್ದ "ಮೈತ್ರಿ ಫಿಲಂಸ್"ರವರ ಅಪೂರ್ಣ ಚಿತ್ರ "ಸಾವಿರ ಮೆಟ್ಟಿಲು"ವಿನಲ್ಲಿ ವಜ್ರಮುನಿ ಮತ್ತು ಜಯಂತಿ



ನಿರ್ದೇಶಕ ರವಿ, ಪುಟ್ಟಣ್ಣ ಕಣಗಾಲ್, ಸಂಗೀತ ನಿರ್ದೇಶಕ ವಿಜಯ ಭಾಸ್ಕರ್



ಪುಟ್ಟಣ್ಣ ಮತ್ತು ಕಲ್ಪನ

"ನನ್ನ ಇದುವರೆಗಿನ ಈ ಚಿತ್ರರಂಗದ ಅನುಭವವನ್ನು ಯಾವುದಾದರೊಂದು ಶಿಲ್ಪದಲ್ಲಿ ಕಡೆಯಬೇಕೆಂದು ಮಹದಾಸೆಯಿತ್ತು. ಆ ಯೋಗ್ಯತೆಯನ್ನು ಕಲ್ಪನಾಳಲ್ಲಿ ಗುರುತಿಸಿದೆ. ಆಕೆಗೆ ನನ್ನ ಶಕ್ತಿಯನ್ನು ಧಾರೆ ಎರೆದೆ. ಅವಳು ಅದನ್ನು ಪ್ರೀತಿಯಿಂದ, ಭಕ್ತಿಯಿಂದ ಸ್ವೀಕರಿಸಿ ನನ್ನ ಕಲ್ಪನೆಯ ಶಿಲ್ಪವಾಗಿದ್ದಾಳೆ. ಅಲ್ಲದೆ ನನ್ನ ಬಗ್ಗೆ ಅತ್ಯಂತ ಕೃತಜ್ಞತಾ ಭಾವ ಇರಿಸಿದ್ದಾಳೆ." –ಪುಟ್ಟಣ್ಣ ಕಣಗಾಲ್



ಆರತಿ ಮತ್ತು ಪುಟ್ಟಣ್ಣ ಕಣಗಾಲ್, ಮಗಳು ಯಶಸ್ವಿನಿಯೊಡನೆ

"ನಾನು ಆರತಿ ಹತ್ತು ವರ್ಷಗಳ ಕಾಲ ಬಾಳು ನಡೆಸಿದೆವು. ಪರಸ್ಪರ ಪ್ರೀತಿಸುತ್ತಿದ್ದೆವು. ಬೇರೆಯಾದಾಗ ದುಃಖಿಸುವುದು ಸಹಜ. ನನಗೂ ಹೃದಯವಿದೆ. ಆ ವೇಳೆಯಲ್ಲಿ ನನ್ನ ಮನಸ್ಸಿಗೆ ನೋವಾಗುವಂತಹ ಟೀಕೆಗಳು ಪತ್ರಿಕೆಗಳಲ್ಲಿ ಬಂದವು. ಇಷ್ಟಕ್ಕೂ ಆರತಿ ಎಷ್ಟಾದರೂ ನನ್ನ ಮಗಳ ತಾಯಿ ತಾನೆ?"


-ಪುಟ್ಟಣ್ಣ ಕಣಗಾಲ್



"ಗೀತರಚನಾಕಾರ ವಿಜಯ ನಾರಸಿಂಹ, ಪುಟ್ಟಣ್ಣ ಕಣಗಾಲ್ ಮತ್ತು ಸಂಗೀತ ನಿರ್ದೇಶಕ ವಿಜಯ ಭಾಸ್ಕರ್"



ಲೇಖಕರ ಮೊದಲನೆಯ ಮಗಳು ಗೀತಾಂಜಲಿ ಮತ್ತು ಶ್ರೀಕಂಠರವರ ಮದುವೆಗಾಗಿ ಪುಟ್ಟಣ್ಣ ತಾರೀಖು ೯.೬.೧೯೭೬ ರಂದು ಮೈಸೂರಿಗೆ ಬಂದಿದ್ದಾಗ.



ಲೇಖಕರ ಎರಡನೆಯ ಮಗಳು ಲತಾಂಜಲಿ ಮತ್ತು ನರೇಂದ್ರ ಪ್ರಸಾದ್‌ರವರ ಮದುವೆಗಾಗಿ ಪುಟ್ಟಣ್ಣನವರು ತಾರೀಖು ೨೬.೧.೧೯೮೫ ರಂದು ಹಾಸನಕ್ಕೆ ಬಂದಿದ್ದಾಗ.

# ಹೊನ್ನಾವರದಲ್ಲಿ ರಸ ಋಷಿಗಳು

ಅದೊಂದು ದಿನ ಪುಟ್ಟಣ್ಣನವರ ಪತ್ರ ಬಂತು. "ಮಾರ್ಚ್ ಕೊನೆಯವಾರದಲ್ಲಿ "ಮಸಣದ ಹೂವು" ಚಿತ್ರೀಕರಣಕ್ಕಾಗಿ ಹೊನ್ನಾವರದಲ್ಲಿರುತ್ತೇನೆ. ಒಂದು ದಿನ ಬಂದು ಹೋಗಿ" ಎಂದು. ಮಾರ್ಚ್ ೨೫ ರಂದು ಬೆಂಗಳೂರು ಬಿಟ್ಟು ನಾನು ಮಾರನೇ ದಿನ ಬೆಳಿಗ್ಗೆ ಹೊನ್ನಾವರ ತಲುಪಿದಾಗ ಪುಟ್ಟಣ್ಣನವರಾಗಲೇ ಹೊರಾಂಗಣ ಚಿತ್ರೀಕರಣಕ್ಕಾಗಿ ಹೋಗಿಬಿಟ್ಟಿದ್ದರು. ಅದು ಬಿಸಿಲಿನ ಬೇಗೆಯ ಕಾಲ. ಸಂಜೆ ಐದು ಗಂಟೆ ಹೊತ್ತಿಗೆ ವಾಪಸು ಬಂದು ಬಿಡುತ್ತಾರೆಂದು ತಿಳಿದದ್ದರಿಂದ ಸಾಯಂಕಾಲ ೫.೩೦ರ ಹೊತ್ತಿಗೆ ಅವರು ಇಳಿದುಕೊಂಡಿದ್ದ ಅರ್ಬನ್ ಡೆವಲಪ್‌ಮೆಂಟ್ ಬ್ಯಾಂಕ್ ಅತಿಥಿಗೃಹಕ್ಕೆ ಬಂದು ಹೊರಗಡೆ ಹಾಸುಗಲ್ಲಿನ ಮೇಲೆ ಕಾಯುತ್ತಾ ಕುಳಿತೆ. ಅಂದು ಅವರು ನಿಯಮಿತ ವೇಳೆಗೆ ಬರಲಿಲ್ಲ.

ರಾತ್ರಿ ಸುಮಾರು ೭.೩೦ರ ಹೊತ್ತಿಗೆ ಅವರು ಕುಳಿತಿದ್ದ ಮೆಟಡರ್ ವ್ಯಾನ್ ಬಂತು. ಕೇವಲ ಬನಿಯನ್ ಮತ್ತು ಪಂಚೆಯಲ್ಲಿದ್ದ ಪುಟ್ಟಣ್ಣನವರು ಎಡಗೈಯಲ್ಲಿ ತಮ್ಮ ಬೂಟುಗಳನ್ನು ಹಿಡಿದುಕೊಂಡು ಕೆಳಗಿಳಿದರು. ಇನ್ನೊಬ್ಬರು ಅವರಿಗಿಂತ ಸ್ವಲ್ಪ ವಯಸ್ಸಾದವರು ತಾವೂ ಚಪ್ಪಲಿ ಹಿಡಿದು ಆಮೇಲೆ ಇಳಿದರು. ಇವರುಗಳು ಹಣೆಗೆ ಹಚ್ಚಿದ್ದ ವಿಭೂತಿ ನೋಡಿ ಇವರು ಪುಟ್ಟಣ್ಣನವರೋ, ಇಲ್ಲ ಯಾರಾದರೂ ಋಷಿಗಳೋ ಅಥವಾ ಋಷಿಯ ಪಾತ್ರಧಾರಿಗಳೋ ಎಂದು ಅನುಮಾನವಾಯಿತು. ಅಷ್ಟರಲ್ಲಿ ಮೂರನೆಯದಾಗಿ ಒಂದು ಸುಂದರ ರೂಪಿನ ಹೆಣ್ಣು ಇಳಿಯಿತು. ದುರಾದೃಷ್ಟವೆಂದರೆ ಋಷಿ ಕನ್ಯೆಯಂತೆ ಕಾಣುತ್ತಿದ್ದ ಅವರ ಹಣೆಯಲ್ಲೂ ವಿಭೂತಿ ಪಟ್ಟೆ ಇದ್ದು ಕೈಯಲ್ಲಿ ಚಪ್ಪಲಿಗಳಿದ್ದುವು.

ಸಂಜೆಗತ್ತಲಾದ್ದರಿಂದ ಸ್ವಲ್ಪ ಧೈರ್ಯ ತಂದುಕೊಂಡು ಅವರ ಹತ್ತಿರ ಹೋಗಿ "ಪುಟ್ಟಣ್ಣನವರೇ" ಎಂದೆ. ಕತ್ತೆತ್ತಿ ನೋಡಿ ನನ್ನನ್ನು ಕಂಡು ಆನಂದದಿಂದ "ಗೌಡರೇ" ಎಂದು ಕೂಗುತ್ತಾ ಆಲಂಗಿಸಲು ಬಂದರು. ನನಗೆ ನಿಜವಾಗಿಯೂ

ಹೆದರಿಕೆಯಾಯಿತು. ಏಕೆಂದರೆ ಅವರು ಇಳಿಯುವಾಗ ಅವರ ಕೈಯಲ್ಲಿ ಬೂಟುಗಳಿದ್ದುದನ್ನು ಕಂಡಿದ್ದೆ. ತಕ್ಷಣ "ಪುಟ್ಟಣ್ಣನವರೇ ನಿಮ್ಮ ಕೈಯಲ್ಲಿ ಬೂಟುಗಳಿವೆಯಲ್ಲಾ?" ಎಂದು ಹೇಳಿದೆ. ಬಹಳ ತೀಕ್ಷ್ಣವಾಗಿ ತಮ್ಮ ಕೈಯನ್ನು ನೋಡಿಕೊಂಡು "ಹೌದು ಹೌದು. ಅನಾಹುತವಾಗಿತ್ತಲ್ಲ" ಎಂದರು. ಅಷ್ಟರಲ್ಲಿ ಪರಿಸ್ಥಿತಿಯನ್ನರಿತ ನಟಿ ಹೇಮಾಚೌಧುರಿಯವರು ತಕ್ಷಣ ಮುಂದೆ ಬಂದು ಬಾಗಿ ಪ್ರೀತಿ ಮತ್ತು ಭಕ್ತಿಯಿಂದ ಪುಟ್ಟಣ್ಣನವರ ಬೂಟುಗಳನ್ನು ಅವರು ಬೇಡವೆಂದರೂ ತಮ್ಮ ಕೈಗೆ ತೆಗೆದುಕೊಂಡರು.

ಪುಟ್ಟಣ್ಣ ಮೊದಲು ನನ್ನನ್ನು ಛಾಯಾಗ್ರಾಹಕ ಮಾರುತಿರಾವ್, ಆಮೇಲೆ ಹೇಮಾಚೌಧುರಿಯವರಿಗೆ ಪರಿಚಯಿಸುತ್ತಾ "ಇವರು ಡಿ.ಬಿ. ಬಸವೇಗೌಡರು. ಹಾಸನದಲ್ಲೇ ದೊಡ್ಡ ವಕೀಲರು. ಜೊತೆಗೆ ದೇಶದಲ್ಲೇ ದೊಡ್ಡ ರಾಜಕಾರಣಿ, ಮಿಗಿಲಾಗಿ ಚೆನ್ನರಾಯಪಟ್ಟಣದಲ್ಲಿ ದೊಡ್ಡ ತೆಂಗಿನ ತೋಟದ ಒಡೆಯರು...."ಇನ್ನು ಏನೇನೋ ಹೇಳುತ್ತಿದ್ದರು. ಅಷ್ಟರಲ್ಲಿ ನಾನು ನಾಚಿದಂತೆ "ನಾಳೆಗಷ್ಟು ಇರಲಿ ಬಿಡಿ, ಪುಟ್ಟಣ್ಣ" ಎಂದೆ. "ನೀವು ಸುಮ್ಮನಿರಿ ಗೌಡರೆ" ಎಂದು ಗದರಿಸಿದರು. "ಇವರು ನನ್ನನ್ನು ನೋಡಲು ಹಾಸನದಿಂದ ಬಂದಿದ್ದಾರೆ" ಎಂದು ತಮಗೆ ತಾವೇ ಹೆಮ್ಮೆಪಟ್ಟುಕೊಂಡರು.

ಅವರಿನ್ನೂ ಮಹಡಿ ಹತ್ತುವಾಗಲೇ "ಸುಬ್ಬಣ್ಣಾಜಿ..ಸುಬ್ಬಣ್ಣನವರೇ..." ಎಂದು ನಿರ್ವಾಹಕರನ್ನು ಕೂಗಿದರು. ಸುಬ್ಬಣ್ಣನವರು ಓಡಿಬಂದರು. "ಸುಬ್ಬಣ್ಣನವರೇ ಗೌಡರು ಅಷ್ಟು ದೂರದಿಂದ ಬಂದಿದ್ದಾರೆ. ಅವರು ನನ್ನ ಅತಿಥಿ. ಅಂದರೆ ವೈಯಕ್ತಿಕ ಅತಿಥಿ. ಗೌಡರ ಎಲ್ಲಾ ಆತಿಥ್ಯವೂ ನನ್ನ ಸ್ವಂತ ಖರ್ಚಿನಲ್ಲಾಗಬೇಕು. ನಿರ್ಮಾಣ ಖಾತೆಯಿಂದ ಇದಕ್ಕೆ ಖರ್ಚಾಗಬಾರದು" ಎಂದರು.

ಕೊಠಡಿಗೆ ಹೋದಮೇಲೆ ಅವರ ಬೂಟಿನ ರಹಸ್ಯ ತಿಳಿಯಿತು. ಚಿತ್ರೀಕರಣವೇನೋ ೫ ಘಂಟೆಗೇ ಮುಗಿಯಿತಂತೆ, ಆದರೆ ಸ್ವಲ್ಪ ದೂರದಲ್ಲಿದ್ದ ದೇವಸ್ಥಾನಕ್ಕೆ ಹೋದ್ದರಿಂದ ಆ ರೀತಿ ಬರಬೇಕಾಯಿತೆಂದು ರಹಸ್ಯ ಬಯಲು ಮಾಡಿದರು.

## ಕಲಾ ಸಾಧನೆ ಮತ್ತು ಕುಟುಂಬ

ಪುಟ್ಟಣ್ಣನವರು ಬಟ್ಟೆ ಬದಲಿಸಿದ ಮೇಲೆ ನಾನು ಇಳಿದುಕೊಂಡಿದ್ದ ಪ್ರವಾಸಿ ಮಂದಿರಕ್ಕೆ ಬಂದೆವು. ರಾತ್ರಿ ಬೇಸಿಗೆಯ ಧಗೆ ಸ್ವಲ್ಪ ಕಮ್ಮಿಯಾಗಿತ್ತು. ಸಮುದ್ರದ ತಂಗಾಳಿ ತಣ್ಣಗೆ ಬೀಸುತ್ತಿತ್ತು. ನಾಳೆಯ ಕೆಲಸದ ಬಗ್ಗೆ ಎಲ್ಲಾ ವ್ಯವಸ್ಥೆ ಮಾಡಿ ಪುಟ್ಟಣ್ಣನವರು ತುಂಬಾ ಆರಾಮವಾಗಿದ್ದರು. ನಮಗೆ ಯಾವ ಅಡ್ಡಿಯೂ ಇರಲಿಲ್ಲ. ನಿರ್ದೇಶಕ ಪುಟ್ಟಣ್ಣನವರು ನನ್ನ ಕೊಠಡಿಗೆ ಬಂದದ್ದನ್ನು ಕಂಡು ಹಲವರು ಇಣುಕಿ ಹಾಕಿದ್ದು ನಿಜ. ಆದರೆ ನಾನು ಅವರು ಬಂದೇ ಇಲ್ಲ ಎಂದೆ. ಅವರುಗಳು ನನ್ನನ್ನು ದುರುಗುಟ್ಟಿ ನೋಡುತ್ತಾ ಹೊರಟುಹೋದರು.

ಪುಟ್ಟಣ್ಣನವರು "ಇಂದು ತುಂಬಾ ತುಂಬಾ ಮಾತನಾಡಬೇಕೆನಿಸಿದೆ" ಎಂದು ಮಾತು ಪ್ರಾರಂಭಿಸಿದರು. "ಮೊದಲು ನಿಮ್ಮ ವಿಚಾರ ಹೇಳಿ" ಎಂದರು. "ನನ್ನಲ್ಲಿ ಹೇಳುವುದೇನಿದೆ? ನಾನೊಬ್ಬ ಸಾಮಾನ್ಯ ಮನುಷ್ಯ" ಎಂದೆ. "ನನ್ನ ದೃಷ್ಟಿಯಿಂದ ನೀವು ಸುಖೀ ಪುರುಷ, ಒಬ್ಬ ಸಾಧಕ" ಎಂದರು, 'ಹೇಗೆ' ಎಂದೆ. ಮನುಷ್ಯ ಇಹಲೋಕದಲ್ಲಿ ಜನಿಸಿದ ಮೇಲೆ ಎರಡು ಮುಖ್ಯ ಕರ್ತವ್ಯಗಳನ್ನು ಮುಗಿಸಲೇ ಬೇಕಾಗಿದೆ. ಒಂದು ಸ್ವಾರ್ಥದ್ದು, ಮತ್ತೊಂದು ಸಾರ್ವತ್ರಿಕವಾದದ್ದು. ಮೊದಲನೆಯದು ನಾವು ಕಟ್ಟಿಕೊಂಡ ಸಂಸಾರದ ನಿರ್ವಹಣೆ. ಎರಡನೆಯದು ನಮಗೆ ಜನ್ಮತೆತ್ತ ಸಮಾಜ ಮತ್ತು ದೇಶಕ್ಕೆ ನಮ್ಮ ಕೈಲಾದ ಸೇವೆ. ಇದೂ ಒಂದು ಸ್ವಾರ್ಥವೇ ಅನ್ನಿ. ಏಕೆಂದರೆ ಸುಶಿಕ್ಷಿತ ಸಮಾಜ ಮತ್ತು ಸುಖೀ ಸಾಮ್ರಾಜ್ಯ ನಿರ್ಮಾಣವಾದರೆ ಅದರ ಫಲ ಪ್ರತಿಯೊಬ್ಬ ವ್ಯಕ್ತಿಯದೂ ತಾನೆ?" ಎಂದು ನಕ್ಕರು. "ನೋಡಿ ನನ್ನ ಮಾತು ಎಲ್ಲೆಲ್ಲೋ ಹೋಗುತ್ತಿದೆ. ಈಗ ನೀವು ನೋಡಿ ಎರಡರಲ್ಲೂ ಗುರಿಮುಟ್ಟಿದ್ದೀರಿ. ಗಂಡು ಮಕ್ಕಳಿಗೆ ಚೆನ್ನಾಗಿ ಓದಿಸಿ ಅವರ ಜೀವನೋಪಾಯಕ್ಕೆ ಮಾರ್ಗ ತೋರಿಸಿದ್ದೀರಿ. ಹೆಣ್ಣುಮಕ್ಕಳಿಗೆ ಒಳ್ಳೆಯ ಕಡೆ ಕೊಟ್ಟು ಮದುವೆ ಮಾಡಿದ್ದೀರಿ, ಸಾಮಾಜಿಕ ಮತ್ತು ರಾಜಕೀಯ ಜೀವನದಲ್ಲಿ ಸಹ ತೃಪ್ತಿ ಕಂಡಿದ್ದೀರಿ" ಎಂದರು.

ಪುಟ್ಟಣ್ಣನವರ ನೋವು ನನಗೆ ಅರ್ಥವಾಗಿತ್ತು. ತಮ್ಮ ಕಲಾಸಾಧನೆ ಮತ್ತು ಅವರ ಸಂಸಾರದ ಪ್ರಗತಿ ಏಕಕಾಲದಲ್ಲಿ ಆಗಬೇಕಿತ್ತು. ಇವೆರಡರ ಹಾದಿಗಳೂ ಅವರಿಗೆ ಅಷ್ಟು ಸುಲಭವಾಗಿರಲಿಲ್ಲ. ಏಕೆಂದರೆ ಅವರ ಜೀವನ ಸೊನ್ನೆಯಿಂದ ಪ್ರಾರಂಭವಾಗಿತ್ತು. ಈ ಎರಡನ್ನೂ ಸಮತೋಲನವಾಗಿ ತೆಗೆದುಕೊಂಡು ಹೋಗಲು ಒಂದಕ್ಕೆ ಹಣ ಮತ್ತೊಂದಕ್ಕೆ ಹಣ ಮತ್ತು ಶ್ರಮ ಎರಡೂ ಬೇಕಾಗಿತ್ತು ಅವರಲ್ಲಿದ್ದುದು ಕಠಿಣ ಶ್ರಮ, ಪ್ರತಿಭೆ ಮಾತ್ರ, ಅದನ್ನು ಚಿತ್ರರಂಗಕ್ಕೆ ಶಕ್ತಿಮೀರಿ ಖರ್ಚುಮಾಡುತ್ತಾ ಹೋದರು. ಚಿತ್ರರಂಗದಲ್ಲಿ ಹಂತ ಹಂತವಾಗಿ ಮೇಲೇರುತ್ತಾ ಕೊನೆಕೊನೆಗೆ ವೇಗವಾಗಿ ನಡೆದು ರಾಷ್ಟ್ರಮಟ್ಟದ ನಿರ್ದೇಶಕರಾದರು. ಆದರೆ ಅದೇ ವೇಗದಲ್ಲಿ ಆರ್ಥಿಕವಾಗಿ ಕುಸಿಯತೊಡಗಿದರು.

ನಾನು ಅವರಿಗೆ ಧೈರ್ಯದ ಮಾತುಗಳನ್ನಾಡಿದೆ. ಅವರಿಗೆ ಧೈರ್ಯ ತುಂಬಲು ನನ್ನ ಮಾತಿನ ಜಾಡನ್ನೇ ಬದಲಿಸಿದೆ. "ನೀವು ನನ್ನ ಬಗ್ಗೆ ಹೇಳಿದ್ದು ಕೇವಲ ಲೌಕಿಕದ ಮಾತು ಬಿಡಿ. ನೀವೊಂದು ಅಲೌಕಿಕ ವ್ಯಕ್ತಿ, ಮತ್ತು ಶಕ್ತಿ. ನಿಮ್ಮಂಥವರೆಲ್ಲಾ ಅನೇಕ ಕೋಟಿಗಳಲ್ಲಿ ಒಬ್ಬರು. ನೀವು ಕನ್ನಡಕ್ಕೊಂದು ಕಳಶ. ಕನ್ನಡ ಚಿತ್ರರಂಗದ ಕ್ರಾಂತಿ ಪುರುಷ" ಎಂದೆ.

◆



"ಬಿಳಿ ಹೆಂಡ್ತಿ" ಚಿತ್ರೀಕರಣದ ಸಂದರ್ಭದಲ್ಲಿ ಸಾಹಿತಿ ಸುಬ್ಬರಾವ್, ನಿರ್ಮಾಪಕ ಮುದ್ದುಕೃಷ್ಣ, ಪುಟ್ಟಣ್ಣ ಕಣಗಾಲ್.

# ನನ್ನೂರು ಕಾಶ್ಮೀರ

ಮಾತು ಅವರ ತವರೂರು ಕಣಗಾಲ್ ಕಡೆಗೆ ಹೊರಳಿತು. ತುಂಬಾ ಭಾವುಕರಾಗಿ ತನ್ನೂರಿನ ಬಗ್ಗೆ ಏನೇನೋ ಕನಸು ಕಂಡರು. "ನನ್ನೂರು ನಿಸರ್ಗದ ಸ್ವರ್ಗ, ನನ್ನೂರಿನಲ್ಲಿ ಚಿಕ್ಕಮಗಳೂರಿದೆ, ಮಡಿಕೇರಿಯಿದೆ, ಊಟಿಯಿದೆ, ಕಾಶ್ಮೀರವಿದೆ, ಅಲ್ಲಿ ನನಗೆ ಎರಡು ಎಕರೆ ಜಮೀನು ಬೇಕಷ್ಟೆ, ಕೊಡಿಸುವಿರಾ? ಅಲ್ಲಿ ಒಂದು ಕಲ್ಯಾಣಮಂಟಪ, ಒಂದು ದೇವಸ್ಥಾನ, ಒಂದು ಸಂಕಲನ ಕೊಠಡಿ, ಒಂದು ಪ್ರಕ್ಷೇಪಣಾ ಮಂದಿರ (ಪ್ರೊಜೆಕ್ಷನ್ ಥಿಯೇಟರ್) ಕಟ್ಟಿಸುವ ಆಸೆಯಿದೆ. ಅಲ್ಲಿಯೇ ನನ್ನ ಕೊನೆಗಾಲವನ್ನು ಕಳೆಯಬೇಕೆಂದಿದ್ದೇನೆ" ಎಂದು ಹೇಳಿ ನಿಟ್ಟುಸಿರುಬಿಟ್ಟರು.

"ಹೌದು ಅದಕ್ಕೆ ಅಪಾರ ಹಣ ಬೇಕಾಗಿದೆ. ನೀವು ಮನಸ್ಸು ಮಾಡಿ ಕೇಳಿದರೆ ನಿಮ್ಮಿಂದ ಮನುಷ್ಯರಾದ ಅನೇಕ ಕಲಾವಿದರು ನಮ್ಮ ಕನ್ನಡದಲ್ಲಿದ್ದಾರೆ. ನಿಮ್ಮಿಂದ ಹಣ ಮಾಡಿದ ಅನೇಕ ನಿರ್ಮಾಪಕರಿದ್ದಾರೆ" ಎಂದೆ. ಅವರು ಗಂಭೀರರಾದರು. ಆರಾಮವಾಗಿ ಕುಳಿತಿದ್ದವರು ಸೆಟೆದು ಕುಳಿತು "ನಾನು ಭಿಕ್ಷೆ ಬೇಡುವುದಿಲ್ಲ, ನನ್ನಲ್ಲಿನ್ನೂ ಶಕ್ತಿಯಿದೆ. ಪ್ರಾಣ ಇರುವವರೆಗೆ ನನ್ನ ಬೆವರಿನ ಹಣದಿಂದ ಕಟ್ಟುತ್ತೇನೆ" ಎಂದರು. ಅವರ ಸ್ವಾಭಿಮಾನಕ್ಕೆ ನಾನು ತಲೆತಗ್ಗಿಸಬೇಕಾಯಿತು.

# ಮಸಣದ ಹೂವು

ಅಲ್ಲಿಂದ ಮಾತು "ಮಸಣದ ಹೂವು" ಕಡೆಗೆ ಬಂತು. ಪುಟ್ಟಣ್ಣ ಆರಂಭಿಸಿದರು. "ತರಾಸುರವರ "ಮಸಣದ ಹೂವು" ಕನ್ನಡ ಸಾಹಿತ್ಯದಲ್ಲಿ ಒಂದು ಅಪೂರ್ವ ಕಾದಂಬರಿ, ಮೈಸೂರಿನಲ್ಲಿ ಹಿಂದೆ ನಡೆಯುತ್ತಿದ್ದ ವೇಶ್ಯಾವಾಟಿಕೆಯ ಅತ್ಯಂತ ಸಹಜ ಚಿತ್ರ ಅದರಲ್ಲಿ ಮೂಡಿಬಂದಿದೆ, ಸಮಾಜದಲ್ಲಿ ಹಿಂದೆ ಮತ್ತು ಈಗಲೂ ಇಂತಹ ವ್ಯವಸ್ಥೆ ಇತ್ತು ಮತ್ತು ಇದೆ ಎಂಬುದು ಎಲ್ಲರಿಗೂ ಗೊತ್ತಿದೆ. ಜೊತೆಗೆ ಇತ್ತೀಚೆಗೆ ನಡೆಯುತ್ತಿರುವ ಹೆಣ್ಣು ಮಕ್ಕಳ ಅಪಹರಣ, ಮಾರಾಟ, ಈ ಸಂಬಂಧದಲ್ಲಿ ಸಮಾಜದ ಮೇಲ್ಪಟ್ಟ ವ್ಯಕ್ತಿಗಳಿಂದ ಆಗುತ್ತಿರುವ ದೇಶದ್ರೋಹದ ಕೆಲಸ, ಇದನ್ನೆಲ್ಲ ಕೇಳಿ ಆಳವಾಗಿ ಯೋಚಿಸುತ್ತಿದ್ದೆ. ಈ ಸಂಬಂಧದಲ್ಲಿ ಪತ್ರಿಕೆಗಳಲ್ಲಿ ಬರುತ್ತಿದ್ದ ಎಲ್ಲಾ ಸಮಾಚಾರದ ತುಣುಕುಗಳನ್ನು ಕಲೆಹಾಕುತ್ತಿದ್ದೆ. ನಿಜ, ಇದೇನೂ ಹೊಸ ವಿಷಯವಲ್ಲ, ರಾಮಾಯಣ, ಮಹಾಭಾರತದ ಕಾಲದಿಂದ ನಡೆದುಕೊಂಡು ಬಂದಿದೆ.

"ಇದು ವಿಶ್ವದಲ್ಲಿ ಎಲ್ಲಿ ಬೇಕಾದರೂ ಯಾವಾಗ ಬೇಕಾದರೂ ನಡೆಯುವಂತಹುದು. ಈಗ ಹೆಣ್ಣನ್ನು ಆಕರ್ಷಕ ವಸ್ತುವಾಗಿ ಬಳಸುವ ಗುಂಪುಗಳಿವೆ, ಮನೆಗಳಿವೆ, ಸಂಸ್ಥೆಗಳಿವೆ. ಇವೆಲ್ಲವನ್ನೂ ನನ್ನ ಅಧ್ಯಯನದ ತಿಳುವಳಿಕೆಯಲ್ಲಿ, ತಿಳಿದವರ ಅನುಭವದಲ್ಲಿ ಕಂಡುಕೊಂಡೆ. ನಮ್ಮ ಸಮಾಜದಲ್ಲಿ ಯಾವುದು ಬಾಹಿರ ಅಂತಾರೋ ಅದರ ಬಗ್ಗೆ ಕೆಲವು ವ್ಯಕ್ತಿಗಳ ಅಭಿಪ್ರಾಯ ಬೇರೆ ತರಹ ಇರೋದು ತಿಳೀತು. ಎಂತೆಂಥಹ ಮನೋಭಾವನೆಯ ವ್ಯಕ್ತಿಗಳು ಇದರಲ್ಲಿ ಸೇರಿಕೊಂಡಿದ್ದಾರೆನ್ನುವುದೂ ತಿಳಿಯಿತು".

"ಇವುಗಳನ್ನೆಲ್ಲಾ ತೆರೆ ಮೇಲೆ ತಂದು ಸಮಾಜಕ್ಕೆ ತೋರಿಸಬಾರದೇಕೆನ್ನಿಸಿತು. ಇದು ಶಿಕ್ಷಣವೂ ಆಗಬಹುದು. ವಿಚಾರ ಪ್ರಚೋದಕವೂ ಆಗಬಹುದು, ಯುವಪೀಳಿಗೆಗೆ ತಾನಿರುವ ಸಮಾಜದಲ್ಲಿ ಇಂತಹುದೊಂದು ವ್ಯವಸ್ಥೆಯಿದೆ ಅಂತ ಗೊತ್ತಾಗಬೇಕು. ಇದಕ್ಕೇನಾದರೂ ಮಾಡ್ಬೇಕು ಎಂಬುದಾಗಿ ವಿಚಾರ ಮಾಡೋ

ಹಾಗಿರಬೇಕು ಅನ್ನಿಸಿತು. ಇದರ ಜೊತೆಗೆ ಅಸಹಾಯಕ ಹಳ್ಳಿ ಹೆಣ್ಣು ಮಕ್ಕಳನ್ನು ಪೇಟೆಗೆ ಹೇಗೆ ಕರೆದುಕೊಂಡು ಬಂದು ಶೋಷಣೆ ಮಾಡುತ್ತಾರೆ. ಅವರ ಹತ್ತಿರ ದುಡಿಸಿಕೊಂಡು ಕೊನೆಗೆ (ಶೋಷಣೆ) ಅವರ ದುಡಿಮೆಯೇ ಅವರ ಬದುಕು ಆಗುವ ಹಾಗೆ ಮಾಡುತ್ತಾರೆ. ದುಡಿದೂ ದುಡಿದೂ, ಆ ಹೆಣ್ಣು ಮಕ್ಕಳು ಅದನ್ನು ಹೇಗೆ ವ್ಯಾಪಾರ ಮಾಡಿಕೊಳ್ಳುತ್ತಾರೆ ಅನ್ನೋದನ್ನ ಚಿತ್ರ ಮಾಡಬೇಕು ಎನಿಸಿತು. ಅದಕ್ಕಾಗಿಯೇ ಈ ವಿಷಯ ಆರಿಸಿಕೊಂಡೆ, ಈ ವಿಚಾರದಲ್ಲಿ ನನ್ನ ಮನೋಧರ್ಮಕ್ಕೆ ತಕ್ಕಂತೆ ನಿರ್ಮಾಪಕರೂ ಸಹ ನನಗೆ ಸಿಕ್ಕಿದರು" ಎಂದು ನಿರ್ಮಾಪಕ ಸುಬ್ಬಣ್ಣನವರ ಬಗ್ಗೆ ನಾಲ್ಕು ಮೆಚ್ಚಿಗೆಯ ಮಾತನ್ನು ಆಡಿದರು.

"ನೋಡಿ, ಸುಬ್ಬಣ್ಣನವರು ಈ ಉದ್ದಿಮೆಗೆ ಹೊಸಬರೇನಲ್ಲ. ಈ ಹಿಂದೆ ಅನೇಕ ಚಿತ್ರಗಳ ಅನುಭವವಿದೆ. ಇದುವರೆವಿಗೂ ನನಗೆ ಇಂತಹ ನಿರ್ಮಾಪಕರು ಸಿಕ್ಕಿರಲಿಲ್ಲ, ಚಿತ್ರ ನಿರ್ಮಾಣದ ವ್ಯವಸ್ಥೆಯಲ್ಲಿ, ಕೆಲಸದಲ್ಲಿ ನನಗೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟಿದ್ದಾರೆ. ಇದರಲ್ಲಿ ನಿರ್ದೇಶಕ, ನಿರ್ಮಾಪಕ ಎಲ್ಲಾ ನಾನೇ ಎಂಬಂತೆ ನಡೆದುಕೊಳ್ಳುತ್ತಿದ್ದಾರೆ, ಹಾಗಂತಾ ನಾನು ನನ್ನ ಚೌಕಟ್ಟು ಮೀರಿ ಹೋಗಿಲ್ಲ, ಇದನ್ನು ನನ್ನ ಜೀವಿತದ ಅತ್ಯಂತ ಉನ್ನತ ಚಿತ್ರವನ್ನಾಗಿ ಮಾಡುವ ಮಹದಾಸೆ ಹೊಂದಿದ್ದೇನೆ" ಎಂದರು ಪುಟ್ಟಣ್ಣ.

ಮುಂದಿನ ಮಾತು "ಮಸಣದ ಹೂವು"ನ ಕಲಾವಿದರ ಬಗ್ಗೆ ಬಂತು, ಈ ಚಿತ್ರದಿಂದ ಒಂದೆರಡು ಅನರ್ಘ್ಯ ರತ್ನಗಳು ಕನ್ನಡ ಚಿತ್ರರಂಗಕ್ಕೆ ಬರಲಿವೆ, ಅದರಲ್ಲಿ ಬಹು ಮುಖ್ಯಳಾದವಳು ಕಥಾನಾಯಕಿ ಅಪರ್ಣ, ನನ್ನ "ಮಸಣದ ಹೂವಿನ"ಲ್ಲಿ ಬರುವ ಕಥಾನಾಯಕಿ ಏನೂ ಅರಿಯದ ಮುಗ್ಧ ಹಳ್ಳಿ ಹೆಣ್ಣು, ಆ ಪಾತ್ರಕ್ಕೆ ಹೇಳಿ ಮಾಡಿಸಿದಂತಹ ಹೆಣ್ಣು ಅಪರ್ಣ. ಅವಳ ಕಣ್ಣಲ್ಲಿ ನನಗೆ ಪಾರ್ವತಿಯ ಪಾತ್ರ ಹಾಗೂ ಆ ಮುಗ್ಧ ಹೆಣ್ಣಿನ ದೈನ್ಯ ಕಾಣಿಸಿತು. ಏಕೆಂದರೆ ಲೈಂಗಿಕ ದೃಷ್ಟಿಯಿಂದ ನಾನು ಆ ಹೆಣ್ಣಿನ ಪಾತ್ರವನ್ನು ನೋಡಿರಲಿಲ್ಲ. ಆ ಪಾತ್ರಕ್ಕೆ ನನಗೆ ಮುಗ್ಧ ಮುಖ ಬೇಕಾಗಿತ್ತು. ತಿಳಿದ ಜಾಣತನದ ವ್ಯಕ್ತಿ ಬೇಕಾಗಿರಲಿಲ್ಲ. ಸೆಟ್ಟಿನಲ್ಲಿ ಯಾವ ಭಯವೂ ಇಲ್ಲದೆ ಕ್ಯಾಮರಾ ಎದುರಿಸಿ ಅಭಿನಯಿಸುತ್ತಾಳೆ. ನಗು ನಗುತ್ತಾ ಹರಟೆ ಹೊಡೆಯುತ್ತಿದ್ದವಳು ಕ್ಯಾಮರಾ ಚಾಲನೆಯಾದಾಗ ಇದ್ದಕ್ಕಿದ್ದಂತೆ ಕಣ್ಣುಗಳನ್ನು ಬಿಟ್ಟುಕೊಂಡು ಬೇಡಿ ಮಾತನಾಡಬಲ್ಲಳು, ಉದ್ಯಮದಲ್ಲಿ ಹೊಸ ಕಲಾವಿದರಿಗೆ ಅಪರೂಪವಾಗಿ ಸಿಗಬಹುದಾದ ಪಾತ್ರ ಆಕೆಗೆ ಸಿಕ್ಕಿದೆ, ಆಕೆ ಖಂಡಿತ ಅದೃಷ್ಟವಂತೆ, ಪಾರ್ವತಿಯ ಪಾತ್ರ ಅವಳನ್ನು ಪ್ರಸಿದ್ಧಿಯತ್ತ ಕೊಂಡೊಯ್ದರೆ ಆಶ್ಚರ್ಯವೇನಲ್ಲ" ಎಂದರು.

"ಹೆಣ್ಣಿನ ಪಾತ್ರಗಳನ್ನು ಆಯ್ಕೆ ಮಾಡುವುದರಲ್ಲಿ ಮತ್ತು ರೂಪಿಸುವಲ್ಲಿ ನಿಮ್ಮದು ಎತ್ತಿದ ಕೈಯಲ್ಲವೆ" ಎಂದು ಹಾಸ್ಯ ಮಾಡಿ ರೇಗಿಸಿದೆ. "ನನ್ನ ಬಗ್ಗೆ ಈ ನಿಮ್ಮ ತಿಳುವಳಿಕೆ ತಪ್ಪು. ನನ್ನನ್ನು ಜನ ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳೋ ಹಾಗೆ ನನ್ನ ಜೀವನ ಚರಿತ್ರೇನ ಬರೀತೀನಿ. ಅದರಲ್ಲಿ ನೀವೂ ಇರ್ತೀರಿ" ಎಂದರು. ಆದರೆ ಅವರ ಜೀವನ ಕುರಿತು ನಾನು ಬರೆಯಬೇಕಾಗಿ ಬಂದದ್ದೊಂದು ವಿಪರ್ಯಾಸ.

◆



"ರಂಗನಾಯಕಿ" ಚಿತ್ರದ ಚಿತ್ರೀಕರಣದ ಸಂದರ್ಭದಲ್ಲಿ ಪುಟ್ಟಣ್ಣ ಕಣಗಾಲ್, ನಟರಾದ ಅಂಬರೀಷ್ ಹಾಗೂ ರಾಮಕೃಷ್ಣ.

# ಮುಖ್ಯೋಪಾಧ್ಯಾಯ

ಅಷ್ಟು ಹೊತ್ತಿಗಾಗಲೇ ರಾತ್ರಿ ಹನ್ನೆರಡಾಗಿತ್ತು. "ಸುಖವಾಗಿ ನಿದ್ದೆ ಮಾಡಿ ಬೆಳಗ್ಗೆ ೫.೩೦ ಕ್ಕೆ ನನ್ನ ವಸತಿಗೃಹಕ್ಕೆ ಬಂದು ಬಿಡಿ, ನಾಳೆ ಇಡೀ ಚಿತ್ರೀಕರಣದಲ್ಲಿ ನೀವು ನನ್ನ ಜೊತೆ ಇರಬೇಕು" ಎಂದು ಹೇಳಿ ನನ್ನಿಂದ ಬೀಳ್ಕೊಂಡರು. ಬೆಳಗ್ಗೆ ನಾನು ಅವರ ವಸತಿಗೃಹಕ್ಕೆ ಹೋಗುವ ವೇಳೆಗೆ ಎಲ್ಲಾ ನಾಲ್ಕು ಮೆಟಡೋರ್‌ಗಳು ಕಲಾವಿದರು ಮತ್ತು ತಾಂತ್ರಿಕಜ್ಞರಿಂದ ತುಂಬಿ ಹೊರಡಲು ಸಿದ್ಧವಾಗಿದ್ದವು. ಪುಟ್ಟಣ್ಣನವರು ಒಂದರಲ್ಲಿ ಚಾಲಕನ ಪಕ್ಕದಲ್ಲಿ ಕುಳಿತರು. ಒಳಗೆ ನಾನು ಸುಬ್ಬಣ್ಣ, ನರಸಿಂಹಮೂರ್ತಿ, ಹೇಮಾಚೌಧರಿ, ಛಾಯಾಗ್ರಾಹಕ ಮತ್ತು ನೃತ್ಯ ನಿರ್ದೇಶಕರು ಕುಳಿತುಕೊಂಡೆವು. ಯುದ್ಧಕ್ಕೆ ಹೋಗುವ ಟ್ಯಾಂಕರ್‌ಗಳಂತೆ ಎಲ್ಲಾ ವ್ಯಾನುಗಳು ಹೊರಟವು. ಪುಟ್ಟಣ್ಣನವರ ತಂಡದಲ್ಲಿ ಕೆಲಸ ಮಾಡುವುದೆಂದರೆ ಚಟಾಕಿ ಹಾರಿಸುವುದು ಮತ್ತು ರೇಗುವುದು, ಒಂದು ವೇಳೆ ತಪ್ಪಿದರೆ ಕಪಾಳಕ್ಕೆ ಮೋಕ್ಷ ಅನುಭವಿಸುವುದು ತಪ್ಪಿದ್ದಲ್ಲ!

ಅಂದು "ಮಸಣದ ಹೂವು"ನ "ಕನ್ನಡ ನಾಡಿನ ಕರಾವಳಿ, ಕನ್ನಡ ಮಾತೆಯ ಪ್ರಭಾವಳಿ" ಎಂಬ ಹಾಡಿನ ಚಿತ್ರೀಕರಣ. ೬೦ ಜನ ಕಿರಿಯ ಕಲಾವಿದರು ಈ ಹಾಡಿನಲ್ಲಿ ಭಾಗವಹಿಸಿದ್ದರು, ಒಂದೊಂದು ಹಾಡಿನ ತುಣುಕಿಗೆ ಒಂದೊಂದು ಆಕರ್ಷಕವಾದ ಸುಂದರ ತಾಣವನ್ನು ಪುಟ್ಟಣ್ಣನವರು ಆಯ್ಕೆ ಮಾಡಿದ್ದರು. ಪುಟ್ಟಣ್ಣನವರು ಒಂದು ತಾಣದಲ್ಲಿ ಚಿತ್ರೀಕರಣ ಆದ ತಕ್ಷಣ ತರುಣನಂತೆ ಇನ್ನೊಂದು ತಾಣಕ್ಕೆ ಧಾವಿಸುತ್ತಿದ್ದರು. ತಮ್ಮ ವ್ಯಾನಿನ ಚಾಲಕ ಎಲ್ಲಿಯೋ ನಿಂತಿದ್ದು ಬರಲು ತಡವಾದರೆ ತಾವೇ ಚಾಲನೆ ಮಾಡಿ ಹೊರಡುತ್ತಿದ್ದರು. ಅಂದು ನಾನು ಬಹಳ ಮುಖ್ಯ ಅತಿಥಿ ತಾನೆ, ಒಂದು ಸಲ ನಾನು ವ್ಯಾನು ಹತ್ತಲು ತಡವಾದುದಕ್ಕೆ ನನ್ನನ್ನೇ ಬಿಟ್ಟು ಹೊರಟರು. ಆಶ್ಚರ್ಯಕರವಾಗಿ ಪುನಃ ವಾಪಸ್ ಬಂದು "ನಿಮ್ಮನ್ನು ಕೈಬಿಡ್ತೀನಾ ಗೌಡರೆ" ಎಂದು ವ್ಯಾನು ಹತ್ತಿಸಿಕೊಂಡರು. ಮತ್ತೊಮ್ಮೆ ನಿರ್ಮಾಪಕ ಸುಬ್ಬಣ್ಣನವರು ತಕ್ಷಣ

ಹೊರಡಲಿಲ್ಲವೆಂದು ಅವರನ್ನೇ ಬಿಟ್ಟು ಬಂದಿದ್ದರು. ಊಟ, ತಿಂಡಿ, ಕಾಫಿ ವ್ಯವಸ್ಥೆಯಂತೂ ಬೆಂಗಳೂರಿನ ಉತ್ತಮ ದರ್ಜೆಯ ಹೋಟಲ್‌ನಲ್ಲಿದ್ದಂತೆ. ವೇಳೆ ವೇಳೆಗೆ ಊಟ ತಿಂಡಿ ಆಗುತ್ತಿತ್ತು. ಅವರು ಹೀರೋ ಇರಲಿ, ಲೈಟ್‌ಬಾಯ್ ಇರಲಿ, ತಾರತಮ್ಯವಿರಲಿಲ್ಲ. ಎಲ್ಲಿರಿಗೂ ಒಂದೇ ತರಹದ ಆತಿಥ್ಯ.

ಅಂದು ಮಧ್ಯಾಹ್ನದ ಊಟಕ್ಕೆಂದು ಬಿಡುವಾದಾಗಂತೂ ಮರೆಯಲಾಗದ ದೃಶ್ಯ. ದೊಡ್ಡ ಶಾಲೆಯ ವನಭೋಜನ ತಂಡ ಇದ್ದಂತೆ, ರಸ್ತೆ ಪಕ್ಕದಲ್ಲಿ ಸುಮಾರು ಹತ್ತು ಅಡಿ ಆಳದ ವಿಶಾಲವಾದ ಜಾಗ, ಮಧ್ಯದಲ್ಲಿ ಒಂದು ವಿಶಾಲವಾಗಿ ಹರಡಿದ್ದ ಸುಮಾರು ನೂರು ವರ್ಷ ತುಂಬಿದ ಎತ್ತರವಾದ ಮರ, ಸುತ್ತಲೂ ಜಮಖಾನೆಗಳನ್ನು ಹಾಸಲಾಯಿತು. ವ್ಯಾನಿನಲ್ಲಿಟ್ಟಿದ್ದ ಊಟದ ದೊಡ್ಡ ಹಂಡೆಗಳನ್ನು, ಎಲೆಯ ಪಿಂಡಿಗಳನ್ನು ತಂದಿಡಲಾಯಿತು. ಇದನ್ನೆಲ್ಲಾ ವ್ಯವಸ್ಥೆ ಮಾಡುವವರಾರು, ಜವಾನರೇ? ಇಲ್ಲ, ಸ್ವತಃ ನಿರ್ದೇಶಕ ಪುಟ್ಟಣ್ಣನವರೇ ಜಮಖಾನೆ ಹಾಸಲು ಕೈ ಹಾಕುವಾಗ ಕೂರಲು ಇನ್ನಾರಿಗೆ ಧೈರ್ಯ?"

ಅಲ್ಲಿದ್ದ ನಿರ್ಮಾಪಕರು, ಛಾಯಾಗ್ರಾಹಕರು, ನೃತ್ಯ ನಿರ್ದೇಶಕ, ನಿರ್ಮಾಣ ನಿರ್ವಾಹಕರೆಲ್ಲಾ ಸಹ ಉಪಾಧ್ಯಾಯರಿದ್ದಂತೆ, ಕಲಾವಿದರೆಲ್ಲಾ ವಿದ್ಯಾರ್ಥಿಗಳಿದ್ದಂತೆ, ಪುಟ್ಟಣ್ಣನವರು ಮಾತ್ರ ಈ ಪಿಕ್‌ನಿಕ್ ಶಾಲಾ ತಂಡದ ಮುಖ್ಯ ಉಪಾಧ್ಯಾಯ.

ಎಲ್ಲರಿಗೂ ಮೃಷ್ಟಾನ್ನಾ ಭೋಜನದ ವ್ಯವಸ್ಥೆ, ಪುಟ್ಟಣ್ಣನವರಿಗೆ ಮಾತ್ರ ಎರಡೇ ಚಪಾತಿ, ಅದಕ್ಕೆ ಬರೇ ಬೇಯಿಸಿದ ಕಡಲೆಕಾಳು, ಎಲ್ಲರಿಗೂ ಬಡಿಸಲಾಯಿತು, ಇನ್ನೇನು ಊಟ ಪ್ರಾರಂಭಿಸಬೇಕು, ಪುಟ್ಟಣ್ಣನವರು ಎದುರಿಗೆ ಕುಳಿತಿದ್ದ ಹೇಮಾಚೌಧರಿಯ ಎಲೆ ಕಡೆ ನೋಡಿದರು, ಎಲೆ ತುಂಬಾ ಸುವಾಸನಾ ಭರಿತ ಊಟವನ್ನು ಬಡಿಸಲಾಗಿತ್ತು. ಹೇಮಾಚೌಧರಿಯವರು ಒಂದು ತುತ್ತನ್ನಾಗಲೇ ಕೈಲಿ ತೆಗೆದುಕೊಂಡು ಇನ್ನೇನು ಬಾಯಿಗಿಡಬೇಕು. ಪುಟ್ಟಣ್ಣನವರು "ಕಟ್ ಕಟ್" ಎಂದು ಕಿರಿಚಿದರು. ಹೇಮಾಚೌಧರಿಯವರ ಕೈ ಕೆಳಗಿಳಿಯಿತು.

"ಯಾವನೋ ಪ್ರೊಡಕ್ಷನ್ ಮ್ಯಾನೇಜರ್, ಹೇಮಾಗೆ ಬರೀ ಒಂದು ಚಪಾತಿ ಒಂದೈದು ಚಾನ್ಸ್ ಕಡಲೆಕಾಳು ಮಾತ್ರ ಕೊಡಲು ಹೇಳಿರಲಿಲ್ಲವೇ. ನನ್ನ ಚಿತ್ರ ಹಾಳು ಮಾಡುತ್ತೀರಲ್ಲೋ" ಎಂದು ಆರ್ಭಟಿಸುತ್ತಾ ಮೇಲೆದ್ದು ಹೇಮಾಚೌಧರಿಯವರ ಬಡಿಸಿದ್ದ ಎಲೆಯನ್ನು ಪಕ್ಕಕ್ಕೆಳೆದು ಹೊಸ ಎಲೆಯನ್ನು ಹಾಸಿ ತಮ್ಮ ಎಲೆಯಲ್ಲಿದ್ದ ಒಂದು ಚಪಾತಿ, ಸ್ವಲ್ಪ ಕಡಲೆಕಾಳನ್ನು ಹಾಕಿದರು. ಪಾಪ ಹೇಮಾಚೌಧರಿಯವರ ಪಾಡು ನೋಡಬೇಕಿತ್ತು, ಅಳುವುದೊಂದೆ ಬಾಕಿ. ಆದರೆ ಪುಟ್ಟಣ್ಣನವರು ಅದಕ್ಕೂ ಅವಕಾಶ ಕೊಡಲಿಲ್ಲ. "ಊಟ ಮಡು ಮರಿ,

ಹೊಟ್ಟೆ ತುಂಬಾ ಉಣ್ಣು" ಎಂದು ಮಗುವನ್ನು ಸಂತೈಸುವಂತೆ ಸಂತೈಸಿದರು. ಅಷ್ಟರಲ್ಲಿ ಊಟದ ಮಧ್ಯ ಯಾರೋ ಒಬ್ಬರು ಒಂದು ಟಿಫಿನ್‌ಕ್ಯಾರಿಯರ್‌ನಲ್ಲಿ ಪೊಂಗಲ್ ತಂದು ನನಗೆ ಪುಟ್ಟಣ್ಣನವರಿಗೆ, ಛಾಯಾಗ್ರಾಹಕರಿಗೆ ಮತ್ತು ನಿರ್ಮಾಪಕ ಸುಬ್ಬಣ್ಣನವರಿಗೆ ಬಡಿಸಿದರು. ಇದನ್ನು ನೋಡಿದ ಪುಟ್ಟಣ್ಣನವರ ಕಣ್ಣು ಕೆಂಪಗಾಯಿತು. "ತಗೊಂಡು ಬಾರಯ್ಯ, ಇಲ್ಲಿ ಟಿಫಿನ್‌ಕ್ಯಾರಿಯರನ್ನ. ಈ ನಾಲ್ಕು ಎಲೆಯಲ್ಲಿ ಬಡಿಸಿರುವ ಪೊಂಗಲನ್ನು ಪುನಃ ಟಿಫಿನ್‌ಕ್ಯಾರಿಯರಿಗೆ ತುಂಬು ಹ್ಞು, ತಕ್ಷಣ" ಎಂದರು. ಅವನು ಹಾಗೆ ತುಂಬುತ್ತಿರುವಾಗ "ನನ್ನ ತಂಡದಲ್ಲಿ ಒಬ್ಬೊಬ್ಬರಿಗೊಂದು ಮಾಡಬಾರದೆಂದು ಹೇಳಿರಲಿಲ್ಲವೆ?" ಎಂದು ಅಬ್ಬರಿಸಿದರು. ಆಗ ನಮ್ಮನ್ನು ನೋಡಿ ನಕ್ಕವರೆಂದರೆ ಹೇಮಾಚೌಧರಿಯವರೊಬ್ಬರೇ. ಇದು ಪುಟ್ಟಣ್ಣನವರು ತಮ್ಮ ತಂಡದಲ್ಲಿ ಕೆಲಸ ಮಾಡುವ ಎಲ್ಲರೂ ಒಂದೇ ಎಂಬುದಾಗಿ ತಾಳಿದ್ದ ಸಮತಾ ಭಾವನೆಯ ಪ್ರತೀಕವಾಗಿತ್ತು.

ಆದರೆ ಒಂದು ವಿಚಾರ ಮಾತ್ರ ನನಗೆ ಅರ್ಥವಾಗಿರಲಿಲ್ಲ. ಅದೇನೆಂದರೆ ಹೇಮಾಚೌಧರಿಯವರ ಏಕ ಚಪಾತಿ ಮತ್ತು ಐದು ಔನ್ಸ್ ಬೇಯಿಸಿದ ಕಡಲೆಕಾಳು ವಿಚಾರ, ಇದನ್ನು ತಿಳಿಯುವ ಸಂದರ್ಭವೂ ಬಂತು. ಪುಟ್ಟಣ್ಣನವರು ಕ್ಯಾಮರಾ ಇಡಿಸಲು ಕೆಳಗಿಳಿದು ಹೋದ ಮೇಲೆ ಸ್ವತಃ ಹೇಮಾಚೌಧರಿಯವರೇ "ನೋಡಿ ಸಾರ್, ನಮ್ಮ ನಿರ್ದೇಶಕರಿಗೆ ನಾನು ತುಂಬಾ ದಪ್ಪವಾಗಿದ್ದೇನೆ ಎನಿಸಿತಂತೆ, ಪಾತ್ರಕೊಡುವ ದಿನವೇ ಚಿತ್ರೀಕರಣಕ್ಕೆ ಬರುವ ವೇಳೆಗೆ ಸಣ್ಣಗಾಗಿ ಬರಬೇಕು ಎಂದು ಹೇಳಿದ್ದರು. ಇದ್ದಕ್ಕಿದ್ದಂಗೆ ಹೇಗೆ ಸಣ್ಣಗಾಗಲಿ, ಅದಕ್ಕೆ ಇಲ್ಲಿ ಸಣ್ಣ ಮಾಡ್ತಿದ್ದಾರೆ. ಸರಿಯಾಗಿ ಊಟ ಮಾಡಿ ಎಂಟು ದಿನವಾಯ್ತು. ೧೦ ಕೆ.ಜಿ. ಕಳಕೊಂಡಿದ್ದೇನೆ" ಎಂದು ಕಣ್ಣೀರು ಒರೆಸಿಕೊಂಡರು, ಅದು ಆನಂದದ ಕಣ್ಣೀರಿರಬೇಕು ಎಂದು ಕೊಂಡೆ ನಾನು.

ಪುಟ್ಟಣ್ಣನವರ ಚಿತ್ರದ ಕಲಾವಿದರಿಗಂತೂ ಅವರ ಚಿತ್ರದಲ್ಲಿ ಕೆಲಸ ಮಾಡುವುದೆಂದರೆ ತಮ್ಮ ಒಂದು ಸುಯೋಗವೇ ಎಂದು ಭಾವಿಸಿದ್ದರು. ಕಾರಣ ಅವರು ಚಿತ್ರರಂಗದಲ್ಲಿ ಹೊಸಬರಾಗಲಿ, ಹಳಬರಾಗಲಿ ಅವರ ಭವಿಷ್ಯ ಉಜ್ವಲವಾಗುತ್ತಿತ್ತು. ಆದ್ದರಿಂದ ಪುಟ್ಟಣ್ಣನವರ ಚಿತ್ರದಲ್ಲಿ ಅವಕಾಶ ಸಿಕ್ಕುವುದು ತಮ್ಮ ಅದೃಷ್ಟವೆಂದೇ ಭಾವಿಸಿದ್ದರು. ಅದು ನಿಜವೂ ಆಗಿತ್ತು. ಅದಕ್ಕಾಗಿ ಕಲಾವಿದರು ಎಂತಹ ಕಠಿಣ ಪರೀಕ್ಷೆಗೂ ಸಿದ್ಧರಿದ್ದರೆಂಬುದಕ್ಕೆ "ಮಸಣದ ಹೂವು"ನ ಚಿತ್ರೀಕರಣದ ಒಂದು ಉದಾಹರಣೆ.

◆

# ಅಪಾಯ ಸ್ಥಳದಲ್ಲಿ ನೃತ್ಯ

ಅಂದು ಮಧ್ಯಾಹ್ನದ ಮೇಲೆ ನದಿಯ ತೀರದ ಒಂದು ಎತ್ತರವಾದ ಕೋಡು ಕಲ್ಲಿನೆದುರು ನದಿಯ ಸೌಂದರ್ಯವನ್ನು ಸೆರೆ ಹಿಡಿಯುವಂತೆ ಕ್ಯಾಮರಾ ಇಡಲಾಯಿತು. ಆ ಕಲ್ಲಿನ ಪಕ್ಕದಲ್ಲಿ ಒಂದು ಸಾಮಾನ್ಯವಾಗಿ ಬೆಳೆದ ಗೇರು ಗಿಡವಿದ್ದು, ಆ ದೃಶ್ಯಕ್ಕೆ ಅದು ಹೆಚ್ಚು ಶೋಭೆ ನೀಡುತ್ತಿತ್ತು. ಆ ಕಲ್ಲಿನ ಮೇಲೆ ಹೇಮಾಚೌಧುರಿ ಮತ್ತು ಮುಂಬಯಿಯ ನೃತ್ಯ ಕಲಾವಿದನೊಬ್ಬ ಜೋಡಿಯಾಗಿ ನೃತ್ಯ ಮಾಡಬೇಕಿತ್ತು.

ಆದರೆ ಪರಿಸ್ಥಿತಿ ಪ್ರತಿಕೂಲವಾಗಿತ್ತು. ಮಧ್ಯಾಹ್ನದ ಧಗೆಯಿಂದ ಕಲ್ಲು ಕಾದು ಕೆಂಡವಾಗಿತ್ತು, ಅಲ್ಲದೆ ಕಲ್ಲು ಸಮತಟ್ಟಾಗಿರದೆ ಕೂಳೆ, ಕೂಳೆಯಾಗಿತ್ತು. ಇಷ್ಟು ಸಾಲದೆಂಬಂತೆ ಕಲ್ಲಿನ ಮೇಲೆ ಕೇವಲ ಪಾದಗಳನ್ನು ಊರುವಷ್ಟು ಮಾತ್ರ ಜಾಗವಿದ್ದು, ಒಂದು ಹೆಜ್ಜೆ ಹಿಂದೆ ಹಾಕಿದರೆ ಹಳ್ಳಕ್ಕೇ ಬೀಳುವ ಸಂಭವವಿತ್ತು. ಮೊದಲೇ ಸರಿಯಾಗಿ ಊಟವಿಲ್ಲದೆ ಬಿಸಿಲಿಗೆ ಬಳಲಿದ್ದ ಹೇಮಾಚೌಧರಿಯವರಿಗೆ ಅದನ್ನು ನೋಡಿ ಭಯವಾಗಿರಬೇಕು, ಚಾಣಕ್ಯ ಪುಟ್ಟಣ್ಣನವರಿಗೆ ಇದು ಅರ್ಥವಾಗದೇ ಇರುತ್ತದೆಯೇ? "ಏನಮ್ಮಾ ಹೇಮಾ ಭಯವಾದರೆ ಹೇಳು, ಬೇರೆಡೆ ಕ್ಯಾಮರಾ ಇಡುತ್ತೇನೆ. ಆದರೆ ನೀನು ಇಲ್ಲಿಯೇ ನೃತ್ಯ ಮಾಡಿ ಈ ದೃಶ್ಯವನ್ನು ಸೆರೆ ಹಿಡಿದರೆ ನನ್ನಂತಹ ನಿರ್ದೇಶಕರು ನಿನ್ನ ಮನೆ ಮುಂದೆ ಸಾಲುಗಟ್ಟಿ ನಿಲ್ತಾರೆ. ಯಾವುದು ಬೇಕು ಹೇಳು" ಎಂದರು. ಈ ಪ್ರಚೋದನೆಯಿಂದ ಹೇಮಾಚೌಧರಿಯವರು ರೋಮಾಂಚನಗೊಂಡಂತೆ ಕಂಡರು. "ನಿಮ್ಮ ಆಶೀರ್ವಾದದಿಂದ ಅಲ್ಲೇ ಮಾಡುತ್ತೇನೆ ಸಾರ್" ಎಂದು ಯಾರ ಸಹಾಯವೂ ಇಲ್ಲದೆ ಆ ಕಲ್ಲನ್ನು ಏರಿಯೇ ಬಿಟ್ಟರು. ತಮ್ಮನ್ನು ತಾವು ಮರೆತು ನರ್ತಿಸಿದರು. ಈ ದೃಶ್ಯದ ಚಿತ್ರೀಕರಣ ಅದ್ಭುತವಾಗಿ ಮೂಡಿಬಂದಿತ್ತು. ಪಾಪ ಆಕೆಯ ಕಾಲಿನಿಂದ ರಕ್ತ ಇಳಿಯುತ್ತಿದ್ದುದು ಗೊತ್ತಾದುದು ಆಕೆ ಕೆಳಗೆ ಇಳಿದ ಮೇಲೆಯೆ.

ಅಂದು ಸೂರ್ಯ ಮುಳುಗುವುದರೊಳಗೆ ಹೊನ್ನಾವರ ಪಟ್ಟಣಕ್ಕೆ ಒತ್ತಿಕೊಂಡಿರುವಂತಹ ಸಮುದ್ರಕ್ಕೆ ನದಿಗಳು ಸಂಧಿಸುವ ಸಂಗಮದ ತಾಣದಲ್ಲಿ ಒಂದು ದೃಶ್ಯವನ್ನು ತೆಗೆಯಲು ನಿಶ್ಚಯಿಸಿಯಾಗಿತ್ತು. ಏಕೆಂದರೆ ಮಾರನೆಯ ದಿನ ಉಡುಪಿ ಗೋಕರ್ಣಗಳಲ್ಲಿ ಚಿತ್ರೀಕರಣ ಮಾಡಲು ವ್ಯವಸ್ಥೆಗೊಳಿಸಲಾಗಿತ್ತು. ಆದ್ದರಿಂದ ಪುಟ್ಟಣ್ಣನವರು ಎಲ್ಲರನ್ನೂ ಶರವೇಗದಲ್ಲಿ ಕರೆದುಕೊಂಡು ಬಾಡಿಗೆಗೆ ಪಡೆದಿದ್ದ ಯಂತ್ರಚಾಲಿತ ದೋಣಿಯನ್ನು ಹತ್ತಿದಾಗಲೇ ಸಂಜೆ ೬ರ ಸಮಯ. ಎಷ್ಟು ಅವಸರವಾಗಿ ಹೋದರೂ ನಾವು ಸಂಗಮ ಸ್ಥಳ ತಲುಪುವಾಗ ಸೂರ್ಯ ಮುಳುಗಿದ್ದ. ಪುಟ್ಟಣ್ಣನವರು ರಾಜಿಗೆ ವಿರುದ್ಧವಾದ ವ್ಯಕ್ತಿತಾನೆ "ದೋಣಿಯನ್ನು ಹಿಂತಿರುಗಿಸಿ ನಾಳೆ ನೋಡೋಣ" ಎಂದು ಕೂಗು ಹಾಕಿದರು.

◆



"ಫಲಿತಾಂಶ" ಚಿತ್ರದ ಚಿತ್ರೀಕರಣದಲ್ಲಿ ಪುಟ್ಟಣ್ಣ ಮತ್ತು ನಟಿ ಶುಭ.

# ಸಿನೆಮಾ ಹೀರೋ

ಆದರೆ ಅಷ್ಟರಲ್ಲಿ ಆಗಬಾರದ್ದು ಆಗಿಹೋಗಿತ್ತು, ನಮ್ಮ ದೋಣಿ ದಡಕ್ಕೆ ಬರುಬರುತ್ತಾ ದಡದಲ್ಲಿ ಚಿತ್ರತಾರೆಯರನ್ನು ನೋಡಲು ನೆರೆದಿದ್ದ ರಸಿಕರನ್ನು ನೋಡಿ ನಮಗೆ ದಿಗ್ಭ್ರಮೆಯಾಯಿತು. ಸುಮಾರು ೨ ಸಾವಿರ ಜನಸ್ತೋಮ. ಅದರಲ್ಲಿ ಸರಿಯಾದ ಪ್ರಜ್ಞೆಯಿದ್ದವರೇ ಕಡಿಮೆ. ಅನೇಕ ಜನ ಅವರಲ್ಲಾಗಲೇ ತೂರಾಡುತ್ತಿದ್ದರು. ಸಿಳ್ಳೆ, ಕೂಗಾಟ, ಅರಚಾಟ ಧಾರಾಕಾರವಾಗಿ ಗುಂಪಿನಿಂದ ಕೇಳಿಸುತ್ತಿತ್ತು. ದೋಣಿಯಲ್ಲಿ ಇದ್ದವರಲ್ಲಿ ಸುಮಾರು ೩೦ ಮಂದಿ ಕಿರಿಯ ಕಲಾವಿದೆಯರಿದ್ದು ಎಲ್ಲರೂ ಭಯಭೀತರಾದರು. ನಮ್ಮಲ್ಲಿ ೪೦-೫೦ ಪುರುಷ ಕಲಾವಿದರಿದ್ದರೂ ಕೂಡ ಈ ಹೆಣ್ಣುಮಕ್ಕಳನ್ನೆಲ್ಲಾ ಹೇಗೆ ಸಾಗಿಸುವುದು ಎಂಬ ಬಗ್ಗೆ ಭಯಭರಿತರಾದ್ದರು. ಎಲ್ಲರಿಗೂ ದಿಕ್ಕು ತೋಚದಂತಾಯಿತು.

ಪರಿಸ್ಥಿತಿಯನ್ನರಿತ ಪುಟ್ಟಣ್ಣನವರು ದೋಣಿಯಲ್ಲಿದ್ದ ಎಲ್ಲಾ ಗಂಡಸರ ಮುಖವನ್ನೊಮ್ಮೆ ನೋಡಿ "ನೀವೆಲ್ಲಾ ಗಂಡಸರೇನ್ರೋ" ಎಂದು ಗುಡುಗಿ ದೋಣಿಯ ಮೂತಿಯವರೆವಿಗೆ ಬಿರುಸಿನಿಂದ ಹೋದರು. ಆ ಜನಸ್ತೋಮದ ಕಡೆ ಮುಖ ಮಾಡಿ ಸೊಂಟದ ಮೇಲೆ ಎರಡೂ ಕೈಯನ್ನಿಟ್ಟು ಸಿನಿಮಾ ಹೀರೋನಂತೆ ನಿಂತು ಎತ್ತರದ ಧ್ವನಿಯಲ್ಲಿ "ಯಾರಾದರೂ ನಮ್ಮ ಹೆಣ್ಣು ಮಕ್ಕಳ ಒಂದು ಕೂದಲು ಕೊಂಕಲು ಕಾರಣರಾದರೂ ಸರಿ ನಿಮ್ಮನ್ನೆಲ್ಲಾ ಒಬ್ಬೊಬ್ಬರನ್ನಾಗಿ ಸಮುದ್ರಕ್ಕೆ ಎಸೆಯುತ್ತೇನೆ" ಎಂದು ಆರ್ಭಟಿಸಿದರು. "ಈ ನಮ್ಮ ತಂಡದಲ್ಲಿ ಅಕ್ಕ-ತಂಗಿಯರಿದ್ದಾರೆ, ತಾಯಂದಿರಿದ್ದಾರೆ" ಎಂದು ಹೂಬಾಣವೊಂದನ್ನೂ ಎಸೆದರು. ಅವರ ಬಾಣ ಅದ್ಭುತವಾಗಿ ಕೆಲಸ ಮಾಡಿತ್ತು. ನಮ್ಮ ದೋಣಿ ಇಳಿಯುವ ಜಾಗದಿಂದ ನಮ್ಮ ವ್ಯಾನುಗಳು ನಿಂತಿರುವವರೆವಿಗೆ ಜನಜಂಗುಳಿ ಇಬ್ಭಾಗವಾಯಿತು.

ಪುಟ್ಟಣ್ಣನವರಿಲ್ಲಿ ಅಸಾಮಾನ್ಯವಾದ ಧೈರ್ಯವಿದ್ದಿತೆಂಬುದಕ್ಕೆ ಇದೊಂದು ಸತ್ಯ ನಿದರ್ಶನ. ಕೆಲವು ವರ್ಷಗಳ ಹಿಂದೆ ನಡೆದಿದ್ದ ಘಟನೆಯೊಂದನ್ನು ನೆನಪಿಸಿಕೊಂಡು ಹೇಳಿದರು. ಅಂದು ಚಿತ್ರೀಕರಣ ನಡೆಯುವಾಗ ಐದಾರು ಜನ

ರೌಡಿ ಯುವಕರು ಬಂದು ಬಹಳ ಹೊತ್ತು ನಾಯಕಿಯನ್ನು ಕೀಟಲೆ ಮಾಡಿದರಂತೆ. ಕೊನೆಗೆ ಕೋಪಗೊಂಡ ಪುಟ್ಟಣ್ಣನವರು "ಬೇವರ್ಸಿಗಳಾ ನಿಮಗೆ ಅಕ್ಕ-ತಂಗಿಯರಿಲ್ಲವೇನ್ರೋ" ಎಂದು ಬೈದು ಓಡಿಸಿದರಂತೆ. ಆದರೆ ಊಟ ಮುಗಿಸಿ ಚಿತ್ರೀಕರಣ ಆರಂಭಿಸುವಾಗ ಆ ತಾಣವೆಲ್ಲಾ ಬೆಂಕಿಯಿಂದ ಆವೃತವಾಯಿತಂತೆ. ಸಂಜೆ ಆರಕ್ಷಕರಿಗೆ ಹೇಳಿದರೂ ಅವರಿಂದ ಸಹಾಯ ಸಿಗಲಿಲ್ಲವಂತೆ. ಹೇಗೂ ನಾಳೆ ಅದೇ ರೌಡಿಗಳು ಬಂದೇ ಬರುತ್ತಾರೆಂದು ಪುಟ್ಟಣ್ಣನವರಿಗೆ ಗೊತ್ತಿತ್ತಂತೆ. ರಾತ್ರಿಯೆಲ್ಲಾ ಯೋಚಿಸಿ ಇನ್ನೊಂದು ರೌಡಿ ಗುಂಪು ಕಟ್ಟಿದರಂತೆ "ನೋಡಿ ಗೌಡ್ರೆ ಅದನ್ನ ತಿಳಿಯದೆ ಪುನಃ ಬೆಳಿಗ್ಗೆ ಗಲಾಟೆ ಮಾಡೋಕೆ ಬಂದ್ರು, ನನ್ನ ರೌಡಿಗಳನ್ನು ಬಿಟ್ಟೆ ನೋಡಿ, ಪ್ಯಾಂಟ್ ಕಳಚಿಕೊಂಡು ಬೀಳುವುದನ್ನೂ ನೋಡದೆ ಓಡಿದರು. ಆಮೇಲೆ ನಾನು ಅಲ್ಲಿ ಇನ್ನೂ ಹದಿನೈದು ದಿನ ಚಿತ್ರೀಕರಣ ಮಾಡಿಕೊಂಡು ಬಂದೆ" ಎಂದು ರೋಮಾಂಚನಕಾರಿಕವಾಗಿ ತಮ್ಮ ಸಾಹಸವನ್ನು ವರ್ಣಿಸಿ ಕೊನೆಯಲ್ಲಿ "ನಾನು ಒಂದು ತರಹದ ರೌಡಿಯೇ ಅನ್ನಿ" ಎಂದು ಜಂಬದ ಮಾತು ಸೇರಿಸಿದರು.

ಆಗಲೇ ರಾತ್ರಿ ೮.೩೦ ಆಗಿತ್ತು. ಪುಟ್ಟಣ್ಣನವರಿಗೆ ಅವರ ಶ್ರೀಮತಿ ನಾಗಲಕ್ಷ್ಮೀಯವರ ನೆನಪಾಗಿತ್ತು. ಬೆಂಗಳೂರಿಗೆ ದೂರವಾಣಿ ಮಾಡುವ ಸಲುವಾಗಿ ಮತ್ತೊಂದು ವಸತಿಗೃಹಕ್ಕೆ ಹೋದರು. ಬೆಳಿಗ್ಗೆ ೫.೩೦ಕ್ಕೆ ಎದ್ದು ಎಲ್ಲರಿಂದ ಬೀಳ್ಕೊಂಡು ಸವಿನೆನಪುಗಳೊಡನೆ ಹಾಸನದ ಬಸ್ಸು ಹತ್ತಿದೆ. ◆



ಹಿಂದಿ ನಟರುಗಳಾದ ವಿನೋದ್ ಮೆಹ್ರ, ಶತ್ರುಘ್ನ ಸಿನ್ಹ ಅವರುಗಳೊಡನೆ ಪುಟ್ಟಣ್ಣ ಕಣಗಾಲ್, ನಿರ್ಮಾಪಕ ಮುದ್ದುಕೃಷ್ಣ, ನಿರ್ದೇಶಕ ರಾಮನಾಥನ್.

# ಸರ್‌ಪ್ರೈಸ್ ಸರಪಳಿ

ಮೇ ೨೦ರಂದು ಬೆಂಗಳೂರಿನಲ್ಲಿ ನನ್ನ ಹಿರಿಯ ಮಿತ್ರರೊಬ್ಬರನ್ನು ನೋಡುವ ಸಲುವಾಗಿ ಅವರ ಮನೆಗೆ ಹೋದೆ. ಅವರೊಡನೆ ಮಾತನಾಡುತ್ತಿದ್ದಾಗ ಅವರ ದೂರವಾಣಿ ಕಡೆಗೆ ಗಮನ ಹೋಯಿತು. ಯಾರಿಗೆ ಸಂಪರ್ಕಿಸಲಿ ಎಂದು ಯೋಚಿಸಿದೆ. ಥಟ್ಟನೆ ಪುಟ್ಟಣ್ಣನವರ ನೆನಪು ಬಂತು. ಅವರ ನಂಬರಿಗೆ ತಿರುಗಿಸಿದೆ, ಆ ಕಡೆಯಿಂದ "ಯಾರು ಬೇಕಿತ್ತು" ಎಂಬ ಪ್ರಶ್ನೆ ಬಂತು ಅಷ್ಟು ಹೊತ್ತಿಗಾಗಲೇ ನನಗೆ ಅವರ ಕಂಠದ ಗುರುತಾಗಿತ್ತು. "ನೀವು ಬರಿ ಹೆಂಗಸರ ಕಂಠವಾದರೆ ಮಾತ್ರ ಗುರುತು ಹಿಡಿಯುತ್ತೀರಿ" ಎಂದೆ. "ಓಹೋ ಹೋ" ಎಂದು ಜೋರಾಗಿ ನಕ್ಕರು. ಥಟ್ಟನೆ "ಗೌಡರೇ ಯಾವಾಗ ಬಂದಿರಿ, ಎಲ್ಲಿಂದ ಮಾತನಾಡುತ್ತಿದ್ದೀರಿ" ಎಂದರು. ಎಲ್ಲಾ ಹೇಳಿದೆ. "ದಯವಿಟ್ಟು ಈ ದಿನ ನಮ್ಮ ಮನೆಗೆ ಊಟಕ್ಕೆ ಈಗಲೇ ಬರಬೇಕು" ಎಂದರು. "ನನ್ನ ಹೆಂಡತಿ ಮುದುಕಿ ತುಂಬಾ ಕಷ್ಟಪಟ್ಟು ಅಡಿಗೆ ಮಾಡಿದ್ದಾಳೆ, ನಾವು, ನೀವಿಬ್ಬರೇ ಕುಳಿತು ಸಾವಕಾಶವಾಗಿ ಊಟ ಮಾಡಬೇಕೆನಿಸಿದೆ. ಖಂಡಿತ ಈಗಲೇ ಬಂದು ಬಿಡಿ. ನನ್ನ ಜಯನಗರದ ಹೆಡ್ಡನ ಹಟ್ಟಿಯಲ್ಲಿದ್ದೇನೆ" ಎಂದರು.

ಪುಟ್ಟಣ್ಣನವರು ಆಗ ಕರ್ನಾಟಕದ ಚಲನಚಿತ್ರ ನಿರ್ದೇಶಕರ ಸಂಘದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ತಮ್ಮ ಜಯನಗರದ ಮೊದಲ ಮನೆಯನ್ನೇ ಚಲನಚಿತ್ರ ನಿರ್ದೇಶಕರ ಸಂಘದ ಕಛೇರಿಯನ್ನಾಗಿ ಪರಿವರ್ತಿಸಿಕೊಂಡಿದ್ದರು. ನಾನು ಅವರ ಕಛೇರಿಯ ಹತ್ತಿರ ಹೋದಾಗ ಇನ್ನೂ ಬೆಳಿಗ್ಗೆ ೯.೩೦ ಗಂಟೆ. ಪುಟ್ಟಣ್ಣನವರು ಮತ್ತು ಕಛೇರಿಯ ೨-೩ ಜನ ನೌಕರರು ಮಾತ್ರ ಅಲ್ಲಿದ್ದರು. ಅವರ ಕಛೇರಿ ಕೇವಲ ಮೂರು ಕೊಠಡಿಯ ಚಿಕ್ಕ ಕಟ್ಟಡವಾಗಿತ್ತು. ಆರತಿಯವರಿಂದ ಬೇರ್ಪಟ್ಟ ಮೇಲೆ ಅಲ್ಲಿಯೇ ಅವರು ಅಜ್ಞಾತವಾಸವನ್ನು ಮುಗಿಸಿದ್ದು, ಆಮೇಲೆ ಅಲ್ಲಿದ್ದೇ "ಮಾನಸ ಸರೋವರ" ಮಾಡಿದ್ದು, ಈ ಕಾರಣದಿಂದಾಗಿಯೇ ಏನೋ ಆ "ಹೆಡ್ಡನ ಹಟ್ಟಿ"ಯ ಮೇಲೆ ಅವರಿಗೆ ಮೋಹ.

◆

# ನೀವೊಬ್ಬರು ಬಂದಿರಲ್ಲ ಎಲ್ಲ ಬಂದಂತೆಯೇ

ನಾನು ಹೋದ ತಕ್ಷಣ ನನ್ನನ್ನು ಪ್ರೀತಿಯಿಂದ ಸ್ವಾಗತಿಸಿ ಕೊಠಡಿಯೊಂದರಲ್ಲಿ ಕೂರಿಸಿ ಕ್ಷೇಮಸಮಾಚಾರ ವಿಚಾರಿಸಿದರು. ನಾನು ಕುಳಿತಿದ್ದಂತೆ ಅನೇಕ ಕಡೆಗೆ ಒಂದೇ ಸಮನೆ ದೂರವಾಣಿ ಮಾಡಿದರು. ಅವರ ಮಾತಿನಿಂದ ಆಗ ಚಲನಚಿತ್ರ ನಿರ್ದೇಶಕರ ಸಂಘದ ಸಭೆ ಇರುವುದಾಗಿ ತಿಳಿಯಿತು. ಅಷ್ಟರಲ್ಲಿ ಹೊರಗಡೆಯ ಕೈಸಾಲೆಗೆ ಯಾರೋ ಬಂದಂತಾಯಿತು. ಪುಟ್ಟಣ್ಣನವರು ಕೋಣೆಯಿಂದ ಕೈಸಾಲೆಗೆ ಹೋಗಿ "ಲಕ್ಷ್ಮೀನಾರಾಯಣ್‌ಜೀ ಬನ್ನಿ, ಬನ್ನಿ", ಎಂದರು. ಬಂದವರು "ಇನ್ನೂ ಯಾರೂ ಬಂದಿಲ್ಲವೇ" ಎಂದರು. "ಯಾರು ಬರದಿದ್ದರೇನು ನೀವು ಬಂದಿರಲ್ಲಾ ಎಲ್ಲಾ ಬಂದಂತಾಯಿತು" ಎಂದರು. ಬಂದವರು ಅಲ್ಲೇ ಕೈಸಾಲೆಯಲ್ಲೇ ಕುಳಿತರು. ಪುಟ್ಟಣ್ಣನವರು ಮಾತ್ರ ನಾನು ಕುಳಿತಿದ್ದ ಕೊಠಡಿಯೊಳಗೆ ಬಂದು ಪುನಃ ಯಾರಿಗೋ ದೂರವಾಣಿ ಮಾಡಿದರು. ಸ್ವಲ್ಪ ಹೊತ್ತು ಕಳೆದ ಮೇಲೆ ಮತ್ತಾರೋ ಬಂದರು. ಪುಟ್ಟಣ್ಣನವರು ಕೈಸಾಲೆಗೆ ಹೋಗಿ "ಓ ಅರಸು ಕುಮಾರರೇ ಬರಬೇಕು, ಬರಬೇಕು" ಎಂದರು. ಅವರೂ ಸಹ ಹೊರಗಡೆಯೆ ಕೂತು "ಇನ್ನೂ ಯಾರೂ ಬಂದಿಲ್ಲವೆ?" ಎಂದರು. ಅದಕ್ಕೆ ಪುಟ್ಟಣ್ಣನವರು "ಯಾರು ಬಂದರೇನು ಬಿಟ್ಟರೇನು ನೀವು ಬಂದಿರಲ್ಲ. ಎಲ್ಲರೂ ಬಂದಂತೆಯೇ?" ಎಂದರು. ಪುನಃ ಪುಟ್ಟಣ್ಣನವರು ಒಳಗೆ ಬಂದರು. ನನ್ನಲ್ಲಿ ಸ್ವಲ್ಪ ಹೊತ್ತು ನಗೆ ಚಟಾಕಿ ಹಾರಿಸಿದರು. ಅಷ್ಟರಲ್ಲಿ ಮತ್ತಾರೋ ಹೊರಗಡೆ ಬಂದರು. "ಓಹೋಹೊ ಜಾನಕಿರಾಮರವರು" ಬನ್ನಿ, ಬನ್ನಿ, "ಎಷ್ಟು ಹೊತ್ತು ನಿಮಗಾಗೆಲ್ಲಾ ಕಾಯೋದು" ಎಂದರು. "ಇನ್ನಾರು ಬರಬೇಕು" ಎಂದು ಅವರಲ್ಲಿ ಯಾರೋ ಒಬ್ಬರು ಕೇಳಿದರು. "ಇನ್ನಾರು ಬರದಿದ್ದರೆ ನಮಗೇನು ನೀವುಗಳು ಬಂದ ಮೇಲೆ ಮುಗಿಯಿತು" ಎಂದು ಬಂದವರನ್ನೆಲ್ಲಾ ಕೈಸಾಲೆಯಲ್ಲಿಯೇ ಕೂರಿಸಿ ಒಳಬಂದರು "ಇದೆಲ್ಲಾ ಏನು ಪುಟ್ಟಣ್ಣನವರೇ" ಎಂದೆ; "ದಯವಿಟ್ಟು ಏನನ್ನೂ ಕೇಳಬೇಡಿ ಎಲ್ಲಾ "ಸರ್‌ಪ್ರೈಸ್" ಎಂದು ಹೇಳಿ, ನನ್ನ ಕೈಗೊಂದು ಪುಸ್ತಕವನ್ನು ಕೊಟ್ಟು ಪುನಃ ಕೈಸಾಲೆಗೆ ನಡೆದರು.

ಆ ದಿನದ ಸಭೆಯ ವಿಷಯ ೨.೬.೧೯೮೫ ರಂದು ನಡೆಯಬೇಕಿದ್ದ ಚಲನಚಿತ್ರ ನಿರ್ದೇಶಕರ ಸಂಘದ ವಾರ್ಷಿಕೋತ್ಸವ ಸಮಾರಂಭಕ್ಕೆ ಯಾರು ಯಾರಿಗೆ ಆಹ್ವಾನ ಪತ್ರಿಕೆ ಕಳುಹಿಸಬೇಕೆಂಬುದು. ಕಲಾವಿದರ ಪ್ರಶ್ನೆ ಬಂದಾಗ ಪುಟ್ಟಣ್ಣನವರು "ಎಲ್ಲರಿಗೂ ವೈಯಕ್ತಿಕವಾಗಿ ಕಳುಹಿಸಬೇಕಿಲ್ಲ. ಹೇಗೂ ಕಲಾವಿದರ ಸಂಘವಿದೆ ಅವರಿಗೆ ಕಳಿಸೋಣ. ಅವರು ಎಲ್ಲರಿಗೂ ಕಳುಹಿಸಿಕೊಡಲಿ" ಎಂದರು. ಮತ್ತೊಬ್ಬ ಸದಸ್ಯರು "ಎಲ್ಲರಿಗೂ ವೈಯಕ್ತಿಕವಾಗಿ ಏಕೆ ಕಳುಹಿಸಬಾರದು" ಎಂದು ಪುಟ್ಟಣ್ಣನವರಿಗೆ ನೇರವಾದ ಪ್ರಶ್ನೆ ಹಾಕಿದರು. ಈ ಪ್ರಶ್ನೆಯಿಂದ ಕೋಪಗೊಂಡ ಪುಟ್ಟಣ್ಣನವರು "ನೀವು ನೇರವಾಗಿ ಆಹ್ವಾನಪತ್ರಿಕೆಗಳನ್ನು ಕಳುಹಿಸಿದರೂ ಅವರು ಬರುವುದಿಲ್ಲವೆಂಬುದು ನನಗೆ ಗೊತ್ತು. ಅವರುಗಳಲ್ಲಿ ಬಹಳ ಜನ ತಮ್ಮಿಂದಲೇ ಚಿತ್ರರಂಗ ಉಳಿದಿದೆ ಎಂದು ಭಾವಿಸಿದ್ದಾರೆ. ಇಷ್ಟಕ್ಕೂ ನೀವು ಎಲ್ಲರಿಗೂ ಕಳುಹಿಸಬೇಕೆಂದಿದ್ದರೆ ನನ್ನ ಅಭ್ಯಂತರವೇನಿಲ್ಲ" ಎಂದರು. ಅಲ್ಲಿಗೆ ಸಭೆ ಮುಗಿಯಿತು. ಎಲ್ಲರನ್ನೂ ತಮ್ಮ ಮನೆಗೆ ಊಟಕ್ಕೆ ಕರೆದುಕೊಂಡು ನಡೆದರು.

ಪುಟ್ಟಣ್ಣನವರ ಮನೆಯ ಮುಂದೆ ನಮ್ಮ ಕಾರು ನಿಂತಾಗ ನಮಗೆ ಅತಿದೊಡ್ಡ "ಸರ್‌ಪ್ರೈಸ್" ಕಾದಿತ್ತು. ಮನೆಯ ಮುಂದೆ ಆಗಲೇ ಬೇಕಾದಷ್ಟು ಕಾರು, ಸ್ಕೂಟರ್‌ಗಳು ನಿಂತಿದ್ದವು, ಮನೆಗೆ ತಳಿರು ತೋರಣಗಳನ್ನು ಕಟ್ಟಲಾಗಿತ್ತು. ನೂರಾರು ಜನ ಅತಿಥಿಗಳು ಮನೆಯ ಮುಂಭಾಗದಲ್ಲಿ ಹಾಕಿದ್ದ ಕುರ್ಚಿಗಳ ಮೇಲೆ ಕೆಲವರು, ಮನೆಯ ಒಳಗಡೆ ಹಲವರು ಕುಳಿತಿದ್ದರು.

ನಾವು ಒಳಗಡೆ ಹೋದಾಗ ತಿಳಿದಿದ್ದು ಅಂದು ಪುಟ್ಟಣ್ಣನವರ ಅಣ್ಣ ಚಲನಚಿತ್ರ ನಿರ್ದೇಶಕ, ಸಾಹಿತಿ, ಪ್ರಭಾಕರಶಾಸ್ತ್ರಿಯವರ ಮಗಳ ಮಗುವಿನ ನಾಮಕರಣ ಎಂದು. ಮನೆಯ ಮಾಳಿಗೆ ಮೇಲೆ ಎಲ್ಲರಿಗೂ ಊಟದ ವ್ಯವಸ್ಥೆ ಮಾಡಲಾಗಿತ್ತು. ನಮ್ಮ ಎದುರುಗಡೆ ಹೆಂಗಸರ ಸಾಲಿನಲ್ಲಿ ಪುಟ್ಟಣ್ಣನವರ ಹೆಂಡತಿ ನಾಗಲಕ್ಷ್ಮೀಯವರೂ ಊಟಕ್ಕೆ ಕುಳಿತಿದ್ದನ್ನು ನೋಡಿ ಅವರಿಂದ ಪುಟ್ಟಣ್ಣನವರಿಗೆ ಛೀಮಾರಿ ಹಾಕಿಸಬೇಕೆಂದು ನಾನೂ, ಲಕ್ಷ್ಮೀನಾರಾಯಣ್ ಯೋಜನೆ ಹಾಕಿ "ನೋಡಿ ನಾಗಲಕ್ಷ್ಮೀಯವರೇ ನಿಮ್ಮ ಯಜಮಾನರು ನಿಮ್ಮನ್ನು ಮುದುಕಿ ಎಂದು ನಿಮ್ಮ ಹಿಂದುಗಡೆ ಆಡಿಕೊಳ್ಳುತ್ತಿದ್ದರು" ಎಂದೆವು. ಆಕೆ "ನಾನು ಎಷ್ಟಾದರೂ ಮುದುಕನ ಹೆಂಡತಿಯಲ್ಲವೇ" ಎಂದೇ ಬಿಟ್ಟರು "ಸರ್‌ಪ್ರೈಸ್" ಆಗಿ.

◆

# ಪಾತ್ರ ಮಾಡೋರೆಲ್ಲಾ ದೊಡ್ಡ ಕಲಾವಿದರಲ್ಲ

ನಾನು ಕುಳಿತಿದ್ದ ಪಂಕ್ತಿಯ ಊಟವಾದ ಮೇಲೆ ಎಲ್ಲರೂ ಅಲ್ಲಲ್ಲಿ ಎಲೆ ಅಡಿಕೆ ಹಾಕಿಕೊಳ್ಳಲು ಕುಳಿತರು. ನಾನು ಮತ್ತು ಪುಟ್ಟಣ್ಣನವರು ಇಬ್ಬರೇ ಒಂದೆಡೆ ನಿಂತುಕೊಂಡು ವೀಳ್ಯಾ ಹಾಕಿಕೊಳ್ಳುತ್ತಿದ್ದೆವು. ಆಗ ನಾನು ಪುಟ್ಟಣ್ಣನವರನ್ನು "ಏಕೆ ಪುಟ್ಟಣ್ಣನವರೇ ಕಲಾವಿದರ ಬಗ್ಗೆ ನಿಮಗೆ ಅಷ್ಟೊಂದು ನಿಕೃಷ್ಟವಾದ ಅಭಿಪ್ರಾಯ" ಎಂದೆ. ನಗುತ್ತಾ ಮಾತನಾಡುತ್ತಿದ್ದ ಪುಟ್ಟಣ್ಣನವರು ಗಂಭೀರರಾದರು. "ದಯವಿಟ್ಟು ಆ ತರಹ ಮಾತನಾಡಬೇಡಿ, ಕಲೆಯನ್ನು, ಕಲಾವಿದರನ್ನು ನಾನು ಗೌರವಿಸುತ್ತೇನೆ. ಪೂಜಿಸುತ್ತೇನೆ, ಆದರೆ ಸಿನಿಮಾದಲ್ಲಿ ಪಾತ್ರ ಮಾಡೋದು ಕಲಿತುಕೊಂಡಾಕ್ಷಣ ನಾನು ದೊಡ್ಡ ಸ್ಟಾರ್ ಅಂತ ಭಾವಿಸುವವರನ್ನು ನಾನು ಗೌರವಿಸುವುದಿಲ್ಲ" ಎಂದು ಥಟ್ಟನೆ ನುಡಿದು ಅವರು ಹಿಂದೆ ಪದ್ಮಿನಿ ಚಿತ್ರ ಸಂಸ್ಥೆಯೊಳಗಿದ್ದಾಗಿನ ಒಂದು ಘಟನೆಯನ್ನು ಹೇಳಿದರು.

"ನೋಡಿ, ನಾನು ಪದ್ಮಿನಿ ಚಿತ್ರ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದೆ ಎಂದು ಹೇಳಿಕೊಳ್ಳಲು ಇಂದಿಗೂ ನನಗೆ ತುಂಬಾ ಹೆಮ್ಮೆಯೆನಿಸುತ್ತದೆ. ನನ್ನ ಗುರುಗಳಾದ ಬಿ.ಆರ್. ಪಂತುಲರವರು ಆಗ್ಗೆ ಅತ್ಯಂತ ದೊಡ್ಡ ನಿರ್ದೇಶಕರಾಗಿದ್ದರು. ಆಗ ನಡೆದ ಒಂದು ಘಟನೆಯನ್ನು ನೆನಪು ಮಾಡಿಕೊಂಡರೆ ನನಗೆ ತುಂಬಾ ವ್ಯಸನವಾಗುತ್ತದೆ. ಅವರು ಕೊನೆ ಕೊನೆಗೆ ಮೈಸೂರು ಪ್ರೀಮಿಯರ್ ಸ್ಟೂಡಿಯೋನಲ್ಲಿ ಚಿತ್ರ ಮಾಡುತ್ತಿದ್ದರು. ಅಷ್ಟು ಹೊತ್ತಿಗೆ ಕನ್ನಡ ಚಿತ್ರ ಜಗತ್ತು ಸ್ವಲ್ಪ ಮುಂದುವರಿದಿತ್ತು, ಕಲಾವಿದರಿಗೆ ಬೇಡಿಕೆ ಇತ್ತು. ಒಂದು ದಿನ ನನ್ನ ಗುರುಗಳ ಕಾರು ಕಲಾವಿದನೊಬ್ಬನ ಮನೆಯ ಬಾಗಿಲಿನಲ್ಲಿ ನಿಂತುದನ್ನು ಕಂಡೆ. ಯಾವ ವ್ಯಕ್ತಿ ಕಲಾವಿದನನ್ನು ಸೃಷ್ಟಿಸುತ್ತಾನೋ, ಯಾವ ವ್ಯಕ್ತಿಯನ್ನು ಕಲಾವಿದ ಹುಡುಕಿಕೊಂಡು ಹೋಗಿ ನಾಲ್ಕು ಮಾತುಗಳನ್ನು ಆಡಲು ಅವಕಾಶ ಕೊಟ್ಟರೆ ಸಾಕು ಅಂತ ಕಾಯುತ್ತಿರುತ್ತಾನೋ ಅಂತಹ ವ್ಯಕ್ತಿಯೇ ಹೋಗಿ ಕಲಾವಿದನೊಬ್ಬನ ಮನೆ ಬಾಗಿಲಲ್ಲಿ ನಿಂತದ್ದು ನೋಡಿ ನನಗೆ ಬಹಳ ನೋವಾಯಿತು."

"ಇದಾದ ಒಂದೆರಡು ತಿಂಗಳಲ್ಲಿ ಅದೇ ಸ್ಟೂಡಿಯೋದಲ್ಲಿ ಅವರನ್ನು ಭೇಟಿಯಾಗುವ ಸಂದರ್ಭ ಒದಗಿ ಬಂತು. ನಾನು ಅದುವರೆವಿಗೂ ಯಾವಾಗಲೂ ಅವರ ಮುಂದೆ ಕುಳಿತವನಲ್ಲ, "ಕುಳಿತುಕೋ ಪುಟ್ಟಣ್ಣ" ಎಂದಾಗ ಮಾತ್ರ ಕುಳಿತುಕೊಳ್ಳುವ ಅಭ್ಯಾಸವಿದ್ದ ನಾನು ಅಂದೂ ನಿಂತೇ ಇದ್ದೆ. "ಏನಪ್ಪಾ ಪುಟ್ಟಣ್ಣ, ಏನು ಚಿತ್ರೀಕರಣ ಮಾಡ್ತಾ ಇದ್ದೀಯಾ ಎಲ್ಲಾ ಹೇಗೆ ನಡೀತಾ ಇದೆ" ಎಂದು ತಂದೆ ಮಗನನ್ನು ಮಾತನಾಡಿಸುವಂತೆ ಮಾತನಾಡಿಸಿದರು. ನನ್ನ ವಿಚಾರವನ್ನೆಲ್ಲಾ ಹೇಳಿಯಾದ ಮೇಲೆ ನಾನು "ಸಾರ್ ನಾನು ನಿಮಗಿಂತ ಚಿಕ್ಕವನು, ನಾನು ನಿಮಗೆ ಹೇಳೋವಷ್ಟು ಶಕ್ತನಲ್ಲ, ಆದರೆ ನನಗೆ ಒಂದೇ ಒಂದು ವಿಷಯದಲ್ಲಿ ನಿಮ್ಮ ಬಗ್ಗೆ ಬೇಜಾರಾಯಿತು, ತುಂಬಾ ಕೋಪನೂ ಬಂತು" ಎಂದೆ. "ಏನಪ್ಪಾ ನಾನಂತಹ ತಪ್ಪು ಮಾಡಿದ್ದು" ಎಂದರು. "ನೀವು ಕಲಾವಿದರ ಮನೆ ಬಾಗಿಲಿಗೆ ಹೋಗಿ ಅವರಿಗಾಗಿ ಕಾಯುವುದು ನನಗೆ ಹಿಡಿಸಲಿಲ್ಲ, ಅದರ ಬದಲು ನೀವು ಈ ಚಿತ್ರರಂಗದಿಂದ ನಿವೃತ್ತರಾಗೋದು ಗೌರವವಾದ ಕ್ರಮ" ಎಂದೆ. "ಕಾಲ ಹಾಗಿದೆಯಪ್ಪ, ನಾವು ಕಾಲಕ್ಕೆ ತಕ್ಕನಾಗಿ ನಡಕೋಬೇಕು. ಆ ಹೊತ್ತು ಅವನ ಮನೆ ಬಾಗಿಲಿಗೆ ಹೋಗದಿದ್ದರೆ ನನ್ನ ಚಿತ್ರೀಕರಣ ನಿಂತು ಹೋಗುತ್ತಿತ್ತು" ಎಂದರು.

"ನನ್ನ ಗುರುಗಳ ಈ ಮಾತು ಕೇಳಿದಾಗ ಅವರಿಗೆ ಆ ವೇಳೆಗಾಗಲೇ ಈ ಉದ್ಯಮದ ಬಗ್ಗೆ ಎಷ್ಟೊಂದು ವಿರಕ್ತ ಭಾವನೆ ಬಂದುಬಿಟ್ಟಿತ್ತು ಎಂಬುದನ್ನು ಗುರುತಿಸಬಹುದಾಗಿತ್ತು. ಕೆಲವು ವರ್ಷಗಳ ಹಿಂದೆ ನಾನೂ ಸಹ ಕಲಾವಿದರೊಬ್ಬರ ಮನೆಯ ಬಾಗಿಲಿಗೆ ಹೋಗುವ ಪರಿಸ್ಥಿತಿ ಬಂದಿದ್ದಾಗ "ಇಂತಹ ಸಂದರ್ಭದಲ್ಲಿ ಗುರುಗಳಿಗೆ ಹೇಳಿದ ನಾನೂ, ಹೋಗುವುದು ಬೇಡ" ಎಂದಿತು ನನ್ನ ಮನಸ್ಸು. ಆದರೆ ಗುರುಗಳ ಲೋಕಾನುಭವದ ಮಾತನ್ನು ನಾನು ಮರೆಯುವಂತಿರಲಿಲ್ಲ" ಎಂದು ಆಗ ನಡೆದ ಘಟನೆಯನ್ನು ಹೃದಯಂಗಮಯವಾಗಿ ವಿವರಿಸಿದರು.

◆

# "ನಿಮ್ಮ ತೋಟಕ್ಕೆ ಬರ್ತೀನಿ"

ನಾನು ಪುಟ್ಟಣ್ಣನವರಿಂದ ಬೀಳ್ಕೊಂಡು ಅರಸುಕುಮಾರರ ಜೊತೆ ಅವರ ವಾಹನದ ಕಡೆಗೆ ಹೊರಟೆವು. ಅಷ್ಟರಲ್ಲಿ ಪುಟ್ಟಣ್ಣ "ಗೌಡರೇ" ಎಂದು ಪುನಃ ನನ್ನನ್ನು ಕೂಗಿದರು, ಹತ್ತಿರ ಹೋದೆ. "ಕಂಠೀರವದಲ್ಲಿ 'ಮಸಣದ ಹೂವು'ನ ಈ ಷೆಡ್ಯೂಲ್ ಮುಗಿದ ಮೇಲೆ ಆಯಾಸವೆನಿಸಿದೆ ಮತ್ತು ಬೇಸರವಾಗಿದೆ, ಹೇಗೂ ನಿಮ್ಮ ತೋಟಕ್ಕೆ ಕರೆಯುತ್ತಿದ್ದೀರಿ, ಒಂದು ನಾಲ್ಕು ದಿನ ನಿಮ್ಮ ಜೊತೆಯಲ್ಲಿ ಕಳೆಯಬೇಕೆನಿಸಿದೆ, ಯಾವಾಗ ಬರಲಿ" ಎಂದರು.

ಆ ಮಾತು ಕೇಳಿ ನನಗೆ ತುಂಬಾ ಸಂತೋಷವಾಯಿತು. ನಾನು ಬಹಳ ದಿನಗಳಿಂದ ಪುಟ್ಟಣ್ಣನವರನ್ನು ನನ್ನ ತೋಟಕ್ಕೆ ಕರೆಯುತ್ತಿದ್ದೆ, ಆದರೆ ಅವರೇ ಬಿಡುವಿಲ್ಲದ ಕೆಲಸದಿಂದಾಗಿ ಬರಲಾಗಿರಲಿಲ್ಲ. ಇಂದು ಅವರೇ ಬರುತ್ತೇನೆನ್ನುವಾಗ ನನಗೆ ತುಂಬಾ ಖುಷಿಯಾಯಿತು. "ಯಾವಾಗ ಬರುವಿರಿ ಹೇಳಿ" ಎಂದೆ. "ಇಂದು ತಾರೀಖು ೨೦.೫.೧೯೮೫ ಅಲ್ಲವೇ, ತಾರೀಖು ೨.೬.೧೯೮೫ಕ್ಕೆ ನಮ್ಮ ನಿರ್ದೇಶಕರ ಸಂಘದ ವಾರ್ಷಿಕೋತ್ಸವವಿದೆ, ನೀವು ಒಂದು ವಾರಬಿಟ್ಟು ಬೆಂಗಳೂರಿಗೆ ಬಂದರೆ ನನ್ನನ್ನು ಭೇಟಿಯಾಗಿ. ಅಷ್ಟರಲ್ಲಿ ನಾನು ಖಚಿತವಾದ ತಾರೀಖು ಹೇಳಬಲ್ಲೆ" ಎಂದರು.

◆

## ಕದಡಿದ ಮನ

ಪುಟ್ಟಣ್ಣನವರ ನನ್ನ ಕೊನೆಯ ಭೇಟಿ ತಾರೀಖು ೨೭.೫.೧೯೮೫ ರಂದು. ಅಂದು ಹಾಸನದಿಂದ ಬೆಂಗಳೂರಿಗೆ ಬಂದವನೇ ನನ್ನ ಹಳ್ಳಿಗೆ ಹೋಗುವ ಕಾರ್ಯಕ್ರಮವನ್ನು ನಿಗದಿಪಡಿಸುವ ಸಲುವಾಗಿ ಅವರ ಕಛೇರಿಗೆ ದೂರವಾಣಿ ಮಾಡಿದೆ. ಅವರೇ ಸಿಕ್ಕಿದರು. ಆಗ ಮಧ್ಯಾಹ್ನ ೧.೩೦. "ಈಗ ಮನೆಗೆ ಊಟಕ್ಕೆ ಹೋಗುತ್ತಿದ್ದೇನೆ, ಈಗಲೇ ಬರುವುದಾದರೆ ಮನೆಗೆ ಬನ್ನಿ" ಎಂದರು.

ಪುಟ್ಟಣ್ಣನವರು ಹೊಸದಾಗಿ ಹಿಡಿದ ಮನೆಯನ್ನು ಒಂದೇ ಸಲ ನೋಡಿದ್ದೆನಷ್ಟೆ. ರಸ್ತೆ ಗೊತ್ತಾಯಿತು, ಆದರೆ ಇಂಥದ್ದೇ ಮನೆ ಎಂದು ಗೊತ್ತು ಮಾಡುವುದು ತಕ್ಷಣ ಆಗಲಿಲ್ಲ. ಕೆಲವು ವಾರುಗಳು ಆ ಕಡೆ ಈ ಕಡೆ ಅಡ್ಡಾಡುವುದರೊಳಗಾಗಿ ಪುಟ್ಟಣ್ಣನವರ ಕಂಚಿನ ಕಂಠ ಬೀದಿಗೆ ಕೇಳಿಸಿತು.

ಮನೆಯೊಳಗೆ ಹೋದೆ. ಆಗತಾನೆ ಅವರು ಮನೆಗೆ ವಾಸಕ್ಕೆ ಬಂದಿದ್ದರಿಂದ ಮನೆಯಲ್ಲಿ ಯಾವ ವ್ಯವಸ್ಥೆಯೂ ಇರಲಿಲ್ಲ. ಕಾರಣ ಮದರಾಸು ಮನೆಯನ್ನು ಇನ್ನೂ ಖಾಲಿ ಮಾಡಿರಲಿಲ್ಲ. ಪುಟ್ಟಣ್ಣನವರು ನಡುಮನೆಯಲ್ಲಿ ಚಕ್ಕಬಕ್ಕಲು ಹಾಕಿಕುಳಿತು ಊಟ ಮಾಡುತ್ತಿದ್ದರು. ಅವರ ಎದುರಿಗೆ ಸುತ್ತಾ ಉಂಗುರದ ಆಕಾರದಲ್ಲಿ ಮಕ್ಕಳೆಲ್ಲಾ ಊಟಕ್ಕೆ ಕುಳಿತಿದ್ದರು. ಶ್ರೀಮತಿ ಪುಟ್ಟಣ್ಣನವರು ಬಡಿಸುತ್ತಿದ್ದರು.

ನನ್ನ ಮುಖ ನೋಡಿದ ತಕ್ಷಣ "ಬನ್ನಿ ಬನ್ನಿ ಕೈತೊಳೆದುಕೊಳ್ಳಿ" ಎಂದರು. "ನನ್ನದಾಗಲೇ ಊಟವಾಗಿದೆ" ಎಂದೆ. "ಹಾಗಾದರೆ ಮಹಡಿಯಲ್ಲಿ ಕುಳಿತುಕೊಳ್ಳಿ" ಎಂದರು. ಮಹಡಿಗೆ ಹೋಗಿ ಅವರ ಪುಸ್ತಕ ಕಪಾಟಿನಲ್ಲಿ ಒಂದು ಪುಸ್ತಕ ಎಳೆದುಕೊಂಡು ತಿರುವಿ ಹಾಕುತ್ತಾ ಕುಳಿತೆ. ಸ್ವಲ್ಪ ಹೊತ್ತಿಗೆ ಊಟ ಮುಗಿಸಿ ಮೇಲೆ ಬಂದರು. ಆ ಕೊಠಡಿಯಲ್ಲಿ ಕುರ್ಚಿಗಳಿರಲಿಲ್ಲ. ಚಾಪೆ ಮೇಲೆ ಕುಳಿತು ನಾನು ಗೋಡೆ ಒರಗಿದ್ದೆ, ಅವರು 'ನನ್ನ ಮುಂದೆ ಚಾಪೆ ಮೇಲೆಯೇ ತಲೆಗೆ ಕೈಕೊಟ್ಟು

ಮಲಗಿ, "ಈಗ ಹೇಳಿ" ಎಂದರು. "ಏಕೆ ಬಹಳ ಸುಸ್ತಾಗಿರುವಿರಲ್ಲ" ಎಂದೆ. "ಏನು ಮಾಡಲಿ. ನಿಮಗೆ ಗೊತ್ತಿರುವ ಹಾಗೆ ನನಗೆ ಬಿಡುವೇ ಇಲ್ಲವಲ್ಲ" ಎಂದರು.

"ಮಸಣದ ಹೂವು" ಪ್ರಾರಂಭಿಸಿದ ಮೇಲೆ ಪುಟ್ಟಣ್ಣನವರಿಗೆ ಬಿಡುವೇ ಇರಲಿಲ್ಲ. ಹೊನ್ನಾವರದಲ್ಲಿ ಹೊರಾಂಗಣದ ಚಿತ್ರೀಕರಣ ಮುಗಿಸಿ ಬಂದ ಮೇಲೆ ಬೆಂಗಳೂರಿನ ಕಂಠೀರವದಲ್ಲಿ ಒಳಾಂಗಣ ಚಿತ್ರೀಕರಣ ಮುಗಿದಿತ್ತು. ಪುನಃ ಇನ್ನು ಉಳಿದ ಹತ್ತು ದಿನಗಳ ಚಿತ್ರೀಕರಣ ನಡೆಯಬೇಕಿತ್ತು. ತನ್ನ ಸಹ ನಿರ್ದೇಶಕ ಚಂದ್ರಹಾಸ್ ಅವರ ಮದುವೆಗಾಗಿ ಪುತ್ತೂರಿಗೆ ತಾವೇ ಕಾರು ಚಾಲನೆ ಮಾಡಿಕೊಂಡು ಹೋಗಿಬಂದಿದ್ದರು. ಜೊತೆಗೆ ತಾರೀಖು ೨.೬.೧೯೮೫ರಂದು ನಿರ್ದೇಶಕರ ಸಂಘದ ವಾರ್ಷಿಕೋತ್ಸವವಿದ್ದು ಅದಕ್ಕಾಗಿ ಭಾರಿ ಸಿದ್ಧತೆ ನಡೆಸಿದ್ದರು. ಅಂದು ಸಮಾರಂಭವನ್ನು ಯಾರೂ ಎಂದೂ ಮಾಡಿರಬಾರದು ಅಷ್ಟು ಚೆನ್ನಾಗಿ ಮಾಡಬೇಕು ಎಂಬ ಹೆಬ್ಬಯಕೆಯನ್ನು ಹೊಂದಿದ್ದರು. ಈ ಸಮಾರಂಭದ ವ್ಯವಸ್ಥೆ ಮಾಡಲು ಅನೇಕ ಜನ ಸಹಾಯಕರಿದ್ದರೂ ಸಹ ಪ್ರತಿಯೊಂದು ಸಣ್ಣ ವಿಚಾರದಲ್ಲೂ ತಾವೇ ಹೊಣೆಯಾಗುತ್ತಿದ್ದರು.

"ನೀವು ಹೀಗೆ ಬಿಡುವಿಲ್ಲದೆ ದುಡಿದರೆ ನಿಮ್ಮ ಆರೋಗ್ಯದ ಗತಿಯೇನು" ಎಂದೆ. "ದುಡಿಯುವುದು ನನ್ನ ಜಾಯಮಾನ, ಅದಕ್ಕೆ ನಾನು ಹೆದರುವುದಿಲ್ಲ. ಆದರೆ ಮಾನಸಿಕ ಆಘಾತಗಳನ್ನು ನಾನು ಸಹಿಸಲಾರೆ. ಆರ್ಥಿಕವಾಗಿ ನಾನಿನ್ನೂ ಸುಧಾರಿಸಿಲ್ಲ" ಎಂದರು.

ನಮ್ಮ ಮಾತು ಹಾಗೂ ಹೀಗೂ ಸಂಸಾರದ ಕಡೆಗೆ ಹೊರಳಿತ್ತು. "ಮುಂದೆ ಮಕ್ಕಳ ಭವಿಷ್ಯಕ್ಕೆ ಏನು ಮಾಡುವಿರಿ" ಎಂದೆ. "ದೊಡ್ಡ ಮಗ ನನ್ನ ಜಾಡನ್ನೇ ಹಿಡಿದಿದ್ದಾನೆ. ಇನ್ನು ಎರಡನೆಯವನು ಸಂಗೀತ ನಿರ್ದೇಶಕನಾಗಬೇಕೆಂಬ ಆಶೋತ್ತರವನ್ನು ಹೊಂದಿದ್ದಾನೆ. ಯಾರ ಹಣೆಯಲ್ಲಿ ಏನು ಬರೆದಿದೆಯೋ ನೋಡಬೇಕು" ಎಂದರು. "ನನ್ನ ಹಳ್ಳಿಗೆ ಯಾವಾಗ ಬರುವಿರಿ" ಎಂದೆ. ಹೇಳ್ತೀನೆ ನನ್ನ ಹೆಂಡತಿಯನ್ನು ಒಂದು ಮಾತು ಕೇಳಿಬಿಡಿ" ಎಂದರು.

ಕೆಳಗೆ ಇಳಿದು ಬಂದ ಮೇಲೆ ನಾಗಲಕ್ಷ್ಮೀಯವರಿಗೆ "ನಿಮ್ಮ ಯಜಮಾನರನ್ನು ಒಂದೆರಡು ದಿನ ನನ್ನ ಹಳ್ಳಿಗೆ ಕರೆದುಕೊಂಡು ಹೋಗುತ್ತೇನೆ" ಎಂದೆ. ನನ್ನ ಮಾತಿನಿಂದ ನಾಗಲಕ್ಷ್ಮೀಯವರಿಗೆ ಖುಷಿಯಾದ ಹಾಗೆ ಕಾಣಲಿಲ್ಲ. ಸ್ವಲ್ಪ ಹೊತ್ತು ಬಿಟ್ಟು "ಈಗ ಬೇಡಿ. ಇನ್ನೂ "ಮಸಣದ ಹೂವು"ನ ಚಿತ್ರೀಕರಣ ಮುಗಿದಿಲ್ಲ" ಎಂದರು. ನನಗೆ ಏನು ಹೇಳಬೇಕೆಂದು ತೋಚಲಿಲ್ಲ. ಪುಟ್ಟಣ್ಣನವರೇ

ನನ್ನ ನೆರವಿಗೆ ಬಂದು ನನ್ನ ಕಡೆ ತಿರುಗಿ "ಮುಂದಿನ ಚಿತ್ರೀಕರಣದ ಅವಧಿಯನ್ನು ಇನ್ನು ಎರಡು ಮೂರು ದಿನದಲ್ಲಿ ನಿಶ್ಚಯಿಸಿ ನಿಮಗೆ ತಿಳಿಸುತ್ತೇನೆ" ಎಂದರು.

ಅಷ್ಟು ಹೊತ್ತಿಗೆ ಕಾರು ಬಂತು ಹತ್ತಿದೆವು. ಇಬ್ಬರೂ ಕೊಂಚ ಸಮಯ ಮಾತನಾಡಲಿಲ್ಲ. ಆಮೇಲೆ "ನೋಡಿ ಗೌಡರೇ ನನ್ನ ಹೆಂಡತಿಗೆ ನನ್ನೊಬ್ಬನ ಮೇಲೆಯೇ ಅನುಮಾನ ಎಂದುಕೊಂಡಿದ್ದೆ. ಆದರೆ ನಿಮ್ಮ ಮೇಲೂ ಸಹ" ಎಂದರು. ಇಬ್ಬರೂ ಬಿದ್ದು ಬಿದ್ದು ನಕ್ಕೆವು. "ಹೆಂಗಸರು ಹೆಂಗಸರೇ. ಎಲ್ಲರ ಮನೆಯ ಹೆಂಗಸರೂ ಒಂದೇ. ತಾವು ಪ್ರೀತಿಸುವವರ ಬಗ್ಗೆ ಈ ತರಹ ಕಾಳಜಿ ಇರಬೇಕಾದ್ದೆ" ಎಂದು ಹೇಳಿ "ಕೊನೆಗೂ ನನ್ನ ಹಳ್ಳಿಗೆ ಬರುವ ಕಾರ್ಯಕ್ರಮ ತೀರ್ಮಾನವಾಗಲಿಲ್ಲವಲ್ಲ" ಎಂದೆ. ಅದಕ್ಕವರು "ದಯವಿಟ್ಟು ನೀವು ೪ನೇ ತಾರೀಖು ನನಗೆ ದೂರವಾಣಿ ಮಾಡಿ. ಅಂದು ಖಂಡಿತ ನಿಖರವಾದ ತಾರೀಖು ಕೊಡುತ್ತೇನೆ. ತಾತ್ಕಾಲಿಕವಾಗಿ ಜೂನ್ ೯ ಮತ್ತು ೧೦ ಎಂದು ಇಟ್ಟುಕೊಳ್ಳೋಣ ಎಂದರು.

ಅಷ್ಟರಲ್ಲಿ ಅಮಿ ಫಿಲಂಸ್‌ನ ಕಛೇರಿಯ ಮುಂದೆ ಕಾರು ನಿಂತಿತು. ಅವರು ಇಳಿದು ನನ್ನ ವಸತಿ ಗೃಹಕ್ಕೆ ನನ್ನನ್ನು ಬಿಡುವಂತೆ ಚಾಲಕನಿಗೆ ಹೇಳಿ ತುಂಬು ಹೃದಯದಿಂದ ನಗುಮೊಗದಿಂದ ನನ್ನತ್ತ ಕೈಬೀಸಿದರು. ನಾನೂ ಅವರನ್ನು ಬಿಡಲಾರದೆ ಬಿಟ್ಟು ಅನ್ಯಮನಸ್ಕನಾಗಿ ಪ್ರತಿಯಾಗಿ ಕೈಬೀಸಿದೆ. ◆



"ರಂಗನಾಯಕಿ" ಚಿತ್ರದ ಚಿತ್ರೀಕರಣದ ಸಂದರ್ಭದಲ್ಲಿ ಎರಡನೆಯವರು ಛಾಯಾಗ್ರಾಹಕ ಮಾರುತಿ ರಾವ್, ಪುಟ್ಟಣ್ಣ ಕಣಗಾಲ್, ಆರತಿ, ಸಹ ಕಲಾವಿದೆಯೊಬ್ಬರು ಮತ್ತು ಅಂಬರೀಷ್.

# ಮತ್ತೆ ಭೇಟಿಯಾಗಲಿಲ್ಲ

ಪುಟ್ಟಣ್ಣನವರಿಗೆ ನಾನು ಮಾತು ಕೊಟ್ಟಂತೆ ೪.೬.೧೯೮೫ರ ಬೆಳಗ್ಗೆ ಹನ್ನೊಂದು ಘಂಟೆಗೆ ಪುಟ್ಟಣ್ಣನವರ ಕಛೇರಿಗೆ ಹಾಸನದಿಂದ ದೂರವಾಣಿ ಮಾಡಿದೆ. ಆ ಕಡೆಯಿಂದ ಮಾತನಾಡಿದವರು "ಅವರು ಪ್ರಭಾಕರ ಶಾಸ್ತ್ರಿಗಳ ಮನೆಯಲ್ಲಿದ್ದಾರೆ" ಎಂದರು. "ನಾನು ದೂರವಾಣಿ ಮಾಡಿದ್ದನ್ನು ಪುಟ್ಟಣ್ಣನವರಿಗೆ ತಿಳಿಸಿ" ಎಂದು ಹೇಳಿ ದೂರವಾಣಿ ಕೆಳಗಿಟ್ಟೆ. ನಾನು ನನ್ನ ಹಳ್ಳಿಯ ಪ್ರವಾಸದ ಕಾರ್ಯಕ್ರಮವನ್ನು ನಿಖರವಾಗಿ ಪುಟ್ಟಣ್ಣನವರಿಗೆ ತಿಳಿಸುವ ಸಲುವಾಗಿ "ತಾರೀಖು ೧೦ ಮತ್ತು ೧೧ ನನಗೆ ಅನುಕೂಲವಾಗಿದೆ. ನಿಮಗೆ ಸರಿಯೆನಿಸಿದರೆ ಒಪ್ಪಿಗೆ ತಿಳಿಸಿ", ಎಂದು ಟೆಲಿಗ್ರಾಂ ಕಳುಹಿಸಿದೆ.

ಅವರು ತಾರೀಖು ಎರಡರಂದೇ ಶುಶ್ರೂಷಾಗೃಹ ಸೇರಿರುವ ವಿಚಾರ ನನಗೆ ತಿಳಿದಿರಲಿಲ್ಲ. ಅಲ್ಲಿ ಪುಟ್ಟಣ್ಣನವರಿಗೆ ಶಾಂತಿಭಂಗವಾಗದಿರಲೆಂದು ಯಾರು ವಿಚಾರಿಸಿದರೂ ವಾಸ್ತವಾಂಶ ತಿಳಿಸಬಾರದೆಂದೂ ತಾಕೀತು ಮಾಡಲಾಗಿತ್ತಂತೆ. ವಿಧಿ ಈ ರೂಪದಲ್ಲಿ ನಾನು ಅವರನ್ನು ಸಾಯುವ ಮುನ್ನ ನೋಡದಂತೆ ವಂಚಿಸಿತ್ತು.

ಪುಟ್ಟಣ್ಣನವರು ಇಹಲೋಕವನ್ನು ತ್ಯಜಿಸಿದ ವರ್ತಮಾನ ತಿಳಿಯಿತು. ಬೆಂಗಳೂರಿಗೆ ಹೊರಟು ಬಂದೆ. ಎರಡು ದಿನ ಕಳೆದಿದ್ದರೂ ಜನ ಜಂಗುಳಿ ಕಡಿಮೆಯಾಗಿರಲಿಲ್ಲ. ನಾನು ಮೊಗಸಾಲೆಯನ್ನು ದಾಟಿ ಕೈಸಾಲೆಗೆ ಹೋದಾಗ ಗೋಡೆಯ ಮೇಲೆ ನಗುತ್ತಾ ಕುಳಿತಿದ್ದ ಪುಟ್ಟಣ್ಣನವರನ್ನು ಕಂಡು ಅವರ ಮುಖವನ್ನೊಮ್ಮೆ ದಿಟ್ಟಿಸಿ ನೋಡಿದೆ. ದುಃಖ ಒತ್ತರಿಸಿ ಬಂತು. ಬಿಕ್ಕಿ ಬಿಕ್ಕಿ ಅಳುತ್ತಾ, "ನನ್ನ ಹಳ್ಳಿಗೆ ಬರುತ್ತೇನೆಂದು ಭರವಸೆ ನೀಡಿ ಬೇರೆ ಲೋಕಕ್ಕೆ ಹೋದೆಯಲ್ಲಾ" ಎಂದು ದುಃಖಿಸಿದೆ.

ಅಲ್ಲಿಯೇ ಇದ್ದ ನಟ ಶಿವರಾಂರವರು ನಾನು ಬಂದಿರುವ ವಿಚಾರವನ್ನು ಶ್ರೀಮತಿ ಪುಟ್ಟಣ್ಣನವರಿಗೆ ತಿಳಿಸಿದರು. ನಾಗಲಕ್ಷ್ಮೀಯವರೂ ಕಣ್ಣೀರು ಹಾಕುತ್ತಾ ನಿಂತಿದ್ದ ನನ್ನ ಕಡೆಗೆ ಬಂದು "ನಿಮ್ಮ ತಾರು ಅವರು ಸಾಯುವ ಒಂದು ದಿನ ಮುಂಚೆ ಅವರ ಕೈಸೇರಿತು. ನೋಡೇ ಲಕ್ಷ್ಮೀ ಆ ದಿನ ಗೌಡರು ನನ್ನನ್ನು ಅವರ ಹಳ್ಳಿಗೆ ಕರೆದಾಗ ನೀನು ಅವರಿಗೆ ಸರಿಯಾಗಿ ಉತ್ತರಿಸಲಿಲ್ಲ. ಗೌಡರಿಗೆ ಬೇಸರವಾಯಿತೇನೋ" ಎಂದರು ಎಂದು ಹೇಳಿದರು. ಅತ್ತು ಅತ್ತು ಆಕೆಯ ಮುಖ ನಿಸ್ತೇಜವಾಗಿತ್ತು. ಕೇವಲ ಎರಡು-ಮೂರು ದಿನದಲ್ಲಿ ತುಂಬಾ ಕೃಶವಾಗಿ ಹೋಗಿದ್ದರು. ಅಷ್ಟರಲ್ಲಿ ಮಕ್ಕಳೆಲ್ಲರೂ ಬಂದು ನನ್ನ ಸುತ್ತ ನಿಂತರು. ಅವರಿಗೆ ಸಮಾಧಾನ ಹೇಳಿ ನಡುಮನೆಯಲ್ಲಿ ಜ್ಯೋತಿ ರೂಪದಲ್ಲಿ ಉರಿಯುತ್ತಿದ್ದ ಅಗಲಿದ ಮಿತ್ರನಿಗೆ ಸಾಷ್ಟಾಂಗ ಮಾಡಿ ಹೊರ ಬಂದೆ.

ತಾರೀಖು ೧೯.೬.೧೯೮೫ ರಂದು ಪುಟ್ಟಣ್ಣನವರ ಪುಣ್ಯ ತಿಥಿ. ಕೆಲವೇ ಆಯ್ದ ಜನರಿಗೆ ಕರೆ ಕಳುಹಿಸಿದ್ದರೂ ಸಂಖ್ಯೆಯಲ್ಲಿ ಸಹಸ್ರ ಅಭಿಮಾನಿಗಳು ಭಾಗವಹಿಸಿದ್ದರು. ಪುಟ್ಟಣ್ಣನವರು ಪರಿಚಯಿಸಿದ, ಅವರಿಂದ ಹೊಸ ತಿರುವು ಪಡೆದ, ಅವರಲ್ಲಿ ಅಭಿಮಾನವಿದ್ದ ಕಲಾವಿದರು, ತಾಂತ್ರಿಕಜ್ಞರು, ನಿರ್ಮಾಪಕರು, ಚಲನಚಿತ್ರ ರಂಗದ ಹಾಗೂ ವಿವಿಧ ಕ್ಷೇತ್ರದ ಅನೇಕ ಜನ ಭಾಗವಹಿಸಿದ್ದರು. ಪ್ರಮುಖವಾಗಿ ಆರತಿಯವರು ಒಳಗಿನ ಎಲ್ಲಾ ಕಾರ್ಯದಲ್ಲಿಯೂ ನಿರತರಾಗಿದ್ದರು ಪದ್ಮಾವಾಸಂತಿಯವರು ಊಟಕ್ಕೆ ಬಡಿಸುವ ಕೆಲಸವನ್ನು ನಿರ್ವಹಿಸುತ್ತಿದ್ದರು. ನಟ ಶಿವರಾಂ, ನಿರ್ದೇಶಕ ರವಿಯವರು ಎಲ್ಲಾ ಮೇಲ್ವಿಚಾರಣೆ ನಡೆಸುತ್ತಿದ್ದರು.

ನನ್ನ ಪಕ್ಕದಲ್ಲಿಯೇ ಊಟಕ್ಕೆ ಕುಳಿತಿದ್ದ ಸಂಗೀತ ನಿರ್ದೇಶಕ ವಿಜಯಭಾಸ್ಕರ್ ಅವರೊಡನೆ ನಾವು ಮೈತ್ರಿ ಮಿತ್ರರು, ಮದರಾಸಿಗೆ ಹೋಗಿದ್ದಾಗ ನಮ್ಮ "ಸಾವಿರ ಮೆಟ್ಟಿಲು" ನಿರ್ದೇಶನಕ್ಕೆ ಅವರು ಪುಟ್ಟಣ್ಣನವರ ಹೆಸರನ್ನು ಸೂಚಿಸಿದ್ದನ್ನು ಸ್ಮರಿಸಿಕೊಂಡೆವು. ಈ ಸಂದರ್ಭದಲ್ಲೇ ಪುಟ್ಟಣ್ಣನವರ ಕುರಿತು ಒಂದು ಪುಸ್ತಕವನ್ನೇಕೆ ಬರೆಯಬಾರದು ಎಂದೆನಿಸಿತು. ಅದನ್ನೇ ಗುಣಿಸುತ್ತಾ ನನ್ನ ಹೋಟೆಲ್‌ಗೆ ಬಂದೆ.



## ನಾನು ಕೇಳಿದ್ದು

ಕನ್ನಡ ಚಿತ್ರರಂಗದ 'ಚಿತ್ರದೀಪ' ಆರಿ ಹೋಗಿದ್ದರೂ ಅವರ ಪ್ರತಿಭೆ ಅಮರ. ಮುಂಬರುವ ನಾಲ್ಕು ದಿನಗಳಲ್ಲಿ ಪುಟ್ಟಣ್ಣನವರ ಜೀವಿತದ ಕೊನೆಯ ಅಂಕದ ಹೃದಯ ವಿದ್ರಾವಕದ ಪ್ರದರ್ಶನ. ಅಂದು ನಿರ್ದೇಶಕರ ಸಂಘದ ವಾರ್ಷಿಕೋತ್ಸವದ ಸಡಗರದ ಸಮಾರಂಭ. ಆ ಸಂತಸದ ನಡುವೆಯೇ ಮೂರನೇ ಬಾರಿಯ ಹೃದಯಾಘಾತ. ಸೋತ ಪುಟ್ಟಣ್ಣ "ಈ ಸಲ ನಾನು ಬದುಕುತ್ತೀನಾ" ಎಂದರು. ಸಾವಿನ ಬೋನಿನನಲ್ಲಿಯೂ ತನ್ನ ವೃತ್ತಿಬಾಂಧವರ ಬಗ್ಗೆ ಚಿಂತೆ. ಅಮ್ಮನ ತಿಥಿಗೆ ಬಂದ ಪುರೋಹಿತರು ಮಗನ ಅಂತ್ಯಕ್ರಿಯೆ ಮಾಡಿದ್ದು, ಸಾವಿನ ಸುದ್ದಿಯಿಂದ ದಿಕ್ಕೆಟ್ಟ ಅಭಿಮಾನಿಗಳ ಮಹಾಪೂರ, ಆಗಸದ ಅಳು, ಅಂತಿಮವಾಗಿ ಕಾವೇರಿಯಲ್ಲಿ ಲೀನವಾದ ಚಿತಾಭಸ್ಮ.

ಇವೆಲ್ಲಾ ಮುಂದಿವೆ....

# ನಲಿವಿನಲ್ಲಿ ನೋವು

ತಾರೀಖು ೨.೬.೧೯೭೫ನೇ ಭಾನುವಾರ ಪುಟ್ಟಣ್ಣನವರ ಮಾರ್ಗದರ್ಶನದಲ್ಲಿ ಕರ್ನಾಟಕ ಚಲನಚಿತ್ರ ನಿರ್ದೇಶಕರ ಸಂಘದ ಪ್ರಥಮ ವಾರ್ಷಿಕೋತ್ಸವ ಹಾಗೂ ಪ್ರಶಸ್ತಿ ವಿಜೇತ ನಿರ್ದೇಶಕರಿಗೆ ಅಭಿನಂದನಾ ಸಮಾರಂಭ, ಪುಟ್ಟಣ್ಣನವರು ನಿರ್ದೇಶಕ ಸಂಘದ ಪ್ರಥಮ ಅಧ್ಯಕ್ಷರು. ಅಂದ ಮೇಲೆ ಕೇಳಬೇಕೆ, ಅದನ್ನು ಅವರು ರೂಪಿಸಿದ ರೀತಿ ಎಲ್ಲರನ್ನೂ ದಂಗು ಬಡಿಸುವಂತಿತ್ತು. ಅದರಲ್ಲಿ ಪುಟ್ಟಣ್ಣನವರ ಕುಸುರಿ ಕೆಲಸ ಎದ್ದು ಕಾಣುತ್ತಿತ್ತು.

ಈ ವಾರ್ಷಿಕೋತ್ಸವ ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ಬರಲು ಒಪ್ಪಿದ್ದ ಖ್ಯಾತ ನಿರ್ದೇಶಕ ಹೃಷಿಕೇಶ್ ಮುಖರ್ಜಿಯವರು ಜೂನ್ ಒಂದರಂದು ದೆಹಲಿಯಲ್ಲಿ ನಡೆಯಲಿದ್ದ ರಾಷ್ಟ್ರಪ್ರಶಸ್ತಿ ಪ್ರಧಾನ ಸಮಾರಂಭದಲ್ಲೂ ಭಾಗವಹಿಸಬೇಕಾಗಿತ್ತು. ಅವರಿಗೆ ಆರೋಗ್ಯ ಬೇರೆ ಚೆನ್ನಾಗಿಲ್ಲವೆಂಬ ವದಂತಿಯಿಂದಾಗಿ ಪುಟ್ಟಣ್ಣನವರಿಗೆ ಏನೇನೋ ಯೋಚನೆಗಳು ಬಂದಿದ್ದವು. "ಕಾರ್ಯಕ್ರಮ ಚೆನ್ನಾಗಿ ಆಗುತ್ತದೆ. ನೀವೇನೂ ಯೋಚಿಸಬೇಡಿ" ಎಂದು ತಮ್ಮ ಸಂಘದ ಸದಸ್ಯರು ಹೇಳಿದರೂ ಅವರಿಗೆ ಸಮಾಧಾನವಿರಲಿಲ್ಲ. "ಕಾರ್ಯಕ್ರಮ ಬಂದವರಿಗೆ ಆಶ್ಚರ್ಯವಾಗುವಂತಿರಬೇಕು. ಅವರು ಸಂತೋಷ ಪಡುವಂತಿರಬೇಕು. ಇಂತಹ ಕಾರ್ಯಕ್ರಮ ಹಿಂದೆಂದೂ ನಡೆದಿರಬಾರದು" ಎಂದು ಸಂಘದ ಪದಾಧಿಕಾರಿಗಳಿಗೆ ಹೇಳುತ್ತಿದ್ದರು.

ನಿರ್ದೇಶಕರುಗಳಾದ ರವಿ, ಸಿದ್ಧಲಿಂಗಯ್ಯ, ಗೀತಪ್ರಿಯ, ಜೋಸೈಮನ್ ತಿಪಟೂರು ರಘು, ಜಾನಕಿರಾಮ್ ಎಲ್ಲರಿಗೂ ಒಂದೊಂದು ಕೆಲಸ ವಹಿಸಿದ್ದರು. ಎಲ್ಲದರಲ್ಲೂ ಅಚ್ಚುಕಟ್ಟಿರಬೇಕೆಂದು ಹಲವಾರು ಬಾರಿ ಅವರುಗಳಿಗೆ ರಿಹರ್ಸಲ್ ಮಾಡಿಸಿದ್ದರು. ಸಮಯ ಬಂದಾಗ ವ್ಯಂಗ್ಯ ಮಾಡುತ್ತಾ, ತಮಾಷೆ ಮಾಡಿ ಛೇಡಿಸುತ್ತಾ, ಹುಸಿಕೋಪ ತೋರಿಸುತ್ತಾ ಎಲ್ಲಾ ಕೆಲಸಕ್ಕೆ ಸೂತ್ರಧಾರಿಗಳಾಗಿದ್ದರು. ಅಂದು ಮಧ್ಯಾಹ್ನ ೧೨ ಗಂಟೆಗೆ ಫಿಲಂ ಆರ್ಕಿವ್ಸ್‌ನಿಂದ ತರೆಸಿದ್ದ "ಹನಿಮೂನ್"

ಎಂಬ ಹಳೆಯ ಚಿತ್ರವನ್ನು ನಿರ್ದೇಶಕರಿಗೆಲ್ಲಾ ತೋರಿಸಿದ್ದರು. ಒಟ್ಟಿಗೆ ಎಲ್ಲರಿಗೂ ಊಟ ಏರ್ಪಾಡು ಮಾಡಿ, ಅವರೇ ಮುಂದೆ ನಿಂತು ಬಡಿಸಿದ್ದರು.

ಸಂಜೆ ೬.೧೫ ಗಂಟೆಗೆ ಸರಿಯಾಗಿ ಕಾರ್ಯಕ್ರಮ ಪ್ರಾರಂಭವಾಯಿತು. ಸಂಘದ ಕಾರ್ಯದರ್ಶಿ ರವಿಯವರು ಈಗ ಪ್ರಾರ್ಥನೆ ಎಂದು ಪ್ರಕಟಿಸುತ್ತಿದ್ದಂತೆಯೇ "ನವಜೀವನ" ಚಿತ್ರದ ಪ್ರಾರ್ಥನೆಯ ದೃಶ್ಯ ತೆರೆಯ ಮೇಲೆ ಮೂಡಿತು. ಹಿಂದು, ಮುಸ್ಲಿಂ ಮತ್ತು ಕ್ರೈಸ್ತ ಸಂಪ್ರದಾಯಗಳ ಪ್ರಾರ್ಥನೆಯ ರೀತಿಯ ವಿಧಾನವನ್ನು ಚಿತ್ರೀಕರಿಸಿದ ದೃಶ್ಯ ಅದು. "ಓಂ, ಇಲ್ಲಿಲ್ಲಾ, ಓಫಾದರ್" ಎಂದು ವಿಭಿನ್ನ ಮತಗಳಿಗೆ ಸೇರಿದ ಮೂರು ಪಾತ್ರಧಾರಿಗಳು ಹೇಳುವ ದೃಶ್ಯ ಅದು. ನೋಡುತ್ತಿದ್ದ ಪ್ರೇಕ್ಷಕರಿಗೆ ತೆರೆ ಇದೆ ಎಂಬ ಕಲ್ಪನೆಯೇ ಇದ್ದಂತಿರಲಿಲ್ಲ. ಜನರು ಕಿವುಡುಗಟ್ಟುವಂತೆ ಚಪ್ಪಾಳೆ ತಟ್ಟಿದರು. "ಓಹ್, ಅದ್ಭುತ" ಎಂದರು. ಪುಟ್ಟಣ್ಣನವರು ಪುಳಕಿತರಾಗಿ ತಮ್ಮ ಪಕ್ಕದಲ್ಲಿ ಕುಳಿತಿದ್ದವರಿಗೆ "ನೋಡಿ ನಾನು ಹೇಳಿರಲಿಲ್ಲವೇ ಜನ ಇಂತಹವುದನ್ನು ಇಷ್ಟಪಡುತ್ತಾರೆ ಅಂತ" ಎಂದು ಹೇಳಿದರು.

ಪ್ರಾರ್ಥನೆ ಮುಗಿದ ನಂತರ ಪುಟ್ಟಣ್ಣನವರು ವೇದಿಕೆ ಮೇಲೆ ಬಂದು ಎಲ್ಲರಿಗೂ ಸ್ವಾಗತ ಬಯಸಿ ಸೈಡ್‌ವಿಂಗ್‌ನತ್ತ ಬರುತ್ತಾ "ಏಕೋ ನನಗೆ ಎದೆ ನೋಯುತ್ತಿದೆ" ಎಂದರು. ಅವರು ಪಕ್ಕಕ್ಕೆ ಸರಿಯುತ್ತಿದ್ದಂತೆ "ಆಕ್ಸಿಡೆಂಟ್", "ಬೆಂಕಿ", "ಬಂಧನ", "ಅನುಭವ" ಚಿತ್ರಗಳ ಒಂದೊಂದು ದೃಶ್ಯದ ಪ್ರದರ್ಶನ ಹಾಗೂ ಆ ಚಿತ್ರಗಳ ನಿರ್ಮಾಪಕರು ಮತ್ತು ನಿರ್ದೇಶಕರುಗಳಿಗೆ ಅಭಿನಂದನಾ ಕಾರ್ಯಕ್ರಮ ಮುಂದುವರಿಯಿತು.

ಆದರೆ ಪುಟ್ಟಣ್ಣನವರಿಗೆ ಎದೆ ನೋವು ತೀವ್ರವಾಗಿತ್ತು, ನಿರ್ದೇಶಕಿ ಪ್ರೇಮಾಕಾರಂತರು ಮತ್ತು ರವಿಯವರು ದೂರದಲ್ಲಿ ಪುಟ್ಟಣ್ಣನವರಿಗೆ ಕುರ್ಚಿ ಹಾಕಿಕೊಟ್ಟರು. ನೋವು ಹೆಚ್ಚಾಯಿತು. ಜಾನಕಿರಾಂರವರನ್ನು ಕುರಿತು "ತುಂಬಾ ಎದೆ ನೋವು" ಎಂದು ಎದೆ ಹಿಡಿದುಕೊಂಡರು.

◆

## "ಈ ಸಲ ನಾನು ಬದುಕ್ತೀನಾ"

ಆಗ ಜಾನಕಿರಾಂರವರು ಅಜಂತಾ ಲಾಂಛನದ ಹಂಚಿಕೆದಾರ ಹಾಗೂ ನಿರ್ಮಾಪಕ ರಾಜುರವರ ಜೊತೆ ಹೋಗಿ ಹತ್ತಿರದಲ್ಲಿದ್ದ ವೈದ್ಯರೊಬ್ಬರನ್ನು ಕರೆದುಕೊಂಡು ಬಂದರು. ಪುಟ್ಟಣ್ಣನವರನ್ನು ಪರೀಕ್ಷಿಸಿದ ವೈದ್ಯರು ಜಾನಕಿರಾಂರವರಿಗೆ ಕೂಡಲೇ ಪುಟ್ಟಣ್ಣನವರನ್ನು ಆಸ್ಪತ್ರೆಗೆ ಸೇರಿಸುವಂತೆ ತಿಳಿಸಿದರು. ಅಂತೆಯೇ ಭಕ್ತಾರಾಂ ಶುಶ್ರೂಷಾ ಗೃಹಕ್ಕೆ ಕರೆದುಕೊಂಡು ಹೋದರು. ದಾರಿಯಲ್ಲಿ "ಈ ಸಲ ನಾನು ಬದುಕ್ತೀನಾ" ಎಂದು ಜಾನಕಿರಾಂರವರನ್ನು ಕೇಳಿದರು ಪುಟ್ಟಣ್ಣ.

ಅಂದು ರಾತ್ರಿ ಶುಶ್ರೂಷಾ ಗೃಹದಲ್ಲೂ ಕೂಡ ಪುಟ್ಟಣ್ಣನವರು ಅವರ ಹೆಂಡತಿಯನ್ನು "ಕಾರ್ಯಕ್ರಮ ಹೇಗಿತ್ತಂತೆ" ಎಂದು ವಿಚಾರಿಸಿದರು. ಆಮೇಲೆ ನೋವಿನಿಂದ ಪ್ರಜ್ಞೆ ತಪ್ಪಿದರು. ◆



ಸಾಹಿತಿ ಟಿ.ಜಿ. ಅಶ್ವತ್‌ನಾರಾಯಣ್, ನಿರ್ಮಾಪಕ ಕೆ.ಎಸ್. ಜಗನ್ನಾಥ್, ಪುಟ್ಟಣ್ಣ ಕಣಗಾಲ್, ಪತ್ರಕರ್ತ ಕೆ.ಎಸ್. ನಾರಾಯಣಸ್ವಾಮಿ.

## ಸುಶೀಲ್‌ಕುಮಾರ್‌ಗೆ ಹಣ ಕೊಟ್ಟೆಯಾ

ಸೋಮವಾರ ಪ್ರಜ್ಞೆ ಬಂತು. ಬೆಳಿಗ್ಗೆ ರವಿ ಬಂದರು. ಅವರು ಬರುತ್ತಿದ್ದಂತೆಯೇ ಪುಟ್ಟಣ್ಣನವರು ಕೇಳಿದ ಮೊದಲ ಪ್ರಶ್ನೆ "ಆ ಸುಶೀಲ್‌ಕುಮಾರ್‌ಗೆ ಐನೂರು ರೂಪಾಯಿ ಕೊಟ್ಟೆಯಾ" ಎಂಬುದು. ಏಕೆಂದರೆ ಗೀತಪ್ರಿಯರವರ ಬಳಿ ಸಹ ನಿರ್ದೇಶಕರಾಗಿದ್ದ ಸುಶೀಲ್‌ಕುಮಾರ್‌ರವರು ಅನಾರೋಗ್ಯಕ್ಕೆ ತುತ್ತಾಗಿ ಆಸ್ಪತ್ರೆಗೆ ಸೇರಿದ್ದು, ಅವರಿಗೆ ತುರ್ತು ಆರ್ಥಿಕ ನೆರವು ನೀಡಲು ನಿರ್ದೇಶಕರ ಸಂಘದಲ್ಲಿ ಈ ಹಿಂದೆ ತೀರ್ಮಾನ ತೆಗೆದುಕೊಳ್ಳಲಾಗಿತ್ತು. ತಾನು ಸಾವಿನ ದವಡೆಯಲ್ಲಿದ್ದರೂ ತನ್ನ ವೃತ್ತಿಬಾಂಧವರ ಬಗ್ಗೆ ಅವರ ಮನಸ್ಸು ಚಿಂತಿಸುತ್ತಿತ್ತು.

೧೦ ಗಂಟೆಯ ವೇಳೆಯಲ್ಲಿ ಪ್ರಭಾಕರ ಶಾಸ್ತ್ರಿಗಳಿಂದ ಶಿವ ಕವಚ ಮಂತ್ರಿಸಿದ ವಿಭೂತಿಯನ್ನು ತರಿಸಿಕೊಂಡರು. ಮಧ್ಯಾಹ್ನ ೩ ಗಂಟೆಗೆ ಹೊಟ್ಟೆ ಹಸಿಯುತ್ತಿರುವುದಾಗಿ ಹೇಳಿ ಸ್ವಲ್ಪ ಊಟ ಮಾಡಿದರು. ೪ ಗಂಟೆ ಮೇಲೆ ಅರ್ಧ ಗಂಟೆ ನಿದ್ರೆ ಮಾಡಿ ಎದ್ದು ಮಕ್ಕಳನ್ನೆಲ್ಲಾ ಕರೆಸಿಕೊಂಡರು. ಮಗಳು ತ್ರಿವೇಣಿ ಮತ್ತು ಮಗ ರಾಮನರಸಿಂಹ ಅವರು ನೋಡಿದ್ದ ಆಂಗ್ಲ ಚಿತ್ರವೊಂದರ ಬಗ್ಗೆ ಚರ್ಚಿಸಿ, "ಅದು ಎಂತಹ ಒಳ್ಳೆಯ ಚಿತ್ರ, ಇಂತಹ ಚಿತ್ರಗಳನ್ನು ಈಗ ಯಾರು ಮಾಡುತ್ತಾರೆ" ಎಂದರು. ರಾತ್ರಿ ಚೆನ್ನಾಗಿ ನಿದ್ರೆ ಮಾಡಿದರು.

◆

# ನಾಳೆ ಅಮ್ಮನ ತಿಥಿ

ಮೂರನೇ ದಿನ ಮಂಗಳವಾರ. ಹಿಂದಿನ ರಾತ್ರಿ ಅಲ್ಲಿಯೇ ಮಲಗಿದ್ದ ಮಗ ಸರ್ವೋತ್ತಮನನ್ನು ಸ್ನಾನಕ್ಕಾಗಿ ಮನೆಗೆ ಕಳುಹಿಸಿದರು. ತಮ್ಮ ನರಸಿಂಹನನ್ನು "ಇಲ್ಲಿಯೇ ಇದ್ದು ಸ್ನಾನ ಮಾಡು" ಎಂದರು. ಮಧ್ಯಾಹ್ನದ ಹೊತ್ತಿಗೆ ಚೆನ್ನಾಗಿ ಆದರು. "ನಾಳೆ ಅಮ್ಮನ ತಿಥಿಯಲ್ಲವೇ? ಹೇಗೆ ವ್ಯವಸ್ಥೆ ಮಾಡಿದ್ದೀರಿ, ಬ್ರಾಹ್ಮಣರಿಗೆಲ್ಲಾ ಹೇಳಿದ್ದೀರಾ" ಎಂದು ವಿಚಾರಿಸಿದರು. "ನಾನು ಇಲ್ಲಿಂದಲೇ ಅಮ್ಮನಿಗೆ ಕೈ ಮುಗಿಯುತ್ತೇನೆ" ಎಂದರು. ಸಂಜೆ ೫ ಗಂಟೆ ವೇಳೆಯಲ್ಲಿ ನೋಡಲು ಬಂದವರೊಡನೆ ಸರಸವಾಗಿ ಮಾತನಾಡಿದರು. ಲೇಖಕ ಅಶ್ವತ್ಥ ನಾರಾಯಣ ಬಂದಾಗ "ನಾನು ಆಸ್ಪತ್ರೆ ಸೇರಿದ್ದರಿಂದ "ಮಸಣದ ಹೂವು" ಚಿತ್ರದ ವಿತರಕರಾದ ನಾಗರಾಜರಾವ್ ನಾನು ಚಿತ್ರ ಯಾವಾಗ ಮುಗಿಸುತ್ತೇನೋ ಎಂದು ತಪ್ಪು ತಿಳಿಯುತ್ತಾರೇನೋ" ಎಂದು ಆತಂಕ ವ್ಯಕ್ತಪಡಿಸಿದರು.

ರಾತ್ರಿ ಡಾಕ್ಟರ್ ಬಂದಾಗ "ನೋವು ಇನ್ನೂ ಕಡಿಮೆಯಾಗಲಿಲ್ಲವಲ್ಲಾ ಡಾಕ್ಟರೇ" ಎಂದರು, "ಅಂಬಾ ಜಗಜ್ಜನನೀ ಲೋಕಮಾತೆ" ಎಂದು ಲೋಕ ಮಾತೆಯನ್ನು ನೆನೆಸಿಕೊಂಡರು. ತಮ್ಮ ನರಸಿಂಹನಿಗೆ "ಊದುಕಡ್ಡಿ ಹಚ್ಚಿಡು" ಎಂದರು. ಊದುಕಡ್ಡಿಯ ಸುವಾಸನೆಯನ್ನು ಅನುಭವಿಸಿ "ಬಹಳ ಚೆನ್ನಾಗಿದೆ ಕಣೋ" ಎಂದರು. "ಊಟ ಮಾಡು" ಎಂದರು. ನರಸಿಂಹ ಊಟ ಬೇಡವೆಂದಾಗ "ಎಲೆ ಅಡಿಕೆಯನ್ನಾದರೂ ಹಾಕಿಕೋ" ಎಂದರು. ದೊಡ್ಡಣ್ಣನನ್ನು "ಮನೆಗೆ ಹೋಗುವುದು ಬೇಡ. ಇಲ್ಲೇ ಇರು" ಎಂದರು. ಅಷ್ಟರಲ್ಲಿ ಶಿವರಾಂ ಮತ್ತು ಸೀತಾರಾಂ ಬಂದರು. ಸೀತಾರಾಂ ಅವರನ್ನು ಕುರಿತು "ಇದುವರೆಗೆ ಏಕೆ ಬರಲಿಲ್ಲ, ಇನ್ನೇನು ಇವನು ಹೊರಡುತ್ತಾನೆ ಎಂತಲೋ" ಎಂದು ತಮಾಷೆ ಮಾಡಿದರು. ರಾತ್ರಿ ಆಮ್ಲಜನಕದ ನಳಿಕೆ ಬೇಡ ಎಂದು ತೆಗೆದರು.

◆

# ಏನು ಬೆಂಗಳೂರಿನಲ್ಲಿ ಇಂದು ಇಷ್ಟೊಂದು ಮೋಡ

ಅಂದು ಬುಧವಾರ ತಾರೀಖು ೫.೬.೧೯೮೫. ಬೆಳಿಗ್ಗೆ ಎದ್ದವರೇ "ಏನು ಬೆಂಗಳೂರಿನಲ್ಲಿಂದು ಇಷ್ಟೊಂದು ಮೋಡ" ಎಂದರು. ನಿತ್ಯಕರ್ಮಗಳನ್ನು ಮುಗಿಸಿ ಅಣ್ಣ ಬಾಲಕೃಷ್ಣನವರನ್ನು, ತಮ್ಮ ನರಸಿಂಹನನ್ನು "ನೀವಿನ್ನು ಮನೆಗೆ ಹೋಗಿ ಅಮ್ಮನ ತಿಥಿ ಕರ್ಮ ಮುಗಿಸಿ ಬನ್ನಿ" ಎಂದು ಕಳುಹಿಸಿದರು.

ಬೆಳಿಗ್ಗೆ ೮ ಗಂಟೆಯ ಮೇಲೆ ಸ್ವಲ್ಪ ಸ್ವಲ್ಪವೇ ನೋವು ಪ್ರಾರಂಭವಾಯಿತು. ಅಮ್ಮನ ತಿಥಿಯ ವ್ಯವಸ್ಥೆಗೆ ಹೋಗಿದ್ದ ಎಲ್ಲಾ ಬಂಧುಗಳನ್ನೂ ಕರೆಸಲಾಯಿತು. ಪತ್ನಿ ನಾಗಲಕ್ಷ್ಮೀ, ಅಣ್ಣ ಬಾಲಕೃಷ್ಣ ಅತ್ತಿಗೆ, ತಮ್ಮಂದಿರಾದ ಶಂಕರ ನಾರಾಯಣ, ನರಸಿಂಹ, ಮಗ ಸರ್ವೋತ್ತಮ ಎಲ್ಲಾ ಪಕ್ಕದಲ್ಲಿದ್ದಂತೆಯೇ ೧೦.೩೦ ರವರೆವಿಗೆ ಲವಲವಿಕೆಯಿಂದ ಮಾತನಾಡುತ್ತಲೇ ದೇಹದೊಳಗಿನ ನೋವಿನಿಂದಾಗಿ ಬಹಳ ತ್ರಾಸ ಪಡುತ್ತಿದ್ದರು. ಆಮೇಲೆ ಅಪಾರವಾಗಿ ಬೆವರಲು ಪ್ರಾರಂಭಿಸಿದರು. ನೋವನ್ನು ತಡೆಯಲಾರದೆ ಆಮ್ಲಜನಕವನ್ನು ಪೂರೈಸುವ ನಳಿಕೆಯನ್ನು ಕಿತ್ತುಹಾಕಿ, ೧೦.೪೫ರ ಹೊತ್ತಿಗೆ ಪತ್ನಿಯ ಕೈಯನ್ನು ಬಲವಾಗಿ ಹಿಡಿದರು. ನಾಗಲಕ್ಷ್ಮೀಯವರು ಮತ್ತೊಂದು ಕೈಯಲ್ಲಿ ಪತಿಯ ತಲೆಯನ್ನು ಹಿಡಿದಿದ್ದಂತೆಯೇ ಪುಟ್ಟಣ್ಣನವರ ಕತ್ತು ಪಕ್ಕಕ್ಕೆ ವಾಲಿತು.

◆

# ಅಂತಿಮ ಯಾತ್ರೆಯ ಸಿದ್ಧತೆ

ನಂತರ ಆಕಾಶವಾಣಿ, ಸುದ್ಧಿ ಸಂಸ್ಥೆಗಳಿಗೆ, ಪತ್ರಿಕಾಲಯಗಳಿಗೆ ಸುದ್ಧಿ ತಿಳಿಸಿ ವಾಹನಕ್ಕೆ ಟೆಲಿಫೋನ್ ಮಾಡಲಾಯ್ತು. ವಾಹನ ಬಂದ ತಕ್ಷಣ ಪಾರ್ಥಿವ ಶರೀರವನ್ನು ನರ್ಸಿಂಗ್ ಹೋಂನ ಹಾಸಿಗೆಯಿಂದ ವಾಹನಕ್ಕೆ ಸಾಗಿಸಲಾಯಿತು.

ಅಂದು ಅವರ ತಾಯಿಯ ಶ್ರಾದ್ಧದ ದಿನ. ಅವರ ಮನೆಯಲ್ಲಿ ಅದಕ್ಕಾಗಿ ಎಲ್ಲಾ ಸಿದ್ಧತೆ ನಡೆದಿತ್ತು. ಆ ಕೆಲಸಕ್ಕೆ ಬಂದ ಪುರೋಹಿತರು ಆಕೆಯ ಮಗನ ಅಂತ್ಯಕ್ರಿಯೆಯನ್ನು ಮಾಡಬೇಕಾಗಿ ಬಂದದ್ದು ಒಂದು ವಿಪರ್ಯಾಸ.

ಆಕಾಶವಾಣಿ ಮೂಲಕ ಸುದ್ಧಿ ಕೇಳಿದ ಜನರು ಅವರ ಪಾರ್ಥಿವ ಶರೀರವನ್ನು ಶುಶ್ರೂಷಾ ಗೃಹದಿಂದ ಅವರ ಜಯನಗರದ ಮನೆಗೆ ತರುವ ವೇಳೆಗೆ ತಂಡೋಪತಂಡವಾಗಿ ಬಂದು ಅವರಿಗೆ ಅಂತಿಮ ಗೌರವ ಸಲ್ಲಿಸಿದರು.

ಸಾವಿನ ಸುದ್ಧಿ ಹರಡುತ್ತಿದ್ದಂತೆ ಅಭಿಮಾನಿಗಳೂ, ಬಂಧುಮಿತ್ರರೂ, ಉದ್ಯಮದ ಎಲ್ಲಾ ವರ್ಗದ ಜನ ಅವರ ಮನೆಯ ಹತ್ತಿರ ಧಾವಿಸಿದರು. ಸಾವಿರ ಸಾವಿರ ಸಂಖ್ಯೆಯಲ್ಲಿ ನೆರೆದ ಅಭಿಮಾನಿಗಳನ್ನು ನಿಯಂತ್ರಿಸಲು ಪೋಲೀಸರು ಅಪಾರ ಶ್ರಮ ಪಡಬೇಕಾಯಿತು. ಮನೆಯೊಳಗೆ ಇರಿಸಲಾಗಿದ್ದ ತಮ್ಮ ನೆಚ್ಚಿನ ನಿರ್ದೇಶಕನನ್ನು ಅಭಿಮಾನಿಗಳು ಸಾಲುಗಟ್ಟಿ ವೀಕ್ಷಿಸಿ ಕಂಬನಿ ಸುರಿಸಿದರು.

ಪುಟ್ಟಣ್ಣನವರ ಶವದ ಬಳಿ ಕುಳಿತಿದ್ದ ಸಾಹಿತಿ ವಿಜಯನಾರಸಿಂಹರವರು ದುಃಖವನ್ನು ತಡೆಯದಾಗಿದ್ದರು. ಪುಟ್ಟಣ್ಣನವರ ಪತ್ನಿ ನಾಗಲಕ್ಷ್ಮೀಯವರ ದುಃಖಕ್ಕೆ ಎಣೆಯಿರಲಿಲ್ಲ. ಪುಟ್ಟಣ್ಣನವರ ಅಣ್ಣ ಪ್ರಭಾಕರ ಶಾಸ್ತ್ರಿಗಳ ಮಡದಿ ಮತ್ತು ಮಗಳು ತಮ್ಮ ದುಃಖಕ್ಕೆ ಅಣೆಕಟ್ಟೆ ಹಾಕಿ ನಾಗಲಕ್ಷ್ಮೀಯವರನ್ನು ಸಂತೈಸುತ್ತಾ ಒಳಗೂ ಹೊರಗೂ ನೋಡಿಕೊಳ್ಳುತ್ತಿದ್ದರು. ಅಳುತ್ತಲೇ ಮಗಳೊಂದಿಗೆ ಆಗಮಿಸಿದ ಆರತಿಯವರು ಪುಟ್ಟಣ್ಣನವರ ಪಾರ್ಥಿವ ಶರೀರದ ಬಳಿ ಕುಳಿತು ಬಿಕ್ಕಿ ಬಿಕ್ಕಿ

ಅತ್ತರು. ಪುಟ್ಟಣ್ಣ ಮತ್ತು ಆರತಿಯವರ ಮಗಳಾದ 'ಯಶಸ್ವಿನಿ' ದುಃಖದಿಂದ ತಂದೆಯ ಶರೀರದ ಕಡೆ ನೋಡುತ್ತಿದ್ದಳು.

ಪದ್ಮಾವಾಸಂತಿ, ಜಯಮಾಲಾ, ಪುಟ್ಟಣ್ಣನವರ ಸಹಾಯಕ ನಿರ್ದೇಶಕ ಚಂದ್ರಹಾಸ ಆಳ್ವ, ಜೈಜಗದೀಶ್, ಅಂಬರೀಶ್, ವಜ್ರಮುನಿ, ಸರಿತ, ಮಾಧವಿ, ಶ್ರೀಧರ್, ಹಾಸನ ರಘು, ರಾಮಕೃಷ್ಣ ನೀಗ್ರೋಜಾನಿ ಮತ್ತಿತರರು ಕಂಬನಿಗರೆದರು. ಜಯಂತಿ ಶಾಂತವಾಗಿ ಬಂದು ಹೂಮಾಲೆಯಿಟ್ಟು ಪಾದಗಳನ್ನು ಚುಂಬಿಸಿ ಕ್ಷಣಕಾಲ ಪುಟ್ಟಣ್ಣನವರ ಮುಖವನ್ನು ನೋಡಿ ಹೊರನಡೆದರು.

ಇತ್ತ ಜಿ.ವಿ. ಅಯ್ಯರ್, ರಾಜೇಂದ್ರಸಿಂಗ್ ಬಾಬು, ಶಿವರಾಂ, ಸಿ.ವಿ.ಎಲ್ ಶಾಸ್ತ್ರಿ ಮುಂತಾದ ಹಿರಿಯರೆಲ್ಲಾ ಸೇರಿ ಅಂತಿಮ ಯಾತ್ರೆಗೆ ಸಿದ್ಧತೆ ನಡೆಸುತ್ತಿದ್ದರು. ಅಲಂಕೃತ ಲಾರಿ ಬಂತು. ಅನಂತನಾಗ್, ಶಂಕರನಾಗ್ ಸಮೀಪವೇ ಇದ್ದು ಪಾರ್ಥಿವ ಶರೀರಕ್ಕೆ ಹೆಗಲುಕೊಟ್ಟರು.

ಪುಟ್ಟಣ್ಣನವರ ಮನೆ ಮುಂದೆ ಭಾರಿ ಜನಸ್ತೋಮ ಸೇರಿತ್ತು. ಮದ್ರಾಸಿನಿಂದ ವಿಷ್ಣುವರ್ಧನ್, ದ್ವಾರಕೀಶ್, ವಿಜಯಭಾಸ್ಕರ್ ಮುಂತಾದವರು ಬಂದು ಸೇರಿದರು. ಎನ್. ವೀರಾಸ್ವಾಮಿ, ಅಬ್ಬಯ್ಯನಾಯ್ಡು, ಎನ್. ಲಕ್ಷ್ಮೀನಾರಾಯಣ್ ಮೊದಲಾದ ಕನ್ನಡ ಚಿತ್ರರಂಗದ ದಿಗ್ಗಜರೆಲ್ಲಾ ಕಂಬನಿಗರೆದರು.

ಪುಟ್ಟಣ್ಣನವರು ನಿರ್ದೇಶಿಸಿದ ಕೊನೆಯ ಚಿತ್ರ "ಮಸಣದ ಹೂವು" ಚಿತ್ರದ ನಿರ್ಮಾಪಕ ತಿಪಟೂರು ಸುಬ್ಬಣ್ಣ, ಲೇಖಕ, ಪತ್ರಕರ್ತ ಅಶ್ವತ್ಥನಾರಾಯಣ್ ಮತ್ತು ಆ ಚಿತ್ರತಂಡದ ಹುಡುಗರೆಲ್ಲಾ ತಮ್ಮೊಂದಿಗೆ ಕೊನೆಯದಾಗಿ ಪುಟ್ಟಣ್ಣ ಕಳೆದ ದಿನಗಳನ್ನು ನೆನೆಸಿಕೊಂಡು ದಿಕ್ಕು ತೋಚದಂತಿದ್ದರು.

ಚಿತ್ರೀಕರಣಕ್ಕಾಗಿ ಕುದುರೆಮುಖದಲ್ಲಿದ್ದ ಡಾ: ರಾಜ್‌ಕುಮಾರ್ ಹೆಲಿಕಾಪ್ಟರ್ ತೊಂದರೆಯಿಂದಾಗಿ ಅಂದು ಬರಲಾಗಲಿಲ್ಲವೆಂದು ನೆರೆದಿದ್ದ ರಾಜ್‌ಕುಮಾರ್ ಅಭಿಮಾನಿಗಳು ಆತಂಕಗೊಂಡಿದ್ದರು.

◆

## ಆಗಸದ ಆಳು

ಅಂತಿಮ ಯಾತ್ರೆಯ ಆರಂಭ, ಎಲ್ಲರಿಗಿಂತ ಹೆಚ್ಚಾಗಿ ಪುಟ್ಟಣ್ಣ ಕಣಗಾಲರ ಅಭಿಮಾನಿ ಜನಸ್ತೋಮದ ನೂಕುನುಗ್ಗಲು. ಮೆರವಣಿಗೆಯುದ್ದಕ್ಕೂ ಅಪಾರ ಜನಜಂಗುಲಿ, ಅಗಲಿದ ಮೆಚ್ಚಿನ ನಿರ್ದೇಶಕ ಪುಟ್ಟಣ್ಣ ಕಣಗಾಲರಿಗಾಗಿ ಅಂದು ಆಗಸವೂ ಕಣ್ಣೀರು ಹಾಕಿತು. ಮನೆಗಳ ಮೇಲೆ ನಿಂತವರು ನಿಂತಲ್ಲೇ ನಮಿಸಿದರು. ರಸ್ತೆಯ ಇಕ್ಕೆಲಗಳಲ್ಲಿ ಅಂತಿಮ ದರ್ಶನ ಪಡೆದವರು ಪುಷ್ಪ ಮಳೆಗರೆದರು.

ರವಿ, ಶ್ರೀನಾಥ್, ಭಾರತಿ ಇನ್ನಿತರರು ಮೂಕರಂತೆ ನಡೆದರು. ಅಣ್ಣ ಪ್ರಭಾಕರಶಾಸ್ತ್ರಿಯವರು ನಿರ್ಲಿಪ್ತರಾಗಿ ಅಂತಿಮ ಯಾತ್ರೆಯಲ್ಲಿದ್ದರು. ಹಿರಿಯ ಮಗ ಸರ್ವೋತ್ತಮ ತನ್ನ ತಂದೆಯ ಪಾರ್ಥಿವ ಶರೀರಕ್ಕೆ ಅಗ್ನಿಸ್ಪರ್ಶ ಮಾಡಿದರು. ಅಗ್ನಿ ಮೇಲೇರುತ್ತಿದ್ದಂತೆ ಪುಟ್ಟಣ್ಣನವರ ಬಯಕೆಯಂತೆ ಅಂಕೋಲದಿಂದ ಅವರ ಮಿತ್ರರೊಬ್ಬರು ಜೀವಂತ ಪುಟ್ಟಣ್ಣನವರಿಗೆ ತಂದಿದ್ದ ಜೇನುತುಪ್ಪವನ್ನು ಚಿತೆಗೆ ಸುರಿದರು.

ಪುಟ್ಟಣ್ಣ ಕಣಗಾಲರ ಚಿತೆ ಕನ್ನಡ ಚಿತ್ರೋದ್ಯಮ ಮತ್ತು ಅಭಿಮಾನಿಗಳನ್ನು ಚಿಂತೆಗೀಡುಮಾಡಿತು.

◆

## ಕಾವೇರಿಯಲ್ಲಿ ಲೀನ

ತಾರೀಖು ೬-೬-೧೯೮೫ರ ಗುರುವಾರ ಬೆಳಿಗ್ಗೆ ೮.೩೦ಕ್ಕೆ ಪುಟ್ಟಣ್ಣನವರ ಚಿತಾಭಸ್ಮವನ್ನು ಕುಂಭಗಳಲ್ಲಿ ತುಂಬಲಾಯಿತು. ಅದನ್ನೂ ಮತ್ತು ಮಕ್ಕಳಾದ ಸರ್ವೋತ್ತಮ, ರಾಮನರಸಿಂಹ, ಅಣ್ಣಂದಿರಾದ ಬಾಲಕೃಷ್ಣ, ಪ್ರಭಾಕರ ಶಾಸ್ತ್ರಿ, ತಮ್ಮಂದಿರಾದ ಶಂಕರನಾರಾಯಣ, ನರಸಿಂಹ ಇವರುಗಳನ್ನು ಹೊತ್ತ ಕಾರು ಮಧ್ಯಾಹ್ನ ಕಣಗಾಲಿನತ್ತ ಹೊರಟಿತು. ಬಾಲಕೃಷ್ಣರವರು ಗೋಪಿಕಾ ಗೀತೆಯನ್ನು ಭಜಿಸುತ್ತಿದ್ದರು. ಪ್ರಭಾಕರಶಾಸ್ತ್ರಿಗಳು ಸುಂದರಕಾಂಡ ಪಾರಾಯಣ ಮಾಡುತ್ತಿದ್ದರು. ನರಸಿಂಹರವರು ರಾಮನಾಮ ಸ್ಮರಣೆ ಮಾಡುತ್ತಿದ್ದಂತೆ ಕಾರು ಕಣಗಾಲನ್ನು ಪ್ರವೇಶಿಸಿತು.

ಆಗ ರಾತ್ರಿಯಾಗಿತ್ತು. ವಿಷಯವನ್ನು ತಿಳಿದಿದ್ದ ಕಣಗಾಲ್ ಗ್ರಾಮಸ್ಥರು ಸಾವಿರ ಸಂಖ್ಯೆಯಲ್ಲಿ ಅವರ ಮನೆ ಹತ್ತಿರ ಕಾದಿದ್ದರು, ಕಾರು ಬಂದೊಡನೆಯೇ ಅದನ್ನು ಸುತ್ತುವರೆದು ಗೋಳೋ ಎಂದು ಅತ್ತರು. ಪುಟ್ಟಣ್ಣನವರ ಗುಣಗಾನ ಮಾಡಿದರು. ಪೆಟ್ರೋಮ್ಯಾಕ್ಸ್ ಲೈಟುಗಳು, ವಾದ್ಯಗಳೊಂದಿಗೆ ಪುಟ್ಟಣ್ಣನವರ ಚಿತಾಭಸ್ಮವನ್ನು ಹೊತ್ತ ಪ್ರಭಾಕರ ಶಾಸ್ತ್ರಿಗಳು ಮುಂದೆ ಮುಂದೆ ನಡೆದಂತೆ ದುಃಖಿತಪ್ತರಾದ ಜನಸ್ತೋಮ ಮೌನವಾಗಿ ಹಿಂಬಾಲಿಸಿತು. ಮೆರವಣಿಗೆ ಊರ ಬೀದಿಯಲ್ಲಿ ಸಾಗಿದಂತೆ ಹೆಂಗಸರು ಮಕ್ಕಳಾದಿಯಾಗಿ ಮನೆ ಬಾಗಿಲಲ್ಲಿ ನಿಂತು ಕುಂಭಕ್ಕೆ ಕೈ ಮುಗಿಯುತ್ತಾ ಅತ್ತು ಗೋಳಾಡುತ್ತಿದ್ದ ದೃಶ್ಯ ಕರುಣಾಜನಕವಾಗಿತ್ತು.

ಕೊನೆಗೊಮ್ಮೆ ಪುಟ್ಟಣ್ಣನವರ ಅಜ್ಜ ಪುಟ್ಟಣ್ಣನವರು ಕಟ್ಟಿಸಿದ ಕಾವೇರಿ ನದಿ ತೀರದ ಸೋಪಾನ ಕಟ್ಟೆಯ ಹತ್ತಿರ ಮೆರವಣಿಗೆ ತಲುಪಿದಾಗ ರಾತ್ರಿ ಹನ್ನೊಂದು ಮುಕ್ಕಾಲು. ಪ್ರಭಾಕರ ಶಾಸ್ತ್ರಿಗಳು ಮಂಡಿ ಉದ್ದ ನೀರಿನಲ್ಲಿ ಇಳಿದು ಕುಂಭದಲ್ಲಿದ್ದ ಚಿತಾಭಸ್ಮವನ್ನು ಕಾವೇರಿ ನೀರಿಗೆ ಸುರಿದಾಗ ದುಃಖವನ್ನು ತಡೆಯಲಾರದ ಜನಸ್ತೋಮ 'ಹೋ' ಎಂದು ಅತ್ತಿತು.

◆



ಪುಟ್ಟಣ್ಣ ಕಣಗಾಲ್ ಮತ್ತು ಪತ್ನಿ ನಾಗಲಕ್ಷ್ಮಿ, ಮಕ್ಕಳೊಂದಿಗೆ.



(ಎಡದಿಂದ) ಎರಡನೇ ಮಗಳು ರಾಜೇಶ್ವರಿ, ಪುಟ್ಟಣ್ಣ, ಎರಡನೇ ಮಗ ರಾಮನರಸಿಂಹ, ನೃತ್ಯಗುರು, ಮೊದಲನೇ ಮಗ ಸರ್ವೋತ್ತಮ, ಶ್ರೀಮತಿ ನಾಗಲಕ್ಷ್ಮೀ ಪುಟ್ಟಣ್ಣ, ಮೂರನೇ ಮಗಳು ತ್ರಿವೇಣಿ, ಮೊದಲನೇ ಮಗಳು ಭುವನೇಶ್ವರಿ, ಸಂದರ್ಭ, ರಾಮನರಸಿಂಹ ಮತ್ತು ತ್ರಿವೇಣಿಯವರ ನೃತ್ಯ ರಂಗಪ್ರವೇಶ



"ಮಸಣದ ಹೂವು" ಚಿತ್ರೀಕರಣಕ್ಕೆ ಡಾ|| ರಾಜ್‌ಕುಮಾರ್ ಭೇಟಿಯಿತ್ತಾಗ ಅಂಬರೀಶ್, ಪುಟ್ಟಣ್ಣ, ಜಯಂತಿ, ನಿರ್ಮಾಪಕ ಸುಬ್ಬಣ್ಣ



"ಮಸಣದ ಹೂವು" ಚಿತ್ರದ ಚಿತ್ರೀಕರಣದ ಸಮಯದಲ್ಲಿ ಅಪರ್ಣ, ಪುಟ್ಟಣ್ಣ ಕಣಗಾಲ್, ಶಿವಕುಮಾರ್



ಕನ್ನಡ ಚಿತ್ರರಂಗದ "ಚಿತ್ರದೀಪ" ಆರಿದ್ದರೂ ಅದರ ಪ್ರತಿಭೆ ಎಂದಿಗೂ ಅಮರ



ನೆನಪು ನೂರಾರು...ಅಗಲಿಕೆ ತಂದ ನೋವು...
ಪುಟ್ಟಣ್ಣನವರ ಹಿರಿಯಣ್ಣ ಬಾಲಕೃಷ್ಣ, ಅತ್ತಿಗೆ, ಶ್ರೀಮತಿ ನಾಗಲಕ್ಷ್ಮೀ ಪುಟ್ಟಣ್ಣ ಕಣಗಾಲ್.



ಶ್ರೀಮತಿ ನಾಗಲಕ್ಷ್ಮೀ ಮತ್ತು ಶ್ರೀಮತಿ ಆರತಿ

"ನನಗೆ ಸ್ತ್ರೀಯರ ಬಗ್ಗೆ ಬಹಳ ಅನುಕಂಪ. ಪೂಜ್ಯಭಾವನೆ, ಗೌರವ ಇದೆ. ಏಕೆಂದರೆ ನನ್ನನ್ನು ಸಾಕಿದಂತಹ ವಾತ್ಸಲ್ಯಮಯಿ ಒಬ್ಬಳು ಹೆಂಗಸು. ಆದರೆ ಮೈಕಲ್ ಏಂಜಲೋ ಅದೃಷ್ಟವಂತ. ಅವನಿಗೆ ಬಹುಶಃ ಪ್ರಾಮಾಣಿಕ ನಿಷ್ಠೆಯ ಹೆಂಗಸು ಸಿಕ್ಕಿರಬಹುದು. ಈ ಪುಟ್ಟಣ್ಣನ ಅನುಭವ ಬೇರೆ ತರಹದ್ದು. ಹೆಂಗಸು ಗಂಡಸಿನಷ್ಟೇ ವಂಚನೆ ಮಾಡುತ್ತಾಳೆ. ಗಂಡಸಿನಷ್ಟೇ ರಾಜಕೀಯವನ್ನೂ ಮಾಡುತ್ತಾಳೆ. ಗಂಡಸಿನಷ್ಟೇ ಒಳ್ಳೆಯವಳಾಗಿರುವುದಕ್ಕೆ ಸಾಧ್ಯತೆ ಇದೆ. ಅಲ್ಲದೆ ಅವನಷ್ಟೇ ಕ್ರೂರಿಯಾಗಿರುವುದಕ್ಕೂ ಅವಳಿಗೆ ಗೊತ್ತಿದೆ.

-ಪುಟ್ಟಣ್ಣ ಕಣಗಾಲ್



# ಅವರೇ ಹೇಳಿದ್ದು

ಬಾಲ್ಯದಲ್ಲಿಯೇ ಹೊಟ್ಟೆಗಾಗಿ ದುಡಿಯಬೇಕಾಗಿ ಬಂದದ್ದು, ಪುಟ್ಟಣ್ಣನವರ ಸ್ಥಿತಿ-ಗತಿ. ಪಂತಲುರವರ ಬಳಿ ಚಿತ್ರರಂಗದ ವ್ಯಾಕರಣ ಕಲಿಕೆ, ಕಠಿಣ ಶ್ರಮ, ಗುರಿಸಾಧನೆಯ ಫಲ-ಇವೇ ಯಶಸ್ಸಿನ ಕಡೆ ಕರೆದೊಯ್ದವು. "ನಾನಿನ್ನೂ ಕಲಿಯಬೇಕಾದದ್ದು ಬಹಳ ಇದೆ. ನಾನಿನ್ನೂ ವಿದ್ಯಾರ್ಥಿ" ಎನ್ನುತ್ತಿದ್ದ ಪುಟ್ಟಣ್ಣನವರಿಂದ ಚಿತ್ರರಂಗದವರು ಕಲಿಯಬೇಕಾದದ್ದು ಅಪಾರ. ಏರಿಳಿತಗಳ ನಡುವೆ ಸಿಕ್ಕಿ ಸೊರಗಿದರೂ ಅದ್ಭುತ ಸಾಧನೆ ಮಾಡಿದ ಪುಟ್ಟಣ್ಣನವರ ಪ್ರತಿಯೊಂದು ಮಾತು ಎಂದಿಗೂ ದೀವಟಿಗೆ.

ಸುದ್ದಿ ಪತ್ರಿಕೆಗ್ಗಳಲ್ಲಿ ತಮ್ಮ ಹೇಳಿಕೆಗಳು ಬಂದಾಗ ಅದನ್ನು ಸಂಗ್ರಹಿಸಿ, ಕತ್ತರಿಸಿ ಪುಸ್ತಕಗಳಲ್ಲಿ ಚೊಕ್ಕಟವಾಗಿ ಅಂಟಿಸುವುದು ಅವರ ಅಭ್ಯಾಸ. ಅವುಗಳಿಂದಲೇ ಆರಿಸಿದ ಅವರ ಅಭಿಪ್ರಾಯಗಳನ್ನು ಒಂದೆಡೆ ಇಲ್ಲಿ ಕೊಡಲಾಗಿದೆ. ಇಂತಹುದೇ ಅನೇಕ ವಿಚಾರಗಳನ್ನು ನನ್ನೊಂದಿಗೆ ಸಮಯ ದೊರೆತಾಗಲೆಲ್ಲಾ ಮಾತನಾಡುತ್ತಿದ್ದರು.

ಅವರ ಕನ್ನಡಾಭಿಮಾನ, ಚಲನಚಿತ್ರಗಳ ಜವಾಬ್ದಾರಿ, ಹೆಣ್ಣಿನ ಬಗ್ಗೆ ಗೌರವ, ಕನ್ನಡ ಚಲನಚಿತ್ರಕ್ಕೆ ಸಿಗುವ ಗೌರವ-ಅಗೌರವ, ಚಿತ್ರ ತಯಾರಿಕೆಗೆ ಬೇಕಾದ ಸವಲತ್ತು-ಹೀಗೆ ಇನ್ನೂ ಅನೇಕ ವಿಚಾರಗಳ ಬಗ್ಗೆ ಕಣ್ತೆರೆಯುವ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ, ಅವರದೇ ಮಾತುಗಳಲ್ಲಿ.

ಇವೆಲ್ಲಾ ಮುಂದಿವೆ....

# ಬಾಲ್ಯದ ನೆನಪು

ನಾನು ಹುಟ್ಟಿದ್ದು ಮೈಸೂರು ಜಿಲ್ಲೆಯ ಪಿರಿಯಾಪಟ್ಟಣದ ತಾಲ್ಲೂಕಿನ ಕಣಗಾಲು ಗ್ರಾಮದಲ್ಲಿ. ಅಲ್ಲಿ ಪ್ರೈಮರಿ ಶಾಲೆ ಮಾತ್ರ ಇತ್ತು. ಮಾಧ್ಯಮಿಕ ಶಾಲೆಗೋಸ್ಕರ ನಾನು ಮೈಸೂರಿಗೆ ಬರಬೇಕಾಯಿತು. ನಮ್ಮದು ಬಡ ಕುಟುಂಬ. ಓದುವ ಸಲುವಾಗಿ ವಾರಾನ್ನ ಭಿಕ್ಷಾನ್ನ ಮಾಡಿಕೊಂಡಿದ್ದೆ. ಮೈಸೂರಿನಲ್ಲಿ ವರದಾಚಾರ್ ಎನ್ನುವ ಒಳ್ಳೆಯ ಛಾಯಾಗ್ರಾಹಕ ಇದ್ದರು. ಅವರದು ಸ್ವಂತ ಛಾಯಾಗ್ರಹಣ ಸ್ಟುಡಿಯೋ ಇತ್ತು. ನಾನು ಅವರ ಮನೆಯಲ್ಲಿಯೇ ಇದ್ದುಕೊಂಡು ಶಾಲೆಗೆ ಹೋಗುತ್ತಾ ಇದ್ದೆ. ಬಿಡುವಿನ ಸಮಯದಲ್ಲಿ ಸ್ಟುಡಿಯೋದಲ್ಲಿ ಛಾಯಾಗ್ರಹಣ ಕಲಿಯುತ್ತಿದ್ದೆ. ಹೀಗಾಗಿ ಛಾಯಾಗ್ರಹಣದಲ್ಲಿ ನನಗೆ ಬಹಳ ಆಸಕ್ತಿ ಮೂಡಿತು.

ಅವರ ಮನೆಯವರ ಜೊತೆಯಲ್ಲಿ ನಾನು ತಮಿಳು, ತೆಲುಗು, ಆಂಗ್ಲಭಾಷಾ ಚಿತ್ರಗಳಿಗೆ ಹೋಗುತ್ತಿದ್ದೆ. ಒಬ್ಬ ನಿರ್ದೇಶಕನಾಗಬೇಕು ಎನ್ನುವ ಆಸೆ ನನಗೆ ಮಾಧ್ಯಮಿಕ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವಾಗಲೇ ಪ್ರಾರಂಭವಾಯಿತು. ಆ ಕಾಲದಲ್ಲಿ ಜನಗಳಿಗೆ ಮತ್ತು ನಾನಿದ್ದ ಮನೆಯವರಿಗೆ ಸಿನಿಮಾಗಳ ಬಗ್ಗೆ ಒಳ್ಳೆಯ ಅಭಿಪ್ರಾಯವಿದ್ದರೂ ಸಿನಿಮಾ ಸೇರುವುದರ ಬಗ್ಗೆ ಒಳ್ಳೆಯ ಅಭಿಪ್ರಾಯವಾಗಲೀ, ಪ್ರೋತ್ಸಾಹವಾಗಲೀ ಇರಲಿಲ್ಲ. ಆಗಾಗ್ಗೆ ಆ ಮನೆಯ ಜನ ನಿರ್ದೇಶನದ ಬಗ್ಗೆ ಮಾತನಾಡಿಕೊಳ್ಳುತ್ತಾ ಇದ್ದರು. ನಿರ್ದೇಶಕನಿಂದ ಮಾತ್ರ ಉತ್ತಮ ಚಿತ್ರ ಸಾಧ್ಯ ಎಂಬ ಅವರ ಆ ಮಾತುಗಳು ನನ್ನ ಮನಸ್ಸಿನ ಮೇಲೆ ತುಂಬಾ ಪ್ರಭಾವ ಬೀರಿ ನಾನೂ ನಿರ್ದೇಶನಾಗಬೇಕು, ಉತ್ತಮ ಚಿತ್ರ ತೆಗೆಯಬೇಕು ಅನ್ನುವ ನಿರ್ಧಾರ ಮಾಡಿಕೊಂಡೆ.

ನಾನು ಚಲನಚಿತ್ರ ನೋಡುವುದಕ್ಕೆ ಪ್ರಾರಂಭಿಸಿದ್ದು ನನ್ನ ಎಂಟನೆ ವಯಸ್ಸಿನಲ್ಲಿ. ಆಗ ಕನ್ನಡ ಚಲನಚಿತ್ರಗಳು ಅಷ್ಟಾಗಿ ಇರಲಿಲ್ಲ. ಹೆಚ್ಚಾಗಿ ಆಂಗ್ಲ

ಭಾಷಾ ಚಿತ್ರಗಳನ್ನೇ ನೋಡುತ್ತಾ ಇದ್ದೆ. ಅವುಗಳಲ್ಲಿ ಚಾಪ್ಲಿನ್ ಚಿತ್ರಗಳು, ಲಾರೆಲ್ ಅಂಡ್ ಹಾರ್ಡಿ ಕಾಮೆಡಿ ಚಿತ್ರಗಳು, ವಾಲ್ಟ್ ಡಿಸ್ನಿ ಕಾರ್ಟೂನ್ಸ್ ತುಂಬಾ ಇಷ್ಟ ಆಗುತ್ತಾ ಇತ್ತು. ಹಿಂದೀ ಚಿತ್ರಗಳಲ್ಲಿ ಶಾಂತಾರಾಂ ಮತ್ತು ನ್ಯೂ ಥಿಯೇಟರ್ಸ್ ಚಿತ್ರಗಳು, ಡಾಕ್ಟರ್ ಪಂಕಜ್‌ಮಲ್ಲಿಕ್‌ರವರ ಚಿತ್ರಗಳು ನನಗೆ ತುಂಬಾ ಮೆಚ್ಚುಗೆಯಾದವು. "ಹಾಸ್ಪಿಟಲ್" ಎಂಬ ಒಂದು ಬಂಗಾಳಿ ಚಿತ್ರದಲ್ಲಿ ಕಾನನ್‌ಬಾಲಾ ಅನ್ನುವ ನಟಿಯನ್ನು ನಾನು ತುಂಬ ಮೆಚ್ಚಿಕೊಂಡಿದ್ದೆ. ಈ ಚಿತ್ರದ ಛಾಯಾಗ್ರಹಣ ಕೂಡ ಅದ್ಭುತ. ಆ ನನ್ನ ಅಭಿರುಚಿಗೆ ಕಾರಣ ಶ್ರೀ ವರದಾಚಾರ್ಯರ ಸ್ಟುಡಿಯೋ ಪ್ರಭಾವ.

ಆಗಿನ ವಯೋಧರ್ಮಕ್ಕೆ ಅನುಗುಣವಾಗಿ ಏನೇನೋ ಕನಸುಗಳನ್ನು ಹೆಣೀತಾ ಇದ್ದೆ. ಖುರ್ಷಿದ್, ಸಾಧನಾಬೋಸ್, ಈಶ್ವರಲಾಲ್, ಮೋತಿಲಾಲ್ ಇವರೆಲ್ಲಾ ನನ್ನ ಮೆಚ್ಚಿನ ನಟರಾಗಿದ್ದರು. "ತಾನ್‌ಸೇನ್" "ನರ್ತಕಿ" ಚಿತ್ರಗಳಲ್ಲಿ ಸೈಗಾಲ್‌ರನ್ನು ಮೆಚ್ಚಿಕೊಂಡಿದ್ದೆ. ಇನ್ನೊಂದು ಕಡೆ ಆಂಗ್ಲ ಚಿತ್ರಗಳ ಎರಲೆಫ್ಲಿನ್, ಓಲಿವಿಯಾ ಡಿ ಹಾವಿಲ್ಯಾಂಡ್‌ರಂಥವರನ್ನೂ ಮೆಚ್ಚಿಕೊಂಡು ಎಲ್ಲದರ ಮಿಶ್ರಣವಾಗಿದ್ದೆ. ಪಿ.ಯು. ಚಿನ್ನಪ್ಪ, ಬಿ.ಎನ್. ರೆಡ್ಡಿ ಇವರ ಚಿತ್ರಗಳಾದ "ಮಲ್ಲೀಶ್ವರಿ" "ಬಂಗಾರುಪಾಪ" ಒಳ್ಳೇ ಚಿತ್ರಗಳು.

ನನ್ನ ಪಾಲಿಗೆ ಚಲನಚಿತ್ರ ಕೇವಲ ಮನರಂಜನೆಯಾಗಿರಲಿಲ್ಲ, ಪ್ರತಿಯೊಂದನ್ನು ನಾವು ತುಂಬಾ ಸ್ಟಡಿ ಮಾಡುತ್ತಾ ಇದ್ದೆ, ಆಗ ಬಂದಂತಹ ಪರ್ಲ್‌ಬಕ್‌ರ ನೋಬೆಲ್ ಪಾರಿತೋಷಕ ಕಾದಂಬರಿಯನ್ನಾಧರಿಸಿದ ಆಂಗ್ಲ ಚಿತ್ರ "ಗುಡ್‌ಅರ್ತ್" ಮತ್ತು ಆರ್ಸನ್ ವೆಲ್ಸ್ ಮಾಡಿದ್ದ "ಸಿಟಿಜನ್‌ಕೇನ್" ನನ್ನ ಮೇಲೆ ಪ್ರಭಾವ ಬೀರಿವೆ. ಅದೇ ಸಮಯದಲ್ಲಿ "ಭಕ್ತಪೋತನ", "ತ್ಯಾಗಯ್ಯ" ರೀತಿಯ ಚಿತ್ರಗಳೂ ಕೂಡ ನನಗೆ ಆಗುತ್ತಾ ಇದ್ದವು. ಒಂದು ಕಡೆ ಹಾಲಿವುಡ್ ಚಿತ್ರಗಳಾದರೆ ಮತ್ತೊಂದು ಕಡೆ ಭಾರತೀಯ ಚಿತ್ರಗಳು, ಸಿ. ರಾಮಚಂದ್ರರ ಸಂಗೀತದ "ಧೀರೆಸೆ ಆಜಾರೆ ಅಖಿಯೋಮೆ" ಖುರ್ಷಿದ್ ಅವರ "ಬರಸೊರ" ಹಾಡುಗಳನ್ನು ಬಹಳ ಇಷ್ಟ ಪಡುತ್ತಾ ಇದ್ದೆ, ಮತ್ತೆ ನ್ಯೂಥೇಟರ್ಸ್‌ರವರ "ಶಹನಾಯ್" "ಖಿಡಕಿ" ಚಿತ್ರಗಳ ಹಾಡುಗಳು ಚೆನ್ನಾಗಿದ್ದವು.

ನಾನಿದ್ದ ಮನೆಯಲ್ಲಿ ದೂರವಾಣಿ ವ್ಯವಸ್ಥೆ ಇತ್ತು, ಯಾವುದೋ ನಂಬರ್ ತಿರುಗಿಸಿ ನನಗೆ ಬಂದ ಯಾವುದೋ ಹಾಡನ್ನು ಹೇಳಿ ಬಿಡುತ್ತಾ ಇದ್ದೆ, ನಮ್ಮಣ್ಣ ಕಣಗಾಲ್ ಪ್ರಭಾಕರ ಶಾಸ್ತ್ರಿಗಳು ಬಹಳ ಒಳ್ಳೇ ಕಲಾವಿದರು, ಅವರ ಜೊತೆಯಲ್ಲಿ ನಾಟಕಕ್ಕೆ ಹೋಗುತ್ತಿದ್ದೆ. ನಾಟಕ ಆಡುತ್ತಾ ಇದ್ದೆ, ಏಕೆಂದರೆ ಇವೆಲ್ಲ ಮುಂದೆ

ಚಿತ್ರರಂಗಕ್ಕೆ ಉಪಯೋಗ ಆಗುತ್ತದೆ ಎಂಬುದಾಗಿ ಭಾವನೆ. ಅದೇ ಸಮಯದಲ್ಲಿ ನನಗೆ ಓದಿನ ಬಗ್ಗೆ ಆಸಕ್ತಿ ಹೊರಟುಹೋಯಿತು. ಬದಲಿಗೆ "ಬಿಗಿನಿಂಗ್ ಅಟ್ ದಿ ಎಂಡ್" ಎನ್ನುವ ಚಿತ್ರಗಳೇ ನನ್ನ ಪಾಠ್ಯದ ವಿಷಯಗಳಾದವು.

ಪಾಶ್ಚಾತ್ಯ ಚಲನಚಿತ್ರಗಳಲ್ಲಿ ನನಗೆ ಕಂಡಿದ್ದು ಕೇವಲ ಹೋರಾಟ. ನಮ್ಮ ಭಾರತೀಯ ಚಿತ್ರಗಳಲ್ಲಿ ನಾನು ಗುರುತಿಸಿಕೊಂಡಿದ್ದು ನಮ್ಮ ಸಂಸ್ಕೃತಿಯ ಸಾತ್ವಿಕ ಗುಣ. ಈ ಎರಡು ಬಗೆಯ ಚಿತ್ರಗಳ ತುಲನಾತ್ಮಕ ಅಭ್ಯಾಸ ನಡೆಸಿದ ಮೇಲೆ ಸುಮಾರು ಇಪ್ಪತ್ತನೇ ವಯಸ್ಸಿನಲ್ಲಿ ನಾನು ತೆಗೆಯುವ ಚಿತ್ರಗಳೆಲ್ಲವೂ ಒಂದು ಬಗೆಯ ಸಾತ್ವಿಕ ಗುಣದಿಂದ, ಸದ್ಭಾವನೆಯಿಂದ ಕೂಡಿದ್ದು ನೋಡುವ ಲಕ್ಷಾಂತರ ಜನಗಳನ್ನು ಸಾತ್ವಿಕತೆಯ ಕಡೆ ತಿರುಗಿಸುವಂತಿರಬೇಕು ಎನ್ನುವ ತೀರ್ಮಾನ ಮಾಡಿಕೊಂಡೆ.

◆



"ಧರಣಿ ಮಂಡಲ ಮಧ್ಯದೊಳಗೆ" ಚಿತ್ರದ ಒಂದು ಪಾತ್ರದಲ್ಲಿ ಪುಟ್ಟಣ್ಣ ಕಣಗಾಲ್, ನಟರುಗಳಾದ ಚಂದ್ರಶೇಖರ್, ಜೈಜಗದೀಶ್, ಶ್ರೀನಾಥ್.

# ಗುರುವರ್ಯರ ಗರಡಿಯಲ್ಲಿ

ನಾನು ನನ್ನ ಗುರು ಪಂತುಲುರವರನ್ನು ಸೇರಿದ್ದು ೧೯೫೪ರಲ್ಲಿ. ನನಗೆ ಆಗ ೨೧ ವರ್ಷ. "ರತ್ನಗಿರಿ ರಹಸ್ಯ" ಕನ್ನಡ ಮತ್ತು ತಮಿಳಿನಲ್ಲಿ ಪ್ರಾರಂಭವಾಗಿತ್ತು. ಅಣ್ಣ ಪ್ರಭಾಕರಶಾಸ್ತ್ರಿಗಳು ನನ್ನನ್ನು ಪಂತುಲು ಹತ್ತಿರ ಸೇರಿಸಿದರು. ಡೈಲಾಗ್ ಕೋಚ್ ಆಗಿ ನಾಟಕ ಕಂಪನಿಯಲ್ಲಿದ್ದುದರಿಂದ ಅನುಭವದ ಮೇಲೆ ನನ್ನನ್ನು ಸೇರಿಸಿಕೊಂಡರು. ನನ್ನ ಗುರುಗಳ ಜೊತೆಯಲ್ಲಿ ಕಳೆದ ಹತ್ತು ವರ್ಷಗಳು ನನ್ನ ಬಾಳಿನ ಜೇನು ತುಂಬಿದ ರಸ ದಿನಗಳು. ಪಂತುಲುರವರಂತಹ ವ್ಯಕ್ತಿಗಳು ಸಿಗದಿದ್ದರೆ ನಾನು ಜೀವನದಲ್ಲಿ ಈ ಮಟ್ಟದ ಅಭ್ಯುದಯಕ್ಕೆ ಬರುತ್ತಿದ್ದೆನೋ ಇಲ್ಲವೋ ಅನುಮಾನ. ಅಂತಹವರೊಡನೆ ಸಂಪರ್ಕ ಪಡೆದದ್ದು ನನ್ನ ಪೂರ್ವಜನ್ಮದ ಪುಣ್ಯಫಲ ಎನಿಸುತ್ತದೆ. ಕೆಲಸಕ್ಕೆ ಸೇರಿದಾಗಿನಿಂದ ನನಗೆ ಅವರನ್ನು ಕಂಡರೆ ಗೌರವ ಮತ್ತು ಹೆದರಿಕೆ ಇತ್ತು. ಕೆಲಸ ಕಲಿಯಬೇಕೆನ್ನುವ ಶ್ರದ್ಧೆಯಿತ್ತು. ಬೆಳಿಗ್ಗೆ ಎದ್ದ ತಕ್ಷಣ ಅವರಿಗೊಂದು ನಮಸ್ಕಾರ ಮಾಡುತ್ತಿದ್ದೆ. ನನ್ನ ಸ್ನೇಹಿತರಿಗೆ ಹೀಗೆ ಹೇಳುತ್ತಾ ಇದ್ದೆ. "ಗುರುಗಳ ತರಹ ಐವತ್ತು ಚಿತ್ರ ಮಾಡದಿದ್ರೆ ಹೋಗಲಿ ನನ್ನ ಸ್ವಂತ ಸಂಸ್ಥೆಯ ಲಾಂಛನದಡಿ ಹತ್ತು ಚಿತ್ರ ಮಾಡಿಬಿಟ್ರೆ ಸಾಕು" ಅಂತ.

ನಾನು ಸುಮಾರು ಒಂಭತ್ತು ವರುಷ ಅವರಲ್ಲಿದ್ದೆ. ಪದ್ಮಿನಿ ಪಿಕ್ಚರ್ಸ್ ಅನ್ನೋದು ಆಗ ಒಂದು ದೊಡ್ಡ ವಿಶ್ವವಿದ್ಯಾನಿಲಯದ ತರಹ ಇತ್ತು. ಇಪ್ಪತ್ತು ಗಂಟೆ ಕಾಲ ಅವರೂ ಕೆಲಸ ಮಾಡ್ತಾ ಇದ್ರು, ನಾವು ಮಾಡ್ತಾ ಇದ್ದೆವು. ಅಲ್ಲಿದ್ದಷ್ಟು ದಿನವೂ ನಾನು ಬೆಂಚಿನ ಮೇಲೆ ಮಲಗುತ್ತಿದ್ದೆ. ಅವರು ನೋಡುತ್ತಾ ಇದ್ದರು. ಆದರೆ ಸುಮ್ಮನೆ ಇರುತ್ತಿದ್ದರು, ಕೇಳುತ್ತಿರಲಿಲ್ಲ. ಇದು ಕಲಿಯುವಕಾಲ ಕಷ್ಟಪಟ್ಟು ಕಲಿಯಲಿ ಆಮೇಲೆ ಅನುಭವಿಸುವ ಕಾಲ ಬರುತ್ತದೆ ಅಂತ ಅವರ ಮನಸ್ಸು ಇರಬಹುದು. ಆಗ ನಮಗೂ ಸಾಧನೆಯ ಕಾಲ, ಕೆಲಸದ ಅವಶ್ಯಕತೆ ಇತ್ತು. ಜೊತೆಗೆ ಕಲಿಯೋ ಅಗತ್ಯಾನೂ ಇತ್ತು. ಹಾಗೇ ಗುರುಗಳಲ್ಲಿ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವ ಔದಾರ್ಯದ ಗುಣವೂ ಮನೆ ಮಾಡಿತ್ತು.

"ವೀರ ಪಾಂಡ್ಯ ಕಟ್ಟಬೊಮ್ಮನ್" ಮಾಡುವಾಗ ಒಂದು ಯೂನಿಟ್ ಅನ್ನು ನನಗೆ ಕೊಟ್ಟಿದ್ದರು. ಅದರ ಹಿನ್ನೆಲೆ ಸಂಗೀತ ಮೂಡಿಸಿದ ಹೆಮ್ಮೆ ನನ್ನದು. ಎಂದು ಈಗಲೂ ಧೈರ್ಯವಾಗಿ, ಅಭಿಮಾನದಿಂದ ಹೇಳಿಕೊಳ್ಳಬಲ್ಲೆ. ಹಿನ್ನೆಲೆ ಸಂಗೀತ ನೀನು ಹೇಗೆ ಬೇಕೊ ಹಾಗೆ ಮಾಡಿಸು ಅಂತ ಹೇಳಿ ಅವರು ಬೇರೊಂದು ಕಡೆ ಚಿತ್ರೀಕರಣ ಮಾಡಲು ಹೊರಟುಹೋದರು. ಆಗ ಆರು ಚಾನಲ್ಸ್ ಸೌಂಡ್ ಇತ್ತು. ಇಂತಹಕಡೆ ಈ ವಾದ್ಯ ಬಳಸೋಣ ಅಲ್ಲಿ ಕಟ್ ಮಾಡಿ ಇಂತಹ ಸಂಗೀತ ಹಾಕಿದರೆ ಚೆನ್ನಾಗಿರುತ್ತೆ ಅಂತೆಲ್ಲ ಹೇಳಿ ಮಾಡಿಸಿದೆ. ನಂತರ ಗುರುಗಳು ಚಿತ್ರನೋಡಿ ನನ್ನನ್ನು ತಬ್ಬಿಕೊಂಡರು. "ಪುಟ್ಟಣ್ಣ ತುಂಬಾ ಭಾವನೆ ಇಟ್ಟು ಮಾಡಿದ್ದೀಯ. ಚಿತ್ರಕ್ಕೆ ಜೀವ ಬಂದುಬಿಟ್ಟಿದೆ" ಅಂದರು. ಹೀಗೆ ತಮ್ಮ ಜನ ಒಳ್ಳೆಯದನ್ನು ಮಾಡಿದಾಗ ಗುರುತಿಸಿ ಬೆನ್ನು ತಟ್ಟುವ ದೊಡ್ಡ ಹೃದಯವಂತಿಕೆಯೂ ಅವರಿಗಿತ್ತು.

ಗುರುಗಳ ಔದಾರ್ಯ, ಅವರ ದೊಡ್ಡತನಕ್ಕೆ ಮತ್ತೊಂದು ವೈಯಕ್ತಿಕ ಉದಾಹರಣೆ ಕೊಡದಿದ್ದರೆ ತಪ್ಪಾದೀತು. ೧೯೬೧ರಲ್ಲಿ ಮದುವೆಯಾದೆ. ಆಗ ರೂ. ೫೦.೦೦ನಿಂದ ಸಂಬಳವನ್ನು ರೂ. ೧೦೦.೦೦ಕ್ಕೆ ಏರಿಸಿದರು. ಹೊಸದಾಗಿ ಮದರಾಸಿನಲ್ಲಿ ಜೀವನ ಆರಂಭಿಸಿದ್ದೆ, ಬರುವ ಸಂಬಳ ಸಾಕಾಗುತ್ತಿರಲಿಲ್ಲ, ಆದರೆ ನೇರ ಜಾಸ್ತಿ ಬೇಕು ಅಂತ ಕೇಳುವ ಧೈರ್ಯ ಇರಲಿಲ್ಲ, ನೀವು ಕೊಡೋ ರೂ. ೧೦೦.೦೦ ನಲ್ಲಿ ಜೀವನ ಮಾಡೋಕಾಗೊಲ್ಲ ಅಂತ ಕಾಗದ ಬರೆದುಕೊಟ್ಟು ಬಂದೆ. ಆಗ ರೂ. ೩೫೦.೦೦ ಸಂಬಳ ಮಾಡಿದರು. ಆಗ ಒಂದು ಚಿತ್ರ, ಒಂದು ನಾಟಕ ಮಾಡೋವಾಗ ನಾವು ಜನಕ್ಕೆ ಏನು ಕಾಣಿಕೆ ಸಲ್ಲಿಸುತ್ತಾ ಇದ್ದೇವೆ ಎಂದು ಯೋಚಿಸುವ ಕಾಲ, ಆ ಕಾಲದಲ್ಲಿ ಬೆಳಗಿದವರು ಪಂತಲುರವರು. ಅಂಥಹ ಅಭಿಮಾನ, ಅಭಿರುಚಿ, ದೃಷ್ಟಿ ಇದ್ದುದರಿಂದಲೇ ಅವರು "ಸ್ಕೂಲ್ ಮಾಸ್ಟರ್" ಅಂಥಹ ಕನ್ನಡ ಚಿತ್ರ ಜನಕ್ಕೆ ಕೊಟ್ಟಿದ್ದು. ಅದರಲ್ಲಿ ಶಾಲಾ ಮಾಸ್ತರನ ಜೀವನ ಏನು, ಅವನ ಖಾಸಗಿ ಜೀವನ ಹೇಗೆ, ಸಮಾಜದಲ್ಲಿ ಅವರ ಸ್ಥಾನ ಹೇಗಿರಬೇಕು ಇವನ್ನೆಲ್ಲಾ ಸೂಕ್ಷ್ಮವಾಗಿ ಚಿತ್ರಿಸಿದ್ದರು.

ಅವರಲ್ಲಿ ನಾನು ತುಂಬಾ ಮೆಚ್ಚಿಕೊಂಡ ಇನ್ನೊಂದು ಗುಣವೆಂದರೆ ಸಾಹಸ ಪ್ರವೃತ್ತಿ. ಏನಾದರೂ ಮಾಡಬೇಕು ಎನಿಸಿದಾಗ ಅದನ್ನು ದೊಡ್ಡದಾಗೆ ಮಾಡುತ್ತಿದ್ದುದು, ದೊಡ್ಡ ರೀತಿಯಲ್ಲೇ ಯೋಚಿಸುತ್ತಿದ್ದುದು. ಇಂತ ಸಾಹಸ ಪ್ರವೃತ್ತಿ ಇದ್ದುದರಿಂದಲೇ ಕನ್ನಡದಲ್ಲಿ "ಕೃಷ್ಣದೇವರಾಯ" ಮಾಡಲು ಸಾಧ್ಯವಾದದ್ದು ಚಿಕ್ಕದಾಗಿ ಅವರು ಏನನ್ನೂ ಯೋಚನೆ ಮಾಡುತ್ತಾ ಇರಲಿಲ್ಲ. ಈಗಿನ ಕಾಲದ

ನಿರ್ಮಾಪಕರ ಹಾಗೆ ಈ ಚಿತ್ರಕ್ಕೆ ಇಷ್ಟೇಕೆ ಬೇಕು, ಇಷ್ಟರಲ್ಲೇ ಮುಗಿಯಬೇಕೆಂದು ಯೋಚಿಸುತ್ತಾ ಇರಲಿಲ್ಲ. ಚಿತ್ರ ಚೆನ್ನಾಗಿ ಬರಬೇಕು ಅನ್ನುವ ಏಕೈಕ ದೃಷ್ಟಿಯಿಂದ ಎಲ್ಲಾ ವ್ಯವಸ್ಥೆ ಮಾಡಿ ಚಿತ್ರ ತೆಗೆಯುತ್ತಿದ್ದುದು ಅವರ ಅಭ್ಯಾಸ.

ಚಿತ್ರ ನಿರ್ಮಾಣದ ದೃಷ್ಟಿಯಿಂದ ಚಿತ್ರಮಾಧ್ಯಮವನ್ನು ತುಂಬಾ ಮಮತೆಯಿಂದ ನೋಡುತ್ತಿದ್ದ ವ್ಯಕ್ತಿ ಪಂತಲುರವರು, ಮಾಡುವ ಖರ್ಚಿಗೆ ಎಂದೂ ಹಿಂದೇಟು ಹಾಕಿದವರಲ್ಲ. ಯಾರಿಗೆ ಎಷ್ಟು ಕೊಡಬೇಕು ಅಷ್ಟು ಕೊಟ್ಟುಬಿಡಿ. ಕೆಲಸ ಚೆನ್ನಾಗಿರಲಿ ಅಂತ ಹೇಳುತ್ತಿದ್ದರು. ಸಮಗ್ರ ದೃಷ್ಟಿಯಿಂದ ಹೇಳಬೇಕಾದರೆ ಚಿತ್ರ ನಿರ್ಮಾಪಕ ಅನ್ನುವ ಮಾತಿಗೆ ಅನ್ವರ್ಥವಾಗಿ ಕೆಲಸ ಮಾಡುತ್ತಿದ್ದರು. ನಿರ್ಮಾಣದ ಸಮಯದಲ್ಲಿ ಜಿಪುಣತೆ ಇರಲಿಲ್ಲ. ಅದನ್ನು ಎಂದೂ ತೋರಿಸಿದವರಲ್ಲ. ಕುದುರೆ ಬೇಕು, ಸೈನ್ಯ ಬೇಕು ಎಂದರೆ ಅದನ್ನ ತರಿಸೋರು, ಇಂಥ ಸೆಟ್ ಬೇಕು ಎಂದಾಗ ಹಾಕಿಸಿಬಿಡ್ತಿದ್ರು, ಇದಕ್ಕೆ ಯಾಕಿಷ್ಟು ಖರ್ಚು ಮಾಡಬೇಕು ಅನ್ನೋ ಲೆಕ್ಕಾಚಾರವೇ ಹಾಕ್ತಾ ಇರಲಿಲ್ಲ. ಲೆಕ್ಕಾಚಾರ ಎಲ್ಲಾ ಚಿತ್ರ ಮುಗಿದ ಮೇಲೆ. ಸಂಪಾದನೆ ಏನಾಯ್ತು, ಬಡ್ಡಿ ಕೊಡಬೇಕಲ್ಲ, ಇವೆಲ್ಲ ನಂತರ ಯೋಚನೆ ಮಾಡ್ತಾ ಇದ್ದರು.

ಆದರೆ ನಿರ್ಮಾಣದ ಸಮಯದಲ್ಲಿ ಮಾಡಿದ ಚಿತ್ರವನ್ನು ಒಂದು ಸಲ ಅಲ್ಲ, ಹತ್ತು ಸಲ ನೋಡಿ ಒಂದು ದೃಶ್ಯ ಚೆನ್ನಾಗಿಲ್ಲ ಅನಿಸಿದಾಗ ಮತ್ತೆ ಚಿತ್ರೀಕರಣ ಮಾಡೋರು. ಯಾವುದಾದರೂ ದೃಶ್ಯ ಹಿಡಿಸಲಿಲ್ಲ ಎಂದು ಮನಸ್ಸಿಗೆ ಬಂದಾಗ ಎಷ್ಟೇ ಖರ್ಚು ಮಾಡಿ ತೆಗೆದಿದ್ರೂ ಅದನ್ನು ನಿರ್ದಾಕ್ಷಿಣ್ಯವಾಗಿ ತೆಗೆದುಹಾಕಿಬಿಡ್ತಾ ಇದ್ರು, ಕಲಾವಿದರೆಲ್ಲರೂ ಎಷ್ಟು ಸಮಯಕ್ಕೆ ಬೇಕಾದರೂ ಸಿಕ್ಕುತ್ತಿದ್ದರು. ಈಗಿನ ಹಾಗೆ ದಿನಗಳ ಲೆಕ್ಕದಲ್ಲಿ ಕಾಲ್‌ಷೀಟ್ ಹೊಂದಾಣಿಕೆ ಇರುತ್ತಿರಲಿಲ್ಲ. ಕಲಾವಿದರೂ ಸೇರಿದಂತೆ ನಿರ್ಮಾಪಕನಿಂದ ಹಿಡಿದು ಎಲ್ಲರಿಗೂ ಕೆಲಸ ಮಾಡೋದು, ಕೆಲಸ ಆಗೋದು ಮುಖ್ಯವಾಗಿರುತ್ತಿತ್ತು. ಕಲಾವಿದರೂ ನಿರ್ಮಾಣದಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ಈ ಚಿತ್ರ ಮಾಡೋದು ನಮ್ಮ ಜವಾಬ್ದಾರಿ, ನಾವು ಮುಗಿಸಬೇಕು ಅನ್ನುವ ಭಾವನೆ ಇದ್ದುದರಿಂದಲೇ ಗುರುಗಳು ಒಳ್ಳೆಯ ಚಿತ್ರ ಮಾಡಲು ಸಾಧ್ಯವಾಯಿತು.

◆

# ಕನ್ನಡಕ್ಕೆ ನನ್ನ ಕರ್ತವ್ಯ

ಕನ್ನಡ ಚಿತ್ರರಂಗದ ಉದ್ಧಾರದ ಬಗ್ಗೆ ಮಾತನಾಡುವುದು ಬರೀ ಬೊಗಳೆ. ರಚನಾತ್ಮಕವಾಗಿ ಯಾರೂ ಏನೂ ಮಾಡುತ್ತಿಲ್ಲ. ಸರ್ಕಾರ ಕೂಡ ಇದಕ್ಕೆ ಹೊರತಾಗಿಲ್ಲ. ಸಭೆ ಸೇರಿ ಚಹ ಕುಡಿದು ಎದ್ದು ಹೋಗುವ ಸಮಿತಿಗಳ ಬದಲಾಗಿ ರಾಜ್ಯ ಸರ್ಕಾರ ಬೆಂಗಳೂರಿನ ಬಸ್ ನಿಲ್ದಾಣದ ಪಕ್ಕದಲ್ಲಿ ನಾಲ್ಕು ಚಿತ್ರ ಮಂದಿರಗಳನ್ನು ನಿರ್ಮಿಸಿದರೂ ಸಾಕು, ಒಳ್ಳೆಯ ಕನ್ನಡ ಚಿತ್ರಗಳ ಪ್ರದರ್ಶನಕ್ಕೆ ಅವಕಾಶ ದೊರೆಯುತ್ತದೆ.

ನಿರ್ದೇಶಕನ ಮಾತು ಬಿಡಿ, ಕನ್ನಡ ಚಿತ್ರರಂಗದಲ್ಲಿ ನಿರ್ದೇಶಕ ಒಬ್ಬ ಮೇಸ್ತ್ರಿ ಇದ್ದ ಹಾಗೆ, ಹಣದ ವಹಿವಾಟಿನಲ್ಲಿ ಒಬ್ಬ ದಲ್ಲಾಳಿ ಇದ್ದ ಹಾಗೆ, ಇಂತಹ ಪರಿಸ್ಥಿತಿಯಲ್ಲಿಯೂ ನಾನು ನನ್ನನ್ನು ನಂಬಿದ ನಿರ್ಮಾಪಕರುಗಳಿಗೂ ಒಪ್ಪಿಸಿ ನನ್ನ ಉದ್ದೇಶವನ್ನು ನನ್ನ ಸಿನಿಮಾದಲ್ಲಿ ತಂದಿದ್ದೀನಿ. ೨೩ ಸಿನಿಮಾ ತೆಗೆದಿದ್ದೀನಿ. ಅಂದರೆ ೨೩ ಯುದ್ಧ ಮಾಡಿದ್ದೀನಿ ಅಂತಲೇ ಇಟ್ಟುಕೊಳ್ಳಿ, ನಮ್ಮ ಚಿತ್ರೋದ್ಯಮದಲ್ಲಿ ಒಬ್ಬ ನಿರ್ದೇಶಕನಿಗೆ ತನ್ನ ನಂಬಿಕೆಗಳ ಪ್ರಕಾರವಾಗಿ ಚಿತ್ರ ತೆಗೆಯುವುದಕ್ಕೆ ಸಾಧ್ಯವೇ ಇಲ್ಲ. ಚಿತ್ರ ಜಗತ್ತು ಈಗ ಇರುವುದು ನಿರ್ಮಾಪಕ, ವಿತರಕ ಹಾಗೂ ಪ್ರದರ್ಶಕರ ಕೈಯಲ್ಲಿ. ಈ ತ್ರಿಮೂರ್ತಿಗಳೆಲ್ಲಾ ಒಂದೆಡೆ ಸೇರಬೇಕು. ಒಮ್ಮತಕ್ಕೆ ಬರಬೇಕು. ಆದರೆ ಅದು ಇಂದಿನ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲ.

ಸಮಗ್ರ ದೃಷ್ಟಿ ಸ್ಥಾನ ಮಾನಕ್ಕಾಗಿ ಹೋರಾಡುವ ವ್ಯಕ್ತಿಗೆ ಕರ್ನಾಟಕದಲ್ಲಿ ಬೆಲೆಯಿಲ್ಲ. ಮುಂದಿನ ತಲೆಮಾರಿನವರಿಗಾಗಿ ಸಶಕ್ತ ಸಿನಿಮಾಗಳನ್ನು ಈಗ ಯಾರೂ ಕೊಡುತ್ತಿಲ್ಲ. ನಮ್ಮ ಸಂಸ್ಕೃತಿಯೇ ಕೊಳಕಾಗಿದೆ. ಇದು ಬರೀ ನೀರಿನಿಂದ ತೊಳೆದರೆ ಹೋಗುವುದಿಲ್ಲ. ಆಸಿಡ್ ಚಿಕಿತ್ಸೆಯೇ ಇದಕ್ಕೆ ಬೇಕು.

ಇತರರಂತೆ ನಾನು ಕಾಶ್ಮೀರಕ್ಕೋ, ಸಿಂಗಾಪುರಕ್ಕೋ ಹೋಗಿ ಚಿತ್ರೀಕರಣ ನಡೆಸಿಲ್ಲ. ಕನ್ನಡ ನೆಲದಲ್ಲಿ ಸೂಕ್ತ ಸ್ಥಳಗಳನ್ನು ಆಯ್ದುಕೊಂಡಿದ್ದೇನೆ. ಸರ್ವ

ಋತುಗಳಲ್ಲೂ ಚಿತ್ರೀಕರಣ ಮಾಡಬಲ್ಲ ರಮಣೀಯವಾದ ನಿಸರ್ಗ ದೃಶ್ಯಗಳು ನಮ್ಮ ರಾಜ್ಯದಲ್ಲಿವೆ. "ಮಾನಸ ಸರೋವರ"ವನ್ನು ಚಿತ್ರೋತ್ಸವದಲ್ಲಿ ಪ್ರದರ್ಶನಕ್ಕಾಗಿ ಕಳುಹಿಸಿದ್ದೆ. ಅದು ಸ್ವೀಕೃತವಾಗಲಿಲ್ಲ. ಚಲನಚಿತ್ರ ಹಣಕಾಸು ಸಂಸ್ಥೆಯ ಆಶ್ರಯ ಪಡೆದ "ಫಣಿಯಮ್ಮ" ದಂತ ಚಿತ್ರಗಳಿಗೆ ಮಾತ್ರ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪುರಸ್ಕಾರ ಏಕೆ? ಬೇರೆ ನಿರ್ಮಾಪಕರ ಚಿತ್ರಗಳಿಗೂ ಈ ಮಟ್ಟಿಗೆ ಪ್ರೋತ್ಸಾಹ ಏಕೆ ದೊರೆಯಬಾರದು. "ಮಾನಸ ಸರೋವರ"ವನ್ನು ಚಿತ್ರೋತ್ಸವದಲ್ಲಿ ತೋರಿಸಬೇಕಾಗಿತ್ತು. ಆಗ ನಮ್ಮಂತ ಕನ್ನಡ ನಿರ್ದೇಶಕರುಗಳಿಗೂ ಪ್ರತಿಭೆ ಇದೆ ಎಂಬುದರ ಪರಿಚಯ ಇತರರಿಗಾಗುತ್ತಿತ್ತು. ಎಲ್ಲರೂ ಸತ್ಯಜಿತ್ ರಾಯ್, ಶ್ಯಾಂ ಬೆನಗಲ್ ಮತ್ತು ಇತ್ತೀಚೆಗೆ "ಗಾಂಧಿ" ಚಿತ್ರ ನಿರ್ಮಿಸಿರುವ ಲಾರ್ಡ್ ಅಟೆನ್‌ಬರೋ ಅವರ ಹೆಸರು ಹೇಳುತ್ತಾರೆ. ನಮ್ಮನ್ನು ಕೇಳುವವರೇ ಇಲ್ಲ.

ನಾನೇನೂ ಮಹಾ ನಿರ್ದೇಶಕನಲ್ಲ, ಇನ್ನೂ ವಿದ್ಯಾರ್ಥಿ. ಪ್ರತಿ ದಿನವೂ ಕಲಿಯುತ್ತಿದ್ದೇನೆ. ಪ್ರತಿ ಚಿತ್ರ ಮಾಡಿದಾಗಲೂ ಬೇರೆಯವರ ಚಿತ್ರಗಳನ್ನು ನೋಡಿದಾಗಲೂ ಎಷ್ಟೋ ಹೊಸ ವಿಷಯಗಳು ಗೊತ್ತಾಗುತ್ತವೆ. ನಾನು ಮಾಡುವ ತಪ್ಪುಗಳ ಅರಿವಾಗುತ್ತವೆ. ಮನಸ್ಸಿನಲ್ಲಿ ಕಲ್ಪಿಸಿಕೊಂಡದ್ದನ್ನು ನೂರಕ್ಕೆ ನೂರರಷ್ಟು ತೆರೆಯ ಮೇಲೆ ಮೂಡಿಸಲು ಸಾಧ್ಯವೇ ಇಲ್ಲ. ಶೇಕಡಾ ೨೦ ಅಥವಾ ೩೦ ಸಾಧ್ಯವಾದೀತು, ಅಷ್ಟರಿಂದಲೇ ತೃಪ್ತಿ ಪಡೆಯುತ್ತೇನೆ. ಚಿತ್ರ ಸೃಜನಾತ್ಮಕ ಮಾಧ್ಯಮ, ಕಲ್ಪನೆಯ ಲೋಕ, ಅದೊಂದು ಮಹಾ ಸಾಗರ, ಕಲಿಯುವುದಕ್ಕೆ ಕೊನೆಯೇ ಇಲ್ಲ. ಉದಾಹರಣೆಗೆ ಜಗದ್ವಿಖ್ಯಾತ ಹಾಸ್ಯ ನಟ, ನಿರ್ಮಾಪಕ, ನಿರ್ದೇಶಕ ಚಾರ್ಲಿ ಚಾಪ್ಲಿನ್, ತಾವು ಚಿತ್ರೀಕರಿಸಿದ ತೊಂಭತ್ತು ಸಾವಿರ ಅಡಿ ಫಿಲ್ಮ್‌ನಲ್ಲಿ ಸಂಕಲನ ಮುಗಿದ ಮೇಲೆ ಉಳಿದುಕೊಂಡಿದ್ದು ಕೇವಲ ೧೯೩೦ ಅಡಿಗಳು. ೨೦ ನಿಮಿಷದ ಸಿನಿಮಾಕ್ಕೆ ೬ ವಾರಗಳವರೆಗೆ ಚಿತ್ರೀಕರಣ ಮಾಡಿದ್ದರು. ಒಂದು ಸಿನಿಮಾವನ್ನು ಆದಷ್ಟು ಪರಿಪೂರ್ಣವಾಗಿಸಲು ಅವರೆಲ್ಲ ಎಷ್ಟು ಖರ್ಚು ಮಾಡುತ್ತಾರೆ.

ಈವತ್ತು ಕನ್ನಡ ಚಿತ್ರೋದ್ಯಮ ನನ್ನಿಂದ ಬೇಕಾದಷ್ಟು ಬುದ್ಧಿವಂತಿಕೆ ಕೊಂಡುಕೊಂಡು ನನ್ನನ್ನು ಶೋಷಣೆ ಮಾಡಿ ಪಾಪರ್‌ನನ್ನಾಗಿ ಮಾಡಿತು. ಆದರೆ ನಿಜವಾಗಿ ಪ್ರತಿಭೆ ಇರುವವನಿಗೆ ಜನಬೆಂಬಲವಿದ್ದೇ ಇದೆ. ಇವತ್ತು ನಾನು ಪುನಃ ಚಿತ್ರ ಮಾಡಲು ನಿಲ್ಲುವಂತೆ ಮಾಡಿದವರು ನನ್ನ ಅಭಿಮಾನಿ ಕನ್ನಡ ಜನ. ನಾನು ಅವರಿಗೆ ಕೃತಜ್ಞನಾಗಿದ್ದೇನೆ.

ಕನ್ನಡಕ್ಕೆ ಮಾರುಕಟ್ಟೆಯೇ ಇಲ್ಲಾ ಎಂಬ ಕಾಲಕ್ಕೆ ನಾನು ಇಲ್ಲಿ ಖಂಡಿತಾ ಮಾರುಕಟ್ಟೆ ಇದೆ ಎಂಬುದನ್ನು ತೋರಿಸಿಕೊಟ್ಟೆ. ಕಪ್ಪು ಬಿಳುಪಿನಲ್ಲಿ ತಯಾರಾದ "ಬೆಳ್ಳಿಮೋಡ", ಬಣ್ಣದಲ್ಲಿ ಬಂದ "ಶರಪಂಜರ", ಸಮರ್ಥ ಚಿತ್ರಗಳಿಗೆ ಕನ್ನಡದಲ್ಲಿಯೇ ಮಾರುಕಟ್ಟೆ ಸಿಗುತ್ತದೆ ಎಂದು ಸಾಧಿಸಿದವು. "ಬೆಳ್ಳಿಮೋಡ" ನೋಡಿದವರು ಇದಕ್ಕೆ ಎಷ್ಟು ಲಕ್ಷ ಖರ್ಚಾಯಿತೆಂದು ಕೇಳಿದರು. "ಶರಪಂಜರ" ಬಿಡುಗಡೆಯಾದಾಗ ಕನ್ನಡದಲ್ಲಿ ವರ್ಣ ಚಿತ್ರಗಳು ಲಾಭ ಮಾಡಲು ಸಾಧ್ಯವೇ? ಎನ್ನುವ ಅನುಮಾನವಿತ್ತು.

ಐದು ಲಕ್ಷ ಹಾಕಿದ ನಿರ್ಮಾಪಕರಿಗೆ ೫೦ ಲಕ್ಷ ರೂ. ಸಂಪಾದಿಸಿಕೊಟ್ಟೆ. ಆದರೆ ಅದನ್ನು ನೆನೆಯದ ಈ ಚಿತ್ರರಂಗಕ್ಕೆ ಬೆಂಕಿ ಹಾಕಬೇಕು. ಕಳೆದ ೧೭ ವರ್ಷಗಳಲ್ಲಿ ಅಪಾರ ಕನ್ನಡ ಚಿತ್ರಗಳನ್ನು ಮಾಡಿ ಕನ್ನಡ ಚಿತ್ರರಂಗಕ್ಕೆ ಸ್ವಂತಿಕೆ ಗೌರವ ತಂದು ಕೊಟ್ಟೆ. ನಾನು ಎಡವಿದಾಗ ನಿರ್ಮಾಪಕರ ಜಗತ್ತು ನನಗೆ ಅವಕಾಶ ಕೊಡಲಿಲ್ಲ.

ನಾನು ಶ್ರಮಜೀವಿ. ಬಹಳ ಶ್ರದ್ಧೆಯಿಂದ ದುಡಿಯುತ್ತೇನೆ. ಪ್ರತಿ ನಿಮಿಷವೂ ನಾನು ಒಂದು ಒಳ್ಳೆಯ ಚಿತ್ರ ತೆಗೆಯಬೇಕು, ಆದರಿಂದ ನನ್ನ ಜನಕ್ಕೆ ನನ್ನ ನಿರ್ಮಾಪಕರುಗಳಿಗೆ ಹಾಗೂ ನನಗೆ ಒಳ್ಳೆಯದಾಗಬೇಕು ಅನ್ನೋ ಸದ್ಭಾವನೆ ನನ್ನಲ್ಲಿದೆ. ಆದರೆ ವ್ಯವಹಾರದಲ್ಲಿ ನನಗೇನೂ ಗೊತ್ತಿಲ್ಲ. ಯಾರ ಜೊತೆ ಹೇಗೆ ಮಾತನಾಡಬೇಕು ಅನ್ನೋದು ಗೊತ್ತಿಲ್ಲ. ಇದು ನನ್ನ ದೌರ್ಬಲ್ಯ ಮತ್ತು ನನ್ನ ಜನಗಳಿಗೆ ನಾನು ತುಂಬ ಒಳ್ಳೆಯವನು. ಈ ಒಳ್ಳೆಯತನ ನನ್ನ ಮತ್ತೊಂದು ದೌರ್ಬಲ್ಯ.

ಈ ನಿರ್ದೇಶಕನ ಕೆಲಸ ಮಾತ್ರ ಥ್ಯಾಂಕ್ಸ್‌ಲೆಸ್ ಜಾಬ್. ಇವತ್ತೇನೋ ಹೆಸರಿದೆ, ನಡೆಯುತ್ತದೆ. ನನ್ನಿಂದ ಒಂದು ಚಿತ್ರ ಸೋತರೂ ಆಮೇಲೆ ನನ್ನ ಕಡೆ ತಿರುಗಿ ನೋಡೋ ಜನ ಇರುವುದಿಲ್ಲ. ಇನ್ನೂ ನಿಜ ಹೇಳಬೇಕು ಅಂದರೆ ಒಂದು ಲೋಟ ಕಾಫಿ ಕೂಡ ಸಿಗುವುದಿಲ್ಲ. ಇಲ್ಲಿ ಯಶಸ್ಸು ಮಾತ್ರ ಮುಖ್ಯ. ಯಶಸ್ಸಿನ ತಕ್ಕಡಿಯಲ್ಲಿ ನಾವು ಪ್ರತಿ ಕ್ಷಣವೂ ತೂಗಲ್ಪಡುತ್ತೇವೆ. ನನ್ನಿಂದಾಗಿ ಹಣ ಬರುತ್ತೆ ಅನ್ನೋವಾಗ ಮಾತ್ರ ನನ್ನ ಕಡೆ ಬರುತ್ತಾರೆ. ನಾವು ಬೆಳೆಸಿ ಪರಿಚಯಿಸಿದ ಕಲಾವಿದರೂ ಕೂಡ ದುಡ್ಡು ಮಾಡಿಕೊಂಡು ಬೇರೆ ಕಡೆಗೆ ಹೋಗಿ ನಮ್ಮ ಕಡೆ ತಿರುಗಿಯೂ ಕೂಡ ನೋಡುವುದಿಲ್ಲ.

ನನ್ನ ಸಿನಿಮಾ ಜೀವನದ ಕಾಲು ಶತಮಾನದ ಅವಧಿಯಲ್ಲಿ ಮಾಡಿದ ಚಿತ್ರಗಳ ಬಗ್ಗೆ ತೃಪ್ತಿ, ಅತೃಪ್ತಿ ಎರಡನ್ನೂ ಕಂಡು ಇನ್ನೂ ಚೆನ್ನಾಗಿ ಮಾಡುವ ಹೊಸ ಸಂಕಲ್ಪದಲ್ಲಿ ಬೆಳೀತಾ ಇದ್ದೀನಿ ಅನ್ನೋ ತೃಪ್ತಿ ಇದೆ. ನನ್ನ ಮೊದ ಮೊದಲ ಚಿತ್ರಗಳು ಕಥಾ ಪ್ರಧಾನವಾದ ಭಾವನಾತ್ಮಕ ಚಿತ್ರಗಳು, ಇದು ಒಂದು ಹಂತ. ಆಮೇಲೆ ಪಾತ್ರಗಳ ಒಳನೋಟ ಒಳತೋಟಿಯತ್ತ ಗಮನ ಹೋಯಿತು. ಆಗ ಅವುಗಳ ಅಂತರಂಗಕ್ಕೆ ಕ್ಯಾಮರಾಇಟ್ಟು ಅನ್ವೇಷಣೆ, ವಿಶ್ಲೇಷಣೆ ಶುರುಮಾಡಿದೆ. ಒಂದು ರೀತೀಲಿ ಇದು ನನ್ನ ಚಿತ್ರ ಜೀವನದಲ್ಲಿ ಕಲಿಕೆಯ ಘಟ್ಟ

ಸಿನಿಮಾ ದೃಶ್ಯ ಮಾಧ್ಯಮವಾದರೂ ಅದು ನಿರ್ದೇಶಕನ ವೈಯಕ್ತಿಕ ಮಾಧ್ಯಮ ಎಂದು ಮನವರಿಕೆಯಾಯಿತು. ಒಳ್ಳೆ ಚಿತ್ರ ಮಾಡುತ್ತಾ ಮಾಡುತ್ತಾ ನನ್ನಲ್ಲಿ ಆದ ಭೌತಿಕ ಬೆಳವಣಿಗೆಯಿಂದ ನನಗೆ ಕುತ್ತಾಯಿತೇ ಹೊರತು ಪ್ರಯೋಜನವಾಗಲಿಲ್ಲ. ಹೇಗೆಂದರೆ ನಾನು ಪಾತ್ರವನ್ನು ವಿಶ್ಲೇಷಿಸುವಾಗ ಅವುಗಳ ನೇತ್ಯಾತ್ಮಕ (ನೆಗೆಟೀವ್ ಆಸ್ಪೆಕ್ಟ್) ಅಂಶಗಳಿಗಿಂತ ಇತ್ಯಾತ್ಮಕ ಅಂಶಗಳಿಗೆ (ಪಾಸಿಟಿವ್ ಆಸ್ಪೆಕ್ಟ್) ಹೆಚ್ಚು ಗಮನ ಕೊಡುವುದು ನನಗೆ ಪ್ರಿಯವಾದದ್ದು. ಸಿನಿಮಾ ನೋಡಿ ಬಂದ ಮೇಲೆ ಹತಾಶೆಗೊಳಗಾಗಬಾರದು, ದುರಂತ, ಜೀವನದಲ್ಲಿದೆ. ವಿಕೋಪಗಳು ಜೀವನದಲ್ಲಿವೆ. ಅದನ್ನು ಎದುರಿಸೋ ಧೈರ್ಯ ಮಾಡಬೇಕು. ಇದು ನನ್ನ ಧೋರಣೆ. ಇದರಿಂದಾಗಿ ನಾನು ನನ್ನ ಚಿತ್ರಗಳಲ್ಲಿ, ಜೀವನದಲ್ಲಿ ಸಲ್ಲದ ನಕಾರಾತ್ಮಕ ಅಂಶಗಳನ್ನು ಅವಗುಣಗಳನ್ನು ವೈಭವೀಕರಿಸಲಿಲ್ಲ. ನನ್ನ ಚಿತ್ರಗಳಿಗೆ ಪೋಷಣೆ ಸಿಗಲಿಲ್ಲ. ಉದಾ: "ರಂಗನಾಯಕಿ" ಚಿತ್ರ.

ಒಂದು ಸಿನಿಮಾದಲ್ಲಿ ಕಳೆದುಕೊಂಡ ದುಡ್ಡನ್ನು ಇನ್ನೊಂದು ಚಿತ್ರದಲ್ಲಿ ಮರಳಿ ಪಡೆಯಬೇಕಾದರೆ ಕೆಲವೊಮ್ಮೆ ನಿರ್ದೇಶಕ ತನ್ನ ವೃತ್ತಿಯಲ್ಲಿ ತಾನು ಇಲ್ಲಿಯವರೆಗೆ ಕಲಿತಿದ್ದನ್ನು ಮರೆಯಬೇಕಾಗುತ್ತದೆ. ನಿಜವಾದ ನಿರ್ದೇಶಕ ಇಂದು ದ್ವಂದ್ವದಲ್ಲಿದ್ದಾನೆ. ಬೌದ್ಧಿಕವಾಗಿ ಬೆಳೆಯೋಣವೆಂದರೆ ಬದುಕಿನ ಪ್ರಶ್ನೆ. ಸಾಮರ್ಥ್ಯಗಳ ದುರ್ವ್ಯಯವಾಗುತ್ತದೆ. ಒಳ್ಳೆ ಸಿನಿಮಾ ಮಾಡಲು ಇದನ್ನು ಬಳಸಿಕೊಳ್ಳಲು ಸಾಧ್ಯವಾಗಲಿಲ್ಲವಲ್ಲ ಎಂಬ ಕೊರಗು ಇರುತ್ತದೆ. ನಾನು ಬೆಳೆದು ಬಂದಿರುವ, ನಂಬಿ ಅನುಸರಿಸಿರುವ ನಮ್ಮ ಸಂಸ್ಕೃತಿಯಿಂದ ಹೊರಬಂದು ಆ ಸಂಸ್ಕೃತಿಗೆ ಹೊರತಾದ ಸಿನಿಮಾ ಮಾಡಲು ನಾನು ಸಿದ್ಧನಿಲ್ಲ.

ನನಗೆ ಒಳ್ಳೆಯ ಸಿನಿಮಾಗಳನ್ನು ಮಾಡಿದ ತೃಪ್ತಿ ಇದೆ ಅಥವಾ ಇಲ್ಲ. ಒಂದು ಒಳ್ಳೆ ಸಿನಿಮಾ ಮಾಡಿದ ತಕ್ಷಣ ಮುಂದಿನದು ಸವಾಲಾಗುತ್ತದೆ. ಹಾಗೆ

ನೋಡಿದರೆ ಸೃಜನಶೀಲ ನಿರ್ದೇಶಕನಿಗೆ ಪ್ರತಿ ಸಿನಿಮಾವೂ ಸವಾಲೆ. ಒಂದು ಒಳ್ಳೆ ಸಿನಿಮಾ ಮಾಡಿದ ತಕ್ಷಣ ಜನ ತುಂಬಾ ನಿರೀಕ್ಷಣೆಯಿಂದ ಮುಂದಿನ ವಿಭಿನ್ನವಾದ ಇನ್ನೂ ಉತ್ತಮವಾದ ಸಿನಿಮಾವನ್ನು ನಿರೀಕ್ಷಿಸುತ್ತಾರೆ. ಅದನ್ನು ಮಾಡೋಣವೆಂದರೆ ವ್ಯವಹಾರ ರಪ್ ಅಂತ ಅಪ್ಪಳಿಸುತ್ತದೆ. ವಿಭಿನ್ನವಾದುದನ್ನು ಮಾಡೋಣವೆಂದರೆ ಜನ ದುಡ್ಡು ಕೊಡದೆ ಹೋದರೆ ಅನ್ನೋ ದ್ವಂದ್ವ ಕಾಡುತ್ತೆ. ವಿದ್ಯಾರ್ಥಿ ಜೀವನದ ಮೇಲೆ ಬೆಳಕು ಚೆಲ್ಲುವ "ಕಾಲೇಜುರಂಗ" ವಿಭಿನ್ನವಾದ ಚಿತ್ರ, ಆದರೆ ಏನಾಯಿತು ನೋಡಿ. ಅದು ಬಹು ಜನಕ್ಕೆ ಹಿಡಿಸದೆ ಹೋಯಿತು. ಜನ ನಿಷ್ಠುರ ಸತ್ಯವನ್ನು ಅರಿತುಕೊಳ್ಳಲು ಇಚ್ಛಿಸುವುದಿಲ್ಲ. ಒಂದು ತೃಪ್ತಿ ಎಂದರೆ ನಾನು ಬೆಳೆದ ಈ ಮಾಧ್ಯಮದಲ್ಲಿ ಏನೇ ಮಾಡಿದ್ದರೂ ಅದು ಒಂದು ಹೋರಾಟ. ಹೋರಾಟ ಮಾಡುತ್ತಲೇ ಸಿನಿಮಾ ಮಾಡಿದ್ದೇನೆ.

ಆರ್ಥಿಕವಾಗಿ ನನ್ನ ಚಿತ್ರ ಓಡದಿದ್ದರೆ ಬದುಕುವುದು ಹೇಗೆ ಎಂಬ ಸಮಸ್ಯೆ ಕಾಡಿದೆಯಾದರೂ ಅದಕ್ಕೂ ಬಲಿಯಾಗಿಲ್ಲ. ನಾನು ಹತಾಶನಾಗಿಲ್ಲ, ಎಂತಹ ಪರಿಸ್ಥಿತಿ ಬಂದರೂ ಈ ವ್ಯಾಪಾರಿ ಜಾಲಕ್ಕೆ ಸಿಕ್ಕಿಹಾಕಿಕೊಳ್ಳಲಿಲ್ಲ. "ರಂಗನಾಯಕಿ" ಆದ ಮೇಲೆ ನನಗೆ ಚಿತ್ರಗಳು ಇರಲಿಲ್ಲ "ಫಲಿತಾಂಶ" ಆದಮೇಲೂ ಇರಲಿಲ್ಲ, ಆದರೆ ನಾನು ಯಾರ ಹತ್ತಿರಾನೂ ಹೋಗಲಿಲ್ಲ.

"ಮಾನಸ ಸರೋವರ"ದ ನಂತರ ನನ್ನ ಚಿತ್ರಗಳಲ್ಲಿ ಸಾಮರಸ್ಯ ತಪ್ಪುತ್ತಿದೆ ಎಂದರು, ಉದಾ: "ಧರಣಿಮಂಡಲ" ಚಿತ್ರ, ಆದರೆ ನನಗೆ ಹಾಗೆ ಅನ್ನಿಸುವುದಿಲ್ಲ, ಈ ಅಭಿಪ್ರಾಯವನ್ನು ನಾನು ಒಪ್ಪುವುದಿಲ್ಲ. ನಿರ್ದೇಶಕನಾಗಿ ನಾನು ಚಿತ್ರ ಮಾಧ್ಯಮವನ್ನು ಪರಿಣಾಮಕಾರಿಯಾಗಿ ಬೆಳೆಸಿದ್ದೇನೆ. ನಾನು ಮಾಡಿದ್ದು ಹಲವರಿಗೆ ರುಚಿಸದೇ ಹೋಗಿರಬಹುದು. "ಧರಣಿಮಂಡಲ", "ಅಮೃತಗಳಿಗೆ" ಇವುಗಳಲ್ಲಿ ನಿರೂಪಣೆ, ವಸ್ತುಮಂಡನೆ, ಬೇರೆ ರೀತಿಯಲ್ಲಿದೆ, ಅದು ಹಿಡಿಸದೇ ಹೋದರೆ ಏನು ಮಾಡಲಿಕ್ಕಾಗುತ್ತೆ.

ನಾನು ಹುಡುಗಾಟಕ್ಕೆ ಚಿತ್ರ ಮಾಡಿಲ್ಲ, ನಾನು ಗಂಭೀರ ಭಾವನೆಯ ಚಲನಚಿತ್ರ ಮಾಡುವವ (ಸೀರಿಯಸ್ ಫಿಲಂ ಮೇಕರ್) "ಧರಣಿಮಂಡಲ"ದಲ್ಲಿ ನಾನು ಪ್ರೇಕ್ಷಕರಿಂದ ಸಹಾನುಭೂತಿ ನಿರೀಕ್ಷಿಸಿದ್ದೆ, ಚಿತ್ರದ ನಾಯಕ ಕೂಲಿಯವರನ್ನು ತನ್ನ ಮನೆಗೆ ಕರೆತರುವುದನ್ನು ಮಹಡಿ ಪ್ರೇಕ್ಷಕರು ಒಪ್ಪಲಿಲ್ಲ, ಆ ದೃಶ್ಯದ ಉದ್ದೇಶ ಒಂದು ಸಾಮಾಜಿಕ ತಪ್ಪನ್ನು ತೋರಿಸುವುದೇ ಆಗಿತ್ತು. ಪ್ರೇಕ್ಷಕರು ಉದ್ದೇಶ

ಮರೆತರು, ಆ ದೃಶ್ಯ ಭಾಗವನ್ನೇ ಪ್ರಧಾನವಾಗಿ ತೆಗೆದುಕೊಂಡರು, ಆದುದರಿಂದ ಇನ್ನು ಮುಂದೆ ಉಪದೇಶ ಮಾಡಬಾರದು ಅನ್ನೋ ನಿರ್ಧಾರಕ್ಕೆ ಬಂದಿದ್ದೇನೆ.

ಈವತ್ತು ನಾವು ಯಾರ್‍ಯಾರು ಚಿತ್ರ ನಿರ್ಮಿಸುತ್ತಿದ್ದೇವೋ, ನನ್ನನ್ನು ಒಳಗೊಂಡಂತೆ ನಾವೆಲ್ಲ ಹಣಕ್ಕೋಸ್ಕರ ಚಿತ್ರ ಮಾಡುತ್ತಿದ್ದೇವೆ. ಕಲಾಸೇವೆ ಅನ್ನೋದು ಶುದ್ಧ ಹಿಪೋಕ್ರಸಿ, ಆದರೆ ಒಂದು ಮಾತು, ಕಲಾಸೇವೆ ಮಾಡ್ತಾ ಇದ್ದೀನಿ ಅಂತ ಹೇಳಿದ್ದೇನೆ ಅಂದರೆ, ಒಂದು ಒಳ್ಳೆಯ ಚಿತ್ರ ತೆಗೆಯೋದು.

ಕನ್ನಡದ ಪ್ರತಿ ಚಿತ್ರದಲ್ಲಿಯೂ ನನಗೆ ಪರೀಕ್ಷೆಯೇ. ಗೆದ್ದರೆ ಇನ್ನೊಂದು ಚಿತ್ರ, ಬಿದ್ದರೆ ಮುಖಭಂಗ, ನಾನು ಕನ್ನಡ ಚಿತ್ರರಂಗಕ್ಕೆ ಸಾಕಷ್ಟು ಯಶಸ್ವಿ ಚಿತ್ರಗಳ ಸರಣಿಯನ್ನೇ ಒದಗಿಸಿದರೂ ಮುಂದಿನ ಚಿತ್ರದ ಬಗ್ಗೆ ನಿರ್ದೇಶಕನ ಫಲಿತಾಂಶ ಹೇಳುವಂತಿಲ್ಲ, ಇಲ್ಲಿ ಪ್ರೇಕ್ಷಕರ ಪರೀಕ್ಷೆಯಲ್ಲಿ ಉತ್ತೀರ್ಣತೆ ದೊರೆತರೇನೇ ಮುಂದಿನ ಚಿತ್ರಕ್ಕೆ ದಿಕ್ಕು.

ನಮ್ಮಲ್ಲಿ ಪ್ರತಿಭೆ ಇಲ್ಲ ಎನ್ನುವಂತಿಲ್ಲ, ಇರೋ ಪ್ರತಿಭೆಗೆ ಅವಕಾಶವಿಲ್ಲ ಪ್ರತಿಭೆಗೆ ಅವಕಾಶ ಮಾಡಿಕೊಡಿ ಚೆನ್ನಾಗಿ ದುಡಿಸಿಕೊಳ್ಳಿ ಎಂದರೆ ಅವರಿಗೆ ಮದರಾಸೇ ಬೇಕು, ಹಣ ಮಾಡ್ಕೋಳ್ಳೋರು ಮಾಡಿಕೊಳ್ತಾನೇ ಇದ್ದಾರೆ. ಹಣ ಇರುವವರಿಗೆ ಕನ್ನಡ ಬೇಡ, ಪ್ರಾಯಶಃ ನಾನು ನನ್ನ ಕನ್ನಡತನ ಬಿಟ್ಟಿದ್ದರೆ ಈಗ ಲಕ್ಷಾಧೀಶನಾಗಬಹುದಿತ್ತು, ಈಗೊಂದು ಉದಾಹರಣೆ ತೆಗೆದುಕೊಳ್ಳಿ, ನಾನು ವಿಷ್ಣುವರ್ಧನನನ್ನೋ, ಅಂಬರೀಶನನ್ನೋ ಹಾಕಿ ಚಿತ್ರ ಮಾಡುತ್ತೇನೆ ಎಂದರೆ ನಿರ್ಮಾಪಕರು ಹೆಚ್ಚಾಗಿ ಸಾಲುಗಟ್ಟಿ ಬರುತ್ತಾರೆ. ಪ್ರಚಾರ ಸಿಕ್ಕುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ನಾನು ತನ್ನ ಜೇಬಿಗೆ ಎಂಟು ಲಕ್ಷ ಇಳಿಸಬಹುದು, ನನಗಿದು ಬೇಡ, ಹೊಸಬರಿಗೆ ಅವಕಾಶ ಕೊಟ್ಟರೆ ಅವರು ಬೆಳೀತಾರೆ, ಉದ್ದಿಮೆಗೆ ಒಂದಿಷ್ಟು ಹೊಸ ಮುಖಗಳು ಬೆಳೆಯುವುದಕ್ಕೆ ಅವಕಾಶವಾಗುತ್ತದೆ.

ಕನ್ನಡನಾಡಿನ ಇತಿಹಾಸ ಸಾಂಸ್ಕೃತಿಕ ಭವ್ಯತೆಯನ್ನು ದಾಖಲಿಸುವ "ಕರ್ನಾಟಕ ವೈಭವ" "ರಾಣಿ ಅಬ್ಬಕ್ಕ", "ಚಿಕ್ಕವೀರರಾಜೇಂದ್ರ", "ಶಾಂತಲ" ಮತ್ತು "ಸುರಪುರದ ವೆಂಕಟಪ್ಪನಾಯಕ" ಚಿತ್ರಗಳನ್ನು ಮಾಡಲು ಸಂಕಲ್ಪಿಸಿದ್ದೇನೆ. ಇವು ಐತಿಹಾಸಿಕ ಚಿತ್ರಗಳು. ಬಹಳ ಅದ್ದೂರಿಯಾಗಿ ಮಾಡಬೇಕು. ಐವತ್ತು ವರ್ಷಗಳಾದರೂ ಕನ್ನಡದ ಜನ ನೆನಸಿಕೊಳ್ಳುವಂತಿರಬೇಕು. ಹಾಗೆ ಮಾಡಬೇಕೆಂ–ದಿದ್ದೇನೆ. ಇದು ಬರಿ ಆಸೆಯಲ್ಲ, ದೀಕ್ಷೆ. ಇಂತಹ ಚಿತ್ರಗಳ ತಯಾರಿಕೆಗೆ ಕರ್ನಾಟಕ

ಚಲನಚಿತ್ರೋದ್ಯಮ ಅಭಿವೃದ್ಧಿ ನಿಗಮ ಹಣ ಒದಗಿಸಬೇಕು. ನನಗೂ ವಯಸ್ಸಾಗುತ್ತಿದೆ, ಇನ್ನೂ ಎಷ್ಟು ವರ್ಷ ಇಷ್ಟೇ ಉತ್ಸಾಹ ಹುಮ್ಮಸ್ಸು, ಶಕ್ತಿ ಇದ್ದೀತು, ಹತ್ತು ವರ್ಷಗಳೇ? ಹದಿನೈದೇ? ಅಷ್ಟರೊಳಗೆ ನನ್ನಿಂದ ಕೆಲಸ ಮಾಡಿಸಿಕೊಳ್ಳುವುದು ಕನ್ನಡದ ಜನತೆಗೆ ಸೇರಿದ್ದು.

೧೯೮೨ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ಬಂದದ್ದರಿಂದ ನನಗೆ ತುಂಬಾ ಸಂತೋಷವಾಗಿದೆ. ಎಷ್ಟು ಎಂದರೆ ಯದ್ವಾ ತದ್ವಾ ಸಂತೋಷವಾಗಿದೆ. ಪ್ರೌಢಶಾಲೆಯಲ್ಲಿ ವಿದ್ಯಾರ್ಥಿಯಾಗಿದ್ದಾಗಿನಿಂದಲೂ ಕನ್ನಡ, ಕನ್ನಡ ಎಂದು ಕನವರಿಸಿ ಅದಕ್ಕಾಗಿ ಹಗಲಿರುಳು ದುಡಿದಿದ್ದಕ್ಕೆ ಸರ್ಕಾರದಿಂದ ಮನ್ನಣೆ ಬಂದಿತಲ್ಲಾ ಎಂದು ಸಂತೋಷವಾಗಿದೆ. ಕನ್ನಡಕ್ಕಾಗಿ ಕೆಲಸ ಮಾಡಿದ್ದು ಸಾರ್ಥಕವೆನಿಸಿದೆ.

◆



"ಉಪಾಸನೆ" ಚಿತ್ರದ ಮುಹೂರ್ತದ ಸಂದರ್ಭದಲ್ಲಿ ನಿರ್ಮಾಪಕರುಗಳಾದ ಶಿವರಾಂ ಮತ್ತು ರಾಮನಾಥ್‌ರೊಡನೆ ಪುಟ್ಟಣ್ಣ ಕಣಗಾಲ್.

# ಎಂತಹ ಚಿತ್ರ ಬೇಕು

ಚಿತ್ರಗಳು ಪ್ರೇಕ್ಷಕರಲ್ಲಿ ಸದ್ಭಾವನೆ ಮೂಡಿಸುವಂತಿರಬೇಕು. ಪ್ರೇಕ್ಷಕರು ತಮ್ಮ ಬದುಕನ್ನು ಕುರಿತು ಮೆಲುಕು ಹಾಕುವಂತಿರಬೇಕು, ಅದೇ ಒಳ್ಳೆಯ ಚಿತ್ರಗಳು.

ನಾನು ಯುವಕರನ್ನು ಪ್ರಚೋದಿಸುವ ಚಿತ್ರಗಳನ್ನು ತೆಗೆಯುವ ಬದಲು ವಿಚಾರ ಪ್ರಚೋದಕ ಚಿತ್ರಗಳನ್ನೇ ತೆಗೆಯಲು ಇಷ್ಟಪಡುತ್ತೇನೆ. ಆ ದಿಶೆಯಲ್ಲಿ ಯಶಸ್ಸು ಸಿಕ್ಕೇ ಸಿಗುತ್ತದೆ, ನಾನು ಪ್ರತಿಯೊಂದು ಚಿತ್ರದಲ್ಲೂ ಹೊಸತನ ಕಂಡುಕೊಂಡು ಜನಗಳ ಅಭಿರುಚಿ ವಿಚಾರವಾಹಿನಿಯನ್ನು ಅಭ್ಯಾಸಿಸಿದ್ದೇನೆ. ಜನರು ಕೂಡ ಉತ್ತಮವಾದಂತಹ ಸಿನಿಮಾಗಳನ್ನೇ ಕೇಳಬೇಕು. ಉತ್ತಮ ಅಭಿರುಚಿಯನ್ನು ವ್ಯಕ್ತಪಡಿಸಬೇಕು. ಪ್ರೇಕ್ಷಕ ಪೂರ್ವಗ್ರಹಪೀಡಿತವಾಗಿರಬಾರದು, ಅವನಿಗೆ ತಾನು ಏನು ಕೇಳುತ್ತಿದ್ದೇನೆ ಅನ್ನುವುದು ಮುಖ್ಯವಾಗಬೇಕೆ ಹೊರತು ತನಗೆ ಬೇಕಾದ್ದು ಇದರಲ್ಲಿ ಇಲ್ಲ ಅನ್ನೋ ಪೇಚಾಟ ಇರಕೂಡದು.

ಮನುಷ್ಯನ ಯಾವುದೇ ವಿಷಯೇಂದ್ರಿಯಗಳಿಗೂ ಕೆಟ್ಟ ರೀತಿಯ ಪ್ರಚೋದನೆಯನ್ನು ನನ್ನ ಚಿತ್ರಗಳು ಮಾಡಿಲ್ಲ, ನನ್ನ ಯಾವುದೇ ಚಿತ್ರಗಳಲ್ಲೂ ಉದ್ರೇಕಕಾರಿ ದೃಶ್ಯ ಇರುವುದಿಲ್ಲ. ಏಕೆಂದರೆ ಚಲನಚಿತ್ರ ಒಂದು ಪ್ರಬಲವಾದ ಮಾಧ್ಯಮ. ಬಹಳ ಹರಿತವಾದಂತಹ ಚಾಕು ಅಂತ ಇಟ್ಟುಕೊಳ್ಳೋಣ, ಕೊಲೆಗಡುಕನ ಕೈಲಿ ಕೊಟ್ಟರೆ ಏನಾಗುತ್ತೆ? ಅಥವಾ ವೈದ್ಯರ ಕೈಲಿ ಕೊಟ್ಟರೆ ಏನಾಗುತ್ತೆ? ಊಹಿಸಿ, ಈಚೆಗೆ ನಾನು ಗಮನಿಸಿದ ಹಾಗೆ ಕುಡಿತ, ಸಿಗರೇಟು ಇವುಗಳ ತರಹನೇ ಚಲನಚಿತ್ರ ಕೂಡ ಒಂದು ಚಟವಾಗಿ ಪರಿಣಮಿಸುತ್ತಾ ಇದೆ. ಈ ದೌರ್ಬಲ್ಯವನ್ನು ಅನೇಕರು ಶೋಷಣೆ ಮಾಡಿಕೊಳ್ಳುತ್ತಾ ಇದ್ದಾರೆ. ನನಗೂ ಸಹ ಒಂದು ಚಿತ್ರ ತೆಗೆಯಬೇಕಾದರೆ ಇದೇ ಶಂಕೆ ಕೊಡುತ್ತೆ, ಆದರೆ ಆದಷ್ಟೂ ಪ್ರಯತ್ನಪಟ್ಟು ನಮ್ಮ ಸಮಾಜಕ್ಕೆ ಆರೋಗ್ಯಕರವಾದಂತಹ ಅಂಶಗಳನ್ನೇ ನೀಡುತ್ತಾ ಇದ್ದೇನೆ.

ಹಿಂದಿನ ಕಾಲದ ಚಿತ್ರಗಳಲ್ಲಿ ಬಿಮಲ್‌ರಾಯ್‌ದಿರಬಹುದು ಅಥವಾ ಅಮಿತಾಚಕ್ರವರ್ತಿಯದಾಗಿರಬಹುದು. "ದೋ ಭೀಘ ಜಮೀನ್", "ಪರಿಣಿತ", "ಪತಿತ", "ಸೀಮಾ" ಈ ಚಿತ್ರಗಳಲ್ಲಿ ಯಾವುದೇ ತರದ ಲೈಂಗಿಕ ಪ್ರಚೋದನೆಗಳು ಇರ್ತಾ ಇರಲಿಲ್ಲ. ಏಕಂದರೆ ಅವರಿಗೆ ದುಡ್ಡು ಮುಖ್ಯ ಆಗಿರಲಿಲ್ಲ. ಕ್ಯಾಮರಾ ತೆಗೆದುಕೊಂಡು ನೇರವಾಗಿ ಪಾತ್ರದ ಹೃದಯಕ್ಕೆ ಇಟ್ಟು ಬಿಡ್ತಾ ಇದ್ದರು, ಅದು ಹೃದಯದ ಮಧುರ ಭಾವನೆಗಳನ್ನೇ, ಮಧುರವಾದ ನೆನಪುಗಳನ್ನೇ ಸೆರೆಹಿಡಿತಾ ಇತ್ತು. ಈಗೆಲ್ಲಿವೆ ಅಂಥ ಚಿತ್ರಗಳು?

ಚಿತ್ರ ರಂಗದವರಲ್ಲದೆ ಕೆಲವು ಬುದ್ಧಿಜೀವಿಗಳು ಸೂತ್ರಾಧಾರಿತ ಅಥವಾ ವ್ಯಾಪಾರಿ ಚಿತ್ರ, ಅಂದರೆ ಕುಣಿತ, ಹಾಡು, ಹೊಡೆದಾಟ ಇರುವವುಗಳನ್ನು ಮಸಾಲೆ ಚಿತ್ರಗಳೆಂದೂ ಮತ್ತು ಕಲಾತ್ಮಕ ಚಿತ್ರ ಎಂದರೆ ಯಾವುದಾದರೂ ಕಾದಂಬರಿಯನ್ನು ತೆಗೆದುಕೊಂಡು ಹೊಸ ಮುಖಗಳನ್ನು ಪರಿಚಯಿಸಿ, ಹಾಡು, ಕುಣಿತ ಎಂತಹದೂ ಇಲ್ಲದೇ ಸಮಾಜದ ಯಾವುದೋ ಒಂದು ಮುಖದ ಸಮರ್ಪಣಾ ಭಾವನೆಯನ್ನಾಗಿ ರಚಿಸಿರುವುದೆಂದೂ ವಿಶ್ಲೇಷಿಸಿರುತ್ತಾರೆ. ಆದರೆ ನನ್ನ ದೃಷ್ಟಿಯಲ್ಲಿ ಕಲಾತ್ಮಕ ಚಿತ್ರವಿರಲಿ, ವ್ಯಾಪಾರಿ ಚಿತ್ರವಿರಲಿ, ಅದು ಜನಸಮೂಹದೊಂದಿಗೆ ಸ್ಪಂದಿಸದಿದ್ದರೆ ನಿರುಪಯೋಗಿ ಚಿತ್ರ ಎಂದೆನಿಸುತ್ತದೆ.

ಚಲನಚಿತ್ರ ರಂಗದಲ್ಲಿ ಸದಭಿರುಚಿಯ ಚಿತ್ರಗಳು ಹೊರಬರಬೇಕಾದರೆ ಪ್ರೇಕ್ಷಕರ ಪಾತ್ರವೂ ಇದೆ. ಈ ಬಗ್ಗೆ ಒಂದು ವಿಧದಲ್ಲಿ ಕನ್ನಡ ಪ್ರೇಕ್ಷಕ ಅಭಿಮಾನ ಶೂನ್ಯ ಎಂದರೂ ಅಪಚಾರವಾಗುವುದಿಲ್ಲ. ಇತ್ತೀಚಿನ ಅಂಕಿ ಅಂಶಗಳ ಪ್ರಕಾರ ಆಂಧ್ರದ ೮ ಕೋಟಿ ಜನಸಂಖ್ಯೆಯಲ್ಲಿ ೭ ಕೋಟಿ ೯೦ ಲಕ್ಷ ಜನ ಚಲನಚಿತ್ರ ನೋಡುತ್ತಾರೆ. ತಮಿಳುನಾಡಿನಲ್ಲಿ ೭ ಕೋಟಿ ಪೈಕಿ ೬ ಕೋಟಿ ೯೦ ಲಕ್ಷ ಜನ ಚಲನಚಿತ್ರ ನೋಡುತ್ತಾರೆ. ಅದೇ ಕರ್ನಾಟಕದ ೪ ಕೋಟಿಯಲ್ಲಿ ೪೦-೫೦ ಲಕ್ಷ ಜನ ಮಾತ್ರ ಚಲನಚಿತ್ರ ನೋಡುತ್ತಾರೆ. ಅಂದರೆ ನಮ್ಮವರು ಎಷ್ಟು ಅಭಿಮಾನಿಗಳು ಎನ್ನುವುದನ್ನು ನೀವೇ ಊಹಿಸಿರಿ.

ಚಲನಚಿತ್ರ ಒಂದು ಪ್ರಭಾವಿ ಮಾಧ್ಯಮವಾಗಿದ್ದು ಅದರ ಪರಿಣಾಮ ಗಾಢವಾಗಿರುವುದರಿಂದ ಜನರು ಎಚ್ಚರಿಕೆಯಿಂದ ಚಲನಚಿತ್ರಗಳನ್ನು ಆಯ್ಕೆ ಮಾಡಿ ನೋಡಬೇಕು. ನನ್ನ ಚಲನಚಿತ್ರಗಳಲ್ಲಿ ಅಶ್ಲೀಲ ನೃತ್ಯಗಳಿರುವುದಿಲ್ಲ. ಮಾರಾ ಮಾರಿ ಇರುವುದಿಲ್ಲ ಅಥವಾ ಕಾಮಪ್ರಚೋದನೆ ಇಲ್ಲ. ಇಂತಹ ಚಲನಚಿತ್ರಗಳನ್ನು ನಾನು ಯಾವ ಕಾಲಕ್ಕೂ ಮಾಡುವುದಿಲ್ಲ. ಪ್ರಣಯ, ಕಾಮ ಮತ್ತು ಕೊಲೆಯ ಚಿತ್ರಗಳ ಮೂಲಕ ನಮ್ಮ ಯುವ ಜನರನ್ನು ಚಿತ್ರಗಳು ತಪ್ಪುದಾರಿಗೆಳೆದು ಅವರ ನೈತಿಕ

ಅಧಃಪತನಕ್ಕೆ ಕಾರಣವಾಗುತ್ತವೆ. ಇದು ನನ್ನ ದೃಢ ನಂಬಿಕೆ. ಇದಕ್ಕೆ ಇತ್ತೀಚಿನ ದಿನಗಳಲ್ಲಿ ಸಾಕಷ್ಟು ಉದಾಹರಣೆಗಳನ್ನೂ ನಾವು ಕಾಣಬಹುದು.

ಆಮಿಷಕ್ಕೆ ಬಲಿಯಾಗಿ ಅಶ್ಲೀಲ ಅಪಾಯಕಾರಿ ಚಿತ್ರಗಳನ್ನು ನಾನು ನಿರ್ಮಿಸಲಾರೆ, ಆದರ್ಶಬಿಡಲಾರೆ, ಅಭಿಮಾನಿಗಳ ಕಿಸೆಗೆ ಕತ್ತರಿ ಹಾಕಿ ನನ್ನ ಕಿಸೆ ತುಂಬಿಕೊಳ್ಳುವ ಕೆಟ್ಟ ಪ್ರವೃತ್ತಿ ನನ್ನಲ್ಲಿಲ್ಲ. ಸಹಸ್ರ ಮಂದಿಯ ಹೃದಯಗಳನ್ನು ಗೆಲ್ಲಲು ಪ್ರಾಮಾಣಿಕ ಪ್ರಯತ್ನ ನಡೆಸುತ್ತೇನೆ.

ಒಂದು ರೀತಿಯಲ್ಲಿ ಉತ್ತಮ ಅಭಿರುಚಿಗೆ ಬೆಲೆಯೇ ಇಲ್ಲ. ಹೀಗಿರುವಾಗ ಏಕೆ ಚಿತ್ರ ಮಾಡಬೇಕು ಅನಿಸುತ್ತದೆ. ಮೊದಲು ಪ್ರಥಮ ರಾತ್ರಿಯ ದೃಶ್ಯ ಇದ್ದರೆ ಗಂಡಹೆಂಡತಿ ಮಲಗುವಾಗ ದೀಪವಾರಿಸುವುದನ್ನು ತೋರಿಸಿದ್ದರೆ ಸಾಕಾಗಿತ್ತು. ಈವತ್ತು ವೈಭವೋಪೇತ ಅಲಂಕಾರದ ಮಲಗುವ ಕೋಣೆಯ ದೃಶ್ಯಗಳನ್ನು ಕೆಲವು ನಿಮಿಷಗಳವರೆಗಾದರೂ ತೋರಿಸುವುದು ಅನಿವಾರ್ಯ. ಇಂತಹ ಅನಿವಾರ್ಯಗಳಿಗೆ ಒಗ್ಗುವುದು ಹೇಗೆ? ನನ್ನ ಅಭಿರುಚಿಯ ಚಿತ್ರಗಳನ್ನು ಜನ ಒಪ್ಪದೇ ಹೋದರೆ ಎನ್ನುವ ಅಳುಕಿದೆ, ಆದರೆ ನನಗೆ ಗೊತ್ತಿರುವ ಇದೊಂದನ್ನು ಮಾಡುತ್ತಲೇ ಹೋಗುತ್ತಿರುತ್ತೇನೆ, ನನ್ನ ದಾರಿಯಲ್ಲಿ ನಾನು ನಡೆಯುತ್ತೇನೆ, ಈವತ್ತು ಕಾಲ ಪಕ್ವವಾಗದೆ ಇರಬಹುದು. ನಾನು ಮಾಡಿದ ಚಿತ್ರಗಳು ಏನು ಅಂತ ಜನಕ್ಕೆ ನಾಳೆ ಅರ್ಥವಾಗುತ್ತದೆ, ನನ್ನ ಸಾಧನೆ ಏನು ಅಂತ ಆಗ ಕೊಂಡಾಡುತ್ತಾರೆ. ಅದಕ್ಕಾಗಿ ನಾನು ಚಿತ್ರ ಮಾಡ್ತಾ ಹೋಗ್ತೇನೆ, ನನ್ನ ಜೀವನ ಬೇರೆಯವರಿಗೆ ಮೆಟ್ಟಿಲಾಗುತ್ತಾ ಹೋಗಬೇಕೇ ಹೊರತು ಅವರನ್ನು ತಡೆಯುವ ಕೆಸರಿನ ಹೊಂಡವಾಗಬಾರದು. ಅದಷ್ಟು ಆಗುವುದಾದರೆ ನನ್ನ ಜೀವನ ಸಾರ್ಥಕ ಎಂದುಕೊಳ್ಳುತ್ತೇನೆ.

ಸ್ತ್ರೀಯರ ಬಗ್ಗೆ ಹೇಳುವುದಾದರೆ ಈವತ್ತು ಎಲ್ಲರೂ ಸ್ತ್ರೀಯರನ್ನು ಶೋಷಣೆ ಮಾಡುತ್ತಾ ಇದ್ದಾರೆ. ಮುಂಚೆ ಹೆಂಗಸರನ್ನು ಹೊಡೀತಾ ಇದ್ದರು, ಬಡೀತಾ ಇದ್ದರು. ಮನೆ ಬಿಟ್ಟು ಓಡಿಸ್ತಾ ಇದ್ದರು. ಅನೇಕ ರೀತಿ ಹಿಂಸೆಕೊಡ್ತಾ ಇದ್ದರು. ನನಗದು ಶೋಷಣೆ ಅಂತ ಅನಿಸಿರಲಿಲ್ಲ. ಆದರೆ ಈಗ ಒಂದು ಬ್ಲೇಡಿನ ಪ್ರಚಾರಕ್ಕೆ, ಶಾಂಪೂ, ಸಿಗರೇಟು, ಸೋಪು, ಪೇಸ್ಟು ಇತ್ಯಾದಿಗಳೆಲ್ಲದರ ಪ್ರಚಾರಕ್ಕೂ, ಸುಂದರಳಾದ ಹೆಂಗಸಿನ ದೇಹವೇಬೇಕು. ಇದೇ ನಿಜವಾದ ಶೋಷಣೆ. ಜನಕ್ಕೀಗ ಬೆತ್ತಲೆ ತಿರುಗಬೇಕು ಅನ್ಸುತ್ತೆ. ಹಾಗೆ ಅಂತ ನಾವು ಅದನ್ನು ಮಾಡೋಕೆ ಸಾಧ್ಯವಾ? ಹಾಗಾದರೆ ತುಂಬಾ ಬೇಜವಾಬ್ದಾರಿ ಮಾತಾಗುತ್ತೆ.

ನನ್ನ ಚಿತ್ರಗಳಲ್ಲಿ ನಾನು ಸ್ತ್ರೀ ಪಾತ್ರಕ್ಕೆ ಹೆಚ್ಚು ಮಹತ್ವ ಕೊಟ್ಟಿದ್ದೀನಿ. ಏಕೆಂದರೆ ಹೆಣ್ಣನ್ನು ಜೀವನದಲ್ಲಿ ಅತ್ಯಂತ ಪೂಜ್ಯತೆಯಿಂದ ಕಾಣುವ ನಾನು ನನ್ನ ಚಿತ್ರದಲ್ಲೂ ಸಹಾ ಕೀಳಾಗಿ ಎಂದೂ ಕಾಣಲಾರೆ, ನನ್ನ ಚಿತ್ರಗಳಲ್ಲಿ ಹೆಣ್ಣು ಅವಳದೇ ಆದ ವ್ಯಕ್ತಿತ್ವವನ್ನು ಹೊಂದಿರುತ್ತಾಳೆ. ಅವಳು ಬೆಳೆದ ಪರಿಸರ, ಸುತ್ತಲಿನ ವಾತಾವರಣಕ್ಕೆ ಅನುಗುಣವಾದ ಪಾತ್ರವಾಗಿ ಸೃಷ್ಟಿಯಾಗುತ್ತಾಳೆ.

ಕನಸಿನ ಲೋಕಕ್ಕೆ ಒಯ್ಯುವ ಚಿತ್ರಗಳು ಒಳ್ಳೆಯವೆಂದು ಹೇಳಲಿಕ್ಕಾಗುವುದಿಲ್ಲ ಆದಾಗ್ಯೂ ಬದುಕಿನಲ್ಲಿ ಬೇಸತ್ತವರು ಕನಸಿನ ಲೋಕವನ್ನೇ ಬಯಸುತ್ತಾರೆ. ಮಿಥ್ಯ ಪ್ರಪಂಚವನ್ನು ನೋಡಲು ಚಿತ್ರ ಮಂದಿರಗಳಿಗೆ ಬರುತ್ತಾರೆ.

"ತಿರುಕನೋರ್ವ ಊರ ಮುಂದೆ" ಎಂಬ ಹಾಡಿನಂತೆ ಈ ಚಿತ್ರಗಳು ಜನರಿಗೆ ಕನಸಿನ ಲೋಕ ತೋರಿಸಿ, ಭ್ರಮೆಗೊಳಿಸಿ ಕೊನೆಗೆ ಕೈಬಿಡುತ್ತವೆ. ಇದರಿಂದ ಏನು ಲಾಭ? ಚಿತ್ರ ವೀಕ್ಷಣೆ ಒಂದು ಚಟ, ಹನ್ನೆರಡರಿಂದ ಇಪ್ಪತ್ತೈದರೊಳಗಿನ ಯುವ ಪೀಳಿಗೆಯೇ ಹೆಚ್ಚಾಗಿ ಚಲನಚಿತ್ರ ನೋಡುವುದರಿಂದ ಅವರಿಗೆ ಕನಸಿನ ಲೋಕದ ಚಲನಚಿತ್ರಗಳನ್ನು ತೋರಿಸಿ ಸುಲಭವಾಗಿ ಮೋಸಗೊಳಿಸಲಾಗುತ್ತಿದೆ. ಅಂಥಹುದನ್ನೇ ಹತ್ತಾರು ಸಲ ನೋಡುವ ಜನರಿಗೆ ಏನು ಹೇಳಲಾದೀತು? ನಮ್ಮ ಚಿತ್ರ ನಿರ್ಮಾಪಕರಿಗೆ ಯುವ ಪೀಳಿಗೆಯ ಪ್ರೇಕ್ಷಕರೆ ಆಶ್ರಯದಾತರು. ಈ ಯುವ ಜನತೆಯ ಅಭಿರುಚಿಯಂತೆ ಶೃಂಗಾರ, ಹಿಂಸೆ, ಬೆಡ್ ರೂಂ ದೃಶ್ಯದ ಚಿತ್ರಗಳೇ ಹೆಚ್ಚಾಗಿ ಬರುತ್ತಿವೆ. ಹೀಗಾಗಿ ನಮ್ಮ ಸಂಸ್ಕೃತಿ ಕೊಳೆಯುತ್ತಿದೆ, ಹಣದ ಸುತ್ತಾ ಹೆಣವಾಗಿ ತಿರುಗುವಾಗ ಒಳ್ಳೆಯ ಸಂಸ್ಕೃತಿಯ ಚಿತ್ರಗಳು ನಿರುಪಯುಕ್ತ.

ನನ್ನ ಪ್ರತಿಯೊಂದು ಚಿತ್ರದಲ್ಲೂ ನಾನು ಹೊಸದೊಂದು ಕಲಿಯುತ್ತಿದ್ದೇನೆ. ಜನರಿಗೆ ಇದು ಏಕೆ ಇಷ್ಟವಾಗುತ್ತಿದೆ ಅಥವಾ ಏಕೆ ಇಷ್ಟವಾಗುವುದಿಲ್ಲ ಎಂಬುದನ್ನು ಅರಿತುಕೊಳ್ಳಲು ಯತ್ನಿಸುತ್ತಿದ್ದೇನೆ. ಆದಾಗ್ಯೂ ಜನರ ಅಭಿರುಚಿಯ ಆಳ ನನಗಿನ್ನೂ ಸಿಕ್ಕಿಲ್ಲ. ನನ್ನ ಪ್ರತಿಯೊಂದು ಚಿತ್ರವೂ ಒಂದೊಂದು ಹೊಸ ಪ್ರಯೋಗವೇ ಆಗಿದೆ.

"ಕಥಾ ಸಂಗಮ" ನನ್ನ ಹೊಸ ಪ್ರಯೋಗ, ನಾನು ಒಂದೇ ಚಿತ್ರದಲ್ಲಿ ಮೂರು ತರಹ ಭಾವನೆಯ ಕಥೆಗಳನ್ನು ಯಶಸ್ವಿಯಾಗಿ ಪ್ರೇಕ್ಷಕರಿಗೆ ಮುಟ್ಟಿಸಬೇಕು ಅನ್ನೋ ಹುಚ್ಚು ಪ್ರತಿಷ್ಠೆಯಿಂದ ಅದನ್ನು ಆರಿಸಿಕೊಂಡೆ. ಅದೊಂದು ನನಗೆ ಸವಾಲಾಗಿತ್ತು. ಇಂತಹ ಪ್ರಯೋಗವನ್ನು ಚಿತ್ರಲೋಕದಲ್ಲಿ ಬೇರೆ ಯಾರಾದರೂ ಪ್ರಯೋಗಿಸಿದ್ದಾರಾ? ಆದರೂ ನಮ್ಮ ಸರಕಾರ ಅದಕ್ಕೆ ೩ನೇ ದರ್ಜೆ ಪುರಸ್ಕಾರ ಕೊಟ್ಟಿತು. ಅದನ್ನು ನಾನು ಇದುವರೆವಿಗೂ ಸ್ವೀಕರಿಸಿಲ್ಲ–ನನಗೆ ಬಹಳ ನೋವಾಯಿತು.

ನೀವು ತೊಡೆ ತೋರಿಸಿ ಹೆಣ್ಣಿನ ಬಟ್ಟೆ ಕಳಚಿ ಚಿತ್ರಮಾಡಿ ಹಣ ಮಾಡಿ ಎಂದು ಹಲವರು ನನ್ನ ಸ್ಥಿತಿಗೆ ಮರುಗಿ ಬೋಧನೆ ಮಾಡಿದರು. ಆದರೆ ನನ್ನಲ್ಲಿರುವ ಆತ್ಮಶಕ್ತಿ, ಅನಂತಶಕ್ತಿ, ಅನೈತಿಕ ಹಾದಿಗೆ ಇಳಿಯಲು ಬಿಟ್ಟಿಲ್ಲ. ನಾನು ಯಾವುದೇ ಕಾರಣಕ್ಕೂ ನನ್ನ ಆದರ್ಶ ಬಿಟ್ಟು, ಉದಾತ್ತ ಧ್ಯೇಯ ಬಿಟ್ಟು ಹೋಗಲಾರೆ. ಒಪ್ಪಂದ ಕೂಡ ಮಾಡಲಾರೆ. ಸರ್ಕಾರ ಕುಡಿತ ಏಕೆ ನಿಲ್ಲಿಸಲಿಲ್ಲ? ಅದಕ್ಕೂ ಹಣ ಬೇಕು. ಅದರಂತೆ ಚಿತ್ರರಂಗದಲ್ಲಿದ್ದವರಿಗೂ ಹಣಬೇಕು. ಹಣ ಯಾವ ಚಿತ್ರಗಳಿಗೆ ದೊರೆಯುತ್ತಿದೆಯೋ ಅಂತಹ ಚಿತ್ರಗಳೇ ಹೆಚ್ಚಾಗಿ ಬರುತ್ತಿವೆ. ಅದಕ್ಕೆ ಪ್ರೋತ್ಸಾಹವೂ ದೊರೆಯುತ್ತಿದೆ.

ಒಂದು ಕಾಲದಲ್ಲಿ ಆಂಗ್ಲ ಚಿತ್ರಗಳಿಂದ ಪ್ರಚೋದನೆಗೊಂಡು ನಾನು ದುಃಶ್ಚಟಗಳಿಗೆ ಗುರಿಯಾಗಿದ್ದೆ. ನಮ್ಮ ಮಕ್ಕಳು ಈ ರೀತಿ ದಾರಿ ತಪ್ಪಬಾರದು ಚಿತ್ರಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳುವ ಪರಿಪಾಠವನ್ನು ಬೆಳೆಸಿಕೊಳ್ಳಬೇಕು. ಜೀವನದಲ್ಲಿರುವಂತೆ ಚಲನಚಿತ್ರಗಳಲ್ಲಿಯೂ ಒಂದು ಯೋಜನೆ ಇರುತ್ತದೆ. ಪ್ರತಿಯೊಂದು ಚಿತ್ರವನ್ನು ನೋಡಿದಾಗಲೂ ಅದನ್ನು ವಿಮರ್ಶಿಸಿ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಬೇಕು. ಚಿತ್ರದಲ್ಲಿ ನಿರ್ದೇಶಕ ಏನು ಹೇಳಲು ಪ್ರಯತ್ನಿಸಿದ್ದಾನೆ ಎಂದು ತಿಳಿಯುವ ಮನೋಭಾವನೆಗಳು ಪ್ರೇಕ್ಷಕರಲ್ಲಿ ಮೂಡಬೇಕು "ಗುಡ್‌ಅರ್ಥ್" ಚಿತ್ರವನ್ನು ನೋಡಿ ಪ್ರಭಾವಿತನಾಗಿ ಶುದ್ಧ ಚಿತ್ರಗಳನ್ನೇ ಕೊಡುತ್ತಿರುವ ನಾನು ಪ್ರೀತಿ ಪ್ರೇಮಗಳ ಮೂಲಕವೇ ಪ್ರಪಂಚವನ್ನು ಕಾಣುತ್ತಿದ್ದೇನೆ. ಯಾರು ಏನು ಹೇಳಲಿ, ಟೀಕಿಸಲಿ ಅದನ್ನು ಪ್ರೀತಿಯಿಂದ ಸ್ವೀಕರಿಸಿರುತ್ತೇನೆ. ಕನ್ನಡ ಸಂಸ್ಕೃತಿಯನ್ನು ಬಿಂಬಿಸುವಂತ ವಿಶ್ವಮಾನ್ಯ ಶ್ರೇಷ್ಠ ಚಿತ್ರವೊಂದನ್ನು ತಯಾರಿಸುವ ಕನಸನ್ನು ಹೊಂದಿದ್ದೇನೆ.

ಕನ್ನಡ ಚಿತ್ರಗಳಿಗೆ ಸಹಾಯಧನ ಕೊಡುವುದನ್ನು ಸರ್ಕಾರ ತೆಗೆದು ಹಾಕಲಿ. ನೂರಕ್ಕೆ ನೂರರಷ್ಟು ಕರ ವಿನಾಯಿತಿ ನೀಡಲಿ, ಸಾಕು ಚಿತ್ರೋದ್ಯಮಕ್ಕೆ ಪ್ರೋತ್ಸಾಹ ಕೊಟ್ಟಂತಾಗುತ್ತದೆ. ಆದರೆ ಯಾವ ಬುದ್ಧಿವಂತರ ಸಲಹೆಯೂ ಸರ್ಕಾರಕ್ಕೆ ಬೇಕಿಲ್ಲ. ಸರ್ಕಾರ ಪ್ರೋತ್ಸಾಹ ಕೊಟ್ಟರೆ ಎಂತಹ ಚಿತ್ರವನ್ನಾದರೂ ಮಾಡಿ ಸದಭಿರುಚಿಯ ಜನಕ್ಕೆ ತೋರಿಸಬಹುದೆಂಬುದಕ್ಕೆ ಆ್ಯಟನ್‌ಬರೋರವರ "ಗಾಂಧಿ" ಚಿತ್ರ ಒಂದು ನಿದರ್ಶನ.

ಆ್ಯಟನ್‌ಬರೋರವರ "ಗಾಂಧೀ" ಚಿತ್ರದ ಆಂಗ್ಲ ಅವತರಣಿಕೆ ನೋಡಿದ್ದೀನಿ. ತುಂಬಾ ಚೆನ್ನಾಗಿದೆ, ಅತ್ಯುತ್ತಮವಾದಂತಹ ಚಿತ್ರ, ಪ್ರತಿಯೊಬ್ಬ ನಿರ್ದೇಶಕನಿಗೂ ಆ ರೀತಿಯ ಒಂದು ಚಿತ್ರ ಮಾಡಬೇಕೆನಿಸುವುದು ಸಹಜ. ಆದರೆ ಚಿತ್ರರಂಗಕ್ಕೆ

ಬಹಳ ಮುಖ್ಯವಾಗಿ ಬೇಕಾಗಿರತಕ್ಕಂತಹ ಹಣದ ಸೌಲಭ್ಯ ಆ್ಯಟಿನ್‌ಬರೋಗೆ ಸಿಕ್ಕಿತು. ಅವನಷ್ಟೆ ಬುದ್ಧಿವಂತರಾಗಿದ್ದಂತಹ ಕಲಾವಿದರು, ಸಹಾಯಕರು ಸಿಕ್ಕರು. ಮೇಲಾಗಿ ಕಿಂಗ್‌ಸ್ಲೇ ಅಂತಹ ಉತ್ತಮ ನಟ ಸಿಕ್ಕ. ಅದೂ ಅಲ್ಲದೆ ಗಾಂಧೀಜಿಯ ಮಾತು, ರೀತಿ, ನಡೆ, ನುಡಿ, ಅವರು ಧರಿಸುತ್ತಿದ್ದಂತ ಚಪ್ಪಲಿ, ಕನ್ನಡಕ, ವಾಚು ಪ್ರತಿಯೊಂದೂ ಯತಾರ್ಥವಾಗಿ ದೊರೆತವು. ಪುಣ್ಯಾತ್ಮನ ಋಣಾನುಸಂಬಂಧ ಎಲ್ಲೋ ಲಂಡನ್‌ನಲ್ಲಿ ಹುಟ್ಟಿ ನಮ್ಮ ಗಾಂಧೀಜಿ ಬಗ್ಗೆ ಅವನು ಚಿತ್ರ ತೆಗೆದ.

ನಾವಿನ್ನೂ ಕಲ್ಪನೆಯ ಬೇಲಿಯೊಳಗೆ ಮೇಯ್ತಾ ಇದ್ದೀವಿ. ನನಗೆ ಅಂತರರಾಷ್ಟ್ರೀಯ ನಿರ್ದೇಶಕ ಆಗಬೇಕೆಂದು ತುಂಬಾ ಇಷ್ಟ. ಸಾಕಷ್ಟು ಜನಬಲ, ಹಣಬಲ ಇವೆರಡೂ ಇದ್ದರೆ ನನಗೂ ಕೂಡ ನಮ್ಮ ಭಾರತೀಯ ಪುರಾಣಗಳನ್ನು ಚಿತ್ರೀಕರಿಸುವ ಆಸೆ ಇದೆ. ಅದರಲ್ಲೂ "ದೇವಿ ಭಾಗವತ" ಇದನ್ನು ಹಾಲಿವುಡ್ ಮಾದರಿಯಲ್ಲಿ ೭೦ ಎಂ.ಎಂ.ನಲ್ಲಿ ಸ್ಟೀರಿಯೋಫೋನಿಕ್‌ನಲ್ಲಿ ಸುಂದರವಾಗಿ ಚಿತ್ರಿಸಿ ಪ್ರಪಂಚದಾದ್ಯಂತ ತೋರಿಸಬೇಕು ಅಂತ ತುಂಬಾ ಆಸೆ. ಜೊತೆಗೆ ನಮ್ಮ ಪುರಾತನ ಕಲೆ, ಸಂಸ್ಕೃತಿ, ಕರ್ನಾಟಕ ವೈಭವವನ್ನು ಸಹಾ ಅದ್ದೂರಿಯಾಗಿ ಚಿತ್ರಿಸಿದರೆ ನಮ್ಮ ಯುವ ಜನಕ್ಕೆ ಬಹಳ ಉಪಯೋಗವಾಗುತ್ತೆ. ನನ್ನ ಮಹತ್ತರವಾದ ಆಸೆಗಳಲ್ಲಿ ಇದೂ ಒಂದು. ಆದರೆ ಸಾಹಿತಿಗಳ ಹಾಗೆ, ಶಿಲ್ಪಿಗಳ ಹಾಗೆ, ಚಿತ್ರಕಾರರ ಹಾಗೆ ವೈಯಕ್ತಿಕವಾಗಿ ಘಟಿಸುವಂತದ್ದಲ್ಲ. ಇದೊಂದು ಸಾಮೂಹಿಕ ಪ್ರಯತ್ನ. ಆ ಸೌಲಭ್ಯ ದೊರಕಿದರೆ ಒಬ್ಬ ನಿರ್ದೇಶಕ ಏನನ್ನು ಬೇಕಾದರೂ ಸಾಧಿಸಬಹುದು.

◆

# ಇದೆಂತಹ ಕನ್ನಡ ಸೇವೆ

ಪರಭಾಷಾ ಗಾಯಕರಿಗೆ, ತಾಂತ್ರಿಕಜ್ಞರಿಗೆ ಕನ್ನಡ ಚಿತ್ರಗಳಲ್ಲಿ ಅವಕಾಶ ಕೊಡಬೇಕಾದ ಅನಿವಾರ್ಯ ಪರಿಸ್ಥಿತಿ ಇಲ್ಲಿದೆ. ಗೀತೆಗಳ ಧ್ವನಿಮುದ್ರಣ ಮದ್ರಾಸಿನಲ್ಲಿ ನಡೆಯುವವರೆಗೆ ಸಮಸ್ಯೆ ಪೂರ್ಣ ಬಗೆಹರಿಯುವುದಿಲ್ಲ. ಬೆಂಗಳೂರಿನಲ್ಲೇ ಒಂದು ಸುಸಜ್ಜಿತ ಧ್ವನಿಗ್ರಹಣ ಕೇಂದ್ರ ಸ್ಥಾಪನೆಯಾದರೆ ಈ ಸಮಸ್ಯೆ ಬಗೆಹರಿಯುತ್ತದೆ.

ಕರ್ನಾಟಕದಲ್ಲಿ ಕನ್ನಡ ಚಿತ್ರೋದ್ಯಮ ಬೆಳೆಯುವ ಸಲುವಾಗಿ ಉದ್ಯಮವನ್ನು ಬೆಂಗಳೂರಿಗೆ ತರಬೇಕು. ಕರ್ನಾಟಕದಲ್ಲಿ ಚಿತ್ರೋದ್ಯಮ ನೆಲೆಯೂರುವಂತೆ ಮಾಡಬೇಕು. ಕನ್ನಡದಲ್ಲಿ ನಿರ್ಮಾಪಕ ಉಳಿಯಬೇಕು. ಸ್ಥಳೀಯ ಪ್ರತಿಭೆಗೆ ಅವಕಾಶ ಸಿಗಬೇಕು. ಆದರೆ ಇಂದು ನಮ್ಮ ಉದ್ಯಮವನ್ನು ಆಳುತ್ತಿರುವವರು ಚಿತ್ರ ಮಂದಿರದ ಮಾಲೀಕರು, ಅವರದೇ ಜೋರು. ಚಿತ್ರಮಂದಿರ ಸಿಗುವುದು ಕಷ್ಟ. ಸಿಕ್ಕಿದರೂ ನಿರ್ಮಾಪಕನಿಗೆ ಅವನ ಪಾಲು ಬರುವುದರಲ್ಲೇ ಎತ್ತಂಗಡಿ. ೨೦,೦೦೦ ರೂ.ಗಳ ಬಾಡಿಗೆಯನ್ನು ಚಿತ್ರಮಂದಿರಕ್ಕೆ ಕೊಟ್ಟರೆ ನಿರ್ಮಾಪಕನ ಕೈಗೆ ಏನು ಉಳಿಯುತ್ತದೆ. ಹೀಗಾಗಿ ಬಾಡಿಗೆ ಹೊಡೆತ ತಾಳಲಾರದೆ ಚೆನ್ನಾಗಿ ಓಡುವ ಚಿತ್ರವೂ ಒಂದು ವಾರ ಆದ ನಂತರ ನಿಲ್ಲುತ್ತದೆ. ಒಂದು ಲಕ್ಷ ರೂ.ಗಳಲ್ಲಿ ೮೦,೦೦೦ ರೂ.ಗಳನ್ನು ಚಿತ್ರ ಮಂದಿರದವರೇ ತೆಗೆದುಕೊಂಡರೆ ಪುಟ್ಟಣ್ಣ ಬದುಕುವುದು ಹೇಗೆ.

ಇದಕ್ಕೂ ಪರಿಹಾರ ಇದೆ. ಈಗ ಆಂಧ್ರವನ್ನು ನೋಡಿ. ಅಲ್ಲಿ ತೆಲುಗು ಚಿತ್ರದ ಮಧ್ಯಾಹ್ನ ಮತ್ತು ಬೆಳಗಿನ ಪ್ರದರ್ಶನಗಳಿಗೆ ಮನರಂಜನಾ ತೆರಿಗೆ ಇಲ್ಲ. ಜೊತೆಗೆ ಹೊಸ ತೆಲುಗು ಚಿತ್ರ ಬಿಡುಗಡೆಯಾದರೆ ಆ ಚಿತ್ರದ ಮೊದಲ ೨೧ ಪ್ರದರ್ಶನಗಳಿಗೆ ಚಿತ್ರಮಂದಿರದ ಬಾಡಿಗೆ ಎಷ್ಟು ಗೊತ್ತೆ? ಪ್ರತಿ ದಿನಕ್ಕೆ ೧೪೦೦ ರಿಂದ ೨೦೦೦ ರೂ.ವರೆಗೆ ಮಾತ್ರ, ಇದರಿಂದಾಗಿ ಇಂದು ತೆಲುಗು ಚಿತ್ರ ಸುಸ್ಥಿತಿಯಲ್ಲಿದೆ.

ಇಂತಹದೊಂದು ವ್ಯವಸ್ಥೆ ಕರ್ನಾಟಕದಲ್ಲಿ ಸಾಧ್ಯವಿದೆ. ಆದರೆ ಮನಸ್ಸು ಮಾಡಬೇಕು. ನಿರ್ಮಾಪಕರಿಗೆ, ಪ್ರದರ್ಶಕರಿಗೆ ಇಬ್ಬರಿಗೂ ಅನ್ಯಾಯವಾಗದಂತಹ ವ್ಯವಸ್ಥೆ ಆಗಬೇಕು. ಸುಲಭದಲ್ಲಿ ಕನ್ನಡ ಚಿತ್ರಗಳಿಗೆ ಚಿತ್ರಮಂದಿರ ಸಿಗಬೇಕು. ಜೊತೆಗೆ ಸರ್ಕಾರವು ಚಿತ್ರ ಮಂದಿರಗಳನ್ನು ಕಟ್ಟಿಸಿ ಸುಲಭ ದರದಲ್ಲಿ ಬಾಡಿಗೆಗೆ ಕೊಡಬೇಕು. ಸರ್ಕಾರಕ್ಕೆ ನಾವು ಬಾಡಿಗೆ ಕಟ್ಟುತ್ತೇವೆ. ಪ್ರದರ್ಶಕರು ತಮಗೆ ಬಂದ ಹಣದಲ್ಲಿ ಅರ್ಧತೆಗೆದುಕೊಳ್ಳಲಿ. ನಾವು ಅರ್ಧ ತೆಗೆದುಕೊಳ್ಳುತ್ತೇವೆ. ಚಿತ್ರ ಮಂದಿರದವರು ಇದನ್ನು ಒಪ್ಪಿಕೊಂಡರೆ ನಾನು ಗಲ್ಲಿಗೆ ಹೋಗಲೂ ಸಿದ್ಧ.

ತಾಯಿಯಾದವಳಿಗೆ ಎದೆಯಲ್ಲಿ ಹಾಲೇ ಇರದಿದ್ದರೆ ಅವಳು ತನ್ನ ಮಗುವಿಗೆ ಏನು ಕುಡಿಸುತ್ತಾಳೆ, ನನಗೂ ಕರ್ನಾಟಕದಲ್ಲಿರೋ ಒಂದೊಂದು ಪ್ರತಿಭೆಗಳನ್ನು, ಸಾಹಿತಿ, ಕಲಾವಿದ, ಸಂಗೀತಗಾರ ಹೀಗೆ ಎಲ್ಲರನ್ನೂ ಚಿತ್ರಗಳ ಮೂಲಕ ಪರಿಚಯ ಮಾಡಿಕೊಡಬೇಕೆಂಬ ಹಂಬಲ ಇದೆ. ಆದರೆ ನಾನು ಮಾಡುವುದು ವರ್ಷಕ್ಕೆ ಒಂದು ಚಿತ್ರ, ಅದರಲ್ಲಿಯೂ ಹೊಸ ಪ್ರತಿಭೆಗೆ ಅವಕಾಶ ಮಾಡಿಕೊಡಬೇಕಾದರೆ ನಾನು ನಿರ್ಮಾಪಕನ ಕಾಲು ಹಿಡಿಯಬೇಕು. ಏಕೆಂದರೆ ಅವನಿಗೆ ವ್ಯಾಪಾರ ಮುಖ್ಯವೇ ಹೊರತು ಕಲೆಯಲ್ಲ. ಇದಲ್ಲದೆ ನನ್ನನ್ನೇ ನಂಬಿಕೊಂಡಿರುವ ಹಲವು ಜನರಿಗೆ ನಾನು ಒಮ್ಮೆಗೇ ನಿಮ್ಮ ದುಡಿಮೆ ಅಗತ್ಯವಿಲ್ಲ ಎಂದು ಹೇಗೆ ಹೇಳಲಿ.

ಹಿಂದಿ ಚಿತ್ರಗಳಲ್ಲಿ ಹಾಡುಗಳ ಧ್ವನಿಮುದ್ರಕಗಳ ಮಾರಾಟದಿಂದಲೇ ಲಕ್ಷಾಂತರ ರೂಪಾಯಿ ಹಣ ಬರುತ್ತದೆ. ಕನ್ನಡದಲ್ಲಿ ಹಾಗಲ್ಲ. ಒಂದು ಹಾಡು ಗರಿಷ್ಟ ಮುನ್ನೂರು ಧ್ವನಿಮುದ್ರಿಕೆಗಳಾಗಿ ತಯಾರಿಸಿದರೂ ಅದು ಮಾರಾಟವಾಗಬೇಕಾದರೆ ಒಂದೆರಡು ವರ್ಷಗಳೇ ಬೇಕು. ಕಾರಣ ನಮ್ಮಲ್ಲಿ ಇಂತಹ ಸದಭಿರುಚಿಯ ಧ್ವನಿಮುದ್ರಿಕೆಗಳನ್ನು ಕೊಳ್ಳುವ, ಸಂಗ್ರಹಿಸುವ, ಅಭ್ಯಾಸ ಕಡಿಮೆ. ಒಂದು ಹಾಡನ್ನು ಧ್ವನಿ ಮುದ್ರಿಸಲು ಸುಮಾರು ೧೦-೧೫ ಸಾವಿರ ರೂಪಾಯಿ ವೆಚ್ಚಾಗುತ್ತದೆ. ಇಂತಹ ನಾಲ್ಕೈದು ಹಾಡುಗಳ ಇಡೀ ಒಂದು ಚಿತ್ರದ ಹಾಡುಗಳನ್ನು ವರ್ಷವಿಡೀ ಪ್ರಸಾರ ಮಾಡುವ ಆಕಾಶವಾಣಿ ಇನ್ನೂರು ರೂಪಾಯಿ ಗೌರವ ಧನ ನೀಡುತ್ತದೆ. ಹೀಗಾದರೆ ನಿರ್ಮಾಪಕನ ಗತಿ ಏನು? ಇದರ ಜೊತೆಗೆ ಕಾಡುವ ನಕಲಿ ಕ್ಯಾಸೆಟ್ಟುಗಳ ಪಿಡುಗು ಬೇರೆ. ಹೀಗೆಯೇ ಕನ್ನಡ ಭಾಷೆ, ಸಂಗೀತ, ಚಿತ್ರ, ಜನ, ಸಾಹಿತ್ಯ ಎಲ್ಲವೂ ಕೊನೆಯದಾಗೇ ಉಳಿಯುವುದು ಬೇಡ.

ಗೋಕಾಕ್ ಚಳುವಳಿಯಲ್ಲಿ ಕನ್ನಡ ಎಂದು ಹಾರಾಡಿದವರು ಎಂತಹ ಕನ್ನಡ ಚಿತ್ರ ಮಾಡುತ್ತಿದ್ದಾರೆ. ನಿರ್ದೇಶಕರು ತಾಂತ್ರಿಕಜ್ಞರಿಂದ ಹಿಡಿದು ಕಲಾವಿದರವರೆಗೂ ಎಲ್ಲರೂ ಹೊರನಾಡಿನವರೇ. ಇದೆಂತ ಕನ್ನಡ ಸೇವೆ?

ಬೆಂಗಳೂರು ನಗರ ಕನ್ನಡ ಚಿತ್ರರಂಗದ ಕೇಂದ್ರ ಬಿಂದುವಿನಂತೆ. ಇಲ್ಲಿ ಕೋಟ್ಯಾಂತರ ರೂಪಾಯಿಯ ವಹಿವಾಟು, ವ್ಯವಹಾರದ, ಭಾರಿ ಭಾರಿ ಉದ್ಯಮಗಳು ಬೇರೂರಿವೆ. ಇಲ್ಲಿ ವಿಮಾನ, ದೂರವಾಣಿ, ಭಾರಿ ಭಾರಿ ವಿದ್ಯುತ್ ಉಪಕರಣಗಳು ಮುಂತಾದವುಗಳನ್ನು ತಯಾರಿಸುವ ಕಾರ್ಖಾನೆಗಳು ಇವೆ. ಇಷ್ಟಾದರೂ ಒಂದೇ ಒಂದು ಸರ್ವ ಸುಸಜ್ಜಿತ ಧ್ವನಿಗ್ರಹಣ ಕೇಂದ್ರ ಇಲ್ಲಿಲ್ಲ. ಇದರ ಬಗ್ಗೆ ನಿರ್ಮಾಪಕರಾಗಲೀ, ಸರ್ಕಾರವಾಗಲೀ ಹೆಚ್ಚು ಕಾಳಜಿ ವಹಿಸಿದಂತಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಕನ್ನಡಿಗರೇ ಆದ ಕವಿಗಳು, ಹಾಡುಗಾರರು, ಸಂಗೀತ ವಾದ್ಯಪಟುಗಳು ಮುಂತಾದ ಹೊಸ ಪ್ರತಿಭೆಗಳಿಗೆ ಸರಿಯಾದ ಅವಕಾಶ ಪ್ರೋತ್ಸಾಹ ದೊರೆಯಲು ಸಾಧ್ಯವೇ ಇಲ್ಲ.

ಕನ್ನಡ ಚಿತ್ರೋದ್ಯಮದ ಅಭಿವೃದ್ಧಿಯನ್ನು ಹೇಗೆ ಗುರ್ತಿಸುತ್ತೀರಿ? ಒಂದು ವರ್ಷದಲ್ಲಿ ಹೊರಬರುವ ಕನ್ನಡ ಚಿತ್ರಗಳ ಸಂಖ್ಯೆಯಿಂದಲೇ? ಖಂಡಿತ ಅಲ್ಲ. ವರ್ಷಕ್ಕೆ ಅರವತ್ತು ಕನ್ನಡ ಚಿತ್ರಗಳನ್ನು ತಯಾರಿಸುತ್ತೇವೆ. ಆದರೆ ಪ್ರತಿಯೊಂದು ಕೆಲಸಕ್ಕೂ ಮದರಾಸಿಗೆ ಓಡಬೇಕು. ಇದು ನಾಚಿಕೆಗೇಡು. ನಮ್ಮ ಚಿತ್ರೋದ್ಯಮದಲ್ಲಿ ಹಣಕ್ಕೆ ಕೊರತೆ ಇಲ್ಲ. ಆದರೆ ನಿರ್ಮಾಪಕರು ತಮಗೆ ಬಂದ ಲಾಭಾಂಶದಲ್ಲಿ ಸ್ವಲ್ಪ ಭಾಗವನ್ನು ಉದ್ಯಮದ ಅಭಿವೃದ್ಧಿಗೆ ತೊಡಗಿಸಲು ಹಿಂಜರಿಯುವುದೇ ಇದಕ್ಕೆ ಕಾರಣ. ಯಾವುದೋ ಕೀಳುದರ್ಜೆ ಉಪಕರಣಗಳನ್ನು ತಂದು ಬೆಂಗಳೂರಿನಲ್ಲಿ ಸ್ಟುಡಿಯೋ ಮಾಡಿದೆವು ಎಂದರೆ ಹೇಗೆ? ನಮ್ಮಲ್ಲಿ ಅನೇಕ ಪ್ರತಿಭಾವಂತರಿದ್ದಾರೆ. ಆದರೆ ಅವರನ್ನು ಗುರ್ತಿಸುವ ಜನರೆಲ್ಲಿ? ಒಬ್ಬ ಲೈಟ್‌ಬಾಯ್ ಕೂಡ ಮದರಾಸಿನವನೇ ಆಗಬೇಕು. ಈ ಮನೋಭಾವ ತೊಲಗುವುದು ಹೇಗೆ? ಇದಕ್ಕೆ ಹೋರಾಟ ಅಗತ್ಯ. ಆದರೆ ನಾನೊಬ್ಬನೇ ಹೋರಾಡುವುದು ಸಾಧ್ಯವಿಲ್ಲ. ನಮಗೊಬ್ಬ ನಾಯಕ ಬೇಕು.

ಕೆಲವು ಕಾಲ ಕಷ್ಟವಾದರೂ ಕನ್ನಡದವರನ್ನೇ ಪ್ರೋತ್ಸಾಹಿಸುವ, ಬೆಂಗಳೂರಿನಲ್ಲೇ ಚಿತ್ರೋದ್ಯಮಕ್ಕೆ ಬೇಕಾಗುವ ಒಳ್ಳೆಯ ಉಪಕರಣಗಳನ್ನು ಸ್ಥಾಪಿಸುವ ಮನೋಭಾವ ನಿರ್ಮಾಪಕರಲ್ಲಿ ಬೆಳೆಯಬೇಕು. ಆದರೆ

ಮಾತನಾಡುವುದರಿಂದ ಏನು ಪ್ರಯೋಜನ? ನಮ್ಮ ಉದ್ಯಮದ್ದು ಪೂರ್ತಿ ವ್ಯಾಪಾರಿ ಮನೋಭಾವ. "ಸೆಲಬಲ್ ಕಮಾಡಿಟಿ" ಏನಿದೆಯೋ ಅದನ್ನೇ ಹಾಕಿ ಆದಷ್ಟು ಬೇಗ ದುಡ್ಡು ಮಾಡಿಕೋಬೇಕು ಅನ್ನುವುದೊಂದೇ ಈ ಉದ್ಯಮದ ಉದ್ದೇಶ. ಈ ಬಗ್ಗೆ ಎಷ್ಟು ಹೊತ್ತು ಮಾತಾಡಿದರೂ ನಾನೊಬ್ಬ ಹುಚ್ಚ, ಕೇಳುವವರೂ ಹುಚ್ಚರು. ಇದೊಂದು ಹುಚ್ಚರ ಸಂತೆ, ಈ ದಿಗಂಬರರ ರಾಜ್ಯದಲ್ಲಿ ನಾವು ಲಂಗೋಟಿ ಹಾಕ್ಕೊಂಡು ಓಡಾಡಿದರೆ ಹಾಸ್ಯಾಸ್ಪದ ಆಗುವುದಿಲ್ಲವೇ?

◆



ಚಿತ್ರೀಕರಣದ ಸಂದರ್ಭವೊಂದರಲ್ಲಿ ಚಿತ್ರ ತಂಡದೊಡನೆ ಪುಟ್ಟಣ್ಣ ಕಣಗಾಲ್.

# ಚಿತ್ರಕಥೆಯ ಸಿದ್ಧತೆ

ಚಿತ್ರಕ್ಕೆ ಬೇಕಾದ ಕಾದಂಬರಿಗಳನ್ನು ನಾನೇ ಆಯ್ಕೆ ಮಾಡುತ್ತೇನೆ. ಜನಪ್ರಿಯವಾದ ಕಾದಂಬರಿಗಳು ಬಂದಾಗ ನಿರ್ಮಾಪಕರುಗಳು ಬಂದು ನನ್ನ ಮುಂದೆ ಕೈಕಟ್ಟಿಕೊಂಡು ನಿಂತುಕೊಳ್ಳುತ್ತಾರೆ. ಚಿತ್ರ ಪೂರೈಸಿದ ಮೇಲೆ ನಾನು ಅವರ ಮುಂದೆ ಕೈಕಟ್ಟಿಕೊಂಡು ನಿಲ್ಲಬೇಕು. ಮೊದಲಿಗೆ ಒಂದು ಕಾದಂಬರಿಯಲ್ಲಿ ನಾನು ನೋಡುವುದು ಪ್ಲೇ ಆಫ್ ಕ್ಯಾರೆಕ್ಟರ್ಸ್, ಪಾತ್ರಗಳ ಮಾನಸಿಕ ತುಮುಲ ಮತ್ತು ಕಾದಂಬರಿಯ ನಾಟಕೀಯ ಘಟನೆ, ಪಾತ್ರಗಳನ್ನು ಒಬ್ಬ ನಿರ್ದೇಶಕನಾಗಿ ಹೇಗೆ ದೃಷ್ಟಿ ಗೋಚರಿಸಿಕೊಳ್ಳಬಹುದು., (ವಿಜ್ಯುಯಲೈಸ್ ಮಾಡಿ) ತಂತ್ರವನ್ನು ಹೇಗೆ ಬಳಸಿಕೊಳ್ಳಬಹುದು., ಯಾವ ತಾಣದಲ್ಲಿ ಚಿತ್ರ ತೆಗೆದರೆ ಕಾದಂಬರಿಗೆ ಹೊಂದಿಕೊಳ್ಳುತ್ತೆ., ಇವುಗಳನ್ನೆಲ್ಲಾ ಯೋಚನೆ ಮಾಡುತ್ತೇನೆ. ಚಿತ್ರ ತೆಗೆಯುವಾಗ ಅದಕ್ಕೆ ತಕ್ಕಂತೆ ಕಾದಂಬರಿಯನ್ನು ಬದಲಾವಣೆ ಮಾಡಿಕೊಳ್ಳಬೇಕಾಗುತ್ತದೆ. ಆದ್ದರಿಂದ ಈ ಬಗ್ಗೆ ಪ್ರತಿಯೊಂದು ವಿಷಯಕ್ಕೂ ನಿರ್ದೇಶಕನಿಗೆ ಸ್ವಾತಂತ್ರ್ಯ ಇರಬೇಕು. ಆಗಲೇ ಅದು ನಿರ್ದೇಶಕನ ಚಿತ್ರ ಆಗುತ್ತೆ. ಇಲ್ಲದೆ ಹೋದರೆ ಅದು ಹಣದ ಜನಗಳ ಚಿತ್ರ ಆಗುತ್ತೆ.

ನಾನು ಬಹುತೇಕ ಚಿತ್ರಗಳ ವಸ್ತುಗಳನ್ನು ಕಥೆ ಕಾದಂಬರಿಗಳಿಂದ ತೆಗೆದುಕೊಂಡಿದ್ದೇನೆ. ಈ ಬಗ್ಗೆ ಹೇಳುವುದಾದರೆ ನಿರ್ದೇಶಕರಲ್ಲಿ ಎರಡು ಬಗೆ– ಒಂದು ತಮ್ಮ ಆಲೋಚನೆಗಳನ್ನು ಚಿತ್ರ ಮಾಡುವವರದು, ಮತ್ತೊಂದು ಇನ್ನೊಬ್ಬರ ಆಲೋಚನೆಗಳನ್ನು, ಬೇರೆಯವರ ವಸ್ತುಗಳನ್ನು ಚಿತ್ರದ ಭಾಷೆಗೆ ಭಾಷಾಂತರಿಸುವುದು. ನಾನು ಈ ಎರಡನೇ ವರ್ಗಕ್ಕೆ ಸೇರಿದವನು, ಹಾಗೆಂದು ನನ್ನ ಆಲೋಚನೆಗಳನ್ನು ಚಿತ್ರಕ್ಕೆ ತಂದಿಲ್ಲ ಎಂದರ್ಥವಲ್ಲ. "ಮಾನಸ ಸರೋವರ" ಸಂಪೂರ್ಣವಾಗಿ ನನ್ನ ಕಲ್ಪನೆ. ಈ ಕಥೆಯನ್ನು ಹೀಗೆ ಹೇಳಬೇಕೆಂದು (ನೆರೇಟ್) ಅನ್ನಿಸಿತು. ಹಾಗೆ ಹೇಳಿದೆ. ಅದು ಕಥೆಯಿಂದ ಕಥೆಗೆ ಸನ್ನಿವೇಶದಿಂದ ಸನ್ನಿವೇಶಕ್ಕೆ ಬದಲಾಗುತ್ತಾ ಹೋಗುತ್ತದೆ. ಹೇಳುವುದನ್ನೆಲ್ಲಾ ಚೆನ್ನಾಗಿಯೇ ಹೇಳಬೇಕು. ಜನಕ್ಕೆ

ಪ್ರತಿಯೊಂದು ಅಂಶವೂ ತಲುಪಬೇಕು ಎನ್ನುವ ದೃಷ್ಟಿಯಿಂದಲೇ ಪ್ರತಿಯೊಂದು ಚಿತ್ರವನ್ನೂ ಮಾಡುತ್ತೇನೆ.

ಕಾದಂಬರಿಯನ್ನು ಹತ್ತಾರು ಸಲ ಓದುತ್ತೇನೆ. ಬೇರೆ, ಬೇರೆ ದೃಷ್ಟಿಕೋನಗಳಿಂದ ಆ ಪಾತ್ರಗಳನ್ನು ದೃಷ್ಟಿಗೋಚರ ಮಾಡಿಕೊಳ್ಳುತ್ತೇನೆ. ಕ್ಯಾಮರಾದಲ್ಲಿ ಯಾವುದು ಸತ್ವಯುತವಾಗಿ ಬರುತ್ತೆ ಅನ್ನೋದನ್ನು ಯೋಚಿಸುತ್ತೇನೆ. ಇವುಗಳನ್ನೆಲ್ಲಾ ಟಿಪ್ಪಣಿ ಮಾಡಿಕೊಳ್ಳುತ್ತಾ ತಿಂಗಳಗಟ್ಟಲೆ ವರ್ಷಗಟ್ಟಲೇ ಕೂತುಕೊಂಡು ಯೋಚ್ನೆ ಮಾಡುತ್ತೇನೆ. ನಂತರ ನಾನೊಬ್ಬನೇ ಚಿತ್ರೀಕರಣ ಜಾಗಗಳನ್ನು ಹುಡುಕಿ ಆಮೇಲೆ ನನ್ನ ಛಾಯಾಗ್ರಾಹಕರನ್ನು ಕರೆದುಕೊಂಡು ಹೋಗಿ ವಿವರಿಸುತ್ತೇನೆ. ಹೀಗೆ ತುಂಬಾ ಪೂರ್ವ ತಯಾರಿ ಬೇಕಾಗುತ್ತೆ, ಆದರೆ ನಮ್ಮ ಈಗಿನ ವ್ಯವಸ್ಥೆಯಲ್ಲಿ ಕೆಲವು ಸಲ ಇದಾವುದೂ ಸಾಧ್ಯವಾಗೊಲ್ಲ. ೪೦-೫೦ ದಿನಗಳೊಳಗೇ ಚಿತ್ರ ಪೂರೈಸಬೇಕು ಅಂತಾರೆ, ಕಲಾವಿದರೆಲ್ಲಾ ಮಾರುವ ವಸ್ತುಗಳಾಗಿದ್ದಾರೆ. ನಿರ್ಮಾಪಕರಿಗೆಲ್ಲಾ ಹಾಕಿದ ಹಣ ವಾಪಸ್ ಬರಬೇಕೆನ್ನುವ ಆತುರ ಇರುತ್ತೆ. ಈ ಪರಿಸ್ಥಿತಿಯಲ್ಲಿ ಯಾವುದೂ ಸಾಧ್ಯವಾಗುವುದಿಲ್ಲ.

◆



೧೯೭೩ರಲ್ಲಿ ಬೈಲೋ ರಷ್ಯಾದಲ್ಲಿ ಏರ್ಪಡಿಸಿದ್ದ ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವದಲ್ಲಿ ಸೋವಿಯತ್ ನಿರ್ಮಾಪಕರ ಆಹ್ವಾನದ ಮೇರೆಗೆ ಪುಟ್ಟಣ್ಣನವರು ಭಾಗವಹಿಸಲು ಹೊರಟ ಸಂದರ್ಭದಲ್ಲಿ ಕುಟುಂಬದವರು ಮತ್ತು ಹಿತೈಷಿಗಳಿಂದ ಬೀಳ್ಕೊಡುಗೆ. ಆ ಸಮಯದಲ್ಲಿ ಪತ್ನಿ ನಾಗಲಕ್ಷ್ಮಿಯವರ ಜೊತೆ ಹಸನ್ಮುಖಿ ಪುಟ್ಟಣ್ಣ ಕಣಗಾಲ್.

# ಸಂಗೀತದ ಪಾತ್ರ

ಹೂವಿಗೆ ಪರಿಮಳ ಎಷ್ಟು ಮುಖ್ಯವೋ ಚಲನಚಿತ್ರಕ್ಕೆ ಸಂಗೀತ ಅಷ್ಟೇ ಮುಖ್ಯ. ಗೀತರಚನೆ, ರಾಗಸಂಯೋಜನೆ ಹಾಗೂ ಚಿತ್ರೀಕರಣ ಈ ಮೂರೂ ವಿಷಯದಲ್ಲೂ ಹೊಸ ಬಗೆಯನ್ನು ನನ್ನ ಚಿತ್ರಗಳ ಮೂಲಕ ಪ್ರೇಕ್ಷಕರಿಗೆ ಪರಿಚಯ ಮಾಡಿದ್ದೇನೆ. ಅಂತೆಯೇ ನಾನು ಚಿತ್ರಿಸಿದ ಬಹುಪಾಲು ಚಿತ್ರಗಳು ಯಶಸ್ವಿ ಆಗಿವೆ.

ತಮ್ಮ ಮನಪಟಲದಲ್ಲಿ ರೂಪಿಸಿಕೊಂಡ ದೃಶ್ಯ ಹಾಗೂ ಆಕೃತಿಯನ್ನು ಕಲೆಗಾರ ಹಾಗೂ ಶಿಲ್ಪಿ ತಂತಮ್ಮ ಅಂತರಂಗದಲ್ಲಿ ತುಂಬಿಕೊಂಡು, ಕುಂಚದಿಂದ ಕಲೆಗಾರನು ವರ್ಣಚಿತ್ರವನ್ನೂ, ಉಳಿಯ ಕಡೆತಗಳಿಂದ ಶಿಲ್ಪಿಯು ಆಕೃತಿಯನ್ನೂ ಸೃಷ್ಟಿಸಿ ಆನಂದಿಸುತ್ತಾರೆ. ಇದಕ್ಕಾಗಿ ಅವರು ಬಳಸುವ ಮಾಧ್ಯಮ, ಕುಂಚ ಹಾಗೂ ಉಳಿ ಮಾತ್ರ. ಆದರೆ ಹಾಡು ಅಥವಾ ಸಂಗೀತದ ಮೂಲಕ ಒಬ್ಬ ಚಿತ್ರ ನಿರ್ದೇಶಕ ತಾನು ಕಲ್ಪಿಸಿಕೊಂಡಂತಹ ದೃಶ್ಯಾವಳಿಗಳನ್ನು ಚಿತ್ರಿಸಿ ತೋರಿಸುವುದು ಸುಲಭ ಸಾಧ್ಯವಾದ ಕಾರ್ಯವಲ್ಲ. ಹಲವಾರು ಕುಶಲಕರ್ಮಿಗಳ ಸಾಮರ್ಥ್ಯಕ್ಕೆ ತನ್ನಲ್ಲಿನ ಭಾವವನ್ನು ತುಂಬಿದಾಗ ಮಾತ್ರ ನಿರ್ದೇಶಕ ತನ್ನ ಕಲ್ಪಿತ ದೃಶ್ಯಗಳನ್ನು ಜೀವಂತವಾಗಿಸುವುದು ಸಾಧ್ಯ.

ಗೀತರಚನಕಾರ, ರಾಗಸಂಯೋಜಕ, ಹಿನ್ನೆಲೆಗಾಯಕ, ಗಾಯಕಿ, ಹಿನ್ನೆಲೆ ವಾದ್ಯಗಾರರು, ಹಾಡು ಬರುವ ಸನ್ನಿವೇಶ, ಚಿತ್ರೀಕರಿಸುವ ಸ್ಥಳ, ಹಾಡಿಗೆ ಅಭಿನಯಿಸುವ ಕಲಾವಿದರು, ಬಿಡುಗಡೆ ಮಾಡುವ ಚಿತ್ರಮಂದಿರ, ಅಲ್ಲಿನ ಪ್ರೊಜೆಕ್ಷನ್ ವ್ಯವಸ್ಥೆ ಮುಂತಾದವುಗಳ ಸಮರ್ಪಕ ಬಳಕೆಯ ಮೂಲಕ ನಿರ್ದೇಶಕನ ಭಾವನೆಗಳು ಸಾಕಾರ ರೂಪವಾಗಿ ಬಂದಾಗ ಮಾತ್ರ ಹಾಡಿಗೆ ಸೊಗಸು.

ನಾನು ನಾಟಕ ರಂಗದಲ್ಲಿದ್ದ ದಿನಗಳಲ್ಲಿ ಪ್ರತಿದಿನ ನಾಟಕ ಆರಂಭವಾಗುವ ಮುಂಚೆ ಬೇಂದ್ರೆಯವರ ಒಂದು ಕವನವನ್ನು ಹಾಡಿಸಲಾಗುತ್ತಿತ್ತು. ಚಿತ್ರರಂಗ

ಪ್ರವೇಶಿಸಿ ನಾನೇನಾದರೂ ನಿರ್ದೇಶಕನಾದಲ್ಲಿ ಆ ಕವನವನ್ನು ಯಾವುದಾದ-ರೊಂದು ಚಿತ್ರಕ್ಕೆ ಅಳವಡಿಸಿಕೊಳ್ಳಬೇಕೆಂಬ ಆಸೆ ನನ್ನ ಕನಸಾಗಿತ್ತು. "ಬೆಳ್ಳಿಮೋಡ" ಚಿತ್ರಕ್ಕಾಗಿ ತಾಣ ನೋಡಲು ಹೋದಾಗ ಚಿಕ್ಕಮಗಳೂರಿನ ಕಾಫಿ ತೋಟಗಳನ್ನು, ಅಲ್ಲಿಯ ಪ್ರಕೃತಿ ಸೌಂದರ್ಯವನ್ನು ನೋಡುತ್ತಿದ್ದಂತೆ ಆ ಕವನದ ನೆನಪು ನನಗಾಯಿತು. ಅಂದೇ ಅದರ ಬಗ್ಗೆ ನಿರ್ಧರಿಸಿಯೂ ಬಿಟ್ಟೆ. ಆ ಕವನವೇ "ಮೂಡಲಮನೆಯ ಮುತ್ತಿನ ನೀರಿನ ಎರಕಾವ ಹೊಯ್ದ" ಎಂಬುದು. "ಬೆಳ್ಳಿಮೋಡ"ದ ಇಂದಿರಾ ಭಾವಜೀವಿ, ಪ್ರಕೃತಿ ಪ್ರಿಯೆ, ಹೂಗಳನ್ನು ಕೊಯ್ಯಲು ಬಂದ ಆಕೆ ಬೆಳಗಿನ ಪ್ರಕೃತಿ ಸೌಂದರ್ಯಕ್ಕೆ ಮಾರುಹೋಗಿ ಹಾಡುವ ಈ ಕವನದಿಂದ ಪಾತ್ರ ಪರಿಪುಷ್ಟವಾಯಿತು.

ಚಿತ್ರದ ಪೂರ್ಣಕಥೆ, ಹಾಡು ಬರುವ ಸನ್ನಿವೇಶ, ಚಿತ್ರಿಸುವ ಸ್ಥಳ, ಹಾಡುವ ಪಾತ್ರಧಾರಿಯ ಗುಣ, ವ್ಯಕ್ತಿತ್ವ ಮುಂತಾದ ವಿಷಯಗಳನ್ನಾಧರಿಸಿ, ಗೀತೆಗಳನ್ನು ಬರೆಸುವ ಅಭ್ಯಾಸ ನನ್ನದು. ಇತರೆಯವರದೂ ಇರಬಹುದು. ಆದರೆ ಗೀತೆಯ "ಪಲ್ಲವಿ" ಏನಿರಬೇಕೆಂಬುದನ್ನು ನಾನೇ ನಿರ್ಧರಿಸುತ್ತೇನೆ. ಆ "ಪಲ್ಲವಿ"ಯ ಭಾವವನ್ನು ಅನುಸರಿಸಿ ಗೀತರಚನಕಾರರಿಗೆ ಕವಿತೆ ರಚಿಸಲು ಹೇಳುತ್ತೇನೆ. ಒಂದೇ ಭಾವಾರ್ಥವನ್ನು ಕೊಡುವ ಐದಾರು ಕವಿತೆಗಳನ್ನು ರಚಿಸುವಂತೆ ಮಾಡಿ ಅದರಲ್ಲಿ ಉತ್ತಮ ಹಾಗೂ ಚಿತ್ರದ ಸನ್ನಿವೇಶಕ್ಕೆ ಹೊಂದುವಂತಹ ಕವಿತೆಯನ್ನು ಮಾತ್ರ ಆರಿಸಿರುವ ಉದಾಹರಣೆಗಳು ನನ್ನಲ್ಲುಂಟು. ಈ ಸಂದರ್ಭದಲ್ಲಿ ದಿ: ಕಣ್ಣದಾಸನ್‌ರವರ ಜ್ಞಾಪಕ ಬರುತ್ತದೆ. ಏಕೆಂದರೆ ನಾನು ನಿರ್ದೇಶಿಸಿದ ಒಂದು ತಮಿಳು ಚಿತ್ರಕ್ಕೆ ಗೀತೆಯನ್ನು ರಚಿಸಿದ ಸಂದರ್ಭದಲ್ಲಿ ನನಗೆ ಬೇಕಾದ ಒಂದು ಭಾವನೆಯನ್ನು ಕುರಿತು ಇಪ್ಪತ್ತೈದು ಕವಿತೆಗಳನ್ನು ರಚಿಸಿ ನನ್ನ ಮುಂದಿಟ್ಟಿದ್ದರು.

ಸ್ವರ (ರಾಗ) ಪದ (ಭಾಷೆ) ತಾಳ (ಛಂದಸ್ಸು) ಹಾಗೂ ಗತಿ (ಲಯಗಳು) ಇವುಗಳ ಸಮನ್ವಿತ ರೂಪವೇ ಹಾಡಾಗಿ ರೂಪಿತಗೊಳ್ಳಬೇಕೆಂಬುದು ನನ್ನ ಇಚ್ಛೆ. ಪ್ರತಿಯೊಂದು ಹಾಡಿನ ರಾಗ ಸಂಯೋಜನೆಯಲ್ಲಿ ಈ ವಿಷಯದ ಬಗ್ಗೆ ನಾನು ಅತ್ಯಂತ ಜಾಗರೂಕನಾಗಿರುತ್ತೇನೆ. ಇಲ್ಲವೇ ಸರಿಯಾಗಿದ್ದರೂ ಕೆಲವೊಮ್ಮೆ ಚಿತ್ರದ ಓಟಕ್ಕೆ ಹಾಡು ತಡೆಯಾಗಬಹುದೇನೋ ಎಂದೆನಿಸಿದಾಗ ಅಂತಹುದನ್ನು ಚಿತ್ರಕ್ಕೆ ಅಳವಡಿಸದೆ ಬಿಟ್ಟು ಬಿಟ್ಟಿದ್ದೇನೆ. ಇದೇ ಕಾರಣದಿಂದಗಿ "ಸಂಪಿಗೆ ಮರದ ಹಸಿರೆಲೆ ನಡುವೆ" ಎಂಬ "ಉಪಾಸನೆ" ಚಿತ್ರದ ಗೀತೆಯನ್ನು ಕೈಬಿಟ್ಟೆ, "ಗೆಜ್ಜೆಪೂಜೆ"ಯ "ಒಂದು ದಿನ ರಾತ್ರಿಯಲಿ ಕಂಡೆ ಕನಸೊಂದು" ಎಂಬ ಹಾಡನ್ನೂ,

"ಪಡುವಾರಹಳ್ಳಿ ಪಾಂಡವರು" ಚಿತ್ರದ ನಾಲ್ಕು ಹಾಡುಗಳನ್ನೂ ಚಿತ್ರದಲ್ಲಿ ಅಳವಡಿಸದೆ ತೆಗೆದುಬಿಟ್ಟೆ!

ಪಾತ್ರಗಳ ಗುಣ, ಸ್ವಭಾವ, ವ್ಯಕ್ತಿಗಳನ್ನು ಪರಿಚಯಿಸುವಂತಹ ಹಾಡುಗಳಿರಲೇ ಬೇಕು. "ಆಸೆ ಲತೆಯ ಚಿಗುರಿನಲ್ಲಿ ಚಿವುಟುವಂತ ಹೀನರು, ನಂಜುನಾಲಿಗೆಯಿಂದ ಮನವ ಚುಚ್ಚಿ ಚುಚ್ಚಿ ನಗುವರು" ಎಂಬ ಎರಡು ಸಾಲು "ಮಲ್ಲಮ್ಮನ ಪವಾಡ" ಚಿತ್ರದ ಹಲವು ಪಾತ್ರಗಳ ಗುಣವನ್ನು ಪರಿಚಯಿಸಿದರೆ, "ಕಪ್ಪು ಬಿಳುಪು" ಚಿತ್ರದ "ಅಮ್ಮ ನಿನ್ನ ತೋಳಿನಲ್ಲಿ ಕಂದ ನಾನು, ನಿನ್ನ ಸಂಗಡ ಆಡಲೆಂದು ಬಂದೇ ನಾನು" ಹಾಡು ನಾಯಕಿ ವತ್ಸಲಳಲ್ಲಿರುವ ಮುಗ್ಧತೆಯ ಹಾಗೂ ಪ್ರಕೃತಿಯ ಪ್ರೇಮವನ್ನು ತೋರಿಸಿಕೊಟ್ಟಿತು. ತನ್ನ ತಂದೆ ಮತ್ತು ತಾಯಿ ಈ ಇಬ್ಬರಲ್ಲಿರುವ ಸ್ವಭಾವದ ವ್ಯತ್ಯಾಸಗಳನ್ನು "ಹೊಡೆಯುವ ಕೈ ಒಂದು, ಕಣ್ಣೊರೆಸುವ ಕೈ ಒಂದು, ಕರಗದ ಕಲ್ಲೊಂದು ಕರುಣೆಯ ಕಡಲೊಂದು" ಎಂಬ ಗೀತೆಯ ಮೂಲಕ "ಕರುಳಿನ ಕರೆ" ಚಿತ್ರದ ನಾಯಕನ ಬಾಯಿಂದ ಹೇಳಿಸಿದ್ದೇನೆ. "ಹಾವಿನ ದ್ವೇಷ ಹನ್ನೆರಡು ವರುಷ" ಹಾಡಿನಲ್ಲಿ "ನಾಗರ ಹಾವು" ಚಿತ್ರದ ರಾಮಾಚಾರಿಯನ್ನು ಪರಿಚಯಿಸಿದರೆ, ಅಲಮೇಲು "ಕರ್ಪೂರದ ಗೊಂಬೆ ನಾನು" ಎಂದು ತನ್ನ ಸೂಕ್ಷ್ಮ ಸ್ವಭಾವವನ್ನು ತಾನೇ ಪರಿಚಯಿಸಿಕೊಳ್ಳುತ್ತಾಳೆ. ದೇವಕಿ ಬಾಯಲ್ಲಿ ನಂಜುಂಡ "ಕಡಿವಾಣವಿಲ್ಲದ ಕುದುರೆಯ ಮನಸ್ಸಿನವನಾಗಿ" ಬಂದಿದ್ದಾನೆ "ಎಡಕಲ್ಲು ಗುಡ್ಡದ ಮೇಲೆ" ಚಿತ್ರದಲ್ಲಿ.

ಸಲಹೆಗಳೇನೇ ಇದ್ದರೂ ಇಂತಹ ಹಾಡು ಬೇಕು. ಇದು ಬೇಡ ಎಂದು ನಿರ್ಧರಿಸುವವನೇ ನಿರ್ದೇಶಕನಾಗಿರಬೇಕು. ಕುಳಿತು ಹಾಡಬೇಕಾದ್ದುದರಿಂದ ಭಾವನೆಗಳನ್ನು ಹೆಚ್ಚಿನ ರೀತಿಯಲ್ಲಿ ವ್ಯಕ್ತಪಡಿಸಲಾಗದೆಂಬ ಅಭಿಪ್ರಾಯ ಹೊಂದಿದ್ದ ಕಲ್ಪನ "ಶರಪಂಜರ"ದ "ಹದಿನಾಲ್ಕು ವರುಷ ವನವಾಸದಿಂದ ಮರಳಿ ಬಂದಳು ಸೀತೆ" ಎಂಬ ಗೀತೆಯನ್ನು ಬಿಟ್ಟು ಬಿಡುವಂತೆ ಸಲಹೆ ಇತ್ತಳು. ಆ ಹಾಡಿನ ಧ್ವನಿಮುದ್ರಣ ಸಮಯದಲ್ಲೆ ಮಹತ್ತರವಾದ ಆಸೆ ಭರವಸೆಗಳನ್ನು ಹೊಂದಿದ್ದ ನನಗೆ ಅದನ್ನು ಕೇಳಿ ಬೇಸರವಾಯಿತು. ಕೋಪವೂ ಬಂತು. ನಾನು ಹೇಳಿದಂತೆ ಕೇಳಿ ಅಭಿನಯಿಸುವುದಷ್ಟೆ ನಿಮ್ಮ ಕೆಲಸ ಎಂದು ಹೇಳಿ ಹಾಡನ್ನು ಚಿತ್ರಿಸಿದೆ. ಆಮೇಲೆ ಪ್ರೇಕ್ಷಕರ ಮಧ್ಯೆ ನಾಲ್ಕಾರು ಬಾರಿ ಕುಳಿತು ಆ ಹಾಡಿಗೆ ಬಂದ ಪ್ರತಿಕ್ರಿಯೆಯನ್ನು ನೋಡಿ ಅತ್ಯಾಶ್ಚರ್ಯ ಪಟ್ಟರು ಕಲ್ಪನ. "ನಾಗರಹಾವು" ಚಿತ್ರದ "ಕಥೆ ಹೇಳುವೆ" ಹಾಡಿಗೂ ಇದೇ ರೀತಿ ಕೆಲವು ವಿರೋಧಗಳು ಕೇಳಿ ಬಂದರೂ ಅಧೈರ್ಯ ಪಡದೆ ಚಿತ್ರಿಸಿದೆ. ಅಲಮೇಲುವಿನ ಜೀವನದಲ್ಲಿ ನಡೆದ ಅನೇಕ

ಘಟನೆಗಳು ಒಂದೇ ಒಂದು ಹಾಡಿನಲ್ಲಿ ವ್ಯಕ್ತವಾಗಿ ಮುಂದಿನ ಸನ್ನಿವೇಶಕ್ಕೆ ಇಂಬು ಕೊಟ್ಟಿದ್ದರಿಂದ ಜನಕ್ಕೆ ಅದು ಬಹಳ ಹಿಡಿಸಿತು. ವಿರೋಧಿಸಿದವರೆ ಮೆಚ್ಚಿಕೊಂಡರು.

ಪ್ರೇಮ ಎನ್ನುವುದು ಹಳೇ ವಿಷಯವಾಗಿರಬಹುದು. ಆದರೆ ಅದರ ಭಾವನೆಗಳು ಮಾತ್ರ ಯಾವಾಗಲೂ ನೂತನವಾಗಿಯೇ ಇರುತ್ತವೆ. ವಿವಿಧ ರೂಪಗಳನ್ನು ಹೊಂದಿರುತ್ತವೆ. "ಧರ್ಮೇಚ ಅರ್ಥೇಚ ನಿನ್ನನ್ನು ಪ್ರೀತಿಸುತ್ತೇನೆ" ಎಂಬ ಮಾತನ್ನು ಕೇಳಿ "ಗೆಜ್ಜೆಪೂಜೆ"ಯ ಚಂದ್ರಳಿಗೆ "ಗಗನವು ಎಲ್ಲೋ ಭೂಮಿಯು ಎಲ್ಲೋ" ಆಗುತ್ತದೆ. "ಬೆಳ್ಳಿಮೋಡ"ದ ಇಂದಿರಾಳ ಪ್ರಶ್ನೆಗೆ ನಾಯಕನ ಉತ್ತರ "ಇದೇ ನನ್ನ ಉತ್ತರ"ವಾಗಿ ಮೂಡಿದೆ. "ಕಪ್ಪುಬಿಳುಪು"ನಲ್ಲಿ ವತ್ಸಲಳಿಗೆ "ನಿನ್ನಯ ಕೊರಳಿನ ಮಂಜುಳಗಾನ ನನ್ನೆದೆ ತಣಿಸಿದ ಅಮೃತಪಾನ" ಎಂದು ಹಾಡಿ, ಮಧು ತಾನು ಪ್ರೀತಿಸಿದ ಕಾರಣವನ್ನು ವಿವರಿಸುತ್ತಾನೆ. "ಸಾಕ್ಷಾತ್ಕಾರ"ದ ಮಹೇಶ ಉಮಾರಿಗೆ "ಒಲವೇ ಜೀವನ ಸಾಕ್ಷಾತ್ಕಾರ"ವಾದರೆ, ಮಾರ್ಗರೇಟ್ ಮತ್ತು ರಾಮಾಚಾರಿ ನಡುವಣ "ಅನುರಾಗ ತಂದ ಸಂಭ್ರಮ"ಗಳ ವಿವಿಧ ಬಗೆಗಳು "ನಾಗರಹಾವು ಚಿತ್ರದಲ್ಲಿ ಮೂಡಿದೆ. "ಬಿಳಿಹೆಂಡ್ತಿ" ಶಾರದಾಳಿಗೆ "ಆ ದೇವರು ನುಡಿದ ಮೊದಲ ನುಡಿ" ಪ್ರೇಮವಾಗಿ ಕಂಡರೆ "ಫಲಿತಾಂಶ"ದ ಶೀಲಳಿಗೆ "ಲೌ ಎಂದರೆ ಯಾರೂ ಬಿಡಿಸದ ಬಂಧನ ಎಲ್ಲೂ ನಿಲ್ಲದ ಸ್ಪಂದನ"ವಾಗಿ ಮಿಡಿದಿದೆ. ಪ್ರೇಮಿಗಳಿಬ್ಬರ ಸಂಭಾಷಣೆಯ ಲಹರಿ ಎಷ್ಟು ಮಧುರ, ವಿನೂತನ ಎಂಬ ಭಾವ "ಧರ್ಮಸೆರೆ"ಯ "ಈ ಸಂಭಾಷಣೆ"ಯಲ್ಲಿ ವ್ಯಕ್ತವಾಗಿದೆ.

ಹೀಗೆ ನಮ್ಮ ಚಿತ್ರಗಳಲ್ಲಿ ಪ್ರೇಮಗೀತೆಗಳು ಅನಿವಾರ್ಯ. ಗೀತರಚನಕಾರ ಮತ್ತು ನಿರ್ದೇಶಕ ಒಂದಾಗಿ ಕೆಲಸ ಮಾಡಿದಾಗ ಹೊಸ ಸೃಷ್ಟಿಗಳು ತಾವಾಗಿ ಮೂಡುವುದು ಖಂಡಿತ ಸಾಧ್ಯ.

ನಮ್ಮ ಸಂಸ್ಕೃತಿ, ನಮ್ಮಲ್ಲಿದ್ದ ಮಹಾ ವ್ಯಕ್ತಿಗಳ ಪರಿಚಯ, ಚಲನಚಿತ್ರ ಮಾಧ್ಯಮದ ಮೂಲಕವೂ ಆಗುತ್ತಿರಬೇಕು ಎಂಬುದು ನನ್ನಿಚ್ಛೆ. ಈಚಿನ ಬಾಲಕ, ಬಾಲಕಿ, ಯುವಕ, ಯುವತಿಯರಿಗಂತೂ ಕರ್ನಾಟಕದ ಹಿಂದಿನ ವೈಭವನಗಳು ವ್ಯಾಸಾಂಗದಲ್ಲೂ ಅಲಭ್ಯವೆನ್ನುವಂತಾಗಿರುವುದರಿಂದ ನನ್ನ ಚಿತ್ರಗಳ ಮೂಲಕವಾದರೂ ನಮ್ಮ ಚರಿತ್ರೆ, ಸಂಸ್ಕೃತಿ, ತತ್ವಗಳ ಪರಿಚಯವನ್ನು ಹಾಡಿನ ಮೂಲಕ ಮೂಡಿಸುವ ಪ್ರಯತ್ನ ಮಾಡಿದೆ.

"ನಾಗರಹಾವು" ಚಿತ್ರದ ರಾಮಾಚಾರಿ ದುರ್ಗದ ಓಬವ್ವನ ಬಗ್ಗೆ ಹೇಳುವುದು ಕಾನ್ವೆಂಟ್ ವಿದ್ಯಾರ್ಥಿಗಳಿಗೆ, "ಕಪ್ಪು ಬಿಳುಪು"ವನ್ನು ಮಿಥ್ಯ ಸತ್ಯಕ್ಕೆ

ಹೋಲಿಸಿ "ಅರಿಯದೇ ನಡೆದು ಎಡವುವ" ಯುವ ಜನಾಂಗಕ್ಕೆ ನೀಡಿದ್ದೇನೆ. "ಕರುಳಿನ ಕರೆ"ಯಲ್ಲಿ ಮೈಸೂರು ದಸರಾ ವರ್ಣಿಸಲ್ಪಟ್ಟಿದೆ. ಕರ್ನಾಟಕದ ಜೀವನದಿ ಕಾವೇರಿಯ ಬಗ್ಗೆ "ಶರಪಂಜರ"ದಲ್ಲಿ ಇಡೀ ಗೀತೆಯು ಪರಿಚಯ ಮಾಡಿಕೊಡುತ್ತದೆ. ಕನ್ನಡ ನಾಡಿನ ಹೆಣ್ಣು ಮಗಳ ಜೀವನ ಬದಲಾಗುವ ಶುಭವೇಳೆಯಲ್ಲಿ ಆಕೆಗೆ ತೊಡಿಸುವ ವಸ್ತ್ರಾಲಂಕಾರ, ಅನುಸರಿಸುವ ಕ್ರಮಗಳು, "ಸಾಕ್ಷಾತ್ಕಾರ"ದ "ಫಲಿಸಿತು ಒಲವಿನ ಪೂಜಾಫಲ" ಎಂಬ ಗೀತೆಯಲ್ಲಿ ಅಡಕವಾಗಿದೆ. ಕನ್ಯಾಕುಮಾರಿಯನ್ನು "ಭಾರತ ಭೂಷಿರ ಮಂದಿರ ಸುಂದರಿ"ಯನ್ನಾಗಿ "ಉಪಾಸನೆ"ಯಲ್ಲಿ ವಿವರಿಸಿದ್ದೇನೆ. ಸಂಗೀತದಲ್ಲಿರುವ ಮೋಡಿ ಹಿರಿಮೆಯನ್ನು "ಭಾವವೆಂಬ ಹೂವು ಅರಳಿ" ಎಂಬ ಗೀತೆಯ ಮೂಲಕ ತಿಳಿಸಲು ಯತ್ನಿಸಿದ್ದೇನೆ. "ರಂಗನಾಯಕಿ"ಯ ಪ್ಲೇ ಬಾಯ್ ಮೂಲಕ ಕೂಡ "ಪ್ರೇಮದಲ್ಲಿ, ಸ್ನೇಹದಲ್ಲಿ, ಕೋಪ, ತಾಪ, ರೋಷ, ದ್ವೇಷ ಎಲ್ಲಾ ಯಾಕೆ? ಭಾಷೆ, ಬಣ್ಣ ಎಲ್ಲಾ ಒಂದೇ" ಎಂಬ ತತ್ವವನ್ನು ಹೇಳಿಸಿದ್ದೇನೆ. ಕಾವಿ ತೊಟ್ಟ ಸನ್ಯಾಸಿ ಕೂಡ ಕಷ್ಟ ಜೀವಿಗಳಲ್ಲಿ ದೇವರನ್ನು ಕಾಣಬೇಕು. ಎಂಬರ್ಥದಲ್ಲಿ "ಪಡುವಾರಹಳ್ಳಿ ಪಾಂಡವರು" ಚಿತ್ರದಲ್ಲಿ ಸ್ವಾಮಿಯ ಬಾಯಲ್ಲಿ ಅನ್ನ, ಬಟ್ಟೆ, ವಸತಿ ಸಮಸ್ಯೆಯನ್ನು ವಿಶ್ಲೇಷಿಸಿದ್ದೇನೆ.

ಭಾವ, ರಾಗ, ತಾಳಗಳ ಸಮ್ಮಿಲನವೇ ಸಂಗೀತ. ರಾಗಕ್ಕೆ ಪೋಷಿಸುವ, ರಸವನ್ನೊಳಗೊಂಡ ಸಾಹಿತ್ಯ ಬೆರೆತಾಗ. ಅದು ಸುಮಧುರ, ಸುಶ್ರಾವ್ಯ ವ್ಯತ್ಯಾಸವಾದರೆ ಅಶ್ರಾವ್ಯ. ಶುದ್ಧ ಶಾಸ್ತ್ರೀಯ ಸಂಗೀತವನ್ನು ಎಲ್ಲಾ ಚಿತ್ರಗಳಿಗೂ ಅಳವಡಿಸಲಾಗುವುದಿಲ್ಲ. ಸಾಹಸಮಯ ಆಂಗ್ಲ ಚಿತ್ರಗಳಿಗೆ ಎಲೆಕ್ಟ್ರಾನಿಕ್ ವಾದ್ಯಗಳ ಬಳಕೆ ಸೂಕ್ತ ಹಾಗೂ ಅನಿವಾರ್ಯ. ಇತ್ತ ಶಾಸ್ತ್ರೀಯ ಧಾಟಿಯನ್ನೂ ಬಿಡಲಾಗದೆ ಅತ್ತ ಪಾಶ್ಚಿಮಾತ್ಯ ಸಂಗೀತಕ್ಕೆ ವಾಲದೆ ಎರಡನ್ನೂ ಸಂದರ್ಭಾನುಗುಣವಾಗಿ ಅಳವಡಿಸಿಕೊಳ್ಳಬೇಕೆಂಬ ಪ್ರಯತ್ನ ನಡೆಯುತ್ತಿದೆ. ಇಷ್ಟಾಗಿಯೂ ನಾನು ರೂಪಿಸಿದ ಹಾಡೆಲ್ಲಾ ಚೆನ್ನಾಗಿ ಬಂದಿದೆ ಎಂದು ಸಮರ್ಥಿಸುತ್ತಿಲ್ಲ. ನನಗೆ ಅಗತ್ಯ ಎನಿಸಿದ್ದು ಪ್ರೇಕ್ಷಕರಿಗೆ ಅನಗತ್ಯವಾಗಿರಲೂಬಹುದು.

ತಾಂತ್ರಿಕ ವಿಜ್ಞಾನ ಚಲನಚಿತ್ರ ಪ್ರಪಂಚವನ್ನು ಬಹಳ ಮುನ್ನಡೆಸಿದೆ. ನಮ್ಮ ಕಲ್ಪನೆಯಿಂದ ಅದನ್ನು ಅದ್ಭುತವಾಗಿ ಚಿತ್ರಿಸಿ ತೋರಿಸಬಹುದಾದಂತಹ ಅವಕಾಶ ನಮಗಿದೆ. ಸಾಹಿತ್ಯ, ಸಂಗೀತ ಮಾಧ್ಯಮಗಳಿಂದ ನಮ್ಮ ಸಂಸ್ಕೃತಿಯನ್ನು ಇನ್ನೂ ಎತ್ತರಕ್ಕೆ ಒಯ್ಯುವ ಮಹದಾಸೆ ನನಗೆ ಹೆಚ್ಚುತ್ತಿದೆ. ಆದರೆ ಅದಕ್ಕಾಗಿ ನಾನಿನ್ನೂ ಕಲಿಯಬೇಕು. ಕಲಿಯುತ್ತಲೇ ಇರಬೇಕು.

◆

# ಕಲಾವಿದ ಎಂದರೆ ಯಾರು?

ಚಲನಚಿತ್ರಗಳಲ್ಲಾಗಲೀ, ನಾಟಕಗಳಲ್ಲಾಗಲೀ ಪ್ರೇಕ್ಷಕರ ಮನಸ್ಸನ್ನು ಸದ್ಭಾವನೆಗಳೆಡೆಗೆ ಎಳೆಯಬೇಕಾಗಿದ್ದಲ್ಲಿ ಕಲಾವಿದರ ಅಭಿನಯ ನೈಜವಾಗಿರಬೇಕು. ಪರಿಣಾಮ ಬೀರಬೇಕು. ನಾನು ನಟರನ್ನು ಕಲಾವಿದರು ಎಂದು ತಿಳಿಯೋದಿಲ್ಲ. ನಟನಿಗೂ ಕಲಾವಿದನಿಗೂ ಬಹಳ ಅಂತರವಿದೆ. ಒಬ್ಬ ನಿರ್ದೇಶಕನಾಗಲಿ, ಛಾಯಾಗ್ರಾಹಕನಾಗಲಿ, ದೃಶ್ಯ ವ್ಯವಸ್ಥೆಯ ವಿನ್ಯಾಸಕಾರನಾಗಲಿ, ವಸ್ತ್ರಾಲಂಕಾರಿಕನಾಗಲಿ ಇವರುಗಳು ಕಲಾವಿದರೇ ವಿನಹ ನಟರುಗಳಲ್ಲ. ನಿರ್ದೇಶಕನಿಗಿರುವಷ್ಟು ಕಷ್ಟ ಜವಾಬ್ದಾರಿ ನಟರಿಗಿಲ್ಲ. ಪುಕ್ಕಟೆಯ ಜನಪ್ರಿಯತೆಯಲ್ಲಿ ಅವರು ಮೆರೆಯುತ್ತಿರುತ್ತಾರೆ.

ನನ್ನ ಜೊತೆ ಕೆಲಸ ಮಾಡಿದವರಲ್ಲಿ ಎರಡು ವಿಧದ ಕಲಾವಿದರಿದ್ದಾರೆ. ನೇರವಾಗಿ ಚಿತ್ರರಂಗಕ್ಕೆ ಬಂದವರು ಮತ್ತು ನಾಟಕರಂಗದಿಂದ ಬಂದವರು. ನಾಟಕ ರಂಗದಿಂದ ಬಂದವರಿಗೆ ಒಂದು ರೀತಿಯ ಮಾನಸಿಕ ಆತ್ಮವಿಶ್ವಾಸ ಇರುತ್ತೆ. ಏಕೆಂದರೆ ಅವರು ಆಗಲೇ ಪ್ರೇಕ್ಷಕರನ್ನು ಎದುರಿಸಿರುತ್ತಾರೆ. ಆದರೆ ಇಲ್ಲಿ ಕ್ಯಾಮರಾ ಎದುರಿಗೆ ಬೇರೇನೆ ಆಗುತ್ತೆ. ನಾಟಕದಲ್ಲಿನ ಭಾವನೆಗಳು ಮುಂದುವರಿಯುವಿಕೆ ಮತ್ತು ಪ್ರೇಕ್ಷಕರು ಕೊಡುವ ಪ್ರತಿಕ್ರಿಯೆ ಚಲನಚಿತ್ರದಲ್ಲಿ ಸಿಗುವುದಿಲ್ಲ. ಇಲ್ಲಿ ಭಾವನೆಗಳು ಪದೇ ಪದೇ ನಿಲ್ಲುತ್ತವೆ.

ನನ್ನ ದೃಷ್ಟಿಯಲ್ಲಿ ಕಚ್ಚಾ ಕೈಗಳೇ ಹೆಚ್ಚು ಅನುಕೂಲಕರ. ಏಕೆಂದರೆ ಅವರು ಕ್ಲಿಯರ್ ಸ್ಲೇಟ್ ತರಹ. ನಾನು ಹೇಗೆ ಬೇಕೋ ಹಾಗೆ ಅವರನ್ನು ತಿದ್ದಬಹುದು, ಬೆಳೆಸಬಹುದು. ರಂಗಭೂಮಿಯಿಂದ ಬಂದವರು ತಮ್ಮತನವನ್ನು ಅದರಲ್ಲಿ ತುಂಬುವುದಕ್ಕೆ ಹೋಗಿ ಕೆಲವು ವೇಳೆ ಪ್ರತಿಕೂಲಕರವಾಗುತ್ತಾರೆ. ಅದೂ ಅಲ್ಲದೆ ಇಂಥ ಪಾತ್ರಕ್ಕೆ ಇಂತಹ ವ್ಯಕ್ತಿಯೇ ಸರಿ ಹೋಗುತ್ತಾರೆ ಅನ್ನುವುದನ್ನು ಮಾತ್ರ ನಾನು ಗಣನೆಗೆ ತೆಗೆದುಕೊಳ್ಳುತ್ತೇನೆ. ಇಲ್ಲದೇ ಹೋಗಿದ್ದರೆ ವಿಷ್ಣುವರ್ಧನ್, ಕಲ್ಪನಾ, ಆರತಿ, ರಾಮಕೃಷ್ಣ, ಪದ್ಮಾವಾಸಂತಿ ಇವರ್ಯಾರನ್ನೂ ನಾನು ರೂಪಿಸಲಿಕ್ಕೆ ಸಾಧ್ಯವಾಗ್ತಾ ಇರಲಿಲ್ಲ.

ನಾನು ನಿರ್ದೇಶಕನಾಗಿ ಹೇಳುವುದಾದರೆ ಪ್ರತಿಯೊಬ್ಬ ಕಲಾವಿದನೂ ತಾನು ವಹಿಸುವ ಪಾತ್ರವನ್ನು ಅರ್ಥಮಾಡಿಕೊಳ್ಳಬೇಕು. ನಿರ್ದೇಶಕನಿಗೆ ಪೂರಕವಾಗಿ ಅವನ ಅಭಿನಯ ಇರಬೇಕು. ಇಲ್ಲದಿದ್ದರೆ ಇದೇ ಒಬ್ಬ ಕಲಾವಿದ–ನನ್ನು "ಸ್ಟೀರಿಯೋ ಟೈಪ್" ಮಾಡತಕ್ಕಂತ ಒಂದು ಸಂಗತಿ ಆಗುತ್ತೆ. ಈವತ್ತಿನ ನಮ್ಮ ಉತ್ತಮ ನಟರಾದ ಅಮಿತಾಬಚ್ಚನ್‌ಗಾಗಲೀ, ದಿಲೀಪ್‌ಕುಮಾರ್‌ಗಾಗಲೀ, ಕನ್ನಡದವರಾದ ಡಾ. ರಾಜ್‌ಕುಮಾರ್‌ರವರಿಗಾಗಲೀ ಅವರುಗಳಿಗೆ "ಸ್ಟೀರಿಯೋ ಟೈಪ್" ಪಟ್ಟ ಕಟ್ಟಿರುವುದು. ಅವರ ತಪ್ಪಲ್ಲ, ಪ್ರೇಕ್ಷಕರು ಬಯಸಿ ಬಯಸಿ ಈ ನಟರ ಒಂದು ಇಮೇಜ್ ಫಾರಂ ಆಗಿ ಬಿಡುತ್ತೆ.

ನನ್ನ ದೃಷ್ಟಿಯಲ್ಲಿ ನಿರ್ದೇಶಕ ತಾನು ಮೊದಲು ಪಾತ್ರಗಳನ್ನು ಅರಿತುಕೊಂಡು ಅವುಗಳನ್ನು ತನ್ನ ಕಲಾವಿದರಲ್ಲಿ ತನಗೆ ಬೇಕಾದ ರೀತಿಯಲ್ಲಿ ರೂಪಿಸಬೇಕು. ಆಗಲೇ ನಿಜವಾದ ಯಶಸ್ಸು ಸಿಗುವುದು. ನಾಟಕಕಾರನ ವಿಷಯದಲ್ಲಿಯೂ ಹೀಗೆಯೇ ಆಗುವುದು.

ಒಂದು ರೀತಿಯಲ್ಲಿ ನಾನು ಪ್ರತಿಭೆಗೆ "ಗಾಡ್‌ಫಾದರ್" ಎಂಬುದಾಗಿ ಹೆಸರಾಗಿರುವೆನೆಂದು ಹೇಳುತ್ತಾರೆ. ಆದರೆ ಇದು ಹೆಚ್ಚಿನ ಪ್ರಶಂಸೆ. ತಪ್ಪು ಕೂಡ, ಮುಖ್ಯವಾಗಿ ನಾನು ಪಾತ್ರಗಳಿಗೆ ಕಲಾವಿದರನ್ನು ಆಯ್ಕೆ ಮಾಡುವಾಗ ಮೂರು ಅಂಶಗಳನ್ನು ಗಮನದಲ್ಲಿಟ್ಟುಕೊಂಡಿರುತ್ತೇನೆ. ಒಂದು ಪಾತ್ರಕ್ಕೆ ಸರಿಹೊಂದುವವರನ್ನು ಆಯ್ಕೆ ಮಾಡುವುದು, ಎರಡು ಆದಷ್ಟೂ ಹೊಸ ಪ್ರತಿಭೆಗೆ ಪ್ರೋತ್ಸಾಹ ಕೊಡುವುದು. ಒಬ್ಬನದೇ ಪ್ರಾಬಲ್ಯ ಅಥವಾ ಒಬ್ಬನನ್ನೇ ನೆಚ್ಚಿಕೊಂಡು ಕೂರುವ ಸ್ಥಿತಿ ಇರಬಾರದು, ಮೂರನೆಯದಾಗಿ ಪ್ರತಿಭೆ ಇದ್ದವರಿಗೆ ಅವಕಾಶ ಕೊಡುವುದು, ಇದು ನನ್ನ ಆಯ್ಕೆಯ ಮುಖ್ಯ ನಿಲುವು. ಆದರೆ ಪಾತ್ರಕ್ಕೆ ಹೊಂದುವುದಕ್ಕೆ ಮೊದಲ ಪ್ರಾಶಸ್ತ್ಯವನ್ನು ನಾನು ಕೊಡುತ್ತೇನೆ. ಏಕೆಂದರೆ ಒಂದೊಂದು ಪಾತ್ರಕ್ಕೆ ಒಂದೊಂದು ಮುಖ ಬೇಕಾಗಿರುತ್ತದೆ.

ಆದರೆ ಮುಖ್ಯವಾಗಿ ಜನ ಒಪ್ಪಬೇಕು. ಕಲ್ಯಾಣ್‌ಕುಮಾರ್ ಪ್ರತಿಭಾವಂತ, ಅವಕಾಶ ಇರಲಿಲ್ಲ. "ಕಾಲೇಜುರಂಗ"ದಲ್ಲಿ ಅವರು ಪಾತ್ರವನ್ನು ತುಂಬಾ ಚೆನ್ನಾಗಿ ಮಾಡಿದರು. ಆದರೆ ಜನ ಒಪ್ಪಲಿಲ್ಲ. ಆಗ ಅಳು ಬಂತು "ಬಿಳೀಹೆಂಡ್ತಿ" ಅನಿಲ್‌ಕುಮಾರ್‌ನನ್ನು ನೆಗೆಟಿವ್ ಪಾತ್ರ ಎಂದು ಜನ ಒಪ್ಪಲಿಲ್ಲ. ಏಕೆಂದರೆ ಅವರ "ನಾಯಕ"ನ ಕಲ್ಪನೆಯೇ ಬೇರೆ, ಹೊಸಬರನ್ನು ತಂದಾಗ ಎದೆ ಡವಗುಟ್ಟುತ್ತದೆ, ಅವರ ಭವಿಷ್ಯ ಏನಾಗುತ್ತೋ ಎಂದು. "ಅಮೃತಘಳಿಗೆ"ಯಲ್ಲಿ ಶ್ರೀಧರನನ್ನು ತಂದಾಗಲೂ ಹೀಗೆಯೇ ಆಗಿತ್ತು. ಬಿ.ಇ. ಓದುತ್ತಾ ಇದ್ದ ಹುಡುಗನನ್ನು ತಂದೆನಲ್ಲಾ ಏನಾಗುತ್ತೋ ಎಂಬ ಆತಂಕವಿತ್ತು, ಆದರೆ ಜನ ಒಪ್ಪಿಕೊಂಡರು. ಈಗ ಆತ ಹತ್ತು, ಹನ್ನೆರಡು ಚಿತ್ರಗಳಲ್ಲಿ ಅಭಿನಯಿಸುತ್ತಿದ್ದಾನೆ. ◆

# ಚಿತ್ರರಂಗದಲ್ಲಿ ರಾಜಕೀಯ

ಈವತ್ತು ಚಿತ್ರರಂಗದಲ್ಲಿ ತತ್ವಗಳೆಲ್ಲ ಸತ್ತುಹೋಗಿವೆ. ಇಲ್ಲಿ ದುಡ್ಡಿದ್ದವನಿಗೆ ಕಿಮ್ಮತ್ತು. ಕಲೆ, ಜಾಣತನ ಅಂತ ಬಡಬಡಿಸಿಕೊಳ್ಳುವವನಿಗೆ ಇಲ್ಲಿ ಕವಡೆ ಕಿಮ್ಮತ್ತೂ ಇಲ್ಲ. ಇಲ್ಲಿ ಮಾಫಿಯಾ ಕೂಟ ಇದೆ. ಚಲನಚಿತ್ರವನ್ನು ಏಕಸ್ವಾಮ್ಯ ಮಾಡಿಕೊಂಡ ಕೆಲವರು ಸಭ್ಯರಿಗೆ ಕಿರುಕುಳ ಕೊಡುತ್ತಾರೆ.

ಈವತ್ತು ನಾನು ಕರ್ನಾಟಕದಲ್ಲಿ ಯಾವ ಮೂಲೆಗೇ ಹೋಗಲಿ ಜನ ನನ್ನನ್ನು ಗುರ್ತಿಸುತ್ತಾರೆ. ಆ ಧನ್ಯತೆ ನನ್ನಲ್ಲಿದೆ. ಆದರೆ ನನಗೆ ಸಂತೃಪ್ತಿ ಇಲ್ಲ. ನನ್ನ ಚಿತ್ರಗಳು ಕೀರ್ತಿ ತರುತ್ತವೆ. ಆದರೆ ನಿರೀಕ್ಷಿಸಿದಷ್ಟು ಹಣ ತರುತ್ತಿಲ್ಲ. ಬರಿ ಕೀರ್ತಿಯನ್ನು ತೆಗೆದುಕೊಂಡು ಏನು ಮಾಡುವುದು. ಚಿತ್ರರಂಗದಲ್ಲಿ ಹಣ ಮುಖ್ಯ ತಾನೆ?

ನನ್ನ "ಧರ್ಮಸೆರೆ" ಒಂದು ಚಿತ್ರಮಂದಿರದಲ್ಲಿ ೯೯ ದಿನ ಓಡಿತ್ತು. ಇನ್ನೂ ಓಡುತ್ತಿತ್ತು. ಆದರೆ ಈ ಚಿತ್ರ ಶತದಿನೋತ್ಸವ ಆಚರಿಸುತ್ತದೆ ಎಂಬ ಒಂದೇ ಕಾರಣದಿಂದ ಅದನ್ನು ಚಿತ್ರಮಂದಿರದವರು ತೆಗೆದುಹಾಕಿಬಿಟ್ಟರು! ಇದೆಲ್ಲ ಏನು ತೋರಿಸುತ್ತದೆ ಹೇಳಿ? ಕೆಳದರ್ಜೆಯ ರಾಜಕೀಯವಲ್ಲವೆ? ಅವರ ಇಂತಹ ಮದಮತ್ಸರಗಳಿಂದಾಗಿಯೇ ರೋಂನಂತಿದ್ದ ನಮ್ಮ ಹಂಪೆ ಹಾಳಾಯಿತು. ಅಂದ ಮಾತ್ರಕ್ಕೆ ನನಗೆ ಇನ್ನುಳಿದ ಭಾಷೆಯ ಬಗ್ಗೆ ದ್ವೇಷವಿದೆ ಅಂತ ಅಲ್ಲ. ನನ್ನ ಕನ್ನಡ ಚಿತ್ರಗಳನ್ನು ಕೊಲ್ಲುವ ಯತ್ನ ಮಾಡಿದರೆ ನಾನು ಅನಿವಾರ್ಯವಾಗಿ ಹಿಂದಿಯನ್ನು ದ್ವೇಷಿಸಬೇಕಾಗುತ್ತದೆ.

ನನ್ನ "ಪಡುವಾರಹಳ್ಳಿ ಪಾಂಡವರು" ಹಿಂದಿಯಲ್ಲಿ "ಹಂ ಪಾಂಚ್" ಆಗಿದೆ. ನನ್ನ "ಗೆಜ್ಜೆಪೂಜೆ" ಚಿತ್ರ ಹಿಂದಿಯಲ್ಲಿ "ಆಹಿಸ್ತಾ" ಆಗಿದೆ. ಆದರೆ ನನ್ನ ನಿರ್ದೇಶನವನ್ನು "ಷಾಟ್ ಟು ಷಾಟ್" ಕಾಪಿ ಹೊಡೆಯುವ ಹಿಂದಿ ಮಂದಿ ನನ್ನ ಹೆಸರನ್ನು ಹಾಕುವುದಿಲ್ಲ.

ಬಹಳ ದಿನಗಳಿಂದಲೂ ಚಿತ್ರರಂಗದ ಕೆಲವರು ನನ್ನ ವಿರುದ್ಧ ಅಪಪ್ರಚಾರ ನಡೆಸುತ್ತಲೇ ಇದ್ದಾರೆ. "ರಂಗನಾಯಕಿ" ವಿಫಲವಾಯಿತು ಎಂದು ಹಬ್ಬಿಸಿದರು. ಹೇಗೆ? ಅದು ವಿಫಲ ಚಿತ್ರ ಅಲ್ಲವೇ ಅಲ್ಲ. ೧೮ ಲಕ್ಷದಲ್ಲಿ ಮುಗಿದಿರುವ ಆ ಚಿತ್ರವು ಇದುವರೆಗೆ ೨೭ ಲಕ್ಷ ಗಳಿಸಿದೆ. "ಶರಪಂಜರ"ದಲ್ಲಿ ಲಾರಿಗಟ್ಟಲೆ ಕಿತ್ತಲೆಹಣ್ಣು ತಂದು ಕಿತ್ತಲೆಹಣ್ಣು ಉರುಳಿಸಿದರು ಎಂದು ಹಬ್ಬಿಸಿದರು. ನಾನು ತಂದದ್ದು ಸುಮಾರು ೪೦೦ ರೂ.ಗಳ ಕಿತ್ತಲೆ ಹಣ್ಣು ಅಷ್ಟೆ. ಅಷ್ಟನ್ನೇ ಕ್ಯಾಮರಾ ಮೂಲಕ ಹೆಚ್ಚಾಗಿ ತೋರಿಸಲು ಯತ್ನಿಸಿದೆ.

ಇಂತಹ ವಿಷಯಗಳನ್ನೆಲ್ಲಾ ಸೃಷ್ಟಿಸಿ ನನ್ನ ತೇಜೋವಧೆಗೆ ಯತ್ನಿಸುತ್ತಿದ್ದಾರೆ. ಇಪ್ಪತ್ತೂರು ಚಿತ್ರಗಳನ್ನು ನಿರ್ಮಿಸುವಾಗಲೂ ಹೀಗೆ ಅಪಪ್ರಚಾರ ನಡೆಸಿದರು. ನನ್ನನ್ನು ಅಭಿಮಾನಿಗಳು ಪ್ರೀತಿಸಿದರು. ಅವರ ಪ್ರೀತಿ, ಅಭಿಮಾನ ಇಲ್ಲದೆ ಹೋಗಿದ್ದರೆ ಚಿತ್ರರಂಗದ ಈ ಜನ ನನ್ನನ್ನು ಸುಟ್ಟುಹಾಕಿ ಬಿಡುತ್ತಿದ್ದರು. ಯಶಸ್ವಿಯಾಗಿ ನಡೆಯುತ್ತಿದ್ದ "ಮಾನಸ ಸರೋವರ"ವನ್ನು ಬೆಂಗಳೂರು, ತುಮಕೂರು, ಮಂಡ್ಯ ಚಿತ್ರಮಂದಿರಗಳಿಂದ ತೆಗೆದುಹಾಕಿದರು. ಇದು ಕನ್ನಡದ ಅಭಿಮನವೆ? ಕನ್ನಡ ಚಿತ್ರಗಳ ಉದ್ಧಾರದ ಮಾರ್ಗವೆ?

ನನ್ನನ್ನು ಎಲ್ಲರೂ ತಪ್ಪಾರ್ಥ ಮಾಡಿಕೊಂಡಿದ್ದಾರೆ. ನನ್ನ ಬಗ್ಗೆ ಇಲ್ಲ ಸಲ್ಲದ ಅಪಪ್ರಚಾರ ಆಗುತ್ತಿದೆ. ಇದು ಇಂದಲ್ಲಾ, ಹಿಂದಿನಿಂದಲೂ ನಡೆಯುತ್ತಿದೆ. ಆದರೆ ನಾನು ಯಾರಿಗೂ ಹೆದರುವುದಿಲ್ಲ. ಹಾಗೂ ಯಾರಿಗೂ ಅಪಪ್ರಚಾರ ಮಾಡಬೇಡಿರೆಂದು ಕಾಲು ಹಿಡಿದು ಕೇಳೊಲ್ಲ. ಇವರು ನನ್ನನ್ನು ಏನು ಮಾಡಲು ಸಾಧ್ಯ. ಉದ್ದಿಮೆಯಲ್ಲಿ ಏನೇ ಆಗಲಿ ಜನ ನನ್ನನ್ನು ಸ್ವೀಕರಿಸಿದ್ದಾರೆ. ಸ್ವೀಕರಿಸುತ್ತಿದ್ದಾರೆ. ಅಷ್ಟೇ ಸಾಕು.

◆

# ಸನ್ಮಾನದ ಭಯ

ಐವತ್ತು ತುಂಬಿತು ಎನ್ನುತ್ತೀರಿ, ಅದನ್ನೇಕೆ ನೆನಪು ಮಾಡುತ್ತೀರಿ. ನಾನಿನ್ನೂ ಐದು ವಸಂತದ ಕಿಶೋರ ಮಾತ್ರ, ನಾನಿನ್ನೂ ಎಷ್ಟೊಂದು ಕೆಲಸ ಮಾಡುವುದು ಉಳಿದಿದೆ, ಕಲಿಯುವುದಿದೆ, ದುಡಿಯಬೇಕಿದೆ. ನನ್ನ ನಾಡು ನುಡಿಯಲ್ಲಿ ನನ್ನನ್ನೇ ನಾನು ಅರ್ಪಿಸಿಕೊಳ್ಳಬೇಕಾಗಿದೆ. ಇಷ್ಟೆಲ್ಲಾ ಹೊರೆ ಕೆಲಸ ಬಿದ್ದಿರುವಾಗ, ಏನೂ ಮುಂದೆ ಸಾಗಿಲ್ಲ ಅನ್ನಿಸಿರುವಾಗ, ಆಗಲೇ ಅರ್ಧ ಶತಮಾನ ಮುಗಿಯಿತು ಎಂದು ಹೇಳಿ ನನ್ನನ್ನು ಭಯ ಚಕಿತನನ್ನಾಗಿಸಿದ್ದೀರಿ. ಇಲ್ಲ, ಇಲ್ಲ, ನಾನಿನ್ನೂ ಐದು ವರ್ಷದ ಹಸುಳೆ ಮಾತ್ರ "ನಾಡಿಗಾಗಿ ಸೇವೆ, ನುಡಿಗಾಗಿ ಸೇವೆ, ಎಂದು ಕೊಚ್ಚಿಕೊಳ್ಳಲಾರೆ".

ನಾನು ನನಗೆ ತಿಳಿದ ಹಾಗೆ ಕೆಲಸ ಮಾಡಿದೆ. ನನ್ನ ಈವರೆಗಿನ ಹಾದಿಯಲ್ಲಿ, ನೆರವಿಗೆ ಬಂದವರು, ಆದರಿಸಿದವರು, ಆಶ್ರಯವಿತ್ತವರು, ಪ್ರೀತಿ ಸ್ನೇಹದ ತುತ್ತು ಕೊಟ್ಟು ಸಲಹಿದವರು ಅದೆಷ್ಟೋ ಮಂದಿ. ಅವರಿಗೆಲ್ಲ ನಾನು ಹೇಗೆ ಕೃತಜ್ಞತೆ ಸಲ್ಲಿಸಲಿ? ಅವರನ್ನೆಲ್ಲಾ ನಾನು ಯಾವುದೇ ಒಳ್ಳೆಯ ಕೆಲಸ ಮಾಡಿದಾಗಲೂ "ಅಯ್ಯ ಇದು ನಿಮ್ಮ ಪ್ರಸಾದ" ಎಂದು ಇದ್ದಲ್ಲೇ ನೆನೆದು ನಮಿಸುತ್ತೇನೆ. ನನಗೆ ಅಬ್ಬರದಿಂದ ಹೇಳಿಕೊಂಡು ತಿರುಗುವುದು ತಿಳಿಯದು. ಕನ್ನಡದ ಜನ ನಿರ್ಲಿಪ್ತರು. ಕನ್ನಡ ಚಿತ್ರರಂಗದಲ್ಲಂತೂ ಇದು ಇನ್ನೂ ಹೆಚ್ಚು, ಬೇರೆ ಭಾಷೆಯ ಜನದ ಹಾಗೆ ಭಾವೋದ್ರೇಕವಿಲ್ಲ. ತೆಲುಗಿನ ದಾಸರಿ ನಾರಾಯಣರಾವ್ ಅವರ ಹುಟ್ಟು ಹಬ್ಬ ಎಂದಾಗ ಕಲಾವಿದರೆಲ್ಲಾ ವಿಶೇಷ ವಿಮಾನ ಮಾಡಿಕೊಂಡು ಹೋಗಿದ್ದರಂತೆ. ನಾಲ್ಕು ಕನ್ನಡ ಚಿತ್ರ ತೆಗೆಯೋಷ್ಟು ಹಣ ಸನ್ಮಾನಕ್ಕೆ ಖರ್ಚು ಮಾಡಿದ್ರಂತೆ!

ಅತಿ ಭವುಕತೆ ಒಬ್ಬನಲ್ಲಿ ತೀವ್ರತೆಯನ್ನೂ, ತೀಕ್ಷ್ಣತೆಯನ್ನೂ ತರೋದಕ್ಕೆ ಸಾಧ್ಯವಾಗುತ್ತೆ. ಚೂಪಾದ ಸೂಜಿ ಆಳಕ್ಕೊಗುತ್ತೆ. ಆಗ ನೋವಿನ ತೀವ್ರತೆ ಗಮನಕ್ಕೆ ಬರುತ್ತೆ. ಸಣ್ಣ ಮುಳ್ಳು ಸಣ್ಣದಾಗಿ ನೋವನ್ನು ಹುಟ್ಟಿಸುತ್ತೆ. ಆದರೆ ಅತಿ ಭಾವುಕತೆಯಿಂದ ನನಗಾವ ರೀತಿಯ ಹಾನಿಯೂ ಆಗಿಲ್ಲ. ಇದಕ್ಕೆ ಕಾರಣ ಭವಿಷ್ಯ. ನಾನು ತುಂಬಾ ಭಾವುಕ ಅಂತ ಕಾಣುತ್ತೆ. ಸಣ್ಣ ಮಾತಿಗೆ ಅತ್ತು ಬಿಡ್ತೀನಿ. ಸಣ್ಣ ಮಾತಿಗೆ ಕೋಪ ಮಾಡಿಕೊಳ್ತೀನಿ. ನಕ್ಕೂ ಬಿಡ್ತೀನಿ. ನನ್ನ ಈ ಗುಣ ನನ್ನ ಚಿತ್ರಗಳಲ್ಲಿಯೂ ಕಂಡು ಬಂದಿರಬಹುದು.

◆



"ಸಾಕ್ಷಾತ್ಕಾರ" ಚಿತ್ರದ ಚಿತ್ರೀಕರಣದ ಸಂದರ್ಭದಲ್ಲಿ ಪುಟ್ಟಣ್ಣ ಕಣಗಾಲ್ ಹಾಗೂ ಹಿಂದಿಯ ಹಿರಿಯ ನಟ ಪೃಥ್ವಿರಾಜ್ ಕಪೂರ್.

# ಕರ್ನಾಟಕದ ಸ್ಟುಡಿಯೋಗಳು

ಕರ್ನಾಟಕದಲ್ಲಿ ಚಿತ್ರೋದ್ಯಮ ಏನು ಬೆಳೆದಿದೆ ಹೇಳಿ? ನಮ್ಮ ಸ್ಟುಡಿಯೋಗಳಲ್ಲಿ ಸರಿಯಾದ ಸೌಲಭ್ಯಗಳಿಲ್ಲ. ನಮ್ಮ ಸ್ಟುಡಿಯೋಗಳಿಗೆ ೫೦ ವರ್ಷ ತುಂಬಿದ್ದರೂ ನಾವು ಇನ್ನೂ ಮದರಾಸನ್ನೇ ಅವಲಂಬಿಸಬೇಕಾಗಿದೆ. ಕರ್ನಾಟಕದ ಸ್ಟುಡಿಯೋಗಳಲ್ಲಿ ಸೆಟ್ಟು ಹಾಕಲು ನಮ್ಮಲ್ಲಿ ಕುಶಲಕರ್ಮಿಗಳಿಲ್ಲ. ಒಂದು ಮೊಳೆಬೇಕಾದರೂ ಮದರಾಸಿಗೆ ಓಡಬೇಕು. ಒಳ್ಳೆಯ ಮೌಲ್ಡರ್‌ಗಳಿಲ್ಲ, ಕೆಲಸಗಾರರಿಲ್ಲ, ಪ್ರತಿಯೊಂದಕ್ಕೂ ಮದರಾಸಿಗೆ ಹೋಗಬೇಕು. ಅದೇ ಮದರಾಸಿನ ಸ್ಟುಡಿಯೋಗಳನ್ನು ನೋಡಿ? ಪೂರ್ಣ ಸುಸಜ್ಜಿತವಾಗಿವೆ.

ಮೈಸೂರಿನ ಪ್ರೀಮಿಯರ್ ಸ್ಟುಡಿಯೋ ಹಳೇ ಸ್ಟುಡಿಯೋ. ಆದರೆ ಅಲ್ಲಿ ಸೌಲಭ್ಯವೇನಿಲ್ಲ. ನಾಲ್ಕು ಗೋಡೆ ಕಟ್ಟಿದರೆ ಅದು ಸ್ಟುಡಿಯೋ ಆಗುತ್ತದೆಯೆ? ಹಳೇ ಕ್ಯಾಮರಾಗಳು, ತುಕ್ಕು ಹಿಡಿದ ಲೈಟುಗಳು, ಇವು ಇದ್ದರೆ ಯಾರು ಬರುತ್ತಾರೆ ಈ ಸ್ಟುಡಿಯೋಗಳಿಗೆ. ಮೈಸೂರು ಸ್ಟುಡಿಯೋದಲ್ಲಿ ಒಳ್ಳೆಯ ಗುಣಮಟ್ಟದ ಚಿತ್ರ ಮಾಡಬಹುದು ಅಂತ ತೋರಿಸಿದವನೇ ನಾನು. ಹಳೆ ಉಪಕರಣಗಳನ್ನು ಬಿಟ್ಟರೆ ಈ ಸ್ಟುಡಿಯೋದವರು ಏನು ಸೌಲಭ್ಯ ಕಲ್ಪಿಸಿಕೊಟ್ಟಿದ್ದಾರೆ? ಇನ್ನು ಬೆಂಗಳೂರಿನ ಚಾಮುಂಡೇಶ್ವರಿ ಸ್ಟುಡಿಯೋದಲ್ಲಿ ಡಬ್ಬಿಂಗ್ ಥಿಯೇಟರಿಗೆ ತಿಂಗಳುಗಟ್ಟಲೆ ಕಾಯಬೇಕು. ಕರ್ನಾಟಕದಲ್ಲಿ ಸರಿಯಾದ ಒಂದು ಡಬ್ಬಿಂಗ್ ಥಿಯೇಟರಿಲ್ಲ. ಇರುವ ಥಿಯೇಟರಿನಲ್ಲಿ ನಮಗೆ ಜಾಗವಿಲ್ಲ. ಇನ್ನು ಸರಿಯಾದ ಸಂಕಲನ ಕೊಠಡಿ ಸಹ ನಮ್ಮ ಸ್ಟುಡಿಯೋಗಳಲ್ಲಿಲ್ಲ, ಇರುವುದೆಲ್ಲಾ ಯಾವುದೋ ಓಬಿರಾಯನ ಕಾಲದ್ದು. ಅಭಿಮಾನ್ ಸ್ಟುಡಿಯೋಕ್ಕೆ ಯಾರೂ ಹೋಗೋಕ್ಕಾಗಲ್ಲ.

ನೆನ್ನೆ ಮೊನ್ನೆ ಹುಟ್ಟಿದ ಕೇರಳ ಚಿತ್ರೋದ್ಯಮ ನೋಡಿ. ಅಲ್ಲಿ ಸರ್ಕಾರ ಸ್ಟುಡಿಯೋ ಸಮುಚ್ಚಯ ಕಟ್ಟಿದೆ. ರೀರೆಕಾರ್ಡಿಂಗಿಗೆ ಎಂತಹ ಆಧುನಿಕ ಉಪಕರಣಗಳನ್ನು ಇಟ್ಟಿದ್ದಾರೆ ನೋಡಿ. ಆದರೆ ನಮ್ಮ ಸರಕಾರ ಚಿತ್ರೋದ್ಯಮಕ್ಕೆ

ಏನು ಮಾಡಿದೆ. ೫೦ ವರ್ಷದಿಂದ ಚಿತ್ರೋದ್ಯಮ ಇದ್ದರೂ ಅದನ್ನು ಬೆಳೆಸಲು ಯಾವ ಪ್ರಯತ್ನವನ್ನೂ ಮಾಡಿಲ್ಲ.

ಕಂಠೀರವದಲ್ಲಿ ರೀರೆಕಾರ್ಡಿಂಗ್‌ಗಾಗಿ ಕಟ್ಟಡ ಸಿದ್ಧವಾಗಿ ಅನೇಕ ವರ್ಷಗಳು ಉರುಳಿದವು. ಬೇಕಾದ ಉಪಕರಣಗಳನ್ನು ತರಿಸಿಲ್ಲ. ದೊಡ್ಡದಾಗಿ ಮಳಿಗೆ ತರಹ ಕಟ್ಟಡ ಕಟ್ಟಿದರಾಗಲಿಲ್ಲ. ರೀರೆಕಾರ್ಡಿಂಗ್ ಥಿಯೇಟರ್ ಕಾಂಪ್ಯಾಕ್ಟ್ ಆಗಿಯೇ ಇರಬೇಕು. ಸಂಗೀತಗಾರರಿಗೆ ಚಿಕ್ಕ ಚಿಕ್ಕ ಕೊಠಡಿಗಳು ಬೇಕು, ಯಾರು ಇದನ್ನೆಲ್ಲಾ ಯೋಚಿಸಿರುವವರು. ಸರಕಾರಕ್ಕೆ ತಿಳಿದವರ ಸಲಹೆ ಬೇಕಾಗಿಲ್ಲ.

ಕಂಠೀರವದ ಮೂರು ಫ್ಲೋರ್‌ನಲ್ಲಿ ಎಷ್ಟು ಸೆಟ್ಟಿವೆ, ಪ್ರೀಮಿಯರ್‌ನಲ್ಲಿ ಎಷ್ಟು ಸೆಟ್ಟಿವೆ? ನಾನು ಹತ್ತು ವರ್ಷದ ಕೆಳಗೆ "ಶರಪಂಜರ", "ಎಡಕಲ್ಲು ಗುಡ್ಡದ ಮೇಲೆ", "ಬಿಳೀಹೆಂಡ್ತಿ"ಗೆ ಹಾಕಿದ ಸೆಟ್ಟುಗಳು ಈವತ್ತಿಗೂ ಇವೆ. ಸಿದ್ಧವಾದ ಸೆಟ್ಟುಗಳು ಬೇಕು. ಒಂದು ಬಂಗಲೆ, ಆಸ್ಪತ್ರೆ, ಆರಕ್ಷಕ ಠಾಣೆ ಇಂತಹ ಸೆಟ್ಟು ಬೇಕು. ನನಗೆ ಭಾವನಾತ್ಮಕವಾಗಿ ಪ್ರೀಮಿಯರ್ ಸ್ಟುಡಿಯೋ ಮೇಲೆ ಹೆಚ್ಚು ಮಮತೆ. ನನ್ನ ಒಂಭತ್ತು ಚಿತ್ರಗಳನ್ನು ಅಲ್ಲೇ ಮಾಡಿದೆ. ಇಲ್ಲಿ ಎಲ್ಲರಿಗೂ ಹಣದ ಭೂತ ಹಿಡಿದಿದೆ. ನಿಜವಾಗಿ ಪ್ರಾಮಾಣಿಕವಾಗಿ ದುಡಿಯುವವ, ಉದ್ಯಮ ತಿಳಿದವ ಏನಾದರೂ ಸಾಧಿಸಬೇಕು ಅಂಥವನಿಗೆ ಹಣವಿಲ್ಲ. ನಾನು ಸಣ್ಣದಾಗಿ ಒಂದು ಸಂಕಲನ ಕೊಠಡಿ ಅಂತ ಬ್ಯಾಂಕಿನವರಿಗೆ ಸಾಲ ಕೇಳಿದರೆ ನನ್ನಂತಹವನಿಗೆ ೨೫ ಸಾವಿರ ರೂಪಾಯಿ ಹುಟ್ಟಲಿಲ್ಲ!

ಚಿತ್ರದಲ್ಲಿ ಹೊರಾಂಗಣ ಹೇಗಿರಬೇಕು, ಒಳಾಂಗಣ ಹೇಗಿರಬೇಕು ಎಂಬುದು ಅತಿ ಮುಖ್ಯವಾದ ಪ್ರಶ್ನೆ. ಸಾಮಾನ್ಯವಾಗಿ ಹೊರಾಂಗಣ ಕಣ್ಣಿಗೆ ತಂಪಾಗಿರಬೇಕು. ಒಳಾಂಗಣ ದೃಶ್ಯಗಳು ಶ್ರೀಮಂತವಾಗಿ ಕಾಣಬೇಕು ಎನ್ನುವುದು ವಾಡಿಕೆ. ಆದರೆ ಇದರಿಂದ ಚಿತ್ರವು ಹೇಳಲೇಬೇಕಾದದ್ದನ್ನು ಹೇಳದೆ ಅಡ್ಡ ದಾರಿಯನ್ನು ಹಿಡಿಯುವಂತಾದರೆ ಚಿತ್ರದ ಉದ್ದೇಶ. ಸಾರ್ಥಕವಾಗುವುದಿಲ್ಲ. ಆದ್ದರಿಂದ ಚಿತ್ರದಲ್ಲಿ ಬರುವ ಹೊರಾಂಗಣ, ಒಳಾಂಗಣ, ಉಡಿಗೆ, ತೊಡಿಗೆ, ಬಳಸುವ ಬಣ್ಣಗಳು, ಸಂಗೀತ, ಸಂಭಾಷಣೆ ಎಲ್ಲವೂ ಕಥಾವಸ್ತುವಿಗೆ ಪೂರಕ ಆಗಿರಬೇಕು. ಆಗ ಪಾತ್ರ ನಿರೂಪಣೆ ತರ್ಕಬದ್ಧವಾಗಿದ್ದು ಪರಿಣಾಮಕಾರಿಯಾಗಿರಲು ಸಾಧ್ಯ. ಇದನ್ನು ಸಾಧಿಸಲು ನಿರ್ದೇಶಕ ಈ ಎಲ್ಲಾ ಪರಿಕರಗಳನ್ನು ಉದ್ದೇಶ ಪೂರಕವಾಗಿ ಆರಿಸಿಕೊಳ್ಳಬೇಕು.

◆

## ಚಿತ್ರಮಂದಿರಗಳು

ನಮ್ಮ ಚಿತ್ರಗಳು ಬರೀ ಪೇಟೆಗಳಲ್ಲಿ ಓಡಿದರೆ ಸಾಲದು, ಹಳ್ಳಿ, ಹಳ್ಳಿಯ ಟೆಂಟ್‌ನಲ್ಲಿಯೂ ಓಡಬೇಕು. ಐವತ್ತು ಲಕ್ಷ, ಒಂದು ಕೋಟಿ ಹಾಕಿ ಕಟ್ಟುವ ವೈಭವೋಪೇತ ಚಿತ್ರಮಂದಿರವೆಂದರೆ ಯಾರಿಗೆ ಬೇಕು. ನಮಗೆ ಸುಸಜ್ಜಿತ ಆಸನ ವ್ಯವಸ್ಥೆ ಮತ್ತು ಒಳ್ಳೆಯ ಪ್ರೊಜೆಕ್ಷನ್ ಇರುವ ಜನತಾ ಚಿತ್ರಮಂದಿರ ಪ್ರತಿ ತಾಲ್ಲೂಕಿನಲ್ಲಿಯೂ ಇರಬೇಕು. ವಾರಕ್ಕೆ ಇಪ್ಪತ್ತಾರು ಸಾವಿರ ರೂಪಾಯಿ ಬಾಡಿಗೆ ಕೊಟ್ಟು ಯಾರು ಉದ್ಧಾರವಾಗುತ್ತಾರೆ? ಇಂತಹ ಬಾಡಿಗೆ ಭೂತದಿಂದ ದೂರ ಹೋಗಬೇಕಾದರೆ ಮಿನಿ ಚಿತ್ರಮಂದಿರಗಳನ್ನು ಕಟ್ಟಬೇಕು. ಅದು ೧೦–೧೫ ಲಕ್ಷ ರೂಪಾಯಿಗಳನ್ನು ಮೀರಬಾರದು.

◆



"ಕರುಳಿನ ಕರೆ" ಚಿತ್ರದ ಚಿತ್ರೀಕರಣದ ಸಂದರ್ಭದಲ್ಲಿ ಕಲ್ಪನಾ, ಲೇಖಕ ಮತ್ತು ನಟ ಶಿವರಾಂ

# ಪತ್ರಿಕೆಗಳ ಚಿತ್ರವಿಮರ್ಶೆಗಳ ವಿಮರ್ಶೆ

ಕನ್ನಡ ಚಲನಚಿತ್ರ ಪತ್ರಕರ್ತರ ಪರಿಷತ್ತಿನವರು ಪತ್ರಿಕೆಗಳ ವಿಮರ್ಶಣಾ ವಿಮರ್ಶೆಯನ್ನು ಏರ್ಪಡಿಸುತ್ತಿರುವುದು ಕರ್ನಾಟಕದಲ್ಲೇ ಪ್ರಥಮ. ಈ ಕೀರ್ತಿ ಕರ್ನಾಟಕದ ಪತ್ರಿಕೆಯವರಿಗೆ ಸಲ್ಲುತ್ತದೆ.

ಕನ್ನಡದ ಚಿತ್ರವೊಂದು ಬಿಡುಗಡೆಯಾದ ಸಂದರ್ಭದಕಲ್ಲಿ ಆ ಚಿತ್ರದ ಬಗ್ಗೆ ವಿಮರ್ಶೆ ಬರೆದು ಕೈ ತೊಳೆದುಕೊಳ್ಳದೆ, ಕರ್ನಾಟಕದ ಚಲನಚಿತ್ರ ಪತ್ರಕರ್ತರು ಆ ಸಂದರ್ಭದಲ್ಲಿ ಆ ಚಿತ್ರದ ಬಗ್ಗೆ ಪತ್ರಿಕೆಗಳಲ್ಲಿ ಪ್ರಕಟವಾದ ವಿಮರ್ಶೆಗಳನ್ನು ಓದಿದ ಆ ನಿರ್ದೇಶಕನಿಗೆ ಮತ್ತು ಆ ಚಿತ್ರ ಸೃಷ್ಟಿಗೆ ಸಂಬಂಧಿಸಿದವರಿಗೆ ಆ ವಿಮರ್ಶೆಗಳಿಂದಾಗಿ ಅವರ ಮನದಲ್ಲಿ ಮೂಡಿದ ಭಾವನೆಗಳನ್ನು ವ್ಯಕ್ತಪಡಿಸುವ ಸದಾವಕಾಶವನ್ನು ಕಲ್ಪಿಸಿಕೊಡುವ "ಈ ವಿಮರ್ಶಣಾ ವಿಮರ್ಶೆ" ಕಾರ್ಯಕ್ರಮ ಇಡೀ ದೇಶದಲ್ಲೇ ಪ್ರಪ್ರಥಮ. ಇದರಿಂದ ನಿರ್ದೇಶಕರಿಗೆ ಅನುಕೂಲವಾಗಿ ಮುಂದಿನ ಚಿತ್ರ ಸೃಷ್ಟಿಯಲ್ಲಿ ಆ ಬಗ್ಗೆ ಎಚ್ಚರಿಕೆ ಹಾಗೂ ಶ್ರದ್ಧೆವಹಿಸಲು ಸಾಧ್ಯವಾಗುತ್ತದೆ.

ನಿರ್ದೇಶಕನೊಬ್ಬ ತನ್ನ ಚಿತ್ರದಲ್ಲಿ ಮೂಡಿಸಿರುವ ಭಾವನೆಗಳು ಹಾಗೂ ಆ ಚಿತ್ರ ವೀಕ್ಷಿಸಿದಾಗ ವಿಮರ್ಶಕರಲ್ಲಿ ಮೂಡುವ ಭಾವನೆಗಳು ಬೇರೆ ಬೇರೆಯಾದಾಗ ಈ ಬಗೆಯ ವಿಮರ್ಶೆಗಳ ಪರಸ್ಪರ ಅಭಿಪ್ರಾಯ, ವಿಚಾರ ಮಂಥನ, ವಿನಿಮಯಕ್ಕೆ ಸಾಧ್ಯವಾಗುವುದು. ಪತ್ರಿಕೆಗಳ ವಿಮರ್ಶೆಯಿಂದ ನಿರ್ದೇಶಕನಿಗೆ ಪ್ರಯೋಜನ ಆಗುತ್ತದೆ. ನಾನು ಚಿತ್ರ ಮಾಧ್ಯಮದ ಮೇಲಿನ ನನ್ನ ಹಿಡಿತವನ್ನು ಕಳೆದುಕೊಂಡಿದ್ದೇನೆಂದು ಪತ್ರಿಕೆಗಳು ಬರೆದರೆ ನಿಜಕ್ಕೂ ಹಿಡಿತ ಕಳೆದುಕೊಂಡಿಲ್ಲದಿದ್ದರೂ ಕೂಡ ಮುಂದಿನ ಚಿತ್ರ ಸೃಷ್ಟಿಯ ಸಂದರ್ಭದಲ್ಲಿ ನಾನು

ಇನ್ನಷ್ಟು ಶ್ರದ್ಧೆಯಿಂದ, ಎಚ್ಚರಿಕೆಯಿಂದ ಕೆಲಸ ಮಾಡುವಂತಾಗುತ್ತದೆ. ಯಾವುದೇ ಒಂದು ಚಿತ್ರದ ಬಗ್ಗೆ ವಿಮರ್ಶೆ ಬರೆಯುವಾಗ ಆ ಚಿತ್ರದಲ್ಲಿನ ಒಳ್ಳೆಯ ಅಂಶಗಳನ್ನು ಪ್ರಸ್ತಾಪಿಸಿ ದೋಷಗಳತ್ತ ಬೆಟ್ಟು ಮಾಡಿ ತೋರಿಸಿದ್ದಲ್ಲಿ ಆ ಚಿತ್ರದ ಸೃಷ್ಟಿಕರ್ತನಾದ ನಿರ್ದೇಶಕನಿಗೆ ತನ್ನ ಮುಂದಿನ ಸೃಷ್ಟಿಯಲ್ಲಿ ಹಿಂದಿನ ಲೋಪದೋಷಗಳ ಬಗ್ಗೆ ಎಚ್ಚರಿಕೆ ವಹಿಸಲು ಸಾಧ್ಯವಾಗುತ್ತದೆ.

◆



"ಬಿಳಿ ಹೆಂಡ್ತಿ" ಚಿತ್ರದ ಚಿತ್ರೀಕರಣದ ಸಂದರ್ಭದಲ್ಲಿ ನಿರ್ಮಾಪಕರುಗಳಾದ ಕೆ.ಸಿ.ಎನ್. ಗೌಡ, ವೀರಸ್ವಾಮಿ, ನಟ ಲೋಕನಾಥ್, ಪುಟ್ಟಣ್ಣ ಕಣಗಾಲ್, ನಿರ್ಮಾಪಕ ಮುದ್ದುಕೃಷ್ಣ.

# ಪ್ರಾಚ್ಯವಸ್ತು ಇಲಾಖೆ

ಹಲವು ಸಲ ಚಿತ್ರಗಳನ್ನು ಅವುಗಳ ಕಥೆಗನುಗುಣವಾಗಿ ಐತಿಹಾಸಿಕ ಸ್ಥಳಗಳಲ್ಲೇ ಚಿತ್ರೀಕರಣ ನಡೆಸಬೇಕಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಚಿತ್ರೀಕರಣ ಮಾಡಲು ಸಂಬಂಧಪಟ್ಟ ಇಲಾಖೆಯ ಒಪ್ಪಿಗೆ ಬೇಕು.

ಇಕ್ಕೇರಿ, ಕೆಳದಿ ಇವೆಲ್ಲ ಐತಿಹಾಸಿಕ ಸ್ಮಾರಕಗಳಾಗಿ ಪ್ರಾಚ್ಯವಸ್ತು ಇಲಾಖೆ ಅಧೀನದಲ್ಲಿ ಇವೆಯಾದರೂ ಇವು ಇರುವುದಲ್ಲಿ ಎಂಬುದೇ ಆ ಇಲಾಖೆಯವರಿಗೆ ಗೊತ್ತಿಲ್ಲ. ಪ್ರಾಚ್ಯವಸ್ತು ಇಲಾಖೆಯ ಅಧೀನದಲ್ಲಿರುವ ಯಾವುದೇ ಸ್ಥಳದ ಚಿತ್ರೀಕರಣಕ್ಕೆ ಅನುಮತಿ ಪಡೆಯಬೇಕಾದರೂ ಇಲ್ಲಿಂದ ದೆಹಲಿಗೆ ಹೋಗಬೇಕು. ಅಲ್ಲಿ ಅಧಿಕಾರಿಗಳು ಫೈಲನ್ನು ನೋಡದೇನೇ ಅನುಮತಿ ನಿರಾಕರಿಸುತ್ತಾರೆ.

ನಮಗೆ ಸ್ವಾತಂತ್ರ್ಯ ಬಂದಿದೆ ಎನ್ನುತ್ತೇವೆ. ಆದರೆ ಹಿಂದೆ ಆಂಗ್ಲರ ಹಿಡಿತದಲ್ಲಿದ್ದೆವು. ಈಗ ಉತ್ತರ ಭಾರತೀಯರ ಹಿಡಿತದಲ್ಲಿದ್ದೇವೆ. ವರ್ಣದ್ವೇಷವನ್ನು ಕಾಣಲು ನಾವು ಇಂಗ್ಲೆಂಡ್, ಅಮೇರಿಕಾಗಳಿಗೆ ಹೋಗಬೇಕಾಗಿಲ್ಲ, ಭಾರತದಲ್ಲೇ ಇದೆ. ಕಪ್ಪು ಕನ್ನಡಿಗನಿಗೆ ದೆಹಲಿಯಲ್ಲಿ ಮೂರು ಕಾಸಿನ ಬೆಲೆಯೂ ಇಲ್ಲ.

◆

# ದೆಹಲಿಯಲ್ಲಿ ನಡೆದ ಹತ್ತನೇ ಅಂತರ ರಾಷ್ಟ್ರೀಯ ಚಲನಚಿತ್ರೋತ್ಸವ ಸಂದರ್ಭದಲ್ಲಿ ನುಡಿದ ಅಣಿಮುತ್ತುಗಳು

ಪ್ರೇಕ್ಷಕರಿಗೆ ಶಿಕ್ಷಣ ನೀಡುವುದಕ್ಕೂ ಮತ್ತು ಆಲೋಚನೆ ಮಾಡಲು ಹಚ್ಚುವುದಕ್ಕೂ ಬಹಳ ಅಂತರವಿದೆ. ನಾನು ನನ್ನ ಪ್ರೇಕ್ಷಕರಿಗೆ ಶಿಕ್ಷಣ ನೀಡಲು ಬಯಸುವುದಿಲ್ಲ. ಏಕೆಂದರೆ ನನಗೆ ಆ ರೀತಿಯ ಸಾಂಕೇತಿಕ ಪ್ರತಿಷ್ಠೆಯಲ್ಲಿ ನಂಬಿಕೆಯಿಲ್ಲ. ಬದಲಾಗಿ ನನ್ನ ಪ್ರೇಕ್ಷಕರು ನಾನು ಸೃಷ್ಟಿಸುವ ಪಾತ್ರಗಳ ಮುಖೇನ ಚಿಂತನೆಗೊಳಪಟ್ಟರೆ ನನ್ನ ಶ್ರಮ ಸಾರ್ಥಕ.

ನನ್ನ ಚಿತ್ರದಲ್ಲಿ ಮೂಡಿಸಬಹುದಾದ ಸಮಸ್ಯೆಗಳಿಗೆ ಪರಿಹಾರವನ್ನು ಸೂಚಿಸುವುದನ್ನು ನಾನು ಆದಷ್ಟು ತಪ್ಪಿಸುತ್ತೇನೆ. ಕಾರಣ ಸ್ಪಷ್ಟ. ಪ್ರೇಕ್ಷಕರು ನನ್ನ ಧ್ಯೇಯೋದ್ದೇಶಗಳ ಬಗ್ಗೆ ತಪ್ಪು ತಿಳಿಯಬಾರದು. ಅವರನ್ನು ಮಾರ್ಪಡಿಸಲು ನಾನು ಪ್ರಯತ್ನಿಸುತ್ತಿದ್ದೇನೆಂಬ ಭಾವನೆ ಅವರಿಗೆ ಬರಬಾರದು, ಮಿಗಿಲಾಗಿ ಸಮಸ್ಯೆಗಳಿಗೆ ಒದಗಬಹುದಾದ ಯಾವುದೇ ಪರಿಹಾರ ಸಮಾಜದಲ್ಲಿ ಘರ್ಷಣೆಗಳಿಗೆ ಕಾರಣವಾದೀತೆಂಬ ಅಂಶವೂ ನನಗೆ ಗೋಚರಿಸಿದೆ. ಏಕೆಂದರೆ ಒಬ್ಬರಂತೆ ಇನ್ನೊಬ್ಬರು ಯೋಚಿಸುತ್ತಾರೆಂಬುದರಲ್ಲಿ ನನಗೆ ನಂಬಿಕೆ ಸಾಲದು ಆದ್ದರಿಂದ ಸಮಸ್ಯೆಗಳನ್ನು ಚಿತ್ರಮಾಧ್ಯಮದ ಮುಖೇನ ಪ್ರೇಕ್ಷಕರ ಮುಂದೆ ಇಟ್ಟು ಪರಿಹಾರವನ್ನು ಅವರಿಗೇ ಬಿಡುತ್ತೇನೆ.

ಸ್ತ್ರೀ ಪ್ರಧಾನ ಅಥವಾ ನಾಯಕಿ ಪ್ರಧಾನ ಚಿತ್ರಗಳಲ್ಲಿ ನಾನು ಹೆಚ್ಚಿನ ಆಸಕ್ತಿ ತೋರುತ್ತೇನೆಂಬುದು ತಪ್ಪು ಕಲ್ಪನೆ, ಎಲ್ಲಾ ಕಾಲದ ಗಲ್ಲಾ ಪೆಟ್ಟಿಗೆ ದಾಖಲೆಗಳನ್ನು ಮುರಿದ ನಾನು ಚಿತ್ರಿಸಿದ "ನಾಗರಹಾವು" ಮತ್ತು ಅದರ ಹಿಂದಿ ಅವತರಣಿಕೆ "ಝಹ್ರೀಲ್ಲಾ ಇನ್ಸಾನ್" ಸ್ತ್ರೀ ಪ್ರಧಾನ ಚಿತ್ರಗಳಾಗಿರಲಿಲ್ಲ. ಕನ್ನಡದ "ಧರ್ಮಸೆರೆ" ಸ್ತ್ರೀ ಪ್ರಧಾನ ಚಿತ್ರವಾಗಿತ್ತು. ಯಶಸ್ವಿಯಾಗಿಸುವಲ್ಲಿ ಸ್ತ್ರೀ ಪ್ರಧಾನವಾದ ಚಿತ್ರವೇ ಆಗಬೇಕಾಗಿಲ್ಲ. ಯಾವ ಚಿತ್ರ ಯಶಸ್ವಿಯಾಗುತ್ತದೆಂದು ಹೇಳಲೂ ಬರುವಂತಿಲ್ಲ.

ಯಾವುದೇ ಚಿತ್ರದ ಯಶಸ್ಸಿಗೆ ಯಾವುದೇ ಅಳತೆಗೋಲಿಲ್ಲ.. ಕರ್ನಾಟಕದಲ್ಲೇ ಅತಿ ಹೆಚ್ಚಿನ ಬಂಡವಾಳ ತೊಡಗಿಸುವ ನಿರ್ದೇಶಕ ನಾನು ಎಂಬ ಉಗ್ರ ಟೀಕೆ ನನ್ನನ್ನು ಸ್ವಲ್ಪ ದಿನ ಕಾಡಿತು. ಈ ಸವಾಲನ್ನು ಎದುರಿಸುವ ಸಲುವಾಗಿಯೇ "ಕಥಾಸಂಗಮ", "ಕಪ್ಪುಬಿಳುಪು" ಚಿತ್ರಗಳನ್ನು ಯಾವ ಸುಪ್ರಸಿದ್ಧ ನಟ-ನಟಿಯರನ್ನೂ ಹಾಕಿಕೊಳ್ಳದೆ ಅತ್ಯಂತ ಕಡಿಮೆವೆಚ್ಚದಲ್ಲಿ ನಿರ್ದೇಶಿಸಿದೆ. ಪ್ರೇಕ್ಷಕರು ಪ್ರೋತ್ಸಾಹಿಸಿದರು. ನಿರ್ಮಾಪಕರು ತಮ್ಮ ಕೈಸುಟ್ಟುಕೊಳ್ಳಲಿಲ್ಲ.

ಯಾವುದೇ ಚಿತ್ರದ ಯಶಸ್ಸು ನಿರ್ದೇಶಕ ಮತ್ತು ಕಥೆಯನ್ನವಲಂಭಿಸುತ್ತದೆ. ಊಟ ಮುಖ್ಯವೇ ಹೊರತು ತಟ್ಟೆ ಇಟ್ಟಿರುವ ಮೇಜು, ಕುರ್ಚಿಗಳಲ್ಲ. ಹಾಗೆಯೇ ಚಿತ್ರದ ಮುಖೇನ ಒಬ್ಬ ನಿರ್ದೇಶಕ ಹೇಳಬೇಕಾಗಿರುವ ವಿಷಯ ಮುಖ್ಯವೇ ಹೊರತು ಅಳತೆ ಮೀರಿದ ಆಡಂಬರ ಅಥವಾ ಚಿತ್ರೀಕರಣದ ಸೆಟ್ಟುಗಳಲ್ಲ. ಚಿತ್ರದ ರೂಪ ಮತ್ತು ವಿಷಯ ಮುಖ್ಯ.. ಚಿತ್ರಕ್ಕೆ ಸಂಬಂಧಿಸಿದ ವಿಷಯವನ್ನು ಚಿತ್ರದ ರೂಪಕ್ಕೆ ಅಳವಡಿಸುವುದರಲ್ಲಿ ಜಾಣ್ಮೆಯಿರಬೇಕು.

ಸತ್ತು ಬೀಳುತ್ತಿರುವ ಸುಂದರ ಹುಡುಗಿಯ ಕುತ್ತಿಗೆಗೆ ಕಂಠಾಭರಣ ಮತ್ತು ಅತ್ಯಂತ ಬೆಲೆ ಬಾಳುವ ಆಭರಣಗಳನ್ನು ತೊಡಿಸುವುದರ ಪ್ರಯೋಜನವಾದರೂ ಏನು? ಆಕೆ ಬದುಕಿದ್ದರೆ ಈ ಎಲ್ಲಾ ಉಡಿಗೆ ತೊಡಿಗೆಗಳೂ ಆಕೆಯ ಸೌಂದರ್ಯಕ್ಕೆ ಪೋಷಕವಾಗುತ್ತಿದ್ದವು. ಯಾವುದೇ ಚಿತ್ರಕ್ಕೆ ಆತ್ಮ ಇಲ್ಲವಾದಾಗ ಯಾವುದೇ ಆಡಂಬರದಿಂದ ಚಿತ್ರವನ್ನು ಯಶಸ್ವಿಯಾಗಿಸಲಾಗದು. ಚಿತ್ರದ ಯಶಸ್ಸನ್ನು ಹುಡುಕಲು ಹೊರಟಿರುವ ನಮ್ಮಲ್ಲಿ ಅನೇಕರು ಚಿತ್ರದ ತಿರುಳಿನ ಕಡೆ ದೃಷ್ಟಿಯನ್ನೇ ಹರಿಸದಿರುವುದು ದುರದೃಷ್ಟಕರ.

ಆಧ್ಯಾತ್ಮಿಕವಾಗಿ ನನಗೆ ಅತಿದೊಡ್ಡ ಮತ್ತು ಉತ್ತಮ ಚಿತ್ರಗಳನ್ನು ತೆರೆ ಕಾಣಿಸುವ ಇಚ್ಛೆ, ಆದರೆ ಆರ್ಥಿಕ ಮುಗ್ಗಟ್ಟು ನನ್ನನ್ನು ಸೈತಾನನಂತೆ ಕಾಡುತ್ತದೆ. ನಿರ್ದೇಶಕನಾಗಿ ನಾನು ಅತ್ಯಂತ ಮೇಲಿನ ವರ್ಗಕ್ಕೆ ಕುಪ್ಪಳಿಸಲಾಗಲಿಲ್ಲ. ಏಕೆಂದರೆ ನನ್ನ ಜಿಂಕೆ ಓಟದ ರಭಸಕ್ಕೆ ಸಮಾನರಾದ ನಿರ್ಮಾಪಕರು ಹೆಚ್ಚಿಗೆ ದೊರಕಲಿಲ್ಲ. ಈ ವಿಷಯದಲ್ಲಿ ನಾನೊಬ್ಬ ದುರಾದೃಷ್ಟವಂತ.

ನಾನೇ ನಿರ್ಮಾಪಕನಾಗಿ ಮತ್ತು ನಿರ್ದೇಶಕನಾಗಿ ಕೆಲಸ ಮಾಡಿದಾಗ ನನ್ನಲ್ಲಿ ವಿಭಿನ್ನ ಮಾನಸಿಕ ತೊಳಲಾಟಗಳು ಹುಟ್ಟಿಕೊಳ್ಳುತ್ತವೆ. ಸ್ವಾಭಾವಿಕವಾಗಿ ನಾನು ಡಾ:: ಜಾಕೆಲ್ ಮತ್ತು ಮಿ: ಹೈಡ್ ಎರಡೂ ಆಗಬೇಕಾಗುತ್ತದೆ. ಚಿತ್ರ ಮಾಧ್ಯಮದಲ್ಲಿ ಹಗಲೂ ರಾತ್ರಿ ಮುಳುಗಿ ಹೋಗುತ್ತೇನೆ. ಈ ಎಲ್ಲಾ ವರ್ಷಗಳಲ್ಲಿಯೂ ಚಿತ್ರರಂಗದ ತಾಂತ್ರಿಕತೆ, ಕಲೆ ಮುಂತಾದವುಗಳ ಅಭಿವೃದ್ಧಿಗಾಗಿ

ಶ್ರಮಪಟ್ಟಿದ್ದರೂ ನಾನಿನ್ನೂ ಈ ಮಾಧ್ಯಮದ ವ್ಯಾಕರಣವನ್ನೇ ಕಲಿಯುತ್ತಿದ್ದೇನೆಂಬ ಭಾವನೆ ನನ್ನನ್ನು ಪೀಡಿಸುತ್ತದೆ. ನನ್ನ ಗುರಿ ಮುಟ್ಟುವುದಕ್ಕೆ ಮೊದಲು ಇನ್ನೂ ಅನೇಕ ಮೈಲಿಗಲ್ಲುಗಳನ್ನು ಹಾಯಬೇಕೆಂಬ ಸತ್ಯ ನನಗೆ ಗೋಚರಿಸುತ್ತದೆ.

ಚಲನಚಿತ್ರ ಒಂದು ಪ್ರಬಲ ಮಾಧ್ಯಮ ಎಂದು ನಾನು ನಂಬುತ್ತೇನೆ. ಸಮಾಜದ ಅಭಿವೃದ್ಧಿ ಮತ್ತು ಬೆಳವಣಿಗೆಗಾಗಿ ಈ ಮಾಧ್ಯಮದ ಸದುಪಯೋಗ ಆಗಬೇಕಾಗಿದೆ. ಚಲನಚಿತ್ರರಂಗ ೨೦ನೇ ಶತಮಾನದ ಅತ್ಯಂತ ಅದ್ಭುತ ಕೊಡುಗೆ ಇದರ ಸದುಪಯೋಗದಿಂದ ಯಾರನ್ನೇ ಬೇಕಾದರೂ ಮಾನಸಿಕವಾಗಿ ತುಳಿಯಬಹುದು ಅಥವಾ ಮೇಲೆತ್ತಬಹುದು. ಈ ನನ್ನ ಮಾತುಗಳನ್ನು ನೆನಪಿಸಿ, ಚಲನಚಿತ್ರ ಮಾಧ್ಯಮವು ಮುಂಬರುವ ಕೆಲವು ವರ್ಷಗಳಲ್ಲಿ ನಮ್ಮ ಸಮಾಜದಲ್ಲಿ ಅನೇಕ ಅದ್ಭುತ ಬದಲಾವಣೆಗಳನ್ನು ತರಲಿದೆ.

ನನ್ನ ಯಾವುದೇ ಚಿತ್ರದಲ್ಲಿ ಅಪಕ್ವ ವಿಷಯಗಳನ್ನು ತುರುಕಿಲ್ಲ. ಕುಟುಂಬದವರೆಲ್ಲರೂ ಕೂತು ನೋಡಬಹುದಾದ ಚಿತ್ರಗಳು ನನ್ನವು. ನಾನು ಭಾವನೆಗಳನ್ನು ಪ್ರಚೋದಿಸುತ್ತೇನೆ. ಏಕೆಂದರೆ ಭಾವನೆಗಳು ಮಾನವ ಜನಾಂಗದ ಒಂದು ಅಂಗ. ನನ್ನ ಪ್ರತಿ ಚಿತ್ರವೂ ಒಂದು ನೂತನ ಪ್ರಯೋಗ, ವಿಷಯದಲ್ಲಿ ತಾಂತ್ರಿಕತೆಯಲ್ಲಿ ಹಾಗೂ ವಿಷಯವನ್ನು ಮುಂದಿಡುವುದರಲ್ಲಿ ಪ್ರತಿ ಚಿತ್ರವೂ ಒಂದು ಹೊಸ ಸೃಷ್ಟಿ. ಹೊಸ ಆದೇಶವನ್ನು ಸಾರುವ ಕೃತಿ.

ಚಿತ್ರ ನಿರ್ದೇಶಕ, ದೇಶಪ್ರೇಮಿ, ಕಲೆಗಾರ, ಯೋಧ ಇವರಲ್ಲಿ ಯಾರೂ ಸೋಲಿನಿಂದ ಅಳುಕಬೇಕಾಗಿಲ್ಲ. ಬದಲಾಗಿ ಪ್ರತಿ ಸೋಲು, ಗೆಲುವಿನ ಹಾದಿಗೆ ದಾರಿ ಮಾಡಿಕೊಡುತ್ತದೆ. ಅವರವರ ಸೇವಾಕ್ಷೇತ್ರದಲ್ಲಿ ಮಿನುಗುವಂತೆ ಮಾಡುತ್ತದೆ. ಎಲ್ಲದಕ್ಕೂ ಮಿಗಿಲಾಗಿ ಅವರನ್ನು ಉತ್ತಮ ಮನುಷ್ಯರನ್ನಾಗಿ ಮಾಡುತ್ತದೆ.

◆



"ರಂಗನಾಯಕಿ" ಚಿತ್ರದ ಸೆಟ್‌ನಲ್ಲಿ ಪುಟ್ಟಣ್ಣ ಕಣಗಾಲ್, ಆರತಿ ಮತ್ತು ರಾಜಾನಂದ್



"ರಂಗನಾಯಕಿ" ಚಿತ್ರದ ಚಿತ್ರೀಕರಣದಲ್ಲಿ ಅಶೋಕ್, ಪುಟ್ಟಣ್ಣ ಕಣಗಾಲ್ ಮತ್ತು ಆರತಿ



ಪುಟ್ಟಣ್ಣ ಕಣಗಾಲ್

"ನನ್ನ ಲೈಫ್ ಒಂದು ಸ್ಕ್ರೀನ್‌ಪ್ಲೇ ಇದ್ದಂತೆ. ಅದರ ಹೀರೋ ಎಂದಿಗೂ ಹೀರೋ. ಹೀರೋ ಎನ್ನುವುದನ್ನು ಆತ ರೂಪಿಸಿ ತೋರಿಸುತ್ತಾನೆ. ತೆರೆಯ ಮೇಲೆ ಯುದ್ಧದ ದೃಶ್ಯ ತೋರಿಸುತ್ತಾರೆ ; ಪ್ರವಾಹ ತೋರಿಸುತ್ತಾರೆ ; ಕಷ್ಟ ಸುಖ, ಸಾವು ನೋವು ಹೀಗೆ ನೂರಾರು ಚಿತ್ರ ತೋರಿಸುತ್ತಾರೆ. ಇಷ್ಟೆಲ್ಲಾ ಮುಗಿದ ಮೇಲೆ ಆ ತೆರೆ ಬೆಳ್ಳಿಯ ತೆರೆಯಾಗಿಯೇ ಉಳಿಯುತ್ತದೆ. ಪ್ರವಾಹ ಬಂದಾಗ ಒದ್ದೆಯಾಗುವುದಿಲ್ಲ, ಬೆಂಕಿ ಬಿದ್ದಾಗ ಉರಿದು ಹೋಗುವುದಿಲ್ಲ. ಬೇರೆಯವರು ಬಂದು ಆ ತೆರೆಯ ಮೇಲೆ ಬಣ್ಣದ ಚಿತ್ರ ತೋರಿಸಿದಾಗಲಷ್ಟೇ ಅದರ ರೂಪ ಬದಲಾಗುತ್ತದೆ. ಏನೇ ಮಾಡಿದರೂ ಕೊನೆಗೆ ಅದು ಯಾವ ಸೋಂಕೂ ಇಲ್ಲದ ಬೆಳ್ಳನೆಯ ತೆರೆಯಾಗಿಯೇ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುತ್ತದೆ. ಈಗ ನಾನು ಈ ನಿರ್ಧಾರಕ್ಕೆ ಬಂದಿದ್ದೇನೆ. ನಾನು ತೆರೆಯಾಗಿಯೇ ಉಳಿಯುತ್ತೇನೆ."

— ಪುಟ್ಟಣ್ಣ ಕಣಗಾಲ್.



"ನಾನು ಅನೇಕ ಜನ ಕಲಾವಿದರನ್ನು ಪರಿಚಯಿಸಿದೆ ಮತ್ತು ಬೆಳಕಿಗೆ ತಂದೆ. ನಾನು ಪರಿಚಯಿಸಿದ ಕಲಾವಿದರ ಬಗ್ಗೆ ನನಗೆ ತೀವ್ರ ಅತೃಪ್ತಿ ಇದೆ. ಅವರ ಬಗ್ಗೆ ನೆನೆಸಿಕೊಂಡರೆ ನನಗೆ ದುಃಖವಾಗುತ್ತದೆ. ಹಸುವಾಗಿದ್ದಾಗ ಚೆನ್ನಾಗಿ ಹಾಲು ಕರೆದುಕೊಂಡರು. ಹಸಿವಿದ್ದಾಗ ಒಬ್ಬರೂ ಹುಲ್ಲು ಹಾಕಲಿಲ್ಲ. ಚಿತ್ರರಂಗದಲ್ಲಿ ನಾನು ಅತ್ಯಂತ ಶೋಷಣೆಗೊಳಗಾದ ವ್ಯಕ್ತಿ."

— ಪುಟ್ಟಣ್ಣ ಕಣಗಾಲ್



# ಅವರಿವರು ಹೇಳಿದ್ದು

ಕನ್ನಡ ಚಲನಚಿತ್ರ ರಂಗಕ್ಕೆ ಪುಟ್ಟಣ್ಣ ಕಣಗಾಲ್ ಪರಿಚಯಿಸಿದ ಕಲಾಕುಸುಮಗಳನೇಕ. ಅನೇಕ ಪ್ರತಿಭಾವಂತರು ಚಲನಚಿತ್ರರಂಗದ ಹಲವು ವಿಭಾಗಗಳಲ್ಲಿ ಮಿಂಚಿದರು. ಪುಟ್ಟಣ್ಣನವರ ಗರಡಿಯಲ್ಲಿ ಪಳಗಿದವರಿಗೆ ಪ್ರತಿ ಕೆಲಸವೂ ಹೊಸ ಪಾಠವಾಗಿತ್ತು. ಹಾಗೆಯೇ ಪುಟ್ಟಣ್ಣನವರ ಅಭಿಮಾನಿಗಳು ಅಸಂಖ್ಯ. ಪುಟ್ಟಣ್ಣನವರನ್ನು ಕುರಿತು ನಟನಟಿಯರು, ನಿರ್ಮಾಪಕರು, ನಿರ್ದೇಶಕರು, ಸಾಹಿತಿಗಳು, ಸಂಗೀತ ನಿರ್ದೇಶಕರು, ಹಿರಿಯರು, ಬಂಧುಗಳು ಮತ್ತು ಅಭಿಮಾನಿಗಳು ಅವರವರ ಅಭಿಪ್ರಾಯಗಳನ್ನು ನಾನು ಸಂದರ್ಶಿಸಿದಾಗ ವ್ಯಕ್ತಪಡಿಸಿದ್ದನ್ನು ನನ್ನ ಶೈಲಿಯಲ್ಲಿ ನಿರೂಪಿಸಿದ್ದೇನೆ.

ಇವೆಲ್ಲಾ ಮುಂದಿವೆ....

## ರಾಜಾನಂದ್, ಚಲನಚಿತ್ರ ಕಲಾವಿದ

ಪುಟ್ಟಣ್ಣನವರ ತಿಥಿ ಕಾರ್ಯವನ್ನು ಮುಗಿಸಿಕೊಂಡು ನನ್ನ ಮಿತ್ರರಾದ ಚಿತ್ರನಿರ್ಮಾಪಕ ಆರ್.ಕೆ. ರಾಜುರವರ ಕೊಠಡಿಗೆ ಹೋದಾಗ ಅಲ್ಲಿಯೇ ಕುಳಿತಿದ್ದ ಚಲನಚಿತ್ರ ನಟ ರಾಜಾನಂದ್‌ರವರ ಪರಿಚಯವಾಯಿತು. ಅವರನ್ನು ನಾನು ಪುಟ್ಟಣ್ಣನವರ ಬಗ್ಗೆ ಕೇಳಿದಾಗ "ಪುಟ್ಟಣ್ಣನವರು ನನಗೆ ಪರಿಚಯವಾದದ್ದು ಅವರ "ರಂಗನಾಯಕಿ" ಚಿತ್ರ ತೆಗೆಯುತ್ತಿದ್ದ ಕಾಲದಲ್ಲಿ. ನಾನಾಗಲೇ ಸುಮಾರು ೪೫ ಚಿತ್ರಗಳಲ್ಲಿ ಕೆಲಸ ಮಾಡಿದ್ದೆ. ಆದರೆ ಇದರಿಂದ ನನಗೆ ಚಿತ್ರರಂಗ ಜೀವನ ತೃಪ್ತಿ ತಂದಿರಲಿಲ್ಲ. ಪುಟ್ಟಣ್ಣನವರು ಮೇಲೇರಿದಂತೆ ಕನ್ನಡ ಚಿತ್ರರಂಗದ ಬಹುಪಾಲು ಕಲಾವಿದರು, ತಾಂತ್ರಿಕಜ್ಞರು ಅವರ ಚಿತ್ರದಲ್ಲಿ ಕೆಲಸ ಮಾಡಲು ಕಾತರಿಸುತ್ತಿದ್ದ ದಿನಗಳವು. ನನಗೂ ಅವರ ಚಿತ್ರದಲ್ಲಿ ನಟಿಸಬೇಕೆಂದು ಬಹಳ ದಿನಗಳಿಂದಲೂ ಆಸೆಯಿತ್ತು. ಒಮ್ಮೆ ಅವರು ಮೈಸೂರಿನ ಪ್ರೀಮಿಯರ್ ಸ್ಟುಡಿಯೋನಲ್ಲಿ ಚಿತ್ರೀಕರಣ ನಡೆಸುತ್ತಿದ್ದಾಗ ಅಲ್ಲಿ ಹೋಗಿ ಅವರನ್ನು ಭೇಟಿ ಮಾಡಿ ನನ್ನ ಆಸೆಯನ್ನು ತೋಡಿಕೊಂಡೆ, "ಸಮಯ ಬಂದಾಗ ಕರೆ ಬರುತ್ತದೆ" ಎಂದಷ್ಟೇ ಹೇಳಿದರು.

ಇದ್ದಕ್ಕಿದ್ದಂತೆಯೇ ಬೆಂಗಳೂರಿಗೆ ಬರುವಂತೆ ಒಂದು ದಿನ ಪುಟ್ಟಣ್ಣನವರಿಂದ ಟೆಲಿಗ್ರಾಂ ಬಂತು. ಆಗವರು ಆರತಿಯವರ ಮನೆಯಲ್ಲಿದ್ದರು. ನಾನು ಹೋದಾಗ ಆರತಿಯವರ ಮನೆ ಚಿತ್ರ ನಿರ್ಮಾಣ ತಂಡದವರಿಂದ ಜಗಜಗಿಸುತ್ತಿತ್ತು. ಪುಟ್ಟಣ್ಣನವರು ಯಾರಿಗೋ ದೂರವಾಣಿಯಲ್ಲಿ ಮಾತನಾಡುತ್ತಿದ್ದರು. ನಾನು ಒಳಗೆ ಹೋಗಿ "ನಮಸ್ಕಾರ" ಎಂದೆ. ತಲೆಯಷ್ಟೇ ಅಲ್ಲಾಡಿಸಿದರು, ಸುಮಾರು ಒಂದು ಗಂಟೆ ನಿಂತೆ. ಮಧ್ಯೆ ಆರತಿಯವರು ಒಂದು ಲೋಟ ಕಾಫಿ ತಂದು ಕೊಟ್ಟರು. ಅವರು ದೂರವಾಣಿಯಲ್ಲಿ ಮಾತನಾಡುತ್ತಲೇ ಇದ್ದರು.

ಒಂದು ಗಂಟೆ ಕಳೆದ ಮೇಲೆ ಅವರು ಫೋನು ಕೆಳಗಿಟ್ಟು ಮತ್ತೆ ಮಾಡಲು ಪ್ರಯತ್ನಿಸುವ ಮೊದಲು "ಸಾರ್" ಎಂದೆ "ಯಾರ್ರಿ ನೀವು" ಎಂದರು. "ನಾನು

ಸಾರ್ ರಾಜಾನಂದ, ನಿಮ್ಮಿಂದ ಟೆಲಿಗ್ರಾಂ ಬಂತು" ಎಂದೆ. "ಓ ರಾಜಾನಂದ್ ಯಾವಾಗ ಬಂದಿರಿ, ಏನು ಸಮಾಚಾರ ಕುಳಿತುಕೊಳ್ಳಿ" ಎಂದರು. ಕುಳಿತುಕೊಂಡು ನನ್ನ ಆಸೆಯನ್ನೆಲ್ಲಾ ತೋಡಿಕೊಂಡೆ. "ಸಾರ್ ನಾನಾಗಲೇ ೪೫ ಚಿತ್ರಗಳಲ್ಲಿ ಪಾತ್ರ ನಿರ್ವಹಿಸಿದ್ದೇನೆ. ಹಣವನ್ನೂ ಮಾಡಿದ್ದೇನೆ. ಆದರೆ ನಿಮ್ಮ ನಿರ್ದೇಶನದಲ್ಲಿ ನಾನೊಂದು ಚಿತ್ರದಲ್ಲಿ ಪಾತ್ರ ಮಾಡಬೇಕು. ಅದು ಬರಿ ಪಾತ್ರವಲ್ಲ. ಒಂದು ಒಳ್ಳೆಯ ಪಾತ್ರ, ಚಿಕ್ಕಪುಟ್ಟ ಪಾತ್ರ ಕೊಡುವುದಾದರೆ ನನಗೆ ಪಾತ್ರವೇ ಬೇಡ, ನೀವು ಒಳ್ಳೆಯ ಪಾತ್ರ ಕೊಡುವಿರಾದರೆ ಇನ್ನು ಹತ್ತು ವರ್ಷಗಳಾದರೂ ಕಾಯಬಲ್ಲೆ ಎಂದೆ" ಧೈರ್ಯದಿಂದ.

ಪುಟ್ಟಣ್ಣನವರು ಕೇಳುತ್ತಾ ಕೇಳುತ್ತಾ, ಕೋಪಿಷ್ಠರಾದರು ಏಕೆಂದರೆ ಪುಟ್ಟಣ್ಣನವರ ಎದುರಿಗೆ ಸಾಮಾನ್ಯವಾಗಿ ಯಾವ ಕಲಾವಿದನೂ ಎದುರು ಮಾತನಾಡುವ ಸಾಮರ್ಥ್ಯ ಹೊಂದಿರಲಿಲ್ಲ. "ಎಷ್ಟು ರೀ ನಿಮಗೆ ಪೊಗರು, ಅದೂ ಪುಟ್ಟಣ್ಣನ ಮುಂದೆ ಇಷ್ಟು ಧೈರ್ಯವಾಗಿ ಮಾತನಾಡುತ್ತಾ ಇದ್ದೀರಿ" ಎಂದು ಹೂಂಕರಿಸಿದರು. "ನಿಮಗೆ ಅಗೌರವ ಮಾಡಬೇಕೆಂದು ಈ ಮಾತನಾಡ್ತಾ ಇಲ್ಲ, ನಿಮ್ಮ ಚಿತ್ರದಲ್ಲಿ ಒಂದು ಒಳ್ಳೆಯ ಪಾತ್ರ ಮಾಡಿ ಹೆಸರು ಮಾಡುವ ನನ್ನ ಅದಮ್ಯ ಅಸೆ ನನಗೆ ಹೀಗೆ ಮಾತನಾಡಲು ಪ್ರಚೋದಿಸಿದೆ" ಎಂದೆ. "ಪುಟ್ಟಣ್ಣ ಒಪ್ಪುವುದು ಬರೇ ಮಾತನ್ನಲ್ಲ, ಕೃತಿಯನ್ನು, ನಿಮ್ಮ ಈ ಪೊಗರನ್ನು ನಿಮ್ಮ ಪಾತ್ರ ನಿರ್ವಹಣೆಯಲ್ಲಿ ತೋರಿಸುತ್ತೀರಾ" ಎಂದರು. "ನಿಮ್ಮ ಮಾತನ್ನು ಒಂದು ಸವಾಲ್ ಆಗಿ ಸ್ವೀಕರಿಸುತ್ತೇನೆ" ಎಂದೆ ನಮ್ರತೆಯಿಂದ. "ಹಾಗಾದರೆ ನಾಳೆ ಸ್ಟುಡಿಯೋಗೆ ಬನ್ನಿ" ಎಂದರು.

ಸ್ಟುಡಿಯೋದಲ್ಲಿ ಕ್ಯಾಮರಾ ಇಟ್ಟು ಪುಟ್ಟಣ್ಣನವರು "ಈಗ ನೀವು ದಶರಥನ ಪಾತ್ರ ಮಾಡುತ್ತಿದ್ದೀರಿ. ನಾನು ತೆಗೆಯುತ್ತಿರುವುದು ಫೈನಲ್ ಟೇಕ್. ಈ ಷಾಟ್‌ನಲ್ಲಿ ನೀವು ಚೆನ್ನಾಗಿ ಬಂದರೆ ನಿಮ್ಮನ್ನು ಮುಂದುವರೆಸುತ್ತೇನೆ. ಇಲ್ಲದಿದ್ದಲ್ಲಿ ತೆಗೆದ ಫಿಲಂನ್ನು ಕಿತ್ತು ಹಾಕುತ್ತೇನೆ. ಎಲ್ಲಿ ಈ ಪಾತ್ರ ಮಾಡಿ" ಎಂದರು. " ಒಂದು ಪ್ರಾರ್ಥನೆ. ನಿಮ್ಮ ದಶರಥ ಹೇಗಿರಬೇಕು ಎಂಬ ಬಗ್ಗೆ ನೀವು ಮಾಡಿ ತೋರಿಸಿ" ಎಂದೆ, ಮಾಡಿ ತೋರಿಸಿದರು. "ನಿಮ್ಮಲ್ಲಿ ಕಲೆ ಇದ್ದರೆ ನಾನು ಹಿಂಡಿಕೊಳ್ಳುತ್ತೇನೆ. ಈಗ ನೀವು ಮಾಡಿ" ಎಂದರು. ನಾನು "ದಶರಥನ ಪಾತ್ರವನ್ನು ಅಭಿನಯಿಸಿದೆ, ನನ್ನ ಪಾತ್ರವನ್ನು ನೋಡಿ ದಿಗ್ಭ್ರಮೆಗೊಂಡರು. ನಾನು ಅಷ್ಟು ಚೆನ್ನಾಗಿ ಅಭಿನಯಿಸಿದ್ದೆ. "ರಾಜಾನಂದ್ ಇದು ನನ್ನದಾಯಿತು, ನಿಮ್ಮದು ಸ್ವಲ್ಪ ತೋರಿಸಿ" ಎಂದರು. ಪುನಃ ಅಭಿನಯಿಸಿದೆ. "ಭೇಷ್" ಎಂದರು. ಪುನಃ "ಇನ್ನೊಮ್ಮೆ

ಮಾಡಿ, ಇನ್ನೊಮ್ಮೆ ಮಾಡಿ" ಎಂದರು. ಪುನಃ ಮಾಡಿದೆ "ಟೇಕ್" ಎಂದರು. ಕ್ಯಾಮರಾ ಚಾಲನೆಯಾಯಿತು. ನಾನು ನನ್ನನ್ನೇ ಮರೆದು ದಶರಥನಾಗಿ ಅಭಿನಯಿಸಿದ್ದೆ. "ಕಟ್" ಎಂದರು. ಆಮೇಲೆ ಯೂನಿಟ್ ಕಡೆ ತಿರುಗಿ "ಪ್ಯಾಕಪ್" ಎಂದರು. ನನ್ನ ಕಡೆ ತಿರುಗಿ "ನಿಮ್ಮ ಭವಿಷ್ಯ ನಾಳೆ ಬರೆಯುತ್ತೇನೆ" ಎಂದರು.

ಮಾರನೆಯ ದಿನ ನಾನು ಬೇರೊಂದು ಚಿತ್ರೀಕರಣಕ್ಕಾಗಿ ಬೆಳಗ್ಗೆಯೇ ಸ್ಟುಡಿಯೋದಲ್ಲಿದ್ದೆ. ಇದ್ದಕ್ಕಿದ್ದಂತೆಯೇ "ಪುಟ್ಟಣ್ಣನವರು ಬಂದರು, ಪುಟ್ಟಣ್ಣನವರು ಬಂದರು" ಎಂದು ಅಲ್ಲಿದ್ದ ಜನ ಮೇಲೆದ್ದರು. ಕೇವಲ ಬಾಡಿ ಮತ್ತು ಪಂಚೆಯನ್ನುಟ್ಟಿದ್ದ ಪುಟ್ಟಣ್ಣನವರು ಕಾರಿನಿಂದ ಇಳಿದು ನನ್ನತ್ತ ಬರುವುದನ್ನು ಕಂಡೆ. ಬಂದವರೇ ನನ್ನನ್ನು ಬಾಚಿ ತಬ್ಬಿಕೊಂಡರು. ನನ್ನ ಗಲ್ಲವನ್ನು ಹಿಡಿದುಕೊಂಡು "ರಾಜಾನಂದ್ ನನ್ನ ಜೇಬಿನಲ್ಲಿ ಈಗ ಒಂದು ಲಕ್ಷ ರೂಪಾಯಿ ಇದ್ದರೆ ನಿಮಗೆ ಕೊಡುತ್ತಿದ್ದೆ, ಎಷ್ಟು ಚೆನ್ನಾಗಿ ಅಭಿನಯಿಸಿದ್ದೀರಿ, ನನ್ನ ಕಲ್ಪನೆಯ ದಶರಥನನ್ನು ನಿಮ್ಮಲ್ಲಿ ಕಂಡೆ" ಎಂದರು. ಅವರ ಕಣ್ಣಿನಲ್ಲಿ ನೀರು ಧುಮುಕುತ್ತಿತ್ತು. ನಾನೂ ಅತ್ತುಬಿಟ್ಟೆ.

"ರಂಗನಾಯಕಿ"ಯಲ್ಲಿ ನನ್ನದು ಬಹು ಮುಖ್ಯ ಪಾತ್ರಗಳಲ್ಲಿ ಒಂದಾದ ನಾಟಕ ಕಂಪನಿಯ ಯಜಮಾನ ಶಾಮಣ್ಣನ ಪಾತ್ರ. ಅದರಲ್ಲಿ ನಾನು ದಶರಥ, ಹಿರಣ್ಯಕಶಿಪು, ಕರ್ಣ ಮುಂತಾದ ಪಾತ್ರಗಳಲ್ಲಿ ಶೋಭಿಸಿದೆ. "ರಂಗನಾಯಕಿ" ಬಿಡುಗಡೆಯಾದ ದಿನವೇ ರಾಜಾನಂದ್‌ಗೆ ಪುನರ್ಜನ್ಮವಾಗಿತ್ತು" ಎಂದರು. "ಅದು ಸರಿ ರಾಜಾನಂದ್‌ರೇ ನಿಮ್ಮ ಪಾತ್ರವನ್ನು ಅಷ್ಟು ಹೊತ್ತಿಗಾಗಲೇ ಮತ್ತೊಬ್ಬ ಹೆಸರಾಂತ ಕಲಾವಿದ ಅಭಿನಯಿಸಿದ್ದು ಸುಮಾರು ಚಿತ್ರೀಕರಣವಾಗಿತ್ತಂತಲ್ಲ ನಿಜವೇ" ಎಂದು ಕೇಳಿದೆ. ಅವರು ಉತ್ತರ ಹೇಳಲು ಹಿಂದೆ ಮುಂದೆ ನೋಡಿದರು.

ಆಗ ನಮ್ಮ ಜೊತೆಯಲ್ಲಿದ್ದವರೊಬ್ಬರು "ಅದು ನಿಜ ಎಂದು ಕೇಳಿದ್ದೇವೆ. ಆ ಪಾತ್ರ ವಹಿಸಿದ್ದವರು ಪುಟ್ಟಣ್ಣನವರಿಗೆ ಆತ್ಮೀಯರಾದ ಹಿರಿಯ ಕಲಾವಿದರಂತೆ, ರಾಜಾನಂದ್‌ರವರ ಪಾತ್ರವನ್ನು ನೋಡಿ ಪುಟ್ಟಣ್ಣನವರು ತನ್ನ ಮಿತ್ರನಿಗೆ ಸಮಾಧಾನ ಮಾಡಿ ರಾಜಾನಂದ್‌ರವರನ್ನು ಮುಂದುವರಿಸಿದವರಂತೆ" ಎಂದು ಹೇಳಿದರು. "ಪುಟ್ಟಣ್ಣನವರು ತನ್ನ ಚಿತ್ರವನ್ನು ಅತ್ಯುತ್ತಮವಾಗಿ ತೆಗೆಯುವ ಸಲುವಾಗಿ ಅದರಿಂದ ಎಷ್ಟೇ ನಷ್ಟವಾಗುತ್ತಿದ್ದರೂ ಅದನ್ನು ಪರಿಗಣಿಸುತ್ತಿರಲಿಲ್ಲ. ಅದರಿಂದಾಗಿಯೇ ಜನ ಅವರನ್ನು ಅಪಾರ್ಥ ಮಾಡಿಕೊಂಡು ದೂರುತ್ತಿದ್ದರು" ಎಂದು ರಾಜಾನಂದ್ ಮಾತು ಮುಗಿಸಿದರು.

◆

## ಶಿವರಾಂ, ಚಲನಚಿತ್ರ ಕಲಾವಿದ

ರಾಜಾನಂದ್‌ರವರ ಸಂದರ್ಶನ ಮಾಡಿದ ಮೇಲೆ ಪುಟ್ಟಣ್ಣನವರನ್ನು ಹತ್ತಿರದಿಂದ ಕಂಡ ಹಲವರನ್ನು ಸಂದರ್ಶಿಸಲು ನಿರ್ಧರಿಸಿ, ನಾನು ಮತ್ತು ಚಲನಚಿತ್ರ ನಿರ್ದೇಶಕ ಎಸ್.ವಿ. ದೊರೆಸ್ವಾಮಿಯವರು, "ಶರಪಂಜರ" ಖ್ಯಾತಿಯ ಶಿವರಾಂರವರ ಮನೆಗೆ ಹೋದಾಗ ಅವರ ಮಗ ಬಾಗಿಲು ತೆಗೆದರು. ಪರಿಚಯ ಹೇಳಿದ ಮೇಲೆ ನಮ್ಮನ್ನು ಕುಳ್ಳಿರಿಸಿ ಒಳಗೆ ಹೋಗಿ "ಅಣ್ಣ ಅಣ್ಣ" ಎಂದು ಅವರ ತಂದೆಯನ್ನು ಸ್ವಲ್ಪ ಜೋರಾಗಿ ಕೂಗುವುದನ್ನು ಕೇಳಿದೆವು. ಅವರು ಮಲಗಿರಬಹುದು ಎನಿಸಿ ನನ್ನ ಮನಸ್ಸಿಗೆ ಅಳುಕಾಯಿತು. ಅಷ್ಟರಲ್ಲಿ ಶಿವರಾಂರವರು ಬಂದು ಕೈ ಜೋಡಿಸಿದ್ದರು. ನನ್ನ ಊಹೆ ಸರಿಯಾಗಿತ್ತು, ಆಗತಾನೇ ನಿದ್ರೆಯಿಂದ ಎಚ್ಚೆತ್ತಿದ್ದರು. ನಾನು "ಕ್ಷಮಿಸಿ ಎಂದೆ". "ಎಲ್ಲಿಯಾದರೂ ಉಂಟೆ, ನೀವು ಬರುವುದು ಹೆಚ್ಚಲ್ಲವೇ" ಎಂದರು. ಬಂದ ಉದ್ದೇಶವನ್ನು ವಿವರಿಸಿದೆವು. "ಮೊದಲು ಒಂದು ದೋಸು ಕಾಫಿ ಹಾಕಿ ಶುರು ಮಾಡೋಣ" ಎಂದರು. ಅದೂ ಆಯಿತು. ಮಾತು ಪ್ರಾರಂಭಿಸಿದರು.

"ಚಿತ್ರರಂಗ ನಮಗೆ ಹೊಸದೇನಲ್ಲವಾಗಿದ್ದರಿಂದ ಪುಟ್ಟಣ್ಣನವರು ನನಗೆ "ಬೆಳ್ಳಿಮೋಡ" ಕಾಲದಿಂದಲೂ ಪರಿಚಯವಿದ್ದವರು, ಪುಟ್ಟಣ್ಣನವರಿಂದ "ಬೆಳ್ಳಿಮೋಡ" ಕ್ಲಿಕ್ ಆದ ಮೇಲೆಯೇ ಕನ್ನಡ ಚಿತ್ರರಂಗದಲ್ಲಿ ಒಂದು ಕ್ರಾಂತಿಯಾದದ್ದು. ಚಿತ್ರಪ್ರೇಮಿಗಳು "ಬೆಳ್ಳಿಮೋಡ"ವನ್ನು ಸ್ವೀಕರಿಸದಿದ್ದಲ್ಲಿ ಕನ್ನಡ ಚಿತ್ರ ಮಾಡಲು ಕಷ್ಟವಾಗುತ್ತಿತ್ತು. ೧೯೬೮ರಲ್ಲಿ ನನಗೆ "ಗೆಜ್ಜೆಪೂಜೆ" ಕಾದಂಬರಿಯನ್ನು ತೆರೆಗೆ ತರಬೇಕೆನಿಸಿತು. ನನ್ನ ಸ್ವಂತ ಅಣ್ಣ ರಾಮನಾಥ್‌ರವರು ಆಗಲೇ ಹೆಸರಾಂತ ತಮಿಳು, ತೆಲುಗು ಹಾಗೂ ಹಿಂದಿಯ ದೊಡ್ಡ ನಿರ್ದೇಶಕರಾಗಿದ್ದರೂ ಸಹ ಪುಟ್ಟಣ್ಣನವರಲ್ಲಿದ್ದ ಪ್ರತಿಭೆಯನ್ನು ನೋಡಿ ಅವರಿಂದಲೇ ಈ ಚಿತ್ರವನ್ನು ಮಾಡಿಸಬೇಕೆಂದು ನನಗೆ ಮನಸ್ಸಾಯಿತು" ಎಂದರು. ನಾನು ಮಧ್ಯೆ ಬಾಯಿಹಾಕಿ "ಅಷ್ಟು ಹೊತ್ತಿಗಾಗಲೇ ಪುಟ್ಟಣ್ಣ ದುಬಾರಿ ನಿರ್ದೇಶಕ

ಎಂಬ ಅಪವಾದವಿತ್ತಲ್ಲಾ, ನೀವು ಚಿತ್ರರಂಗದಲ್ಲಿದ್ದು, ಅದನ್ನು ಕೇಳಿದ್ದರೂ ಅವರನ್ನು ಹೇಗೆ ನಿರ್ದೇಶಕನನ್ನಾಗಿ ಮಾಡಿಕೊಂಡಿರಿ" ಎಂದೆ. ಶಿವರಾಂರವರು ತಮ್ಮ ಮಾತನ್ನು ಮುಂದುವರಿಸಿದರು.

"ನೋಡಿ ಆ ಅಪವಾದ ಹುರುಳಿಲ್ಲದ್ದು, ಚಿತ್ರ ತೆಗೆಯುವಾಗ ಆತ ತನ್ನದೇ ಆದ ಒಂದು ಯೋಜನೆಯನ್ನು ಹೊಂದಿರುತ್ತಿದ್ದರು. ಉದಾಹರಣೆಗೆ ಕಾದಂಬರಿಗಳನ್ನು ಚಿತ್ರಕ್ಕೆ ಅಳವಡಿಸುವುದು, ಹೊಸ ಕಲಾವಿದರನ್ನು ಆಯ್ಕೆ ಮಾಡುವುದು, ಹೊಸ ಸಾಹಿತ್ಯವನ್ನು ಸೃಷ್ಟಿಸುವುದು, ಹೀಗೆ ಹೊಸತು ಮಾಡುವಾಗ ಹಳೆಯದಕ್ಕಿಂತ ಸ್ವಲ್ಪ ಹೆಚ್ಚು ಖರ್ಚು ಆಗುತ್ತೆ. ಆತನ ಕಲ್ಪನೆಗೆ ತಕ್ಕಂತೆ ಎಲ್ಲವನ್ನೂ ವ್ಯವಸ್ಥೆ ಮಾಡಿಕೊಟ್ಟರೆ ಯಾವ ಕಷ್ಟವೂ ಇಲ್ಲದೆ ಚಿತ್ರೀಕರಣ ಮುಂದುವರಿಯುತ್ತದೆ ಎಂದರು.

ಮುಂದುವರೆದು "ಈ ವೇಳೆಯಲ್ಲಿ ನಡೆದ ಒಂದು ಘಟನೆಯನ್ನು ವಿವರಿಸುವುದರಿಂದ ಪುಟ್ಟಣ್ಣನವರನ್ನು ಹೆಚ್ಚು ಅರಿಯಲು ಸೂಕ್ತವಾಗುತ್ತದೆ. ಅದೇನೆಂದರೆ ಆಗ "ಶರಪಂಜರ" ತೆಗೆಯುತ್ತಿದ್ದ ಕಾಲ. ಅಂದು ಮಡಿಕೇರಿಯ ಹತ್ತಿರ ಹಾಡಿನ ಹೊರಾಂಗಣ ಚಿತ್ರೀಕರಣ. ಕಲ್ಪನಾರವರು ಕಿತ್ತಲೆ ಹಣ್ಣಿನ; ದೃಶ್ಯದಲ್ಲಿ ಪಾತ್ರ ವಹಿಸಬೇಕಿತ್ತು. ವಸ್ತ್ರಾಲಂಕಾರ ಮಾಡಿಕೊಂಡು ಬಂದ ಕಲ್ಪನಾ ಅವರನ್ನು ನೋಡಿದ ಪುಟ್ಟಣ್ಣನವರಿಗೆ ಕೋಪ ನೆತ್ತಿಗೆ ಬಂತು. ಕಾರಣ ಇವರು ಉಡಲು ಹೇಳಿದ್ದೇ ಒಂದು ಸೀರೆಯಾದರೆ ಕಲ್ಪನಾರವರು ಉಟ್ಟು ಬಂದದ್ದೇ ಮತ್ತೊಂದು ಸೀರೆಯಾಗಿತ್ತು. ಪುಟ್ಟಣ್ಣನವರು ಕಲ್ಪನಾರವರನ್ನು ಮಾತನಾಡಿಸಲಿಲ್ಲ, ಪ್ರೊಡಕ್ಷನ್ ಮೇನೇಜರ್‌ರವರನ್ನು ಕರೆದು ವರ್ಣಾಲಂಕಾರಿಕನನ್ನೂ ಮತ್ತು ಸಹಾಯಕ ನಿರ್ದೇಶಕನನ್ನೂ ಚಿತ್ರತಂಡದಿಂದ ಓಡಿಸುವಂತೆ ಹೇಳಿದರು. ಅವರನ್ನು ತೃಪ್ತಿ ಪಡಿಸಲು ಆಗಲೇ ಅವರಿಬ್ಬರನ್ನೂ ಕಾರಿನಲ್ಲಿ ಕೂರಿಸಿ ಕಳುಹಿಸಲಾಯಿತು. ಆದರೆ ಆಮೇಲೆ ಗೊತ್ತಾಯಿತು ಇದರಲ್ಲಿ ಹುಡುಗರದು ತಪ್ಪಿಲ್ಲ. ಹೇಳಿದರೂ ಕೇಳದೆ ಕಲ್ಪನಾರವರು ತಾವು ಇಷ್ಟಪಟ್ಟ ಸೀರೆಯನ್ನು ಉಟ್ಟುಕೊಂಡು ಬಂದಿದ್ದರೆಂದು."

"ನಿಜವಾಗಿಯೂ ಪುಟ್ಟಣ್ಣನವರು ಪ್ರತಿಭಾವಂತ ನಿರ್ದೇಶಕ, ಒಂದು ಚಿತ್ರಕಥೆಯನ್ನು ತಯಾರು ಮಾಡಬೇಕಾದರೆ ಆಳವಾಗಿ ಅಭ್ಯಾಸ ಮಾಡುತ್ತಿದ್ದರು. "ಗೆಜ್ಜೆಪೂಜೆ"ಯ ಕಥೆ ವೇಶ್ಯಾಸಮಸ್ಯೆಗೆ ಸಂಬಂಧಪಟ್ಟದ್ದು. ಕಾದಂಬರಿಯಲ್ಲಿ ಎಷ್ಟೇ ವಿವರಗಳಿದ್ದರೂ ಸಹ ಮೈಸೂರಿನಲ್ಲಿ ನನ್ನನ್ನು ದೇವದಾಸಿಯರ ಮನೆಗೆ ಕರೆದುಕೊಂಡು ಹೋದರು. ಅವರ ಮನೆಗೆ ಹೋಗುವ ಮುನ್ನ ಪುಟ್ಟಣ್ಣನವರು

ಮಾರುಕಟ್ಟೆಗೆ ಹೋಗಿ ಹೂ, ಹಣ್ಣು, ವೀಳ್ಯದೆಲೆ ಕೊಂಡರು. ಇದರಿಂದ ಪ್ರತಿಯೊಂದರ ಬಗ್ಗೆಯೂ ಅವರಿಗೆ ಆಳವಾದ ಅನುಭವ ಮತ್ತು ಸಂಪ್ರದಾಯಗಳ ಪರಿಚಯವಿತ್ತು ಎನ್ನುವುದು ಅರ್ಥವಾಗುತ್ತದೆ."

"ಯಾವ ಲೇಖಕ ಬಂದರೂ ಪುಟ್ಟಣ್ಣನವರ ತಲೆಯಲ್ಲಿರುವುದನ್ನು ಕಾಗದದ ಮೇಲೆ ತರಲು ಕಷ್ಟವಾಗುತ್ತಿತ್ತು. ದೃಶ್ಯದ ಪ್ರಾರಂಭ ಮತ್ತು ಮುಕ್ತಾಯಕ್ಕೆ ಪುಟ್ಟಣ್ಣನವರು ಬಹಳ ಮಹತ್ವ ಕೊಡುತ್ತಿದ್ದರು. ನಡುವಿನ ಚಿತ್ರೀಕರಣ ಅವರಿಗೆ ಕಷ್ಟವಾಗುತ್ತಿರಲಿಲ್ಲ. ಅವರ ಚಿತ್ರಗಳಿಂದ ಯಾವ ಕಲಾವಿದರು ಮತ್ತು ತಾಂತ್ರಿಕಜ್ಞರಿಗೆ ಪ್ರಶಸ್ತಿ ಬಂದಿದ್ದರೂ ಅದರಲ್ಲಿ ಪುಟ್ಟಣ್ಣನವರ ಶ್ರಮವಿದೆ. ಅವರು ಪ್ರತಿಭೆಯ ಪ್ರಚೋದಕವಾಗಿದ್ದರು. ಯಾರಿಗೆ ಪ್ರತಿಭೆ ಇತ್ತೋ ಅವರನ್ನು ಗೌರವಿಸುತ್ತಿದ್ದರು".

"ಪುಟ್ಟಣ್ಣನವರ ಎಲ್ಲಾ ಗುಣಗಳೂ ನಿಮಗೆ ಗೊತ್ತಿರಬೇಕಲ್ಲವೇ" ಎಂದೆ. ಶಿವರಾಂರವರು ಈ ಪ್ರಶ್ನೆಯಿಂದ ಒಮ್ಮೆ ಬೆಚ್ಚಿದರು. ಸೆಟೆದು ಕುಳಿತು "ಆ ಬಗ್ಗೆ ನಿಮಗೆ ಏನು ಬೇಕು" ಎಂದರು. "ಅವರ ರಸಿಕ ಜೀವನದ ಬಗ್ಗೆ ಏನಾದರೂ ಹೇಳುವಿರಾ" ಎಂದೆ. "ಪ್ರಶ್ನೆ ಬಹಳ ದೊಡ್ಡದಾಯಿತಲ್ಲ ಸ್ವಾಮಿ" ಎಂದರು. "ಹೋಗಲಿ ಅವರೇ ಕಡೆದ ಪುತ್ಥಳಿಗಳಾದ ಕಲ್ಪನಾ ಮತ್ತು ಆರತಿಯವರ ಬಗ್ಗೆ ಏನಾದರೂ ಸ್ವಲ್ಪ ಹೇಳಿ. ಏಕೆಂದರೆ ಈ ಬಗ್ಗೆ ಹೆಚ್ಚು ಹೇಳಲು ಯಾರೂ ಧೈರ್ಯವಹಿಸಲೊಲ್ಲರು" ಎಂದು ಪ್ರಬಲವಾದ ಒತ್ತಾಯ ಹಾಕಿದೆ. "ಅದರಲ್ಲಿ ಗುಟ್ಟೇನಿದೆ, ಎಲ್ಲರಿಗೂ ಗೊತ್ತಿರುವುದನ್ನೇ ನಾನು ಹೇಳುತ್ತೇನೆ" ಎಂದು ಪ್ರಾರಂಭಿಸಿದರು.

"ನನಗೆ ಅವರುಗಳ ನಿಕಟ ಸಂಪರ್ಕವಾದದ್ದು "ಗೆಜ್ಜೆಪೂಜೆ" ಮಾಡುವ ವೇಳೆಯಲ್ಲಿಯೇ. ನನ್ನ ಚಿತ್ರದಲ್ಲಿ ಕಲ್ಪನ, ಆರತಿ ಇಬ್ಬರೂ ಇದ್ದರು, ಆರತಿ ಪಾತ್ರ ನಿರ್ವಹಿಸಿದಾಗಲೆಲ್ಲಾ ಪುಟ್ಟಣ್ಣನವರು ಕಲ್ಪನಾ ಮುಂದೆ ತುಂಬಾ ಹೊಗಳುತ್ತಿದ್ದರು. ಸ್ವಾಭಾವಿಕವಾಗಿಯೇ ಕಲ್ಪನಾಗೆ ಮತ್ಸರವಾಗುತ್ತಿತ್ತು. ಪುಟ್ಟಣ್ಣನವರ ಈ ರೀತಿಯ ನಡತೆಯಿಂದ ಅವರು ಕಲ್ಪನಾರವರ ಕಡೆಯಿಂದ ಆರತಿ ಅವರ ಕಡೆ ವಾಲುತ್ತಿದ್ದರೆಂದು ಭಾವಿಸಿದೆ" ಎಂದರು. ನಾನು ನಡುವೆ ಬಾಯಿ ಹಾಕಿ "ನೋಡಿ ಶಿವರಾಂ, ನೀವು ಚಿತ್ರವನ್ನು ಇಂಟರ್‌ವೆಲ್ ಆದ ಮೇಲೆ ತೋರಿಸುತ್ತಿದ್ದೀರಿ. ಆದರೆ ನಾನು ಮೊದಲಿನಿಂದ ನೋಡಬೇಕು" ಎಂದೆ. ಒಮ್ಮೆ ಜೋರಾಗಿ ನಕ್ಕು ಪುನಃ ಪ್ರಾರಂಭಿಸಿದರು.

"ನನ್ನ ಗೆಜ್ಜೆಪೂಜೆ ತೆಗೆಯುವ ವೇಳೆಯಲ್ಲಿ ಒಂದು ದಿನ, ಪುಟ್ಟಣ್ಣನವರು ನನಗೆ ಒಂದು ಭಾವಚಿತ್ರವನ್ನು ಕೈಗೆ ಕೊಟ್ಟು "ಶಿವರಾಮಣ್ಣ ಈ ಹುಡುಗಿ ಭಾವಚಿತ್ರವನ್ನು ಯಾರೋ ಕಳುಹಿಸಿದ್ದಾರೆ, ತಂಗಿ ಪಾತ್ರಕ್ಕೆ ಆಗಬಹುದು. ಚೆನ್ನಾಗಿದೆಯೇ ನೋಡಿ" ಎಂದರು. ಅದು ಆರತಿಯವರ ಭಾವಚಿತ್ರ ಆಗಿತ್ತು.

"ತಕ್ಷಣ ಆರತಿಯವರ ವಿಳಾಸಕ್ಕೆ ಪತ್ರ ಬರೆದೆ. ಉತ್ತರ ಬರಲಿಲ್ಲ. ಎರಡನೆಯ ಸಲ ಪತ್ರ ಬರೆದಾಗ ನಾಲ್ಕು ಭಾವಚಿತ್ರ ಕಳುಹಿಸಿದರು. ಬಂದು ಕಾಣುವಂತೆ ಪುನಃ ಪತ್ರ ಬರೆದೆ, ಅವರು ಬರಲಿಲ್ಲ. ಪುಟ್ಟಣ್ಣನವರು "ಅವರಿಗೆ ಆಸಕ್ತಿಯಿಲ್ಲದಿದ್ದರೆ ಬೇಡ ಬಿಡಿ" ಎಂದರು, ಆದರೆ ನಾನು ಬಿಡಲಿಲ್ಲ. ಅವರ ವಿಳಾಸ ತೆಗೆದುಕೊಂಡು ಅವರ ಮನೆಯ ಹತ್ತಿರ ಹೋದೆ. ಅದೊಂದು ಅತಿ ಚಿಕ್ಕ ಮನೆ. ಚಿತ್ರದಲ್ಲಿ ಪಾತ್ರ ಮಾಡಲು ಇಚ್ಛೆ ಇದ್ದರೆ ಸ್ಟುಡಿಯೋಗೆ ಬನ್ನಿ ಎಂದು ಹೇಳಿ ಬಂದೆ. ಆರತಿಯವರು ಸ್ಟುಡಿಯೋಗೆ ಬಂದರು. ಪುಟ್ಟಣ್ಣನವರು ಪಾತ್ರ ಮಾಡಿಸಿದರು."

"ಆರತಿಯವರ ಮೊದಲ ಹೆಸರು ಭಾರತಿ, ಸಂಖ್ಯಾಕ್ರಮದ ಆಧಾರದ ಮೇಲೆ ಪುಟ್ಟಣ್ಣನವರಿಂದ ಭಾರತಿ ಹೋಗಿ ಆರತಿಯಾದರು. ಮತ್ತೊಂದು ದಿನ ಚಿತ್ರೀಕರಣಕ್ಕೆ ಕರೆಯಲು ಅವರ ಮನೆಯ ಹತ್ತಿರಕ್ಕೆ ಕಾರು ಕಳುಹಿಸಿದೆ, ಆದರೆ ಕಾರು ಬಂತು, ಆರತಿಯವರು ಬರಲಿಲ್ಲ. ನಾನೇ ಅವರ ಮನೆ ಹತ್ತಿರ ಹೋದೆ, ಅವರ ತಂದೆ ಶೇಷಣ್ಣನವರನ್ನು ಕಂಡೆ, ಅವರ ತಲೆಯಲ್ಲಿದ್ದ ಭಯವನ್ನು ಓಡಿಸಿದೆ, ಹುಡುಗಿಗೆ ಪಾತ್ರದ ಸಂಭಾವನೆಯಾಗಿ ರೂ. ೭೫೦–೦೦ ಗಳನ್ನು ಮಾತನಾಡಿ ಹೊರ ಬಂದೆ."

"ನನ್ನ "ಗೆಜ್ಜೆಪೂಜೆ" ಮುಗಿಯುವುದರೊಳಗೆ ಆರತಿಯವರ ಸಂಸಾರ ಮದರಾಸಿಗೆ ಹೋಯಿತು. ಅಲ್ಲಿ ಪುಟ್ಟಣ್ಣನವರು ಅವರ ತಂದೆ ತಾಯಿಯವರ ಸ್ನೇಹ ಬೆಳೆಸಿ ಅವರ ಮನೆಯವರೇ ಆಗಿ ಹೋದರು. ಪುಟ್ಟಣ್ಣನವರ ಪತ್ನಿ ನಾಗಲಕ್ಷ್ಮೀಯವರು ಅನ್ನಪೂರ್ಣೇಶ್ವರಿ, ತ್ಯಾಗಮಯಿ, ಕರುಣಾಳು, ಆರತಿ ಅವರು ಪುಟ್ಟಣ್ಣನವರನ್ನು ಮದುವೆಯಾಗುವ ಮುಂಚಿನವರೆಗೆ ಅವರ ಮನೆಗೆ ಹೋಗಿ ಬರುತ್ತಿದ್ದರು. ಆ ಮೇಲೆ ನಿಲ್ಲಿಸಿಬಿಟ್ಟರು. ಆದರೆ ಪುಟ್ಟಣ್ಣನವರಿಗೆ, "ಧರ್ಮಸೆರೆ" ಆದಾಗ ಮದರಾಸಿನಲ್ಲಿ ಹೃದಯಾಘಾತವಾಯಿತು. ಅದು ಆರತಿ ಅವರ ಸ್ವಂತ ಚಿತ್ರವಾಗಿತ್ತು, ಆ ವೇಳೆಯಲ್ಲಿ ಪುನಃ ನಾನು, ಆರತಿ ಮತ್ತು ನಾಗಲಕ್ಷ್ಮೀ ಅವರನ್ನು ಒಂದುಗೂಡಿಸಿದೆ. ಸ್ವಲ್ಪ ದಿನ ಒಟ್ಟಿಗೆ ಇದ್ದರು. ಆ ಮೇಲೆ ನಡೆದುದನ್ನೆಲ್ಲಾ ನೀವು ಕೇಳಿರಬಹುದು" ಎಂದು ಮಾತು ನಿಲ್ಲಿಸಿದರು.

"ಶರಪಂಜರ" ಆದ ಮೇಲೆ ಪುಟ್ಟಣ್ಣನವರು ಕಲ್ಪನಾರವರನ್ನು ತಮ್ಮ ಮುಂದಿನ ಚಿತ್ರಗಳಲ್ಲಿ ಏಕೆ ಹಾಕಿಕೊಳ್ಳಲಿಲ್ಲ" ಎಂದೆ. "ಅದಕ್ಕೆ ಅಂತಹ ಪ್ರಬಲವಾದ ಕಾರಣವೇನೂ ಕಾಣಲಿಲ್ಲ. "ನಾಗರ ಹಾವು"ನಲ್ಲಿ ಕಲ್ಪನಾಗೆ ಮಾರ್ಗರೇಟ್ ಪಾತ್ರ ವಹಿಸುವ ಆಸೆಯಿತ್ತು. ಪುಟ್ಟಣ್ಣನವರಿಗೆ ಓಬವ್ವನ ಪಾತ್ರ ಮಾಡಿಸುವ ಮನಸಿತ್ತು. ಈ ಬಗ್ಗೆ ಇಬ್ಬರೂ ಒಬ್ಬರಿಗೊಬ್ಬರು ರಾಜಿಯಾಗಲಿಲ್ಲ" ಎಂದರು.

"ಪುಟ್ಟಣ್ಣನವರಿಗೂ ಕಲ್ಪನಾರವರಿಗೂ ಗಾಢವಾದ ಸ್ನೇಹವಿತ್ತು. ಅದಕ್ಕೆ ಪ್ರಬಲವಾದ ಕಾರಣವೂ ಇತ್ತು. ಆಗ ಪುಟ್ಟಣ್ಣನವರು ಚಿತ್ರಬ್ರಹ್ಮ ಪಂತುಲುರವರ ಸಹಾಯಕ ನಿರ್ದೇಶಕರಾಗಿದ್ದರು. ಪಂತುಲುರವರ "ಸಾಕುಮಗಳು" ಚಿತ್ರಕ್ಕಾಗಿ ಕಲ್ಪನಾರವರ ಮೇಲೆ ಕೃಷ್ಣರಾಜಸಾಗರದ ಬೃಂದಾವನ ಗಾರ್ಡನ್‌ನಲ್ಲಿ ಚಿತ್ರೀಕರಣ ನಡೆಯುತ್ತಿತ್ತು. ಕ್ಯಾಮರಾ ಕಲ್ಪನಾರವರ ಕಾಲುಗಳ ಮೇಲೆ ಓಡಿತು. ಪಂತುಲುರವರು "ಕಟ್" ಎಂದರು. ಕಾರಣ ಕಲ್ಪನಾರವರ ಕಾಲಿಗೆ ಬೇಕಾದ ವರ್ಣಾಲಂಕಾರವಾಗಿರಲಿಲ್ಲ. ಸಿಟ್ಟಿಗೆದ್ದ ಪಂತುಲುರವರು ಕಲ್ಪನಾರವರಿಗೆ ಲಘುವಾಗಿ ಬೈದರು. ಆಗತಾನೇ ಚಿತ್ರರಂಗಕ್ಕೆ ಬಂದಿದ್ದ ಕಲ್ಪನಾಗೆ ಇದನ್ನು ತಡೆದುಕೊಳ್ಳಲಾಗಲಿಲ್ಲ. ಚಿತ್ರೀಕರಣವೆಲ್ಲಾ ಮುಗಿದ ಮೇಲೆ ಗಾರ್ಡನ್‌ನಲ್ಲಿ ಕುಳಿತು ಕಲ್ಪನಾ ಬಿಕ್ಕಿ ಬಿಕ್ಕಿ ಅಳುತ್ತಿದ್ದರು. ಇದನ್ನು ನೋಡಿದ ಪುಟ್ಟಣ್ಣನವರಿಗೆ ಅಯ್ಯೋ ಎನಿಸಿತು. ಆಕೆಯ ಹತ್ತಿರ ಹೋಗಿ "ಅಳಬೇಡ, ಎಂದಾದರೂ ಒಂದು ದಿನ ನಿನ್ನನ್ನು ದೊಡ್ಡ ತಾರೆಯನ್ನಾಗಿ ಮಾಡುತ್ತೇನೆ" ಎಂದು ಸಮಾಧಾನ ಮಾಡಿದರು.

"ಹೀಗೆ ಅವರ ಸ್ನೇಹ ಬೆಳೆದದ್ದು. ೧೯೭೩ರಲ್ಲಿ ಬೈಲೋ ರಷ್ಯಾದಲ್ಲಿ ಪುಟ್ಟಣ್ಣನವರ ಚಿತ್ರಗಳನ್ನು ಪ್ರದರ್ಶಿಸಲು ವ್ಯವಸ್ಥೆಯಾಗಿತ್ತು. ಅವರು ಹೊರಡುವ ಮುಂಚೆ ಕಲ್ಪನಾರವರು ಅವರಿಗೆ ಎಂದೂ ಮರೆಯಲಾಗದಂತಹ ಬೀಳ್ಕೊಡುಗೆ ಸಮಾರಂಭವನ್ನು ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ಏರ್ಪಡಿಸಿದ್ದರು. ಅಲ್ಲಿಗೆ ಆಗಮಿಸಿದ ಪುಟ್ಟಣ್ಣನವರ ಹಣೆಗೆ ಕಲ್ಪನಾರವರು ಕುಂಕುಮ ಇಟ್ಟು ಆರತಿ ಬೆಳಗಿ ಬರಮಾಡಿಕೊಂಡರು. ಇಡೀ ಸಭಾಭವನವನ್ನು ಮೈಸೂರು ಮಲ್ಲಿಗೆ, ರಂಗೋಲಿ, ಉರಿಯುವ ದೀಪಗಳು, ಚಂದನದ ಅಗರಬತ್ತಿ ಇವುಗಳಿಂದ ಶೃಂಗರಿಸಲಾಗಿತ್ತು" ಎಂದರು.

ಕಲ್ಪನಾರವರು ಸಾಯುವ ಸುಮಾರು ಒಂದೂವರೆ ತಿಂಗಳಿಗೆ ಮುಂಚೆ ಮದರಾಸಿನ ಪುಟ್ಟಣ್ಣವರ ಮನೆಗೆ ಹೋದಾಗ ಪುಟ್ಟಣ್ಣನವರು ಮನೆಯಲ್ಲಿರಲಿಲ್ಲ. ಅವರ ಶ್ರೀಮತಿ ನಾಗಲಕ್ಷ್ಮೀಯವರು ಒಳಗೆ ಬರುವಂತೆ ಕರೆದರು. ಒಳಗೆ

ಹೋಗುವ ಮುನ್ನ ಹೊರಗಡೆ ಕಿಟಕಿಯ ಮೇಲೆ ಇಟ್ಟಿದ್ದ ತನ್ನ ವಿಗ್ರಹವನ್ನು ನೋಡಿ "ಕೊನೆಗೂ ನಮ್ಮ ನಿರ್ದೇಶಕರು ನನ್ನನ್ನು ಹೊರಗೆ ಇಟ್ಟುಬಿಟ್ಟರು" ಎಂದರು ಕಲ್ಪನಾ, ನಾಗಲಕ್ಷ್ಮೀಯವರಿಗೆ.

"ಕಲ್ಪನಾರವರು ಇದೇ ವಿಗ್ರಹವನ್ನು ಪುಟ್ಟಣ್ಣನವರಿಗೆ ಪ್ರೀತಿಯ ಕಾಣಿಕೆಯಾಗಿ ಕೊಟ್ಟಿದ್ದರಂತೆ, ಆದರೆ ಆ ವಿಗ್ರಹ ಆಕಸ್ಮಾತ್ ಕೆಳಕ್ಕೆ ಬಿದ್ದು ಅವರ ಸ್ವಲ್ಪ ಭಾಗ ಒಡೆದಿದ್ದರಿಂದ ರಿಪೇರಿಗಾಗಿ ಕಿಟಕಿಯ ಮೇಲಿಡಲಾಗಿತ್ತು. ಅಂದು ಕಲ್ಪನಾರವರು ಸಹಜವೆನ್ನುವಂತೆ ಮಾತನಾಡಿದರೂ ಆ ಮಾತಿನಲ್ಲಿ ತಾವು "ಶರಪಂಜರ" ನಂತರ ಮತ್ತೆ ಪುಟ್ಟಣ್ಣನವರ ಚಿತ್ರಗಳಲ್ಲಿ ಅಭಿನಯಿಸಲಿಲ್ಲ ಎಂಬ ನೋವು ವ್ಯಕ್ತವಾಗಿತ್ತು" ಎಂದರು.

ಇದಾದ ಮೇಲೆ ಶಿವರಾಂರವರು ನಮ್ಮನ್ನು ಅವರ ಆಫೀಸಿಗೆ ಕರೆದುಕೊಂಡು ಹೋಗಿ ನಮಗೆ ಬೇಕಾದ ಭಾವಚಿತ್ರಗಳು ಮತ್ತು ನಿಯತಕಾಲಿಕೆಗಳನ್ನು ಕೊಟ್ಟು ಬೀಳ್ಕೊಟ್ಟರು.

◆



"ರಂಗನಾಯಕಿ" ಚಿತ್ರದ ಹಾಡುಗಳ ರಾಗ ಸಂಯೋಜನೆಯ ಸಂದರ್ಭದಲ್ಲಿ ಸಂಗೀತ ನಿರ್ದೇಶಕ ಎಂ. ರಂಗರಾವ್ ಮತ್ತು ಪುಟ್ಟಣ್ಣ ಕಣಗಾಲ್.

# ಶ್ರೀನಾಥ್, ಚಲನಚಿತ್ರನಟ

ನಾವು ಶ್ರೀನಾಥ್‌ರವರ ಮನೆಗೆ ಹೋದಾಗ ಅವರಾಗಲೇ ಸಿದ್ಧರಾಗಿ ನಮಗೆ ಸಮಯಕೊಟ್ಟಂತೆ ಕಾಯುತ್ತಿದ್ದರು. ಯಾವ ಪೀಠಿಕೆಯೂ ಇಲ್ಲದೆ ತಮ್ಮ ಮಾತನ್ನು ಪ್ರಾರಂಭಿಸಿದರು. "ನಾನಾಗಲೇ ಚಿತ್ರರಂಗದಲ್ಲಿದ್ದರೂ ಕೂಡ ಪುಟ್ಟಣ್ಣನವರ ಬಗ್ಗೆ ಅಂತಹ ಗ್ಲಾಮರೇನಿರಲಿಲ್ಲ, ಅವರ "ಶರಪಂಜರ" ಪ್ರಾರಂಭಿಸಿದಾಗ ನನಗೆ ಒಂದು ಅತಿಥಿ ಪಾತ್ರಕ್ಕಾಗಿ ಕರೆದರು, ಹೋದೆ. ಅಲ್ಲಿ ಅವರನ್ನು ನೋಡಿ ಅವರ ಬಗ್ಗೆ ನನಗೆ ವಿಶ್ವಾಸ ಮೂಡಿತು. ಆಗಿನಿಂದ ಅವರನ್ನು ಮೆಚ್ಚಲು ಪ್ರಾರಂಭಿಸಿದೆ.

ನಮ್ಮ ಚಿತ್ರಂಗದಲ್ಲಿ ಮತ್ತೊಬ್ಬ ನಿರ್ದೇಶಕರಾದ ಶ್ರೀ ರವಿಯವರು ನನಗೆ ಅಣ್ಣನಿದ್ದಂತೆ, ಅವರೂ ಪುಟ್ಟಣ್ಣನವರೂ ಬಹಳ ವರ್ಷಗಳಿಂದ ಆತ್ಮೀಯ ಸ್ನೇಹಿತರು. ಶ್ರೀ ರವಿಯವರು ತಮ್ಮ ಸ್ವಂತಚಿತ್ರ "ಶುಭಮಂಗಳ"ವನ್ನು ನಿರ್ದೇಶಿಸಬೇಕೆಂದು ಪುಟ್ಟಣ್ಣನವರನ್ನು ಕೇಳಿಕೊಂಡಿದ್ದರು. ಜೊತೆಗೆ "ಶುಭಮಂಗಳ"ಕ್ಕೆ ನನ್ನನ್ನು ನಾಯಕನನ್ನಾಗಿ ಹಾಕಿಸಿಕೊಳ್ಳಬೇಕೆಂದು ತಮ್ಮ ಅಭಿಲಾಶೆಯನ್ನು ತಿಳಿಸಿದ್ದರು. ಆದರೆ ಪುಟ್ಟಣ್ಣನವರು ಅವರ ಸಲಹೆಗೆ ಸುಲಭವಾಗಿ "ಆಗಲಿ" ಎನ್ನಲಿಲ್ಲ. ಬಹಳ ಒತ್ತಾಯಿಸಿ ಕಾರಣ ಕೇಳಿದಾಗ "ಶ್ರೀನಾಥ್ ಆ ಪಾತ್ರಕ್ಕೆ ಸ್ವಲ್ಪ ದಪ್ಪವಾಗಿದ್ದಾರೆ" ಎಂದರಂತೆ. ಇದನ್ನು ಕೇಳಿದ ರವಿಯವರು ನನಗೆ "ನೋಡು ಶ್ರೀನಾಥ್ ಪುಟ್ಟಣ್ಣ ಬೇರೆಯವರಂತಲ್ಲ, ಚಿತ್ರ ನನ್ನದಿದ್ದರೂ ತನಗೆ ಸರಿಯೆನಿಸಿದರೆ ಮಾತ್ರ ನಿನ್ನನ್ನು ನಾಯಕನನ್ನಾಗಿ ಹಾಕ್ತಾರೆ. ಇಲ್ಲದಿದ್ದರೆ ಅವರು ಒಪ್ಪೋಲ್ಲ. ನೀನು ನಾಯಕ ಆಗದಿದ್ದರೆ ನಾನು ಚಿತ್ರ ತೆಗೆಯೋಲ್ಲ, ಆದ್ದರಿಂದ ಚಿತ್ರೀಕರಣ ಪ್ರಾರಂಭವಾಗುವುದರೊಳಗೆ ನೀನು ಸಣ್ಣಗಾಗಲೇಬೇಕು" ಎಂದರು.

ನಾನು ಆಗಲೇ ಸುಮಾರು ಮೂವತ್ತೊಂಭತ್ತು ಚಿತ್ರಗಳಲ್ಲಿ ನಟಿಸಿದ್ದೆ, ಆದರೆ ಏಕೋ ನನಗೆ ತೃಪ್ತಿ ಸಿಕ್ಕಿರಲಿಲ್ಲ, ನಾನು ಬೇರೆಯೇ ಆಗಬೇಕು ಎಂದು ನನ್ನ

ಅಂತರಾತ್ಮ ಹೇಳುತ್ತಿತ್ತು. ಒಟ್ಟಿನಲ್ಲಿ ನನ್ನ ಚಿತ್ರ ಜೀವನದಲ್ಲಿ ನನಗೆ ಒಂದು ತಿರುವು ಬೇಕು ಎನಿಸಿತ್ತು. ಇದೆಲ್ಲಾ ನನಗಾಗಿಯೇ ಎಂಬಂತೆ ನಿರ್ದೇಶಕ ರವಿಯವರು ಚಿತ್ರ ತೆಗೆಯಲು ನಿರ್ಧರಿಸಿದ್ದು, ಪುಟ್ಟಣ್ಣನವರು ನಿರ್ದೇಶಿಸಲು ಒಪ್ಪಿಕೊಂಡಿದ್ದರು.

ಆ ರಾತ್ರಿ ನನಗೆ ಹೇಗಪ್ಪ ಸಣ್ಣಗಾಗುವುದು ಎಂಬ ಯೋಚನೆಯಲ್ಲಿ ಸರಿಯಾಗಿ ನಿದ್ರೆ ಬರಲಿಲ್ಲ, ಬೆಳಗಿನಜಾವ ಸ್ವಲ್ಪ ಮಂಪರು ಬಂದಿತ್ತು. ಅಷ್ಟರಲ್ಲಿ ಯಾರೋ ಬಾಗಿಲು ತಟ್ಟಿದ ಶಬ್ದವಾಯಿತು. "ಯಾರಪ್ಪ ಇಷ್ಟು ಬೆಳಗ್ಗೇನೆ" ಎಂದುಕೊಂಡು ಕಣ್ಣುಜ್ಜುತ್ತಾ ಬಾಗಿಲು ತೆಗೆದು ನೋಡಿದರೆ ನನ್ನ ಪರಮಮಿತ್ರರಾದ "ಶರಪಂಜರ" ಖ್ಯಾತಿಯ ಚಿತ್ರನಟ ಶಿವರಾಂರವರು ಹೊರಗಡೆ ನಿಂತಿದ್ದರು. ನಾನು "ಏನು" ಎಂದು ಕೇಳುವ ಮೊದಲೇ ಅವರು "ಶ್ರೀನಾಥ್ ಬೇಗ ಬಟ್ಟೆ ಹಾಕಿಕೊಂಡು ಓಡೋದಕ್ಕೆ ಸಿದ್ಧವಾಗು" ಎಂದರು. "ಏನಪ್ಪಾ ಸಮಾಚಾರ" ಎಂದೆ. "ಸದ್ಯಕ್ಕೆ ಓಡೋದಷ್ಟೆ ಸಮಾಚಾರ, ಉಳಿದಿದ್ದೆಲ್ಲಾ ಆಮೇಲೆ. ಮೊದಲು ಸಿದ್ಧವಾಗು" ಎಂದು ಅವಸರಿಸಿದರು. ನಾನು ಬಟ್ಟೆ ಹಾಕಿಕೊಂಡು ಬಂದದ್ದೇ ತಡ ನನ್ನ ಕೈಹಿಡಿದು ಎಳೆದುಕೊಂಡು ಓಡಲು ಪ್ರಾರಂಭಿಸಿದರು. ಓಡುತ್ತಲೇ ವ್ಯಾಯಾಮ ಮಾಡಿಸಿದರು. ಊಟ ಬಿಡಿಸಿ ಪುನಃ ಪುನಃ ಓಡಿಸಿದರು. ನಮ್ಮ ಓಡುವಿಕೆ ನಿಂಥದ್ದು ಒಂದು ತಿಂಗಳಾದ ಮೇಲೆಯೇ, ಅಷ್ಟು ಹೊತ್ತಿಗೆ ನಾನು ಶಾರೀರಿಕವಾಗಿ ಸ್ಲಿಮ್ ಆಗಿದ್ದೆ. ಮತ್ತೊಂದು ದಿನ ಓಡಿಸುತ್ತಲೇ ಶಿವರಾಂರವರು ನನ್ನನ್ನು ಪುಟ್ಟಣ್ಣನವರ ಮುಂದೆ ಹಾಜರು ಮಾಡಿದರು. ಪುಟ್ಟಣ್ಣನವರು ನನ್ನನ್ನು ಕಣ್ಣರಳಿಸಿ ನೋಡಿ ಮುಗುಳುನಗೆ ಸೂಚಿಸಿದರು. ನಾನು ಸಣ್ಣಗಾಗುವ ಪರೀಕ್ಷೆಯಲ್ಲಿ ಪಾಸಾಗಿದ್ದೆ.

"ಶುಭಮಂಗಳ"ದ ಚಿತ್ರೀಕರಣ ಪ್ರಾರಂಭವಾಯಿತು. ನಾನು ಕೇವಲ ಶಾರೀರಿಕವಾಗಿ ಚಿತ್ರದ ನಾಯಕನಾಗಲು ಅರ್ಹತೆ ಪಡೆದಿದ್ದೆನಷ್ಟೆ. ಪುಟ್ಟಣ್ಣನವರು ಮಾನಸಿಕವಾಗಿಯೂ ನಾನು ಚಿತ್ರನಾಯಕನಾಗುವ ಅರ್ಹತೆ ಹೊಂದಲು ಗಾಣದಲ್ಲಿ ಕಬ್ಬನ್ನು ಅರೆಯುವಂತೆ ನನ್ನನ್ನು ಅರೆದರು. ಅದುವರೆಗಿನ ನನ್ನ ಎಲ್ಲಾ ನಡೆ, ನುಡಿಯನ್ನು ಬದಲಾಯಿಸಿದರು. ನಾನು ಸಂಭಾಷಣೆ ಮಾಡುವ ರೀತಿ, ಆಗಿನ ಮೂಮೆಂಟ್ಸ್, ಮುಖದಲ್ಲಿನ ಭಾವನೆ ಎಲ್ಲವನ್ನೂ ಬದಲಿಸಿದರು. ಚಿತ್ರ ಮುಗಿಯುವುದರೊಳಗೆ ನಾನು ಬೇರೆಯೇ ಶ್ರೀನಾಥ್ ಆಗಿದ್ದೆ. ಚಿತ್ರ ಹೊರಬಂತು. ನನಗೆ ತಿರುವು ಸಿಕ್ಕಿತು.

ಪುಟ್ಟಣ್ಣನವರಿಂದ ಪುನಃ ನನಗೆ ಕರೆ ಬಂದದ್ದು ಆರತಿಯವರಿಗಾಗಿ ಮಾಡಲಿದ್ದ "ಧರ್ಮಸೆರೆ" ಚಿತ್ರದಲ್ಲಿ ನಾಯಕನ ಪಾತ್ರ ಮಾಡಲು. "ಶುಭಮಂಗಳ"

ಚಿತ್ರದ ಯಶಸ್ಸಿನಿಂದ ಆಗಲೇ ನಾನು ಬಿಡುವಿಲ್ಲದ ಕಲಾವಿದನಾಗಿದ್ದೆ. ಪ್ರಸ್ತುತ ನನ್ನ ಮತ್ತೊಬ್ಬ ಪರಮ ಮಿತ್ರನಾದ ನಟ ವಜ್ರಮುನಿಯವರ ಚಿತ್ರದಲ್ಲಿ ನಟಿಸುತ್ತಿದ್ದೆ. ಆದ್ದರಿಂದ "ಧರ್ಮಸೆರೆ"ಗೆ ಕೊಡಲು ನನ್ನಲ್ಲಿ ಕಾಲ್‌ಷೀಟ್ ಇರಲಿಲ್ಲ. ಆದರೂ ಪುಟ್ಟಣ್ಣನವರು ಕೇಳಿದ ಮೇಲೆ ಇಲ್ಲವೆನ್ನಲು ಸಾಧ್ಯವೇ ಇರಲಿಲ್ಲ. ಪರಿಸ್ಥಿತಿಯನ್ನು ವಜ್ರಮುನಿಯವರಿಗೆ ವಿವರಿಸಿ ಸಹಕರಿಸಬೇಕೆಂದು ಕೇಳಿಕೊಂಡೆ. ನನಗೆ ಅನುಕೂಲವಾಗಲೆಂದು "ಧರ್ಮಸೆರೆ" ಚಿತ್ರೀಕರಣ ನಡೆಯುತ್ತಿದ್ದ ಕರಾವಳಿಯ ಕಡೆಯಲ್ಲೇ ತನ್ನ ಚಿತ್ರೀಕರಣವನ್ನು ಮಾಡಲು ವಜ್ರಮುನಿಯವರು ವ್ಯವಸ್ಥೆ ಮಾಡಿಕೊಂಡರು. ಬೆಳಿಗ್ಗೆ ಅಲ್ಲಿ, ಮಧ್ಯಾಹ್ನ ಇಲ್ಲಿ, ಮಧ್ಯಾಹ್ನ ಅಲ್ಲಿ, ಬೆಳಿಗ್ಗೆ ಇಲ್ಲಿ ಹೀಗೆ ಬಿಡುವಿಲ್ಲದೆ ಹಗಲು ರಾತ್ರಿ ಕೆಲಸ ಮಾಡಿದೆ. ಈ ಓಡಾಟದಿಂದ ಕಾಲ ಕಾಲಕ್ಕೆ ಊಟ, ತಿಂಡಿ, ನಿದ್ರೆ, ವಿಶ್ರಾಂತಿಯಿಲ್ಲದೆ ಇದ್ದಾಗ ವಿಷಪೂರಿತ ಆಹಾರದಿಂದಾಗಿ ಆರೋಗ್ಯ ಕೆಟ್ಟು ಬೆಂಗಳೂರಿಗೆ ಬಂದು ಹಾಸಿಗೆ ಹಿಡಿಯಬೇಕಾಯಿತು.

ಅದೇ ವೇಳೆಯಲ್ಲಿ ಆರತಿಯವರು "ಧರ್ಮಸೆರೆ"ಗಾಗಿ ಪುನಃ ಮೈಸೂರಿನಲ್ಲಿ ಚಿತ್ರೀಕರಣ ವ್ಯವಸ್ಥೆ ಮಾಡಿದರು. ನನ್ನಲ್ಲಿ ಅವರಿಗೆ ಕೊಡಲು ಕಾಲ್‌ಷೀಟ್ ಇರಲಿಲ್ಲ. ಅಲ್ಲದೆ ನಾನು ಹಾಸಿಗೆ ಹಿಡಿದು ಔಷಧಿ ತೆಗೆದುಕೊಳ್ಳುತ್ತಿದ್ದೆ. ನನ್ನ ಈ ಪರಿಸ್ಥಿತಿಯನ್ನು ಪುಟ್ಟಣ್ಣನವರೂ ಮತ್ತು ಆರತಿಯವರೂ ತಪ್ಪಾಗಿ ತಿಳಿದರು. ಆದರೂ ಆ ನನ್ನ ಪರಿಸ್ಥಿತಿಯಲ್ಲಿಯೂ ಹೋಗಿ ನನ್ನ ಪಾತ್ರವನ್ನು ಮುಗಿಸಿಕೊಟ್ಟೆ.

ಪುಟ್ಟಣ್ಣನವರು ತುಂಬಾ ಒಳ್ಳೆಯ ಹೃದಯದವರಾದರೂ ಸಹ ಸ್ವಲ್ಪ ಹೇಳಿಕೆ ಮಾತಿಗೆ ಕಿವಿ ಕೊಡುತ್ತಿದ್ದರೆಂದು ಕಾಣುತ್ತದೆ. "ಧರ್ಮಸೆರೆ"ಯ ಘಟನೆಗಳಿಂದ ನನ್ನನ್ನು ತಪ್ಪು ತಿಳಿದರು. ನನ್ನ ಮೇಲೆ ಹಿಂದಿನ ಪ್ರೀತಿ ಇರಲಿಲ್ಲ. ಆಕಸ್ಮಾತ್ತಾಗಿ ಸಿಕ್ಕರೆ ಎಷ್ಟುಬೇಕೋ ಅಷ್ಟೇ ಮಾತನಾಡುತ್ತಿದ್ದರು. ಆರತಿಯವರಂತೂ ನನ್ನೊಡನೆ ಮಾತನ್ನೇ ನಿಲ್ಲಿಸಿದರು. ನನಗೆ ಪುಟ್ಟಣ್ಣನವರ ಮೇಲೆ ಅದಮ್ಯ ಪ್ರೀತಿ, ವಿಶ್ವಾಸವಿದ್ದರೂ ಪರಿಸ್ಥಿತಿಗೆ ಬಲಿಯಾಗಿ ಅವರಿಂದ ದೂರ ಉಳಿಯಬೇಕಾಯಿತು. ಏಕೆಂದರೆ ನನಗೂ ಸ್ವಾಭಿಮಾನವಿತ್ತು.

ಕಾಲ ಒಂದೇ ಸಮನೆ ಇರಲಿಲ್ಲ. ಅದೂ ಉರುಳಿತ್ತು. ಪುಟ್ಟಣ್ಣನವರು ಆರತಿಯವರಿಂದ ಬೇರ್ಪಟ್ಟರು. ಮಾನಸಿಕ ಆಘಾತಕ್ಕೊಳಗಾದರು. ಅವರ ಸಂಸಾರವೆಲ್ಲಾ ಮದರಾಸಿನಲ್ಲಿತ್ತು. ಆದರೆ ಪುಟ್ಟಣ್ಣನವರು ಮಾತ್ರ ಜಯನಗರದ ಎಂಟನೇ ಬ್ಲಾಕಿನಲ್ಲಿ ಚಿಕ್ಕ ಮನೆಯೊಂದರ ಮಹಡಿಯಲ್ಲಿ ಒಂಟಿಯಾಗಿ

ವಾಸವಿರುವುದಾಗಿಯೂ, ಅವರ ಚಿತ್ರದಲ್ಲಿ ಸಹಾಯಕರಾಗಿ ಕೆಲಸ ಮಾಡುತ್ತಿದ್ದ ಒಂದಿಬ್ಬರು ಹುಡುಗರು ಮತ್ತು "ಎಡಕಲ್ಲು ಗುಡ್ಡದ ಮೇಲೆ" ಚಿತ್ರದಿಂದ ಖ್ಯಾತಿಯಾದ ಚಂದ್ರಶೇಖರ್‌ರವರೂ ಆಗಾಗ್ಗೆ ಪುಟ್ಟಣ್ಣನವರನ್ನು ನೋಡಿಕೊಳ್ಳುತ್ತಾ ಇರುವುದಾಗಿಯೂ ಕೇಳಿದ್ದೆ. ನನಗೆ ಪುಟ್ಟಣ್ಣನವರ ಮೇಲಿದ್ದ ವಿಶ್ವಾಸ ಗೌರವದಿಂದಾಗಿ ಅವರನ್ನು ನೋಡಲು ನನ್ನ ಮನಸ್ಸು ಹಾತೊರೆಯುತ್ತಿತ್ತು. ಆದರೆ ನಾನಾಗಿಯೇ ಹೋದರೆ ನನ್ನನ್ನು ಹಾಡಿಕೊಳ್ಳಲು ಬಂದನೆಂದು ತಿಳಿಯಬಹುದೆಂಬ ಶಂಕೆಯಿಂದ ನಾನು ಹೋಗಲಿಲ್ಲ.

"ಎಡಕಲ್ಲು ಗುಡ್ಡದ ಮೇಲೆ" ಚಿತ್ರದ ಖ್ಯಾತಿಯ ಚಂದ್ರು ನನ್ನ ತಮ್ಮನಿದ್ದಂತೆ. ಆತನಿಗೆ ನನ್ನ ಮತ್ತು ಪುಟ್ಟಣ್ಣನವರ ಮೈತ್ರಿಯ ಆಳ ಎಷ್ಟೆಂಬುದು ತಿಳಿದಿತ್ತು. ನಾನು ಪುಟ್ಟಣ್ಣನವರ ಬಗ್ಗೆ ಎಷ್ಟೊಂದು ಕಾಳಜಿ ಹೊಂದಿರುವೆನೆಂಬುದೂ ತಿಳಿದಿತ್ತು. ಒಂದು ದಿನ ಚಂದ್ರು ನನ್ನ ಮನೆಗೆ ಬಂದು "ನೀನು ಹೋಗಿ ಪುಟ್ಟಣ್ಣನವರನ್ನು ಏಕೆ ನೋಡಬಾರದು. ಅವರೀಗ ಮಾನಸಿಕವಾಗಿ, ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ತುಂಬಾ ನೊಂದಿದ್ದಾರೆ" ಎಂದ. ಅಷ್ಟು ಹೊತ್ತಿಗಾಗಲೇ ನನ್ನ ಅಣ್ಣ ಸಿಂಹರವರೂ ಸಹ ಪುಟ್ಟಣ್ಣನವರು ನನ್ನ ಬಗ್ಗೆ ವಿಚಾರಿಸಿದ್ದಾಗಿ ಹೇಳಿದ್ದರು. ಆದರೂ "ಪುಟ್ಟಣ್ಣನವರು ನನ್ನನ್ನು ತಪ್ಪು ತಿಳಿಯುವುದಿಲ್ಲವೇ" ಎಂದೆ. ಅದಕ್ಕೆ ಚಂದ್ರು "ಪುಟ್ಟಣ್ಣನವರ ಹೃದಯವನ್ನರಿತ ನೀನೂ ಸಹ ಹೀಗೆ ಹೇಳುವೆಯಲ್ಲಾ" ಎಂದ. ಅಂದೇ ಪುಟ್ಟಣ್ಣನವರನ್ನು ನೋಡಲು ಹೋದೆವು.

ನಾವು ಮನೆಗೆ ಕಾಲಿಟ್ಟಾಗ ಚಾಪೆಯ ಮೇಲೆ ಕುಳಿತಿದ್ದ ಪುಟ್ಟಣ್ಣನವರು ಕತ್ತೆತ್ತಿ ನನ್ನನ್ನು ನೋಡಿ ತನ್ನ ಕಣ್ಣನ್ನು ತಾವೇ ನಂಬದಾದರು. ಮೈಯಲ್ಲಿ ಶಕ್ತಿ ಇಲ್ಲದಿದ್ದರೂ ಚಂಗನೆ ಮೇಲೆದ್ದು "ನೀನಾದರೂ ಬಂದೆಯೇನೋ ಅಣ್ಣ" ಎನ್ನುತ್ತಾ ನನಗೆ ತೆಕ್ಕೆ ಬಿದ್ದು ಗೊಳೋ ಎಂದು ಅತ್ತರು. "ನಾನು ಒಂಟಿಯಾಗಿಬಿಟ್ಟೆ ಕಣೋ, ನನ್ನನ್ನು ಯಾರೂ ಕೇಳುವವರಿಲ್ಲ ಕಣೋ. ನನಗಿನ್ನು ಈ ಪ್ರಪಂಚದಲ್ಲಿ ಜಾಗವಿಲ್ಲ ಕಣೋ ಅಣ್ಣ" ಎಂದು ಪ್ರಲಾಪಿಸಿದರು. ನನಗೆ ದುಃಖ ತಡೆಯಲಾಗಲಿಲ್ಲ. ನಾನು ಗಳಗಳನೆ ಅತ್ತುಬಿಟ್ಟೆ. ಈ ದೃಶ್ಯವನ್ನು ನೋಡಲಾರದೆ ಚಂದ್ರು ಕೂಡ ಬಿಕ್ಕಿ ಬಿಕ್ಕಿ ಅತ್ತ. ಅವರಿಗೆ ಎಷ್ಟು ಸಮಾಧಾನ ಮಾಡಿದರೂ ತೃಪ್ತಿಯಾಗದು. ಸುಮಾರು ಒಂದು ಗಂಟೆ ಅತ್ತು ಅತ್ತು ಕಣ್ಣೀರು ಬರಿದಾದ ಮೇಲೆ "ನೀನು ಚೆನ್ನಾಗಿದ್ದೀಯಾ ಅಣ್ಣಾ" ಎಂದರು. ಪುಟ್ಟಣ್ಣನವರು "ಶುಭಮಂಗಳ" ದಿಂದ ನನ್ನನ್ನು ಪ್ರೀತಿಗಾಗಿ "ಅಣ್ಣಾ" ಎಂದೇ ಕರೆಯುತ್ತಿದ್ದರು. "ನನಗೇನು ಚೆನ್ನಾಗಿಯೇ ಇದ್ದೇನೆ, ನೀವು ಹೀಗಿದ್ದೀರಲ್ಲಾ" ಎಂದೆ. "ಇದು ನನ್ನ ಪ್ರಾರಬ್ಧ.

ನಿರ್ದೇಶಕ ಕಣಗಾಲ್ ಪುಟ್ಟಣ್ಣ ಇಂದು ನಿರ್ಗತಿಕನಾಗಿದ್ದಾನೆ. ನನ್ನಿಂದ ಹಣ ಮಾಡಿದ ನಿರ್ಮಾಪಕರು, ನಾನೇ ಸೃಷ್ಟಿಸಿದ ಕಲಾವಿದರು ಎಲ್ಲರೂ ನನ್ನನ್ನು ಮರೆತಿದ್ದಾರೆ" ಎಂದರು. "ಹಾಗೇನಿಲ್ಲ. ಹಾಗೆಲ್ಲ ಏಕೆ ಯೋಚಿಸುವಿರಿ" ಎಂದು ಸಾಂತ್ವನದ ಮಾತನ್ನಾಡಿದೆ.

ಒಮ್ಮೆ ಶುಷ್ಕ ನಗುವನ್ನು ನಕ್ಕ ಪುಟ್ಟಣ್ಣನವರು "ಇಲ್ಲ ಕಣೋ ಅಣ್ಣ, ನನ್ನ ಭಾಗಕ್ಕೀಗ ಪ್ರಪಂಚ ಬದಲಾಗಿದೆ. ನೆನ್ನೆ ಇಡೀ ದಿನ ನಾನು ಊಟ ತಿಂಡಿ ಮಾಡಲಿಲ್ಲ. ಏಕೆ ಗೊತ್ತಾ? ಮೊನ್ನೆ ಒಬ್ಬ ನಿರ್ಮಾಪಕರು ನನ್ನಿಂದ ಒಂದು ಚಿತ್ರ ಮಾಡಿಸುವ ಸಲುವಾಗಿ ಮಾತನಾಡಲು ಬೆಳಗ್ಗೆ ೮.೦೦ ಗಂಟೆಗೆ ಬರುವುದಾಗಿ ಫೋನು ಮಾಡಿದ್ದರು. ಅಂತೆಯೇ ನಿನ್ನೆ ಬೆಳಿಗ್ಗೆಯಿಂದ ರಾತ್ರಿ ೯.೦೦ ಗಂಟೆಯವರೆಗೆ ನಾನಿಲ್ಲದಿದ್ದಾಗ ಬಂದು ಹೋದರೆ ನನ್ನ ಹೊಟ್ಟೆಯ ಮೇಲೆ ಚಪ್ಪಡಿ ಬೀಳುವುದಲ್ಲಾ ಎಂದು ತಿಂಡಿ ಊಟಕ್ಕೂ ಹೋಗದೆ ಕಾದೆ. ಆದರೆ ಅವರು ಬರಲೇ ಇಲ್ಲ" ಎಂದರು. "ಅಯ್ಯೋ ದೇವರೇ ಎಂತಹ ಶಕ್ತಿವಂತನಿಗೆ ಎಂತಹ ಅಸಹಾಯಕತೆಯನ್ನು ಕೊಟ್ಟೆ" ಎಂದು ಮನಸ್ಸಿನಲ್ಲಿಯೇ ಅಂದುಕೊಂಡು "ನಿಮ್ಮಿಂದ ಉಪಕಾರ ಮಾಡಿಸಿಕೊಂಡ ಸ್ವಾರ್ಥಿಗಳು ನಿಮ್ಮನ್ನು ಮರೆತಿರಬಹುದು. ಆದರೆ ಕನ್ನಡಿಗರು ನಿಮ್ಮನ್ನು ಮರೆತಿಲ್ಲ. ನಿಮ್ಮಲ್ಲು ಶಕ್ತಿಯಿದೆ. ಹೊಸ ಕಲಾವಿದರನ್ನು ಸೃಷ್ಟಿಸಿದ್ದೀರಿ. ಸೋತು ಹೋದ ಕಲಾವಿದರಿಗೆ ಪುನರ್ಜನ್ಮ ಕೊಟ್ಟಿದ್ದೀರಿ. ಮಾನಸಿಕ ಸಂಕಷ್ಟಕ್ಕೊಳಗಾದ ಮನುಷ್ಯ ಧೃತಿಗೆಡದೆ ಮುನ್ನಗ್ಗಬೇಕೆಂಬುದನ್ನು ನಿಮ್ಮ ಚಿತ್ರಗಳ ಮುಖಾಂತರ ಸಂದೇಶ ಕೊಟ್ಟ ನೀವೇ ಅದನ್ನು ನಿಮ್ಮ ನಿಜ ಜೀವನದಲ್ಲಿ ಅಳವಡಿಸಿಕೊಳ್ಳದಿದ್ದರೆ ಹೇಗೆ?" ಎಂದೆ. ನನ್ನ ಮಾತು ನಾಟಿತು.

ಆದರೂ ಆರತಿಯವರ ಬಗ್ಗೆ ಮಾತು ತೆಗೆದು ಅಳಲು ಶುರು ಮಾಡಿದರು. ಆಗ ನಾನು ಕಠಿಣನಾಗಬೇಕಾಯಿತು. "ಈ ವಿಚಾರದಲ್ಲಿ ನೀವು ನಿಮ್ಮ ಮೂಗಿನ ನೇರಕ್ಕೆ ಹೇಳುತ್ತಿದ್ದೀರಿ. ಅವರು ನನ್ನದೇನೂ ತಪ್ಪಿಲ್ಲ ಎನ್ನುತ್ತಾರೆ. ಇದು ನಿಮ್ಮ ವೈಯಕ್ತಿಕ ವಿಚಾರ. ಈ ಬಗ್ಗೆ ನಾನು ಯಾರ ಪರವಹಿಸಲೂ ಸಿದ್ಧನಿಲ್ಲ. ನೀವು ಮೋಹದಿಂದ ಹೊರಬಂದ ಹೊರತು ಹಿಂದಿನ ಪುಟ್ಟಣ್ಣನಾಗುವುದಿಲ್ಲ" ಎಂದೆ. ಈ ಮಾತು ಅವರ ಮನಸ್ಸಿಗೆ ಚೆನ್ನಾಗಿಯೆ ನಾಟಿತು. ನನ್ನನ್ನು ತಬ್ಬಿಕೊಂಡು "ನೀನು ಎಷ್ಟೊಂದು ತಿಳಿದುಕೊಂಡಿದ್ದೀಯೋ ಅಣ್ಣ. ಇನ್ನು ಮೇಲೆ ದೃಢಮನಸ್ಕನಾಗುತ್ತೇನೆ" ಎಂದರು ನಗುತ್ತಾ.

ಅಂದಿನಿಂದ ಪುಟ್ಟಣ್ಣನವರನ್ನು ನಾನು ಆಗಾಗ್ಗೆ ಭೇಟಿ ಮಾಡುತ್ತಿದ್ದೆ. ಹೊರಗಡೆ ಕರೆದುಕೊಂಡು ಹೋಗುತ್ತಿದ್ದೆ. ಕೊನೆಯ ಐದು ತಿಂಗಳಂತೂ ಪ್ರತಿದಿನ ಭೇಟಿಯಾಗುತ್ತಿದ್ದೆ. ತಾನು ಒಂಟಿಯಲ್ಲಾ ಎಂಬ ಭಾವನೆ ಅವರಲ್ಲಿ ಮೂಡಲು ಚಂದ್ರು ನಾನು ಪ್ರಯತ್ನಿಸುತ್ತಿದ್ದೆವು. ಒಂದು ದಿನ ಚಂದ್ರು ಬಂದು "ನೀವೇಕೆ ಪುಟ್ಟಣ್ಣನವರಿಂದ ಒಂದು ಚಿತ್ರ ಮಾಡಿಸಬಾರದು" ಎಂದ. ಯೋಚಿಸಿದೆ. ಯೋಜನೆ ಏನೋ ಚೆನ್ನಾಗಿತ್ತು. ನನ್ನ ಗುರುವನ್ನು ಹೊರಗೆ ಎಳೆಯಲು ಇದೊಂದೇ ಮಾರ್ಗವೆನಿಸಿತು. ಆದರೆ ಅದಕ್ಕೆ ಎರಡು ಅಡಚಣೆಗಳಿದ್ದವು. ಒಂದು ನಾನಾಗಲೇ "ಶಿಕಾರಿ" ಚಿತ್ರ ತೆಗೆದು ಹಣ ಕಳೆದುಕೊಂಡಿದ್ದೆ, ಎರಡನೆಯದು ತಾನು ಪಾತ್ರ ಮಾಡಲು ಶ್ರೀನಾಥ್ ಸ್ವಾರ್ಥಕ್ಕಾಗಿ ಈ ಯೋಜನೆಯನ್ನು ಹಾಕಿರಬಹುದೆ? ಎಂದು ಪುಟ್ಟಣ್ಣನವರು ಯೋಚಿಸಬಹುದು ಎಂಬುದು.

ಆದರೂ ಧೈರ್ಯಮಾಡಿ ಹಲವೇ ಸ್ನೇಹಿತರೊಡನೆ ಒಂದು ಚಿತ್ರ ನಿರ್ಮಾಣ ಸಂಸ್ಥೆ ಕಟ್ಟಿದೆ. ಈ ವಿಚಾರ ಪುಟ್ಟಣ್ಣನವರಿಗೆ ತಿಳಿಯಿತು. ಆ ದಿನವೇ ಪುಟ್ಟಣ್ಣನವರು ಇದ್ದಕ್ಕಿದ್ದ ಹಾಗೇ ನನ್ನ ಮನೆಗೆ ಬಂದರು. ಅವರ ಕಣ್ಣಲ್ಲಿ ನೀರು ತುಂಬಿತ್ತು, "ಬಾರೋ ಅಣ್ಣ, ನಿನ್ನನ್ನೇ ಇಟ್ಟು ಚಿತ್ರ ಮಾಡ್ತೀನಿ. ನಿನಗಾಗೇ ಚಿತ್ರ ಮಾಡ್ತೀನಿ, ಇದುವರೆಗೆ ಕಥಾನಾಯಕಿ ಪ್ರಧಾನವಾದ ಚಿತ್ರ ಮಾಡುತ್ತಿದ್ದೆ. ಈಗ ನಾಯಕ ಪ್ರಧಾನವಾದ ಚಿತ್ರ ಮಾಡ್ತೀನಿ. ಇದುವರೆಗೆ ಶ್ರೀನಾಥ್ ಮಾಡದೇ ಇರುವುದನ್ನು ನಾನು ಮಾಡಿಸ್ತೀನಿ, ಚಿತ್ರರಂಗದಿಂದ ಕಣ್ಮರೆಯಾಗಿದ್ದ ನನ್ನನ್ನು ಹೀರೋ ಮಾಡಲು ಹೊರಟ ನಿನ್ನ ಋಣ ಹೇಗೆ ತೀರಿಸಲಪ್ಪಾ" ಎನ್ನುತ್ತಾ ಗೋಳೋ ಎಂದು ಅತ್ತರು.

ಮತ್ತೊಮ್ಮೆ ನನಗೆ ಚಿತ್ರರಂಗದಲ್ಲಿ ಪುನರ್ಜನ್ಮ ಉದಯಿಸಿತು. "ಓಂ ನಾಮದಿಂದ ನನಗೆ ಪಾಠ ಪ್ರಾರಂಭಿಸಿದರು. ಹೀಗೆ ಮಾತನಾಡಬೇಕು. ಆಗ ಮುಖದಲ್ಲಿನ ಭಾವನೆ ಹೇಗೆ ವ್ಯಕ್ತವಾಗುತ್ತಿರಬೇಕು. ಆಗ ಹೇಗೆ ಹೆಜ್ಜೆಹಾಕಬೇಕು ಎಂದೆಲ್ಲಾ ವಿವರವಾಗಿ ಬಿಡಿಸಿ ಹೇಳಿದರು. ನಾನು ಆಶ್ರಮದ ವಿದ್ಯಾರ್ಥಿಯಾದೆ, ಅವರು ಕಠಿಣ ಗುರುವಾದರು. ಚಿತ್ರೀಕರಣ ಪ್ರಾರಂಭಿಸುವ ಮುನ್ನಾ ಎಲ್ಲಿ ನಿನ್ನ ನಡಿಗೆಯನ್ನು ಬದಲಾಯಿಸು ಎಂದಿದ್ದೆನಲ್ಲಾ ತೋರಿಸು" ಎಂದರು. ನನಗಾಗಲೇ ನನ್ನ ಕಲಿಕೆಯ ಬಗ್ಗೆ ನಂಬಿಕೆ ಇತ್ತು. ಅದನ್ನು ನನ್ನ ಗುರುವಿನ ಮುಂದೆ ಪ್ರದರ್ಶಿಸುವ ಕಾತರವೂ ಇತ್ತು, ಗುರುಗಳ ಅಪ್ಪಣೆಯಂತೆ ನಡೆದೆ. ಬರೆ ನಡೆಯಲಿಲ್ಲ, ನನ್ನ ಪಾತ್ರದ ಮಾತುಗಳನ್ನು ಆಡುತ್ತಾ ನಡೆದೆ, ಪುಟ್ಟಣ್ಣನವರು

ಆನಂದದಿಂದ ಕೂಗಿದರು "ಲೋ ಅಣ್ಣಾ, ಇದೇ ಇದೇ ನಾನು ನಿನ್ನಿಂದ ನಿರೀಕ್ಷಿಸಿದ ನಡಿಗೆ" ಎಂದರು.

ಮೊದಲ ಸಲ "ಮಾನಸ ಸರೋವರ"ಕ್ಕಾಗಿ ನನ್ನೆದುರಿಗೆ ಕ್ಯಾಮರಾ ಇಟ್ಟಾಗ ಪುಟ್ಟಣ್ಣನವರು ಅತ್ಯಂತ ಮೌನವಾಗಿದ್ದರು. ಅವರ ಶರೀರ ನಡುಗುತ್ತಿತ್ತು, ಅಲ್ಲಿಗಾಗಲೇ ಅವರು ಕ್ಯಾಮರಾ ಮುಟ್ಟಿ ಸುಮಾರು ಎರಡು ವರ್ಷಗಳ ಹತ್ತಿರವಾಗಿತ್ತು. ಈಗ ಅವರು ಹಿಂದಿನ ಪುಟ್ಟಣ್ಣನವರಾಗಿರಲಿಲ್ಲ, ಅವರು ಗಡ್ಡ ಬಿಟ್ಟಿದ್ದರು. ಅವರ ಗಡ್ಡ ಮೀಸೆಗಳೆಲ್ಲಾ ಬಿಳಿಯಾಗಿ ಹೋಗಿತ್ತು, ಶರೀರವೆಲ್ಲಾ ಸೊರಗಿ ಮುದುಕರಂತಾಗಿದ್ದರು. ತಾನು ಹಿಂದಿನ ಧೀರ ಪುಟ್ಟಣ್ಣನಾಗಬಲ್ಲನೆ ಎಂಬ ಭಯ ಅವರಲ್ಲಿದ್ದಂತಿತ್ತು. ಕ್ಯಾಮರಾ ಇಟ್ಟ ಮೇಲೆ ನನ್ನ ಕಡೆ ತಿರುಗಿ "ಕ್ಯಾಮರಾ ನಾನು ಸರಿಯಾಗಿ ಇಟ್ಟೆನಾ" ಎಂದು ಬಿಕ್ಕಿದರು. ಆ ಮೇಲೆ ಕಣ್ಣೊರೆಸಿಕೊಂಡು "ಸ್ಟಾರ್ಟ್" ಎಂದರು. ನನಗೆ ಪಾತ್ರ ವಹಿಸಲು ಕಷ್ಟವಾಗಲಿಲ್ಲ, ಏಕೆಂದರೆ ಪುಟ್ಟಣ್ಣನವರ ಆಗಿನ ವ್ಯಕ್ತಿತ್ವವೇ ನನ್ನ ಪಾತ್ರವಾಗಿತ್ತು.

"ಮಾನಸ ಸರೋವರ" ಮುಗಿಯುವವರೆವಿಗೆ ಪುಟ್ಟಣ್ಣನವರು ನನ್ನನ್ನು ಹೆಚ್ಚು ಹೊರಗಿನ ಸಂಪರ್ಕಕ್ಕೆ ಬಿಡದೆ ಪಾತ್ರದಲ್ಲೇ ಮುಳುಗಿಸಿದ್ದರು. ಚಿತ್ರದ ಕೊನೆಯ ನಾಲ್ಕು ರೀಲುಗಳನ್ನು ತೆಗೆಯುವಾಗಲಂತೂ ನನ್ನನ್ನು ಹುಚ್ಚನನ್ನಾಗಿಯೇ ಮಾಡಿದ್ದರು. ನನ್ನ ಜೀವನದಲ್ಲಿ ಅದೊಂದು ಮರೆಯಲಾಗದ ಅವಧಿ ಮತ್ತು ಘಟನೆ.

ಚಿತ್ರೀಕರಣ ಮಾಡುವಾಗ ಚಿತ್ರದಲ್ಲಿ ನಾವು ನೋಡುವಂತೆ ಮೊದಲಿನಿಂದ ಕೊನೆಯವರೆವಿಗೆ ಒಂದೇ ಸಮನೆ ಚಿತ್ರವನ್ನು ತೆಗೆಯುತ್ತಾ ಹೋಗುವುದಿಲ್ಲವಷ್ಟೆ. ಉದಾಹರಣೆಗೆ ಕಥಾನಾಯಕ ಬೆಳಿಗ್ಗೆ ಮನೆಯಿಂದ ಆಫೀಸಿಗೆ ಹೋಗಿ ಮಧ್ಯಾಹ್ನ ಮನೆಗೆ ಊಟಕ್ಕೆ ಬಂದು, ಊಟವಾದ ಮೇಲೆ ಪುನಃ ಆಫೀಸಿಗೆ ಹೋಗಿ, ಸಂಜೆ ಪುನಃ ಮನೆಗೆ ಬರುತ್ತಾನೆ, ಇಂತಹ ದೃಶ್ಯಗಳಲ್ಲಿ ಚಿತ್ರ ತೆಗೆಯುವಾಗ ಅವನು ಬೆಳಿಗ್ಗೆ ಮನೆ ಬಿಟ್ಟಿದ್ದು, ಮಧ್ಯಾಹ್ನ ಮನೆಗೆ ಊಟಕ್ಕೆ ಬಂದದ್ದು, ಊಟ ಮಾಡಿ ಪುನಃ ಆಫೀಸಿಗೆ ಹೊರಡುವುದು, ಸಂಜೆ ಪುನಃ ಮನೆಗೆ ಬಂದದ್ದು ಈ ನಾಲ್ಕು ಷಾಟ್‌ಗಳನ್ನೂ ಒಂದೇ ಅವಧಿಯಲ್ಲಿ ತೆಗೆದು ಆಫೀಸ್‌ನಲ್ಲಿ ನಡೆಯುವ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ನಾಲ್ಕು ಷಾಟ್‌ಗಳನ್ನೂ ಒಂದೇ ಅವಧಿಯಲ್ಲಿ ಆಫೀಸಿನಲ್ಲಿ ತೆಗೆಯುತ್ತಾರೆ.

ಆದರೆ ಪುಟ್ಟಣ್ಣನವರು ನನ್ನ ಹುಚ್ಚನ ಪಾತ್ರವನ್ನು ಯಥಾವತ್ತಾಗಿ ತರುವ ಸಲುವಾಗಿ ಚಿತ್ರದಲ್ಲಿ ನಡೆಯುವಂತೆಯೇ ಕಂಟಿನ್ಯೂಯಸ್ ಆಗಿ ತೆಗೆಯಲು

ನಿರ್ಧರಿಸಿದ್ದರು. ಒಂದು ಷಾಟನ್ನು ಒಂದು ಕಡೆ ತೆಗೆದ ಮೇಲೆ ಅದರ ಮುಂದಿನ ಕ್ರಮವಾದ ಷಾಟನ್ನು ತೆಗೆಯಲು ಇಲ್ಲಿಂದ ಮೂರು ಮೈಲಿ ಇರಲಿ ಅಥವಾ ಮೂವತ್ತು ಮೈಲಿಯಿದ್ದರೂ ಪುನಃ ಅಲ್ಲಿಯೇ ಬರುತ್ತಿದ್ದರು. ಹೀಗೆ ಸುಮಾರು ಹದಿನಾಲ್ಕು ದಿವಸಗಳ ಚಿತ್ರೀಕರಣ ಮಾಡಿದ ಮೇಲೆ ಇನ್ನು ಖಂಡಿತ ನಾನು ಹುಚ್ಚನೇ ಆಗಿ ಬಿಡುವೆನೇನೋ ಎಂಬ ಭಯವಾಯಿತು. ನಾನು ನನ್ನ ಮನದ ಅಳಲನ್ನು ಪುಟ್ಟಣ್ಣನವರಲ್ಲಿ ತೋಡಿಕೊಳ್ಳುತ್ತಾ "ಇನ್ನು ನನಗೆ ತಡೆಯಲು ಸಾಧ್ಯವಿಲ್ಲ. ದಯವಿಟ್ಟು ಮುಗಿಸಿ ಬಿಡಿ"ಎಂದೆ. ಆಗ ಪುಟ್ಟಣ್ಣನವರು "ಹಾಗಾದರೆ ಈಗ ನಿನ್ನ ಮುಂದೆ ಕ್ಯಾಮರಾ ಇಡುತ್ತೇನೆ. ನೀನು ರಿಹರ್ಸಲ್ ಮಾಡು, ಎಷ್ಟು ಬೇಕಾದರೂ ವೇಳೆ ತೆಗೆದುಕೋ ನಿನಗೆ ಪರಿಪಕ್ವವಾಗಿ ಮಾಡಬಲ್ಲೆ ಎನಿಸಿದಾಗ ಹೇಳು, ಇದು ಪರಾಕಾಷ್ಠತೆಯ ದೃಶ್ಯ (ಕ್ಲೈ ಮ್ಯಾಕ್ಸ್ ಸೀನ್) ಎಂಬುದನ್ನು ಮರೆಯಬೇಡ" ಎಂದು ಹೇಳಿ ನನ್ನ ಮುಂದೆ ಕ್ಯಾಮರಾ ಇಟ್ಟು ನನ್ನನ್ನೇ ನೋಡುತ್ತಾ ನಿಂತರು. ಆ ದೃಶ್ಯವೇ ಚಿತ್ರದ ಜೀವಾಳವಾಗಿತ್ತು. ಅಲ್ಲಿಯೇ ನನ್ನ ಪಾತ್ರದ ಉತ್ತುಂಗ ತುದಿಯನ್ನು ನಾನು ಮುಟ್ಟಬೇಕಿತ್ತು.

ಆ ದೃಶ್ಯದಲ್ಲಿ ನಾನು ಪ್ರೇಮಿಸಿದ ಹುಡುಗಿ ನಿಮಗೆ ಹುಚ್ಚು ಹಿಡಿದಿದೆ, ಎಂದಾಗ ನಾನು ನಗಬೇಕು. ಅಳಬೇಕು, ಅಳಬೇಕು, ನಗಬೇಕು. ನಾನು ಪಾತ್ರ ನಿರ್ವಹಿಸಲು ಸಿದ್ಧನಾದೆ, ಅತ್ತೆ, ನಕ್ಕೆ, ಅತ್ತೆ, ನಕ್ಕೆ, ಪುನಃ ಅತ್ತೆ, ನಕ್ಕೆ, ಪುನಃ ಅತ್ತೆ, ನಕ್ಕೆ, ಪುಟ್ಟಣ್ಣನವರು ಸ್ಟಾರ್ಟ್ ಎನ್ನಲಿಲ್ಲ. ನನಗೆ ನಕ್ಕು ಅತ್ತು ಸಾಕಾಗಿ ಹೋಗಿತ್ತು. "ಸಾರ್ ಇನ್ನು ನನ್ನಿಂದ ಸಾಧ್ಯವಿಲ್ಲ. ಷಾಟ್ ತೆಗೆಯಿರಿ" ಎಂದೆ ಪುಟ್ಟಣ್ಣನವರು ನನ್ನನ್ನು ತಬ್ಬಿಕೊಂಡು "ಅಣ್ಣ ಚೆನ್ನಾಗಿ ಮಾಡಿದೆ ಕಣೋ ಬಹಳ ಚೆನ್ನಾಗಿ ಮಾಡಿದೆ" ಎಂದರು, ಆಮೇಲೆ ನನಗೆ ಗೊತ್ತಾಯಿತು. ಅವರು ಸ್ವಲ್ಪ ದೂರದಲ್ಲಿ ಕ್ಯಾಮರಾ ಇಟ್ಟಾಗಲೇ "ಸ್ಟಾರ್ಟ್" ಮಾಡಿದ್ದರು ಎಂದು.

"ಮಾನಸ ಸರೋವರ" ಚಿತ್ರ ತೆರೆಗೆ ಸಿದ್ಧವಾದ ಮೇಲೆ ಮದರಾಸಿನಲ್ಲಿ ಚಿತ್ರರಂಗಕ್ಕೆ ಸಂಬಂಧಿಸಿದ ಸುಮಾರು ಮೂವತ್ತು ಜನ ಪ್ರತಿಷ್ಠರನ್ನು ಕರೆದು ಪ್ರದರ್ಶನ ತೋರಿಸಿದೆವು. ಅವರೆಲ್ಲರೂ ಚಿತ್ರ ಮುಗಿದ ತಕ್ಷಣ "ಬರ್ತೇನೆ ಪುಟ್ಟಣ್ಣನವರೆ" ಎಂದು ಮಾತ್ರ ಹೇಳುತ್ತಾ ಹೊರಟು ಹೋದರು. ಚಿತ್ರದ ಬಗ್ಗೆ ಒಂದು ಮಾತೂ ಸಹ ಹೇಳಲಿಲ್ಲ. ಪುಟ್ಟಣ್ಣನವರು ಅಧೀರರಾದರು. ಏಕೆಂದರೆ ಈ ಚಿತ್ರದ ವಿಜಯದ ಮೇಲೆ ಅವರ ಅಳಿವು ಉಳಿವು ನಿಂತಿತ್ತು.

ಬೆಂಗಳೂರಿನಲ್ಲಿ ಒಂದು ಪ್ರದರ್ಶನ ಏರ್ಪಡಿಸಿದೆವು. ಈ ಪ್ರದರ್ಶನಕ್ಕೆ ೬೦೦–೭೦೦ ಜನ ಬಂದಿದ್ದರು. ಪ್ರದರ್ಶನ ಮುಗಿದ ಮೇಲೆ ಅವರಲ್ಲಿ ೫–

೬ ಜನ ಮಾತ್ರ ಬಂದು "ಬರೋಣವೇ" ಎಂದು ಹೇಳಿ ಹೋದರು. ಪುಟ್ಟಣ್ಣನವರಿಗೆ ಆತಂಕ ಹೆಚ್ಚಾಯಿತು. ಚಿತ್ರದ ಬಿಡುಗಡೆಯ ಹಿಂದಿನ ರಾತ್ರಿ ೯.೦೦ ಗಂಟೆಗೆ ನನಗೆ ಫೋನು ಮಾಡಿ "ಅಣ್ಣಾ ನೀನೇನೂ ಯೋಚಿಸಬೇಡ. ಚಿತ್ರ ತುಂಬಾ ಚೆನ್ನಾಗಿ ಬಂದಿದೆ" ಎಂದು ಸಾಂತ್ವನ ಮಾಡಿ ಫೋನನ್ನಿಟ್ಟರು. ಪುನಃ ರಾತ್ರಿ ೯.೩೦ಕ್ಕೆ ಫೋನ್ ಮಾಡಿ "ಅಣ್ಣಾ ಈ ಚಿತ್ರ ಓಡುತ್ತೆ ಎನಿಸುತ್ತಾ ನಿನಗೆ. ನನಗೇಕೋ ಭಯವಾಗುತ್ತೆ" ಎಂದು ತಮ್ಮ ಆತಂಕವನ್ನು ವ್ಯಕ್ತಪಡಿಸಿದರು. ಆಗ ನಾನು ಅವರಿಗೆ ಸಮಾಧಾನ ಮಾಡಬೇಕಾಯಿತು. ಆದರೂ ಅವರ ಆತಂಕ ಅಲ್ಲಿಗೆ ನಿಲ್ಲಲಿಲ್ಲ. ಪುನಃ ಫೋನು ಮಾಡಿ ನನ್ನನ್ನು ಅವರಲ್ಲಿಗೆ ಕರೆಸಿಕೊಂಡರು. ಚಿತ್ರದಕಥೆ ಬಗ್ಗೆ, ಒಂದೊಂದು ಷಾಟ್ ಬಗ್ಗೆ, ದೃಶ್ಯದ ಬಗ್ಗೆ, ಸಂಗೀತದ ಬಗ್ಗೆ ಪ್ರೇಕ್ಷಕರ ದೃಷ್ಟಿಯಿಂದ ವಿಮರ್ಶೆ ಮಾಡಿದರು. "ಹೌದಲ್ಲ ಅಣ್ಣ. ಚಿತ್ರ ಚೆನ್ನಾಗಿ ಬಂದಿದೆ. ಯೋಚನೆ ಬೇಡ. ಹೋಗಿನ್ನು ಮಲಗು" ಎಂದರು. ಆಗ ಆಗಲೇ ಮಧ್ಯರಾತ್ರಿಯಾಗಿತ್ತು.

"ಮಾನಸ ಸರೋವರ" ಕೆಂಪೇಗೌಡ ರಸ್ತೆಯ ಅಲಂಕಾರ ಚಿತ್ರಮಂದಿರದಲ್ಲಿ ಬಿಡುಗಡೆಯಾಯಿತು. ಪುಟ್ಟಣ್ಣನವರು ಮತ್ತು ನಾನು ಸಾಮಾನ್ಯ ವೇಶದಲ್ಲಿ ಮೊದಲನೇ ಪ್ರದರ್ಶನದ ಚಿತ್ರ ಬಿಡುವ ವೇಳೆಗೆ ಆ ಚಿತ್ರಮಂದಿರಕ್ಕೆ ಹೋಗಿ ಚಿತ್ರ ಮಂದಿರದ ಮುಂದಿನ ಒಂದೊಂದು ಕಂಬದ ಮಗ್ಗುಲಲ್ಲಿ ಒಬ್ಬೊಬ್ಬರು ಮರೆಯಾಗಿ ನಿಂತೆವು. ಪುಟ್ಟಣ್ಣನವರು ಬಹಳ ಉದ್ವಿಗ್ನರಾಗಿದ್ದರು. ಈ ಚಿತ್ರ ಜಯಪ್ರದವಾಗದಿದ್ದಲ್ಲಿ ಅವರು ಹುಚ್ಚರಾಗುವ ಸಂಭವವಿತ್ತು. ಅವರಿಗೆ ನಿಲ್ಲಲೂ ತ್ರಾಣವಿಲ್ಲದೆ ಕಂಬವನ್ನೇ ಆಶ್ರಯವನ್ನಾಗಿ ಮಾಡಿಕೊಂಡು ನಿಂತಿದ್ದರು.

ಮೊದಲನೆಯ ಪ್ರದರ್ಶನ ಮುಗಿದು ಚಿತ್ರಮಂದಿರದ ಬಾಗಿಲುಗಳು ತೆರೆದವು. ಜನ ಮೌನವದನರಾಗಿದ್ದರು. ಹಲವರು ಕಣ್ಣೀರು ಒರೆಸಿಕೊಳ್ಳುತ್ತಿದ್ದರು. ಮತ್ತೆ ಕೆಲವರು "ಆಹಾ ಎಷ್ಟು ಚೆನ್ನಾಗಿ ಮಾಡಿದ್ದಾನೆ" ಎನ್ನುತ್ತಿದ್ದರು.

ಜನಜಂಗುಳಿ ಕರಗಿ ಹೋಯಿತು. ಪುಟ್ಟಣ್ಣನವರಿಗೆ ಆನಂದಾತಿರೇಕದಿಂದಾಗಿ ಕಣ್ಣೀರು ಒತ್ತರಿಸಿ ಬರುತ್ತಿತ್ತು. ಅವರು ಸ್ವಲ್ಪ ಸ್ವಲ್ಪ ಹೆಜ್ಜೆಯಿಟ್ಟು ನನ್ನ ಕಡೆಗೆ ಬಂದರು. ನಾನು ಸಹಾ ನಿಧಾನವಾಗಿ ಅವರ ಕಡೆ ಹೊರಟೆ. ನಾನು ಬರುತ್ತಲೇ ತಮ್ಮ ಬಲಗೈಯನ್ನು ಮುಷ್ಟಿಮಾಡಿಕೊಂಡು ಹುಚ್ಚರಂತೆ ನಗುತ್ತಾ ನನ್ನನ್ನು ಗುದ್ದಿ ಗುದ್ದಿ "ಜನ ಒಪ್ಪಿದರು ಕಣೋ. ಜನ ಒಪ್ಪಿದರು" ಎಂದು ಹೇಳುತ್ತಾ ನನ್ನನ್ನು ಆಲಂಗಿಸಿಕೊಂಡು ಗೊಳೋ ಎಂದು ಅತ್ತರು.

ಇಷ್ಟನ್ನು ದೀರ್ಘವಾಗಿ ಮನ ಕರಗುವಂತೆ ವಿವರಿಸಿದ ಶ್ರೀನಾಥ್‌ರವರು ತಾವು ಅಳುವುದಕ್ಕೆ ಪ್ರಾರಂಭಿಸಿದರು. ಆಗಲೇ ಸುಮಾರು ಎರಡು ಗಂಟೆ. "ತುಂಬಾ ವಂದನೆಗಳು. ಶ್ರೀನಾಥ್‌ರವರೆ ನಾವಿನ್ನು ಬರೋಣವೇ" ಎಂದೆವು. "ಇಲ್ಲ ಸಾರ್ ಇನ್ನು ಸ್ವಲ್ಪ ಇದೆ. ಕೇಳಿಕೊಂಡು ಹೋಗಿ" ಎಂದು ಪುನಃ ಹೇಳಲು ಪ್ರಾರಂಭಿಸಿದರು.

ಪುಟ್ಟಣ್ಣನವರು ನಮ್ಮನ್ನಗಲಿದ್ದರು. ಅವರ ಪಾರ್ಥಿವ ಶರೀರ ರುದ್ರಭೂಮಿಯಲ್ಲಿ ಮಲಗಿತ್ತು. ಆಗ ನಮ್ಮ ಸಿನಿಮಾದವರ ನಿಜವಾದ ನಾಟಕ ನೋಡಬೇಕಿತ್ತು. ಅವರಿಂದ ಪರಿಚಯಿಸಲ್ಪಟ್ಟ, ಅವರಿಂದ ಪುನರ್ಜನ್ಮ ಪಡೆದು ಅವರಿಂದ ಹಣ ಮಾಡಿಕೊಂಡ ಮತ್ತು ಅವರನ್ನು ಈ ಸ್ಥಿತಿಗೆ ತಂದ ಎಲ್ಲರೂ ಅಲ್ಲಿದ್ದರು. ಅದರಲ್ಲಿ ಅವರ ಅಜ್ಞಾತವಾಸ ಕಾಲದಲ್ಲಿ ಚಿತ್ರ ಮಾಡುವ ಬಗ್ಗೆ ಮಾತನಾಡಲು ಬರುತ್ತೇನೆಂದು ಹೇಳಿ ಪುಟ್ಟಣ್ಣನವರನ್ನು ತಿಂಡಿ ಊಟವಿಲ್ಲದೆ ಬೆಳಿಗ್ಗೆಯಿಂದ ಕಾಯಿಸಿದ ನಿರ್ಮಾಪಕರೂ ಇದ್ದರು. ಚಿತ್ರ ಮಾಡಲು ಚಿತ್ರಕಥೆ ಬರೆಯಿರಿ ಎಂದು ಪುಟ್ಟಣ್ಣನವರಿಗೆ ದೊಡ್ಡ ಹೋಟೆಲ್ ಒಂದರಲ್ಲಿ ರೂಮು ಮಾಡಿಕೊಟ್ಟು ಆಮೇಲೆ ಅವರನ್ನು ತಿರುಗಿಯೂ ನೋಡದೆ ಪುಟ್ಟಣ್ಣನವರು ಯಾರಿಂದಲೋ ಸಾಲ ತಂದು ರೂಮು ಬಾಡಿಗೆ ಕೊಟ್ಟು ಹೊರ ಬರುವಂತೆ ಮಾಡಿದ ನಿರ್ಮಾಪಕನೊಬ್ಬನೂ ಆ ಗುಂಪಿನಲ್ಲಿದ್ದ. ಪುಟ್ಟಣ್ಣನವರು ಅಜ್ಞಾತವಾಸ ಇದ್ದ ಕಾಲದಲ್ಲಿ ತನ್ನಿಂದ ಹಣ ಮಾಡಿದ ನಿರ್ಮಾಪಕನಿಗೆ ಒಂದು ಚಿತ್ರ ಮಾಡಲು ಕೇವಲ ಸಾಲವನ್ನಾದರೂ ಕೊಡಿ ಎಂದರೂ ಕೊಡದ ಮತ್ತೊಬ್ಬ ನಿರ್ಮಾಪಕನೂ ಅಲ್ಲಿದ್ದ. ಅವರ ದುಃಖದ ಪ್ರದರ್ಶನವನ್ನು ನೋಡಬೇಕಿತ್ತು. ಇವರೆಲ್ಲರೂ ಪುಟ್ಟಣ್ಣನವರು ಅಜ್ಞಾತವಾಸವಿದ್ದ ಆ ಹದಿನಾರು ತಿಂಗಳು ಎಲ್ಲಿದ್ದರು ಎಂಬುದೇ ನನಗೆ ಆಶ್ಚರ್ಯವಾಗಿತ್ತು" ಎಂದು ಹೇಳಿ ತಮ್ಮ ಮಾತು ಮುಗಿಸಿದರು.

◆

## ಡಾ. ರಾಜ್‌ಕುಮಾರ್, ಚಲನಚಿತ್ರ ಕಲಾವಿದ

ಡಾ. ರಾಜ್‌ಕುಮಾರ್‌ರವರ ಬಿಡುವಿಲ್ಲದ ಚಿತ್ರೀಕರಣ ಕಾರ್ಯಕ್ರಮದಲ್ಲಿ ಅವರನ್ನು ಭೇಟಿ ಮಾಡುವುದೇ ನನಗೊಂದು ಸಮಸ್ಯೆಯಾಯಿತು. ಕೊನೆಗೊಮ್ಮೆ ಅವರ ಪತ್ನಿ ಪಾರ್ವತಮ್ಮನವರ ಅಣತಿಯಂತೆ ಚಾಮುಂಡೇಶ್ವರಿ ಸ್ಟುಡಿಯೋಗೆ ಹೋದಾಗ ಫ್ಲೋರಿನ ಹೊರಗಡೆ "ಭಾಗ್ಯದ ಲಕ್ಷ್ಮೀ ಬಾರಮ್ಮ" ಚಿತ್ರದ ಚಿತ್ರೀಕರಣಕ್ಕೆ ಸಿದ್ಧರಾಗಿದ್ದ ರಾಜ್‌ಕುಮಾರ್‌ರವರು ಪಟ್ಟೆಪಟ್ಟೆಯ ಸ್ಲ್ಯಾಕ್ ಧರಿಸಿ ಅದರ ಮೇಲೆ ಟೈಟ್ ಪ್ಯಾಂಟ್ ತೊಟ್ಟು ಕಾಲೇಜು ವಿದ್ಯಾರ್ಥಿಯಂತೆ ಮಿಂಚುತ್ತಾ ತಮ್ಮ ಬಾಳ ಸಂಗಾತಿ ಪಾರ್ವತಮ್ಮನವರ ಜೊತೆ ಮಾತಿನಲ್ಲಿದ್ದರು. ನಮ್ಮ ಬರುವಿಕೆಯನ್ನು ಅವರ ಸರಸ ಸನ್ನಿವೇಶದ ರಸಭಂಗವೆಂದು ಭಾವಿಸದೆ ಸ್ವಾಗತಿಸಿ ಎದುರು ಕೂರಿಸಿಕೊಂಡು ಪುಟ್ಟಣ್ಣನವರ ಬಗ್ಗೆ ಹೇಳಲು ಪ್ರಾರಂಭಿಸಿದರು.

ಪುಟ್ಟಣ್ಣನವರೊಬ್ಬ ಮಹಾನ್ ಕಲಾವಿದ ಮತ್ತು ಅತೀ ಶ್ರೇಷ್ಠ ನಿರ್ದೇಶಕ ನನ್ನ ಮತ್ತು ಅವರ ಪರಿಚಯ ೨೫ ವರ್ಷಗಳಷ್ಟು ಹಳೆಯದು. ಆಗ ಅವರು ಬಿ.ಆರ್. ಪಂತುಲುರವರೊಂದಿಗೆ ಸಹ ನಿರ್ದೇಶಕರಾಗಿದ್ದರು. ನಾನು ಪಂತುಲು ಅವರ "ಸಾಕುಮಗಳು" ಚಿತ್ರದಲ್ಲಿ ನಟಿಸುತ್ತಿದ್ದಾಗಲೆ ಅವರ ಪ್ರತಿಭೆಯನ್ನು ಅರಿತಿದ್ದೆ. ಈ ವ್ಯಕ್ತಿ ಅಸಾಧಾರಣರಾಗುತ್ತಾರೆಂದು ಆಗಲೇ ನನಗೆ ಅನ್ನಿಸಿತ್ತು. ಅದನ್ನು ಅವರೊಂದಿಗೆ ಹೇಳಿದ್ದೆ ಕೂಡ.

ಪುಟ್ಟಣ್ಣನವರು ಕೆಲಸದಲ್ಲಿ ತೋರಿಸುತ್ತಿದ್ದ ಶ್ರದ್ಧೆ, ಭಕ್ತಿ ಅವರನ್ನು ಉತ್ತಮ ನಿರ್ದೇಶಕನ ಸ್ಥಾನಕ್ಕೇರಿಸಿತು. ಅವರು ತನಗೆ ಸರಿ ಎನಿಸಿದುದನ್ನು ನಿರ್ಭೀತಿಯಿಂದ ಅನುಷ್ಠಾನಗೊಳಿಸುತ್ತಿದ್ದರು. ನಾನೊಬ್ಬ ಪ್ರೇಕ್ಷಕನಾಗಿ ಪುಟ್ಟಣ್ಣನವರ ರಸಿಕನಾಗಿ ಹೇಳುತ್ತಿದ್ದೇನೆ. ಅವರ ಹಲವಾರು ಚಿತ್ರಗಳನ್ನು ಹತ್ತಾರು ಸಲ ನೋಡಿ ಆನಂದಿಸಿದ್ದೇನೆ. ಅವರು ಬರೇ ನಿರ್ದೇಶಕ ಮಾತ್ರ ಆಗಿರಲಿಲ್ಲ. ಕಲಾವಿದರಾಗಿದ್ದರು, ತಾಂತ್ರಿಕಜ್ಞರಾಗಿದ್ದರು. ತಲ್ಲೀನತೆಯನ್ನು ಮೈಗೂಡಿಸಿಕೊಂಡಿದ್ದರು. ಯಾವುದೇ ಸನ್ನಿವೇಶವನ್ನು ಮನ ಮುಟ್ಟುವಂತೆ ಚಿತ್ರೀಕರಿಸುವ ಭಾರತದ ಉತ್ತಮ ನಿರ್ದೇಶಕರಲ್ಲಿ ಅವರೊಬ್ಬರಾಗಿದ್ದರು.

ನನಗೆ ಪುಟ್ಟಣ್ಣನವರ ಬಗ್ಗೆ ಅಪಾರವಾದ ಗೌರವ. ಅವರಿಗೂ ಅಷ್ಟೆ ನಾನೆಂದರೆ ಅತಿಯಾದ ಪ್ರೀತಿ. ಅವರ ನಿರ್ದೇಶನದಲ್ಲಿ ನಾನು ಅಭಿನಯಿಸಿದ ಅವರ ಮೊದಲ ಚಿತ್ರ "ಮಲ್ಲಮ್ಮನ ಪವಾಡ". ಅದರ ಚಿತ್ರೀಕರಣ ಬೆಂಗಳೂರಿನ ಸಮೀಪ ಆನೇಕಲ್ ಗ್ರಾಮದ ಹತ್ತಿರ ನಡೆಯುತ್ತಿದ್ದಾಗ ಅಲ್ಲಿನ ಸ್ಥಳೀಯರು ನನಗೊಂದು ಸನ್ಮಾನ ಸಮಾರಂಭ ಏರ್ಪಡಿಸಿದ್ದರು. ಅದಕ್ಕೆ ಪುಟ್ಟಣ್ಣನವರನ್ನು ಕರೆದುಕೊಂಡು ಹೋದೆ. ಅಲ್ಲಿ ವೇದಿಕೆಯ ಮೇಲೆ ನನಗಾಗಿ ಒಂದೇ ಒಂದು ದೊಡ್ಡ ಕುರ್ಚಿಯ ವ್ಯವಸ್ಥೆ ಮಾಡಲಾಗಿತ್ತು. ಅದನ್ನು ನೋಡಿದ ನನಗೆ ನನ್ನ ನಿರ್ದೇಶಕರು ಜೊತೆಯಲ್ಲಿ ಇರುವಾಗ ನಾನು ಮಾತ್ರ ಆ ಕುರ್ಚಿಯಲ್ಲಿ ಕೂರುವುದು ಸರಿಯೇ ಎನಿಸಿತು. ತಕ್ಷಣ ಬಲವಂತವಾಗಿ ಅವರನ್ನು ದೊಡ್ಡ ಕುರ್ಚಿಯಲ್ಲಿ ಕೂರಿಸಿ ಸಣ್ಣ ಕುರ್ಚಿಯೊಂದನ್ನು ತರಿಸಿ ಪಕ್ಕದಲ್ಲಿ ಹಾಕಿಸಿಕೊಂಡು ನಾನು ಕುಳಿತೆ. ಅದನ್ನು ನೋಡಿದ ಪುಟ್ಟಣ್ಣನವರು ಕಣ್ಣಲ್ಲಿ ನೀರು ತಂದು ಕೊಂಡರು.

ಪುಟ್ಟಣ್ಣನವರ ಕೊನೆಯ ಚಿತ್ರ "ಮಸಣದ ಹೂವು"ನ ಚಿತ್ರೀಕರಣ ಕಂಠೀರವ ಸ್ಟುಡಿಯೋದಲ್ಲಿ ನಡೆಯುತ್ತಿತ್ತು. ನಾನು ಅನಿರೀಕ್ಷಿತವಾಗಿ ಆ ಸೆಟ್‌ಗೆ ಭೇಟಿ ನೀಡಿದಾಗ ತುಂಬಾ ಆನಂದದಿಂದ ಸ್ವಾಗತಿಸಿದ ಪುಟ್ಟಣ್ಣನವರು ನನಗಾಗಿ ಕುರ್ಚಿಯೊಂದನ್ನು ತರಿಸಿದರು. ನನಗೆ ಮತ್ತದೇ ಸಂಕೋಚ. ಪುಟ್ಟಣ್ಣನವರು ನಿಂತು ನಿರ್ದೇಶಿಸುತ್ತಿರುವಾಗ ನಾನು ಕುಳಿತು ನೋಡುವುದೆಂತು? ಅದಷ್ಟು ಹೊತ್ತು ನಾನು ನಿಂತೇ ನೋಡುತ್ತಿದ್ದೆ. ಅದನ್ನು ಗಮನಿಸಿದ ಪುಟ್ಟಣ್ಣನವರ ಕಣ್ಣಲ್ಲಿ ಮತ್ತೊಮ್ಮೆ ನೀರು ಚಿಮ್ಮಿತು.

ಅವರಿಂದ ಕನ್ನಡ ಚಲನಚಿತ್ರರಂಗ ಇನ್ನೂ ಬೇಕಾದಷ್ಟು ಕಾರ್ಯಗಳನ್ನು ಅಪೇಕ್ಷಿಸಿತ್ತು. ಅವರು ಸಾಯದೆ ಇನ್ನೂ ಹಲವು ವರ್ಷ ಬದುಕಿರಬೇಕಾಗಿತ್ತು ಎಂದು ಹೇಳುತ್ತಾ ಗದ್ಗದಿತರಾಗಿ ತಲೆ ತಗ್ಗಿಸಿದರು. ಅವರ ಕಣ್ಣಂಚಿನಲ್ಲಿ ನೀರಾಡುತ್ತಿತ್ತು. ಸ್ವಲ್ಪ ಹೊತ್ತಿನ ಮೇಲೆ ತಲೆ ಎತ್ತಿ, ಮೌನ ಮುರಿದು, ನನ್ನ ಕಡೆ ನೋಡುತ್ತಾ "ನೋಡಿ ಸತ್ತ ಮೇಲೆ ಎಲ್ಲರೂ ಅವರನ್ನು ಹೊಗಳುವವರೆ. ಆದರೆ ಬದುಕಿದ್ದಾಗ ಇದು ಏಕಾಗಲಿಲ್ಲ? ಬದುಕಿದ್ದಾಗ ಅವರನ್ನು ಗುರುತಿಸಿದ್ದರೆ ಆ ಸಂತೋಷದಲ್ಲಿ ಅವರು ಇನ್ನಷ್ಟು ದಿನ ಬದುಕಿರುತ್ತಿದ್ದರೇನೋ" ಎಂದು ಮತ್ತೊಮ್ಮೆ ಕಣ್ಣೊರೆಸಿಕೊಂಡರು.

◆



ಸಂದರ್ಶನದ ಸಮಯದಲ್ಲಿ ಡಾ॥ ರಾಜ್‌ಕುಮಾರ್ ಮತ್ತು ಲೇಖಕ ಡಿ.ಬಿ. ಬಸವೇಗೌಡ

## ವಿಜಯಭಾಸ್ಕರ್, ಸಂಗೀತ ನಿರ್ದೇಶಕ

ಪುಟ್ಟಣ್ಣನವರು ಅರ್ಧ ನಿರ್ದೇಶಿಸಿದ್ದ ಮತ್ತು ಕೆ.ಎಸ್.ಎಲ್. ಸ್ವಾಮಿಯವರಿಂದ ಪೂರ್ಣಗೊಂಡಿದ್ದ "ಮಸಣದ ಹೂವು" ಚಿತ್ರದ ರೀ ರೆಕಾರ್ಡಿಂಗ್‌ನಲ್ಲಿ ನಿರತರಾಗಿದ್ದ ಸಂಗೀತ ನಿರ್ದೇಶಕ ವಿಜಯಭಾಸ್ಕರ್ ಅವರನ್ನು ಮದರಾಸಿನ ಎ.ವಿ.ಎಂ ಸ್ಟುಡಿಯೋದಲ್ಲಿ ನಾನು ಭೇಟಿಯಾದಾಗ ಆಗಲೇ ಮಧ್ಯಾಹ್ನವಾಗಿತ್ತು. "ಬನ್ನಿ ಊಟ ಮಾಡುತ್ತ ಮಾತನಾಡೋಣ" ಎಂದು ತಮ್ಮ ನಿವಾಸಕ್ಕೆ ಕರೆದುಕೊಂಡು ಹೋದರು. ಊಟ ಮಾಡುತ್ತಲೇ ಅವರ ಸಂದರ್ಶನ ಮುಗಿಸಿದೆ.

ಅವರು ಮಾತನಾಡುತ್ತಾ "ಮದರಾಸಿನ ವಾಹಿನಿ ಸ್ಟುಡಿಯೋದಲ್ಲಿ ೧೯೫೬ರಲ್ಲಿ "ಭಾಗ್ಯ ಚಕ್ರ" ಕನ್ನಡ ಚಿತ್ರದ ಹಾಡಿನ ಧ್ವನಿಮುದ್ರಣ ಸಮಯದಲ್ಲಿ ಶ್ರೀ ಪುಟ್ಟಣ್ಣ ಕಣಗಾಲ್ ಅವರೊಂದಿಗೆ ನನ್ನ ಪ್ರಥಮ ಪರಿಚಯವಾಯಿತು. ಆಗ ಅವರು ಬಿ.ಆರ್. ಪಂತುಲು ಬಳಿ ಸಹಾಯಕರಾಗಿ ಕೆಲಸ ಮಾಡುತ್ತಿದ್ದರು. ಅಂದಿನಿಂದ ನಾವು ಆಗಾಗ್ಗೆ ಭೇಟಿಯಾಗುತ್ತಿದ್ದೆವು. ಆಮೇಲೆ ಅವರಿಗೆ ಮಲೆಯಾಳಂ ಮತ್ತು ಇತರ ಭಾಷೆಗಳಲ್ಲಿ ಚಿತ್ರಗಳನ್ನು ನಿರ್ದೇಶನ ಮಾಡುವ ಅವಕಾಶ ಸಿಕ್ಕಿತು. ಅವುಗಳಿಂದ ಒಳ್ಳೆಯ ಹೆಸರೂ ಬಂತು. ಅವರ ಕೆಲಸವನ್ನು ನೋಡಿ ಇತರ ಭಾಷೆಯವರು ಪ್ರಶಂಸಿಸಲಾರಂಭಿಸಿದರು.

ಆದರೆ ಪುಟ್ಟಣ್ಣನವರಿಗೆ ಸರ್ವತ ಕನ್ನಡ ಚಿತ್ರರಂಗದಲ್ಲಿ ಸೇವೆ ಮಾಡಿ ಧನ್ಯವಾಗಬೇಕೆಂಬ ಹಂಬಲವಿತ್ತು. ಅಂತಹ ವೇಳೆಯಲ್ಲಿ ಕನ್ನಡದ "ಬೆಳ್ಳಿಮೋಡ" ಚಿತ್ರವನ್ನು ನಿರ್ದೇಶಿಸುವ ಸದಾವಕಾಶ ಒದಗಿ ಬಂತು. ಅದರಲ್ಲಿ ನನಗೂ ಪುಟ್ಟಣ್ಣನವರಿಂದ ಅವಕಾಶ ಸಿಕ್ಕಿತು. ಅಲ್ಲಿಂದ ಪುಟ್ಟಣ್ಣನವರ ಹದಿನೇಳು ಕನ್ನಡ ಚಿತ್ರಗಳಲ್ಲಿ ಸಂಗೀತ ನಿರ್ದೇಶಕನಾಗಿ ಕೆಲಸ ಮಾಡಿದ್ದೇನೆ. ಅವರ ಸಂಗೀತದ ರುಚಿಯನ್ನು ಸವಿದಿದ್ದೇನೆ.

ಶ್ರೀ ಪುಟ್ಟಣ್ಣ ಕಣಗಾಲ್‌ರವರಿಗೆ ಸಂಗೀತವೆಂದರೆ ಪಂಚಪ್ರಾಣ. ತಾನು ಚಿಕ್ಕಂದಿನಿಂದಲೇ ಸಂಗೀತ ಕಲಿಯಲಿಲ್ಲವೆಂದು ಒಂದೊಂದು ಸಾರಿ ಕೊರಗುತ್ತಿದ್ದರು. ತಾನು ನಿರ್ದೇಶಕನಾದ ಮೇಲೆ ಆ ಕೊರತೆಯನ್ನು ನೀಗಿಸಲು ಕೆಲವು ದಿನ ಪಿಯಾನೋ ಕಲಿಯಲು ಮೊದಲು ಮಾಡಿದರು. ಆದರೆ ಇವರ ಕಾರ್ಯಗಳ ಒತ್ತಡದಿಂದ ಸಂಪೂರ್ಣವಾಗಿ ಕಲಿಯಲು ಆಗಲಿಲ್ಲ.

ಇವರ ಚಿತ್ರಗಳಲ್ಲಿ ಹಾಡುಗಳಿಗೆ ಮತ್ತು ಹಿನ್ನೆಲೆ ಸಂಗೀತಕ್ಕೆ ಪ್ರಮುಖ ಸ್ಥಾನವನ್ನು ಕೊಡುತ್ತಿದ್ದರು. ಹಾಡಿನ ರಚನಾ ಸಮಯದಲ್ಲಿ ರಚನಾಕಾರರೊಂದಿಗೆ ಬಹಳವಾಗಿ ಬೆರೆಯುತ್ತಿದ್ದರು. ಅವರ ಮನಸ್ಸಿನಲ್ಲಿರುವ ದೃಶ್ಯಕ್ಕೆ ಮತ್ತು ಪಾತ್ರಕ್ಕೆ ತಕ್ಕ ಪದಗಳು ಬರುವವರೆಗೂ ಬಿಡುತ್ತಿರಲಿಲ್ಲ. ಹಾಡುವ ಧಾಟಿಗೆ ಪದಗಳನ್ನು ತುಂಬುವುದಾಗಲೀ ಅಥವಾ ಬರೀ ಹಾಡಿಗಾಗಿಯೇ ಹಾಡನ್ನು ಮಾಡಿಸುವುದಾಗಲೀ ಅವರಿಗೆ ಇಚ್ಛೆಯಿರಲಿಲ್ಲ. ಹಾಡು ಪಾತ್ರಕ್ಕೆ ಸರಿಹೊಂದುವಂತೆ ಇರಬೇಕು ಎಂಬುದನ್ನು ಚೆನ್ನಾಗಿ ಅರಿತಿದ್ದರು. ಅವರಿಗೆ ಹಾಡಿನ ಪದಗಳು ಅರ್ಥಗರ್ಭಿತವಾಗಿರಬೇಕಿತ್ತು. ದ್ವಂದ್ವಾರ್ಥ ಪದಗಳು ಯಾವತ್ತೂ ಅವರಿಗೆ ಹಿಡಿಸುತ್ತಿರಲಿಲ್ಲ. ಕನ್ನಡ ನಾಡಿನಲ್ಲಿ ಪುಟ್ಟಣ್ಣನವರು ನೋಡದ ಹಳ್ಳಿಯಿರಲಿಲ್ಲ. ಎಲ್ಲೆಲ್ಲೋ ಹೋಗಿ ಕನ್ನಡನಾಡಿನ ಸೊಬಗನ್ನೂ, ನಾಡಿನ ಹಿರಿಮೆಯನ್ನೂ, ತಮ್ಮ ಹಾಡಿನ ಚಿತ್ರೀಕರಣದಲ್ಲೂ, ತಮ್ಮ ಕಥೆಯ ಚಿತ್ರೀಕರಣದಲ್ಲೂ ತೋರಿಸಿದರು. ನಮ್ಮವರಿಗೆ ನಮ್ಮ ನಾಡಿನ ಸೊಬಗನ್ನು ಅರಿವಾಗುವಂತೆ ಮಾಡಿದ ಮೊದಲಿಗರವರು.

ಚಿತ್ರದ ಓಟಕ್ಕೆ ಹಿನ್ನೆಲೆ ಸಂಗೀತ ಬಹಳ ಮುಖ್ಯ ಜೀವಾಳ ಎಂಬುದನ್ನು ಚೆನ್ನಾಗಿ ಅರಿತಿದ್ದರು. ಚಿತ್ರವನ್ನು ಸೃಷ್ಟಿಸುವಾಗ ಮಾತುಗಳಿಂದಾಗದ್ದನ್ನು ದೃಶ್ಯಗಳ ಮೂಲಕ ಯೋಚಿಸಿ, ಕಲ್ಪಿಸಿಕೊಂಡು ರೂಪಿಸುತ್ತಿದ್ದರು. ಸಾಹಿತ್ಯದ ಮೂಲಕ ಹೇಳಲಾಗದಿದ್ದನ್ನು ಸಂಗೀತದ ಮೂಲಕ ಹೇಳುತ್ತಿದ್ದರು. ಚಿತ್ರೀಕರಣದ ಸಮಯದಲ್ಲಿ ಒಳಾಂಗಣದಲ್ಲಾಗಲೀ ಅಥವಾ ಹೊರಾಂಗಣದಲ್ಲಾಗಲೀ ನೇರವಾಗಿ ಧ್ವನಿಗ್ರಹಣ ಮಾಡಿದ ಶಬ್ದಗ್ರಹಣ ಅಷ್ಟೊಂದು ಸಮರ್ಪಕವಾಗಿರುತ್ತಿರಲಿಲ್ಲ. ಏಕೆಂದರೆ ವಾತಾವರಣದಲ್ಲಿರುವ ಶಬ್ದಗಳೊಡನೆ ಬೆರೆತುಹೋಗುತ್ತಿತ್ತು. ಅದೇ ಶಬ್ದಗ್ರಹಣವನ್ನು ಹಿನ್ನೆಲೆ ಸಂಗೀತದ ಜೊತೆಗೆ ಬೆರೆಸಿದಾಗ ಅಷ್ಟೊಂದು ತೃಪ್ತಿಕರವಾಗಿ ಮೂಡಿ ಬರುತ್ತಿರಲಿಲ್ಲ. ಆದುದರಿಂದ ತಮ್ಮ ಇಡೀ ಚಿತ್ರವನ್ನು ಪುನಃ ಕಲಾವಿದರನ್ನು ಕರೆಸಿ ಧ್ವನಿಗ್ರಹಣ ಮಾಡುತ್ತಿದ್ದರು. ಈ ರೀತಿ ಮಾಡಿದವರು ಪ್ರಾಯಶಃ ಕನ್ನಡದಲ್ಲಿ ಪುಟ್ಟಣ್ಣನವರೇ ಮೊದಲಿಗರೆನ್ನಬಹುದು.

ನನ್ನೊಂದಿಗೆ ಎಷ್ಟೋ ಸಾರಿ ರೀರೆಕಾರ್ಡಿಂಗ್ ಮಾಡುವ ಸಮಯದಲ್ಲಿ "ಏನ್ರೀ, ವಿಜಯ್, ನನಗೆ ಚಿತ್ರೀಕರಣದ ಎಲ್ಲಾ ಹಂತದಲ್ಲಿಯೂ, ಉದ್ವೇಗ ಮತ್ತು ಉತ್ಕಟತೆ ಇರುತ್ತದೆ. ಆದರೆ ಸಂಗೀತ ರಚನೆ ಮತ್ತು ಹಿನ್ನೆಲೆ ಸಂಗೀತ ಧ್ವನಿಗ್ರಹಣ ಮಾಡುವ ವೇಳೆಯಲ್ಲಿ ಯಾವ ಉತ್ಕಟತೆ ಮತ್ತು ಯೋಚನೆಯೂ ಇಲ್ಲದೆ ಸಮಾಧಾನವಾಗಿರುತ್ತೇನೆ" ಎನ್ನುತ್ತಿದ್ದರು. ಮತ್ತು ನನ್ನನ್ನು "ಗಂಧರ್ವರಪ್ಪಾ ನೀವು" ಎಂದು ಪ್ರಶಂಸೆ ಮಾಡುತ್ತಿದ್ದರು.

ಶ್ರೀ ಪುಟ್ಟಣ್ಣ ಕಣಗಾಲ್‌ರವರು ಕನ್ನಡ ಚಿತ್ರರಂಗವನ್ನು ಶ್ರೀಮಂತಗೊಳಿಸಿ ಅದ್ಭುತ ಸೇವೆಯನ್ನು ಸಲ್ಲಿಸಿದ ವ್ಯಕ್ತಿ. ಅಕ್ಷರಶಃ ತನು, ಮನ, ಧನಗಳನ್ನು ನಿರ್ವಂಚನೆಯಿಂದ ಕನ್ನಡ ಚಿತ್ರರಂಗಕ್ಕೆ ಧಾರೆಯೆರೆದಿದ್ದಾರೆ. ತಮ್ಮ ಬದುಕಿನ ಕೊನೆಯವರೆಗೂ ಕನ್ನಡ ಚಿತ್ರರಂಗಕ್ಕಾಗಿ ದುಡಿದರು. ಅವರು ತಮ್ಮ ಮನೆತನಕ್ಕೆ ಮಾತ್ರವಲ್ಲ, ಕಣಗಾಲ್ ಗ್ರಾಮಕ್ಕೆ ಮಾತ್ರವಲ್ಲ, ಇಡೀ ಕರ್ನಾಟಕ ದೇಶಕ್ಕೇ ಕೀರ್ತಿಯನ್ನು ತಂದವರು. ಕನ್ನಡ ಚಿತ್ರರಂಗ ಉಳಿದಿರುವವರೆಗೂ ಶ್ರೀ ಪುಟ್ಟಣ್ಣ ಕಣಗಾಲ್ ನೆನಪು ಉಳಿದಿರುತ್ತದೆ" ಎಂದು ಹೇಳುತ್ತಾ ತಮ್ಮ ಮಾತು ಮುಗಿಸಿದರು.



"ಬಿಳಿ ಹೆಂಡ್ತಿ" ಚಿತ್ರದ ಹಾಡುಗಳ ಧ್ವನಿಮುದ್ರಣ ಸಂದರ್ಭದಲ್ಲಿ ನಿರ್ಮಾಪಕ ಮುದ್ದುಕೃಷ್ಣ, ಪುಟ್ಟಣ್ಣ ಕಣಗಾಲ್, ಹಿನ್ನೆಲೆ ಗಾಯಕಿ ವಾಣಿ ಜಯರಾಂ, ಸಂಗೀತ ನಿರ್ದೇಶಕ ವಿಜಯ ಭಾಸ್ಕರ್.

## ವಿಷ್ಣುವರ್ಧನ್, ಚಲನಚಿತ್ರ ಕಲಾವಿದ

ವಿಷ್ಣುವರ್ಧನ್‌ರವರನ್ನು ನೋಡಲು ನಾನು ಮದರಾಸಿನ ಮೆಜೆಸ್ಟಿಕ್ ಸ್ಟುಡಿಯೋ ಹತ್ತಿರ ಹೋದಾಗ ಬಿಗಿ ಮುಖದ ವಾಚ್‌ಮನ್ ನನ್ನನ್ನು ಅಪ್ಪಣೆ ಚೀಟಿ ಹೊಂದಿಲ್ಲವೆಂಬ ಕಾರಣಕ್ಕಾಗಿ ಹೊರಬಾಗಿಲಿನಲ್ಲಿಯೇ ತಡೆದ. ವಿಷ್ಣುವರ್ಧನರನ್ನು ನೋಡಲು ನಾನು ೨೫೦ ಮೈಲಿಯಿಂದ ಬಂದಿರುವುದಾ-ಗಿಯೂ, ವಿಷ್ಣುರವರೇ ಸ್ಟುಡಿಯೋಗೆ ಬನ್ನಿ ಎಂದಿದ್ದಾರೆ ಎಂದೂ, ಆಂಗ್ಲಭಾಷೆ ಬೆರೆತ ತಮಿಳಿನಲ್ಲಿ ಹೇಳಿದರೂ ಅದು ಕೆಲಸ ಮಾಡಲಿಲ್ಲ. ನಾನು ದಿವಂಗತ ಪುಟ್ಟಣ್ಣನವರ ಜೀವನ ಚರಿತ್ರೆ ಬರೆಯಲು ವಿಷ್ಣುರವರ ಸಂದರ್ಶನಕ್ಕೆ ಬಂದಿದ್ದೇನೆ, ಎಂದ ಮೇಲೆ ಅವನ ಮುಖದ ಬಿಗಿ ಸಡಿಲಿಸಿ "ಅಪ್ಪಡಿಯಾ ಒರು ಚೀಟಿ ಕೊಡಿ" ಎಂದ, ನನ್ನ ಅವಸ್ಥೆಯನ್ನು ವಿವರಿಸಿ ವಿಷ್ಣುರವರಿಗೆ ಒಂದು ಚೀಟಿ ಕಳುಹಿಸಿದೆ. ಹತ್ತು ನಿಮಿಷ ಕಾದ ಮೇಲೆ ಒಬ್ಬ ಯುವಕ ಬಂದು ನನ್ನನ್ನು ಒಳಗೆ ಕರೆದೊಯ್ದರು.

ಮಧ್ಯಾಹ್ನದ ಊಟಕ್ಕಾಗಿ ಚಿತ್ರೀಕರಣ ಬ್ರೇಕ್ ಆದಮೇಲೆ ಒತ್ತಾಯದಿಂದ ನನಗೆ ಊಟ ಹಾಕಿದ ವಿಷ್ಣುರವರು ತಮ್ಮ ಮಾತು ಪ್ರಾರಂಭಿಸಿದರು. "ಪುಟ್ಟಣ್ಣನವರ ಬಗ್ಗೆ ಮಾತನಾಡುವುದೆಂದರೆ ನನ್ನ ತಂದೆಯ ಬಗ್ಗೆ ಮಾತನಾಡಿದಂತೆ, ಅವರ ಬಗ್ಗೆ ತುಂಬಾ ತುಂಬಾ ಹೇಳಬೇಕೆನಿಸುತ್ತದೆ. ಆದರೆ ನನ್ನ ಮನಸ್ಸಿನ ತುಂಬಾ ಅವರ ಬಗ್ಗೆ ತುಂಬಿರುವ ಭಾವನೆಗಳ ಒತ್ತಡದಿಂದ ನನಗೆ ಏನನ್ನೂ ಹೇಳಲು ಆಗುತ್ತಿಲ್ಲ. ನಮ್ಮ ಕಣ್ಣುಗಳು ಪ್ರಪಂಚವನ್ನು ನೋಡುತ್ತವೆಯಾದರೂ ತನ್ನನ್ನೇ ತಾನು ನೋಡಲು ಅಸಮರ್ಥವಾಗಿವೆ. ಹಾಗಿದೆ ನನ್ನ ಸ್ಥಿತಿ. ಅವರೇ ನನ್ನ ಲೈಮ್ ಲೈಟ್".

ಮೈಸೂರಿನ ಚಿತ್ರಕಲಾವಿದ ಎಂ.ಹೆಚ್. ರಾಮುರವರು ಸಹ ನನಗೆ ತಂದೆ ಸಮಾನ. ಅವರು ನನ್ನನ್ನು ಚೆನ್ನಾಗಿ ತಿಳಿದಿದ್ದರು. ಒಂದು ದಿನ ಅವರು ನನ್ನೊಡನೆ ಕೂಡೆ ನಾನು ಬೆಂಗಳೂರಿನ "ಏರ್‌ಲೈನ್ಸ್" ಹೋಟೆಲಿನಲ್ಲಿ ಪುಟ್ಟಣ್ಣನವರನ್ನು

ನೋಡ ಬೇಕೆಂದು ಹೇಳಿ ಕಳುಹಿಸಿದರು. ಆಗ ಪುಟ್ಟಣ್ಣನವರು "ನಾಗರಹಾವು" ಚಿತ್ರಕ್ಕಾಗಿ ನಾಯಕನಟನ ಶೋಧನೆಯಲ್ಲಿದ್ದರು. ನಾನು ಹೋಗಿ ಅವರನ್ನು ನೋಡಿ, ರಾಮುರವರು ಕಳುಹಿಸಿದುದಾಗಿ ಹೇಳಿದೆ. ಅಳೆಯುವಂತೆ ನನ್ನನ್ನೊಮ್ಮೆ ನೋಡಿ ಸಂದರ್ಶನ ಮತ್ತು ವರ್ಣಾಲಂಕಾರ ಪರೀಕ್ಷೆಗಾಗಿ ಮೈಸೂರಿನ ಪ್ರೀಮಿಯರ್ ಸ್ಟುಡಿಯೋಗೆ ಬರುವಂತೆ ಹೇಳಿದರು.

ಅದೊಂದು ಮರೆಯಲಾಗದ ನೆನಪು. ಅಂದು ಒಟ್ಟು ೨೪ ಅಭ್ಯರ್ಥಿಗಳಿದ್ದರು. ಎಲ್ಲರಿಗೂ ಆತಂಕ, ಪುಟ್ಟಣ್ಣನವರಿಂದ ಆಯ್ಕೆಯಾಗಬೇಕೆಂಬ ಮಹದಾಸೆ. ಪುಟ್ಟಣ್ಣನವರು ನನ್ನನ್ನು ಕುರಿತು "ವಂಶವೃಕ್ಷ" ನೋಡಿದೆ, ತುಂಬಾ ಚೆನ್ನಾಗಿ ಮಾಡಿದ್ದೀಯೇ ಎಂದು ಬೆನ್ನು ತಟ್ಟಿದರು. ಗಾಢಾಂಧಕಾರದಲ್ಲಿ ಎಲ್ಲಿಯೋ ಬೆಳಕು, ಆದರೂ ನಂಬಿಕೆ ಇಲ್ಲ, ಏಕೆಂದರೆ ಪುಟ್ಟಣ್ಣನವರು ಆಯ್ಕೆಯಲ್ಲಿ ಬಹುಬಿಗಿ ಎಂದು ಕೇಳಿದ್ದೆ. ಸಂದರ್ಶನ, ವರ್ಣಾಲಂಕಾರ ಪರೀಕ್ಷೆ, ಸಂಭಾಷಣಾ ಪರೀಕ್ಷೆ ಎಲ್ಲಾ ಮುಗಿಯಿತು.

ಪುಟ್ಟಣ್ಣನವರು ಎಲ್ಲಾ ಅಭ್ಯರ್ಥಿಗಳನ್ನು ಕರೆಸಿದರು. ಎಲ್ಲಿಯೋ ಮಾತನಾಡುವಂತೆ ಯಾರಿಗೋ ಹೇಳುವಂತೆ, "ನನ್ನ ಮನಸ್ಸಿಗೆ ಒಬ್ಬ ಹುಡುಗ ಬಂದಿದ್ದಾನೆ. ಪ್ರತಿಭೆ ಮತ್ತು ಅದೃಷ್ಟ ಇದ್ದವರಿಗೆ ಅವಕಾಶ ಸಿಗುತ್ತೆ" ಎಂದು ಹೇಳಿ ನನ್ನ ಕಡೆ ಕಳ್ಳ ನೋಟ ಬೀರಿದರು. ನಾನು ಎತ್ತಲೋ ನೋಡುತ್ತಿದ್ದೆ. "ಏನಯ್ಯ ನಿನಗೆ ಇಂಟರೆಸ್ಟ್ ಇಲ್ಲವೆ" ಎಂದರು, ಅವರ ಪ್ರಶ್ನೆ ನನಗೆ ಅನಿರೀಕ್ಷಿತವಾಗಿತ್ತು. ತಬ್ಬಿಬ್ಬಾಗಿ ನಿಜವನ್ನು ನುಡಿದುಬಿಟ್ಟೆ "ಕಾಗೆ ನೋಡುತ್ತಾ ಇದ್ದೆ ಸಾರ್" ಅಂತ. ಓ ಹೋ ಹೋ ಎಂದು ನಕ್ಕು ಮತ್ತೊಮ್ಮೆ ಎಲ್ಲರ ಕಡೆ ನೋಡುತ್ತಾ "ಅವಕಾಶ ಸಿಕ್ಕದವರು ನಿರಾಶರಾಗಬೇಡಿ" ಎಂದರು.

ಇಷ್ಟಾದರೂ ನನ್ನ ಆಯ್ಕೆಯ ಬಗ್ಗೆ ನನಗೆ ನಂಬಿಕೆಯಿರಲಿಲ್ಲ, ಆದರೆ ಹಾಸ್ಯ ನಟ ಶಿವರಾಂರವರಿಗೆ ಗೊತ್ತಿತ್ತು, ನಾನು ಆಯ್ಕೆಯಾಗಿರುವೆನೆಂದು, ಆದರೆ ಅವರು ಸಹ ಹೇಳಿರಲಿಲ್ಲ. ಒಂದು ಸುಂದರ ದಿನ ಪುಟ್ಟಣ್ಣನವರು "ನಾಗರಹಾವು"ನ ಚಿತ್ರಕ್ಕೆ ಸಂಬಂಧಿಸಿದ ಕಾದಂಬರಿಗಳನ್ನು ನನ್ನ ಕೈಗೆ ಕೊಡುತ್ತಾ "ಈ ಪುಸ್ತಕಗಳನ್ನೆಲ್ಲಾ ಚೆನ್ನಾಗಿ ಓದು, ಇಪ್ಪತ್ತೈದು ವರ್ಷಗಳ ಮೇಲೆ ಒಬ್ಬ ಹೀರೋನ್ನ ಕನ್ನಡ ಚಲನಚಿತ್ರಕ್ಕೆ ಪರಿಚಯಿಸುತ್ತಾ ಇದ್ದೇನೆ, ಚೆನ್ನಾಗಿ ಮಾಡು" ಎಂದರು, ನಾನು ಆನಂದದಿಂದ ಪುಳಕಿತನಾದೆ, ಇದ್ದಕ್ಕಿದ್ದಂತೆ ಬಾಹ್ಯಾಕಾಶಕ್ಕೆ ಹಾರಿದಷ್ಟು ಸಂತೋಷವಾಯಿತು.

ಚಿತ್ರದುರ್ಗದಲ್ಲಿ ಅಂದು ಬೆಳಗಿನ ಐದು ಗಂಟೆಗೆ ನನಗೆ ವರ್ಣಾಲಂಕಾರ ಮಾಡಲಾಯಿತು. "ಹಾವಿನದ್ವೇಷ ಹನ್ನೆರಡು ವರುಷ" ಹಾಡನ್ನು ಚಿತ್ರೀಕರಿಸಲು ಸಿದ್ಧತೆ ನಡೆದಿತ್ತು. ನಾನು ಪುಟ್ಟಣ್ಣನವರಿಂದ ಸ್ವಲ್ಪ ದೂರದಲ್ಲಿ ನಿಂತಿದ್ದೆ. ಪುಟ್ಟಣ್ಣನವರು "ವಿಷ್ಣು ವಿಷ್ಣು" ಎಂದು ಕರೆದರು. ನಾನು ಸುತ್ತಾ ನೋಡಿದೆ, ಏಕೆಂದರೆ ಅಲ್ಲಿ ನಾವಿಬ್ಬರಲ್ಲದೆ ಬೇರೆ ಯಾರೂ ಇರಲಿಲ್ಲ. ಪುಟ್ಟಣ್ಣನವರು ನನ್ನನ್ನೇ ದೃಷ್ಟಿಸಿ ನೋಡುತ್ತಾ "ನಿನ್ನನ್ನೇ, ನಿನಗೆ ವಿಷ್ಣುವರ್ಧನ ಎಂದು ನಾಮಕರಣ ಮಾಡಿದ್ದೇನೆ. ವಿಷ್ಣುವರ್ಧನ ಮಹಾವೀರ. ಕರ್ನಾಟಕದ ಸಾಮ್ರಾಟನಾಗಿ ಕಲಾವಿದರಿಗೆ ನೆಲೆಯಾಗಿದ್ದ ಆ ಮನುಷ್ಯನ ಹೆಸರನ್ನು ನಿನಗೆ ಇಟ್ಟಿದ್ದೇನೆ. ಈ ಕಲಾಪ್ರಪಂಚದಲ್ಲಿ ಜಯಶಾಲಿಯಾಗು" ಎಂದು ಹೇಳುತ್ತಾ ನನ್ನ ಹತ್ತಿರಕ್ಕೆ ಬಂದು ಎರಡು ಭುಜಗಳನ್ನು ತಟ್ಟಿದರು.

ನನ್ನ ಕಲಿಕೆಯ ಪ್ರತಿಹಂತದಲ್ಲೂ ನನ್ನನ್ನು ತಿದ್ದಿದರು, ಹುರಿದುಂಬಿಸಿದರು. ಮಕ್ಕಳಿಗೆ ಸಕ್ಕರೆಯ ಆಸೆಯನ್ನು ತೋರುವಂತೆ "ನೀನು ನಿಷ್ಠೆಯಿಂದ ನಿನ್ನ ಕರ್ತವ್ಯ ಮಾಡಿದರೆ ಕನ್ನಡದ ಜನರನ್ನು ರಂಜಿಸುತ್ತೀಯ, ವೈಯಕ್ತಿಕವಾಗಿ ಕಾರು, ಬಂಗಲೆ ಎಲ್ಲಾ ಸಂಪಾದಿಸುತ್ತೀಯ" ಎಂದರು. ನನಗೆ ಪ್ರೀತಿಯ ಋಣವನ್ನೇ ಹೊರಿಸಿದರು. ಆದರೆ ನಾನು ಅವರಿಗೇನು ಕೊಡಲಿಲ್ಲ.

ಉದ್ಯಮದ ಕೆಲವರು ಅವರಿಗೂ ನನಗೂ ಸ್ವಲ್ಪ ದಿನ ತಂದಿಟ್ಟರು. ಆದರೆ ಅದು ಹೆಚ್ಚು ದಿನ ಉಳಿಯಲಿಲ್ಲ. "ನಾಗರಹಾವು" ಆದ ಮೇಲೆ ಪುಟ್ಟಣ್ಣನವರ ಚಿತ್ರದಲ್ಲಿ ನನಗೆ ಅವಕಾಶವಿರಲಿಲ್ಲ. ಅದಕ್ಕೆ ಪುಟ್ಟಣ್ಣನವರು "ಎಲ್ಲಾ ಚಿತ್ರದಲ್ಲೂ ನಿನ್ನನ್ನು ಹಾಕಲು ನಿನಗೆ ತಕ್ಕ ಪಾತ್ರವಿಲ್ಲ. "ನಾಗರಹಾವಿನ" ಅಪ್ಪನಂತಹ ಚಿತ್ರ ಮಾಡುತ್ತೇನೆ. "ರಾಜಾ ವೆಂಕಟಪ್ಪನಾಯಕ", "ಚಿಕ್ಕವೀರ ರಾಜೇಂದ್ರ" ಚಿತ್ರಗಳನ್ನು ಮಾಡುತ್ತೇನೆ. ಅವುಗಳಲ್ಲಿ ನೀನೇ ನಾಯಕ ಎನ್ನುತ್ತಿದ್ದರು.

ಈಗ ೪–೫ ವರುಷಗಳಿಂದ ನನ್ನ ಕುಟುಂಬಕ್ಕೆ ಅತ್ಯಂತ ನಿಕಟವಾಗಿದ್ದರು. ಜೊತೆಯಲ್ಲಿ ಚಿತ್ರಗಳಿಗೂ ಹೋಗುತ್ತಿದ್ದೆವು. ಜೊತೆಯಲ್ಲಿ ಊಟ ಮಾಡುತ್ತಿದ್ದೆವು, ನನ್ನ ಎಲ್ಲಾ ಚಿತ್ರಗಳನ್ನೂ ನೋಡಿ ವಿಮರ್ಶೆ ಮಾಡಿ ತಪ್ಪಿದ್ದಲ್ಲಿ ನನ್ನನ್ನು ತಿದ್ದುತ್ತಿದ್ದರು. ಅವರಿಗೆ ನನ್ನ ಮೇಲೆ ಅದಮ್ಯವಾದ ಪ್ರೀತಿಯಿತ್ತು. ಅವರು ಅದನ್ನು ತೋರಿಸಿ ಕೊಳ್ಳುತ್ತಿರಲಿಲ್ಲ. ಆದರೆ ಅದನ್ನು ನಾನು ಅವರ ಕಣ್ಣುಗಳಲ್ಲಿ ಕಾಣುತ್ತಿದ್ದೆ, ಸಾಧಿಸುವ ವಯಸ್ಸಿನಲ್ಲಿ ಅವರು ಹೋದಾಗ ನನ್ನ ಕಂಬ ಕಳಚಿಬಿತ್ತು. "ಏನನ್ನೋ ಕಳೆದುಕೊಂಡು ಬದುಕುತ್ತಿದ್ದೇನೆ ಎನಿಸುತ್ತದೆ" ಎಂದು ಹೇಳುತ್ತಿದ್ದಂತೆಯೇ ಅವರಿಗೆ ದುಃಖ ಉಮ್ಮಳಿಸಿ ಬಂತು, ತಲೆ ಬಗ್ಗಿಸಿ ಸ್ವಲ್ಪ ಹೊತ್ತು ಮೌನವಾದರು. ಪುನಃ

ದುಃಖವನ್ನು ಮರೆಯಲೆತ್ನಿಸುತ್ತಾ "ನನ್ನ ಮಡದಿ ಭಾರತಿಯನ್ನು ಕಂಡರೆ ಅವರಿಗೆ ತುಂಬಾ ಮೆಚ್ಚು, "ಋಣಮುಕ್ತಳು" ಜಯಪ್ರದವಾದ ಮೇಲಂತೂ ನಾನು ಮತ್ತು ಭಾರತಿ ಇದ್ದಾಗಲೆಲ್ಲಾ ನಿನ್ನ "ಬಂಧನ" ಚಿತ್ರ ಯಾವ ಮಹಾ. ಭಾರತಿಯನ್ನು ಹಾಕಿ ಚಿತ್ರ ಮಾಡಿ ನಿನ್ನ "ಬಂಧನ" ಕೆಡವುತ್ತೇನೆ" ಎಂದು ಹೇಳುತ್ತಾ ಮೀಸೆ ತಿರುವಿ ಹಾಸ್ಯ ಚಟಾಕಿ ಹಾರಿಸುತ್ತಿದ್ದರು.

ಪುಟ್ಟಣ್ಣನವರಿಲ್ಲದ ಚಿತ್ರರಂಗ ಇಂದು ತಬ್ಬಲಿ, ಇನ್ನೊಬ್ಬ ಪುಟ್ಟಣ್ಣ ಇಲ್ಲ. "ರಾಜಾ ವೆಂಕಟಪ್ಪನಾಯಕ" ಚಿತ್ರಕ್ಕಾಗಿ ಲಂಡನ್ನಿನ ವಸ್ತು ಸಂಗ್ರಹಾಲಯದಿಂದ ನಲವತ್ತು ಅಡಿ ಮೈಕ್ರೋ ಫಿಲಂ ತರಿಸಿ ಚಿತ್ರಕಥೆ ಮಾಡಿದ್ದರು. ಆತ ಈ ದೇಶದಲ್ಲಿಯಲ್ಲದೆ ಬೇರೆ ಕಡೆ ಹುಟ್ಟಿದ್ದರೆ ಚೆನ್ನಾಗಿತ್ತು. ಅವರ ಕೃತಿ ಸೂರ್ಯಚಂದ್ರರಷ್ಟು ಸತ್ಯ. ಬದುಕಿದ್ದಾಗ ಅವರ ಬಗ್ಗೆ ಮಾತನಾಡಲಾಗಲಿಲ್ಲ ಎಂದಾಗ ಸತ್ತ ಮೇಲೆ ಮಾತನಾಡಲು ಏನು ಅಧಿಕಾರವಿದೆ" ಎಂದು ತಮ್ಮ ಮೇಲೆಯೇ ಪ್ರಶ್ನೆ ಹಾಕಿಕೊಂಡು ದೀರ್ಘಮೌನ ವಹಿಸಿದರು. ಸ್ವಲ್ಪ ಹೊತ್ತು ಕಾದು ನೋಡಿದ ನನಗೆ ಅವರ ಮನಸ್ಸಿನ ತುಮುಲ ಅರ್ಥವಾಗಿತ್ತು. ಮೆಲ್ಲನೆ ಮೇಲೇಳುತ್ತಾ "ತುಂಬಾ ವಂದನೆಗಳು ವಿಷ್ಣುವರ್ಧನ್‌ರವರೆ" ಎಂದು ಕೈ ಚಾಚಿದೆ. ಅವರು ನನ್ನ ಕೈಯನ್ನು ತಮ್ಮ ಎರಡು ಕೈಗಳಿಂದ ಹಿಡಿಯುತ್ತಾ "ನನ್ನ ಗುರುಗಳ ಜೀವನ ಚರಿತ್ರೆ ಬರೆಯುತ್ತಿರುವ ನಿಮಗೆ ನನ್ನ ವಂದನೆಗಳು ಸಲ್ಲಬೇಕು" ಎನ್ನುತ್ತಾ ನನ್ನನ್ನು ಬೀಳ್ಕೊಟ್ಟರು.

◆

# ಯೋಗಾನರಸಿಂಹ, ಚಲನಚಿತ್ರ ಸಾಹಿತಿ

ಸಾಹಿತಿ ಯೋಗಾನರಸಿಂಹನವರನ್ನು ಪುಟ್ಟಣ್ಣನವರ ಬಗ್ಗೆ ಕೇಳಿದಾಗ ಅವರು ಹೇಳಿದ್ದು ಸಂಕ್ಷಿಪ್ತವಾಗಿದ್ದರೂ ಅತ್ಯಂತ ಸ್ವಾರಸ್ಯಕರ ಸಂಗತಿ.

"ನೋಡಿ ಪುಟ್ಟಣ್ಣನವರ ಬಗ್ಗೆ ಹೇಳಬೇಕೆಂದರೆ ಮುಗಿಯದಷ್ಟಿದೆ. ಏಕೆಂದರೆ ಅವರ "ಶುಭಮಂಗಳ" ಚಿತ್ರದಿಂದ ಹಿಡಿದು "ರಂಗನಾಯಕಿ" ಚಿತ್ರದವರೆವಿಗೆ ಸುಮಾರು ಎಂಟು ಚಿತ್ರಗಳಲ್ಲಿ ನಾನು ಅವರೊಡನೆ ಸಾಹಿತ್ಯ ರಚನೆಯಲ್ಲಿ ಕೆಲಸ ಮಾಡಿದ್ದೇನೆ. ಆದರೆ ನಾನು ಕಂಡ ಒಂದು ಘಟನೆಯಿಂದ ಅವರು ತನ್ನ ಚಿತ್ರ ಅತ್ಯಂತ ಸಹಜವಾಗಿ ಮೂಡಿ ಬರಲು ಎಷ್ಟು ಅಪಾಯವನ್ನಾದರೂ ಸ್ವಾಗತಿಸುತ್ತಿದ್ದರು ಎನ್ನುವುದಕ್ಕೆ ಇದೊಂದು ಉದಾಹರಣೆ.

"ರಂಗನಾಯಕಿ" ಚಿತ್ರದ ಚಿತ್ರೀಕರಣ ಬೆಂಗಳೂರಿನ ಕಂಠೀರವ ಸ್ಟುಡಿಯೋದಲ್ಲಿ ನಡೆಯುತ್ತಿತ್ತು. ಚಿತ್ರದ ಕಥೆಯಂತೆ ಊರಿನ ಪಟೇಲ ಅಲ್ಲಿ ಕ್ಯಾಂಪ್ ಹಾಕಿದ್ದ ನಾಟಕದ ಥಿಯೇಟರಿನ ಕೆಲವರ ಸ್ನೇಹ ಬೆಳೆಸಿ ವರ್ಣಾಲಂಕಾರದ ರೂಮಿನಲ್ಲಿ ನಾಟಕದ ಹುಡುಗಿಯರನ್ನು ಕೆಣಕುತ್ತಾನೆ. ಇದನ್ನು ಕಂಡ ಅಂಬರೀಶ್ ಪಟೇಲನನ್ನು ಎತ್ತಿ ಆಚೆ ಬಿಸಾಕುತ್ತಾರೆ. ಅದರಿಂದ ಕೋಪಗೊಂಡ ಪಟೇಲ ನಾಟಕ ನಡೆಯುತ್ತಿರುವಾಗ ತನ್ನ ಜನರನ್ನು ಬಿಟ್ಟು ಥಿಯೇಟರ್ ಮೇಲೆ ಕಲ್ಲು ತೂರಿಸುತ್ತಾನೆ. ಅನಿರೀಕ್ಷಿತವಾಗಿ ಕಲ್ಲು ಬೀಳುವುದನ್ನು ಕಂಡು ಪ್ರೇಕ್ಷಕರು ಚೆಲ್ಲಾಪಿಲ್ಲಿಯಾಗಿ ಓಡುತ್ತಾರೆ. ಈ ದೃಶ್ಯವನ್ನು ಅತ್ಯಂತ ಸಹಜವಾಗಿ ತೆಗೆಯಬೇಕೆಂಬುದು ಪುಟ್ಟಣ್ಣನವರ ಆಸೆ.

ಅದಕ್ಕಾಗಿ ನನ್ನನ್ನೂ, ಕ್ಯಾಮರಾ ನಿರ್ದೇಶಕ ಮಾರುತಿರಾವ್‌ರವರನ್ನೂ ಗುಟ್ಟಾಗಿ ಕರೆಸಿ "ನೋಡಿ, ಹೊರಗಡೆಯಿಂದ ಕಲ್ಲು ಬೀಳುತ್ತವೆ ಎಂಬ ವಿಷಯ ಪ್ರೇಕ್ಷಕರಾಗಿ ಥಿಯೇಟರಿನ ತುಂಬಾ ಕುಳಿತಿರುವ ಯಾವ ಪ್ರೇಕ್ಷಕ ಪಾತ್ರಧಾರಿಗಳಿಗೂ ತಿಳಿಯಬಾರದು, ಅಂತೆಯೇ ಕಲ್ಲು ಹೊಡೆಯುವ ಹುಡುಗರಿಗೆ ತಾವು ಕಲ್ಲು

ಹೊಡೆಯುವುದು ಪ್ರೇಕ್ಷಕ ಪಾತ್ರಧಾರಿಗಳಿಗೆ ತಿಳಿದಲ್ಲವೆಂಬುದು ತಿಳಿಯಕೂಡದು. ಎಲ್ಲವೂ ಸ್ವಾಭಾವಿಕವಾಗಿರಬೇಕು. ಈ ವಿಚಾರವನ್ನು ನೀವಿಬ್ಬರೂ ಎಷ್ಟು ಗುಟ್ಟಾಗಿಟ್ಟಿರಬೇಕೆಂದರೆ ಕ್ಯಾಮರಾ ಸಹಾಯಕರುಗಳಿಗೂ ಕೂಡ ಹೇಳಕೂಡದು" ಎಂದು ತಾಕೀತು ಮಾಡಿದರು. ನನಗೆ ಈ ಯೋಜನೆಯಿಂದ ದಿಗಿಲಾಯಿತು. ಇದು ಅಪಾಯಕರ ನೋಡಿ ಪುಟ್ಟಣ್ಣ ಎಂದು ಹೇಳಲು ಬಾಯಿ ತೆರೆದೆ, ಅದನ್ನರಿತ ಪುಟ್ಟಣ್ಣ "ಯೋಗಣ್ಣ ನೀವು ಯಾವಾಗಲೂ ಹೀಗೆಯೇ" ಎಂದು ರೇಗಿ, ತೆರೆದಿದ್ದ ನನ್ನ ಬಾಯನ್ನು ಮುಚ್ಚಿಸಿದರು.

ಅಂದು ಎರಡು ಕ್ಯಾಮರಾಗಳನ್ನು ಉಪಯೋಗಿಸಿದ್ದೆವು. ಕ್ಯಾಮರಾಗಳ ಚಾಲನೆಯಾದವು. ಪುಟ್ಟಣ್ಣನವರು ಕಲ್ಲು ಹೊಡೆಯಲು ನೇಮಿಸಿದ್ದ ಎಂಟು ಜನ ತುಂಟ ಹುಡುಗರು ಅತಿಯಾದ ಉತ್ಸಾಹದಿಂದ ಒಂದೇ ಸಮನೆ ಕಲ್ಲುಗಳನ್ನು ಬೀಸಿ ಬೀಸಿ ಥಿಯೇಟರಿನ ಮೇಲೆ ಹೊಡೆಯಲು ಪ್ರಾರಂಭಿಸಿದರು. ಕಲ್ಲಿನ ಸುರಿಮಳೆಯೇ ಆಯಿತು. ಪಾಪ ಇದನ್ನು ಸ್ವಲ್ಪವೂ ನಿರೀಕ್ಷಿಸದೆ ನಾಟಕದಲ್ಲಿ ಪಾತ್ರ ನೋಡುವ ಪ್ರೇಕ್ಷಕರಂತೆ ಅತ್ಯಂತ ಚೆನ್ನಾಗಿ ಅಭಿನಯಿಸಬೇಕೆಂಬ ಅಭಿಲಾಷೆಯಿಂದ ಕುಳಿತಿದ್ದ ಜನ ಅನಿರೀಕ್ಷಿತ ಕಲ್ಲು ತೂರಾಟದಿಂದ ದಿಗ್ಭ್ರಮೆಗೊಂಡು ಹೆದರಿ ಸಿಕ್ಕಿದ ಕಡೆ ಚಲ್ಲಾಪಿಲ್ಲಿಯಾಗಿ ಓಡಲು ಪ್ರಾರಂಭಿಸಿದರು. ಇದನ್ನು ಕಂಡ ಕ್ಯಾಮರಾ ಸಹಾಯಕರು ಕೂಡ ಹೆಚ್ಚು ಬೆಲೆಯ ಕ್ಯಾಮರಾಗಳಿಗೂ ಮತ್ತು ತಮಗೂ ಕಲ್ಲೇಟು ಬೀಳಬಹುದೆಂದು ಹೆದರಿ ಕ್ಯಾಮರಾಗಳನ್ನು ತಬ್ಬಿಕೊಂಡು ಓಟಾಕಿತ್ತರು.

ಇದು ಅಷ್ಟಕ್ಕೆ ನಿಲ್ಲಲಿಲ್ಲ. ಥಿಯೇಟರಿಂದ ಸತ್ತೆವೋ, ಕೆಟ್ಟೆವೋ ಎಂದು ಓಡಿ ಹೊರಬಂದ ಜನರಲ್ಲಿ ಕೆಲವರು ಕಲ್ಲು ತೂರುತ್ತಿದ್ದ ಹುಡುಗರನ್ನು ನೋಡಿ ಕೋಪಗೊಂಡು ಅವರ ಮೇಲೆ ಬಿದ್ದು ಚೆನ್ನಾಗಿ ತದಕಲು ಪ್ರಾರಂಭಿಸಿದರು. ರೊಚ್ಚಿಗೆದ್ದ ಜನಗಳ ಏಟನ್ನು ತಡೆಯಲಾರದ ಹುಡುಗರು "ಅಯ್ಯಯ್ಯೋ ಕೆಟ್ಟೆವಲ್ಲಪ್ಪಾ" ಎಂದು ಕೂಗಿಕೊಳ್ಳಲು ಪ್ರಾರಂಭಿಸಿದರು.

ಇನ್ನು ನಿಜ ಗೊತ್ತಾದರೆ ನಮಗೂ ಏಟು ತಪ್ಪಿದಲ್ಲ ಎಂಬ ಭಯದಿಂದ ನಾನು ತತ್ತರಿಸಿ ಹೋದೆ. ಚಿತ್ರೀಕರಣ ಮುಗಿದರೂ ಯಾರೋ ಹೊಡೆಯುತ್ತಿದ್ದರು, ಯಾರೋ ಕಿರುಚಿಕೊಳ್ಳುತ್ತಿದ್ದರು. ಆದರೆ ದೃಶ್ಯ ಮಾತ್ರ ಅತ್ಯಂತ ಸಹಜವಾಗಿ ಮೂಡಿ ಬಂದಿತ್ತು ಎಂದು ಯೋಗಾನರಸಿಂಹರವರು ತಮ್ಮ ಮಾತು ಮುಗಿಸಿದರು. ನಾನು ನಗಲಾರದೆ ನಗುತ್ತಾ ಅವರಿಂದ ಬೀಳ್ಕೊಂಡೆ.

◆

## ಕಲ್ಪನ, ಚಲನಚಿತ್ರ ಕಲಾವಿದೆ

ದಿವಂಗತ ಕಲ್ಪನಾರವರು ಪುಟ್ಟಣ್ಣನವರೇ ಕಡೆದ ಪುತ್ಥಳಿ. ಆದುದರಿಂದ ಅವರಿಗೆ ಪುಟ್ಟಣ್ಣನವರ ಬಗೆಗಿದ್ದ ಅಭಿಪ್ರಾಯ ಬಹಳ ಮುಖ್ಯ. ಅದಕ್ಕಾಗಿ ಕಲ್ಪನಾರವರು ಬೈಲೋರಷ್ಯದಲ್ಲಿ ನಡೆದ ಪ್ರಥಮ ಕನ್ನಡ ಚಲನಚಿತ್ರೋತ್ಸವದಲ್ಲಿ ಭಾಗವಹಿಸಲು ಹೋಗಿದ್ದಾಗ ಪುಟ್ಟಣ್ಣನವರಿಗೆ ಬರೆದ ಪತ್ರವನ್ನು ಅದು ಇದ್ದಂತೆಯೇ ಇಲ್ಲಿ ಅಚ್ಚುಹಾಕಲಾಗಿದೆ. ಇದು ಕಲ್ಪನಾರವರು ಪುಟ್ಟಣ್ಣನವರ ಪ್ರತಿಭೆಗೆ ಬರೆದ ಒಂದು ಪತ್ರ

೧೮.೮.೧೯೭೧
**ಮಿನಸ್ಕ್**

ನನ್ನ ಪುಟ್ಟಣ್ಣಾಜೀ,

ಈಗತಾನೇ ಅಂದರೆ ರಾತ್ರಿ ೧೧.೦೦ ಗಂಟೆ. ನಿಮ್ಮ ಚಿತ್ರದ ಪ್ರೀವೀವ್ ಮುಗಿಸಿಕೊಂಡು ಬಂದೆ. ಮಿನಸ್ಕ್‌ನ "ಪಾರ್ಟಿಜಾನ್" ಚಿತ್ರಮಂದಿರದಲ್ಲಿ "ಗೆಜ್ಜೆಪೂಜೆ", "ಮಿರ್" ಚಿತ್ರಮಂದಿರದಲ್ಲಿ "ಉಯ್ಯಾಲೆ" ಇವೆರಡರ ಪ್ರದರ್ಶನಗಳೊಂದಿಗೆ ನಮ್ಮ ಕನ್ನಡ ಚಲನ ಚಿತ್ರೋತ್ಸವ ಆರಂಭವಾಗಿದೆ.

ನಮ್ಮೆಲ್ಲರನ್ನು "ಪಾರ್ಟಿಜಾನ್" ಚಿತ್ರಮಂದಿರಕ್ಕೆ ಆಹ್ವಾನಿಸಲಾಗಿತ್ತು. ಎರಡು ಚಿತ್ರಮಂದಿರದಲ್ಲೂ "ಹೌಸ್‌ಫುಲ್" ಬೋರ್ಡ್. ಸಾಲದುದಕ್ಕೆ ಬೇರೆ ಆಸನಗಳನ್ನು ತರಿಸಿ ಹಾಕಬೇಕಾಯಿತು. ಸಂಜೆ ೭ ರಿಂದ ೭.೩೦ ರವರೆವಿಗೂ ನಮ್ಮ ಅವರ ಭಾಷಣಗಳ ಸುರಿಮಳೆ. ಏಳೂವರೆಗೆ ಸರಿಯಾಗಿ ನಮ್ಮ ಪುಟ್ಟಣ್ಣಾಜಿಯ ಇಂದ್ರಜಾಲ ಲೋಕಕ್ಕೆ ಸಭಿಕರ ಪ್ರವೇಶ. ಕಾಮೆಂಟರಿ ಹೇಳುತ್ತಿದ್ದಾಕೆ ಇಲ್ಲಿನ ಟಿ.ವಿ. ಕಲಾವಿದೆಯಂತೆ. "ರಷ್ಯನ್" ಭಾಷೆ ಇಷ್ಟೊಂದು ಮಧುರವಾಗಿದೆ ಅಂತ ನನಗೆ ಆಕೆಯ ಧ್ವನಿ ಕೇಳದ

ಮೇಲೆ ಅನಿಸಿತು. ದೃಶ್ಯಕ್ಕನುಗುಣವಾಗಿ ಭಾವನೆಗಳನ್ನು ತನ್ನ ಮಾತಿನಲ್ಲಿ ತುಂಬಿ, ಆಕೆ ಹೇಳ್ತಾ ಇದ್ರೆ.... ನಿಜವಾಗಲೂ ಪುಟ್ಟಣ್ಣಾಜೀ "ಗೆಜ್ಜೆಪೂಜೆ"ಯನ್ನು ಈಗಾಗಲೇ ೪-೫ ಬಾರಿ ನೋಡಿದ ನನಗೆ ಹೊಸ ಚಿತ್ರ ನೋಡುತ್ತಿದ್ದೇನೇನೋ ಎಂದು ಅನಿಸುತ್ತಿತ್ತು.

"ಹೆಣ್ಯಾಕೆ ಹುಟ್ತು ಈ ಮನೇಲಿ", "ಅಪರ್ಣಳ ಜೀವನದಲ್ಲಿ ಗೌಡರ ಪ್ರವೇಶ", "ತಾಯಿ ಮಗಳ ಬಾಳನಲ್ಲಿ ಚಂದ್ರಶೇಖರಯ್ಯನ ಆಗಮನ" ಈ ದೃಶ್ಯದ ಸಂಭಾಷಣೆ, "ಸೋಮು ಕಿಟಕಿಯಲ್ಲಿ ನೋಡಿ ಚಂದ್ರಾಳನ್ನು ಅಪಾರ್ಥ ಮಾಡಿಕೊಳ್ಳುವುದು", "ಚಂದ್ರಶೇಖರಯ್ಯ ಚಂದ್ರಾಳಿಂದ ವಾಗ್ದಾನ ಪಡೆಯುವುದು", ಗೆಜ್ಜೆಪೂಜೆಯ ದೃಶ್ಯಗಳು, ಪಂಡರೀಬಾಯಿ ಅಶ್ವತ್ಥ್ ಅವರ ದೃಶ್ಯ ಇವೆಲ್ಲವೂ ಇಲ್ಲಿನ ಜನರಿಗೆ ತುಂಬಾ ಹಿಡಿಸಿವೆ. ದೃಶ್ಯದಿಂದ ದೃಶ್ಯಕ್ಕೆ ಜನರು ಎಷ್ಟೊಂದು ಕುತೂಹಲವಾಗಿದ್ದರೆಂದರೆ ಪಕ್ಕದಲ್ಲಿ ಯಾರಾದರೂ ಜೋರಾಗಿ ಉಸಿರಾಡಿದರೂ ಅಸಮಧಾನ ವ್ಯಕ್ತಪಡಿಸುತ್ತಿದ್ದಾರೇನೋ ಅನ್ನುವಂತಿತ್ತು. ಚಿತ್ರ ಮುಗಿಯುತ್ತಿದ್ದಂತೆ ಚಿತ್ರಮಂದಿರ ಬೀಳುವುದೇನೋ ಅನ್ನುವಷ್ಟು ಮಟ್ಟಿಗೆ ಕೈ ಚಪ್ಪಾಳೆ. ಎಲ್ಲರೂ ಅಭಿನಂದಿಸುವವರೇ, ಗಂಡಸರು ಹೆಂಗಸರು ಎಂಬ ಭೇದವಿಲ್ಲದೆ ಎಲ್ಲರ ಕಣ್ಣಿನಲ್ಲೂ ನೀರು, ಕೆಲವು ಹೆಂಗಸರಂತೂ ನನ್ನನ್ನು ತಬ್ಬಿಕೊಂಡು ಅಳುತ್ತಾ ಮುತ್ತಿಟ್ಟರು.

ನನಗಂತೂ ಪುಟ್ಟಣ್ಣಾಜೀ, ನಾನೆಲ್ಲಿದ್ದೇನೆ ಎಂಬ ಪರಿವೆಯೇ ಇಲ್ಲದಂತಾಗಿತ್ತು. ನಿಮ್ಮ ಬಗ್ಗೆ ಎಲ್ಲಾ ವಿಷಯದಲ್ಲೂ ತುಂಬ ಗೌರವವಿಟ್ಟುಕೊಂಡಿರುವ ನನಗೆ "ಅಯ್ಯೋ ನಮ್ಮ ಪುಟ್ಟಣ್ಣಾಜೀ ಇದೆಲ್ಲವನ್ನೂ ಕಣ್ಣಾರೆ ನೋಡಬೇಕಾಗಿತ್ತು. ಅವರ ದಿಗ್ದರ್ಶನದ ಬಗ್ಗೆ, ಶ್ರಮದ ಬಗ್ಗೆ ಇತರ ಪ್ರಮುಖ ದಿಗ್ದರ್ಶಕರು, ಕಲಾವಿದರು ಹೊಗಳುವುದನ್ನು ಕಿವಿಯಾರೆ ಕೇಳಬೇಕಿತ್ತು ಎನಿಸಿತು. ಇಲ್ಲಿನ ದಿಗ್ದರ್ಶಕರೊಬ್ಬರು ನಿಮ್ಮ ಬಗ್ಗೆ ನನ್ನ ಹತ್ತಿರ ಎಲ್ಲಾ ಕೇಳಿ ತಿಳಿದುಕೊಂಡರು.

ನಿಮ್ಮ "ಬೆಳ್ಳಿಮೋಡ", "ಶರಪಂಜರ"ದ ಬಗ್ಗೆ ಕೃಷ್ಣಸ್ವಾಮಿಯವರು ವಿವರವಾಗಿ ಹೊಗಳಿ ಹೇಳಿದರು. "ಗೆಜ್ಜೆಪೂಜೆ"ಯಲ್ಲಿನ ನಮ್ಮ ಬೀದಿ ದೃಶ್ಯ ಔಟ್‌ಡೋರ್‌ನಲ್ಲಿ ತೆಗೆದದ್ದೇ ಅಥವಾ ಸೆಟ್ ಹಾಕಿ ತೆಗೆದದ್ದೇ ಎಂದು ವಿಚಾರಿಸಿದರು. ಬೀದಿ ಸೆಟ್ ಬಗ್ಗೆ ಶ್ರೀರಂಗಪಟ್ಟಣದ ದೃಶ್ಯ, ತಂದೆ ಮಗಳನ್ನು ಸಂಧಿಸುವಾಗ ಕೊಟ್ಟ ಉಂಗುರದ ಬಗ್ಗೆ ಬಹಳ ಹೊಗಳಿದರು.

ಅಂತೂ ಎಲ್ಲರೂ ಪುಟ್ಟಣ್ಣಾಜಿಯನ್ನು ಹೊಗಳುವವರೇ. ನಮ್ಮ ಪುಟ್ಟಣ್ಣಾಜಿಯನ್ನು ಬರೇ ರಷ್ಯದವರೇನು ಇಡೀ ಪ್ರಪಂಚವೇ ಹೊಗಳುವಂತಾಗಬೇಕು. ನಿಮ್ಮ ಕೆಲಸದ ಬಗ್ಗೆ ನಿಮಗಿರುವ ಆಸಕ್ತಿ, ಆಸೆಗಳಿಗೆ ಪರಿಪೂರ್ಣತೆಯನ್ನು ಬಲ್ಲವರಲ್ಲೂ ಪಡೆಯಬೇಕು ಎಂಬ ಛಲವಿರುವ ನಿಮಗಲ್ಲದೆ ಇನ್ಯಾರಿಗೆ ತಾನೇ ಈ ಗೌರವಾದರಗಳು ಸಲ್ಲಬೇಕು.

ಪುಟ್ಟಣ್ಣಾಜೀ, ನನ್ನ ಅಭಿಮಾನದ ದಿಗ್ದರ್ಶಕರೇ...ನಿಮಗೆ ಈ ಪುಟ್ಟ ಕಲಾವಿದೆಯ ಹೃತ್ಪೂರ್ವಕ ಅಭಿನಂದನೆಗಳು, ನನಗಾದ ಆನಂದವನ್ನು ತಡೀಲಾರದೆ ನನ್ನ ಸಂಭ್ರಮದಲ್ಲಿ ನೀವು ಪಾಲುಗೊಳ್ಳುತ್ತೀರಿ ಎಂಬ ಆತ್ಮ ವಿಶ್ವಾಸದೊಂದಿಗೆ ಈ ಪತ್ರ ಬರೀತಾ ಇದ್ದೀನಿ, ಇಲ್ಲಿ ನಡೆದುದೆಲ್ಲವನ್ನೂ ನಿಮಗೆ ಕೂಡಲೇ ತಿಳಿಸಿಬಿಡಬೇಕೆಂದು ಆಸೆ ಏಕೋ ಆಯಿತು, ಬರೆದೆ, ನಿಮ್ಮನ್ನು ಹೊಗಳಿ ನಿಮ್ಮ ವಿಶ್ವಾಸದೊಂದಿಗೆ ಈ ಪತ್ರ ಬರೀತಾ ಇದ್ದೀನಿ, ಬರೆದೆ. ನಿಮ್ಮನ್ನು ಹೊಗಳಿ ನಿಮ್ಮ ವಿಶ್ವಾಸಕ್ಕೆ ಪಾತ್ರಳಾಗಿ ನಿಮ ದಿಗ್ದರ್ಶನದಲ್ಲಿನ ಪಾತ್ರಗಳೆಲ್ಲವನ್ನೂ ನನ್ನದಾಗಿಸಿಕೊಳ್ಳಬೇಕೆಂಬ ಸ್ವಾರ್ಥ ಇದರ ಹಿಂದೆ ಅಡಗಿದೆ ಎಂದು ಯಾರಾದರೂ ಅಂದುಕೊಂಡರೆ ನನ್ನ ರಾಘವೇಂದ್ರನೇ ಸಾಕ್ಷಿ. ನನ್ನ ಗೌರವಕ್ಕೆ ಪಾತ್ರರಾದ ವ್ಯಕ್ತಿಯೊಬ್ಬರಿಗೆ ಹೊರ ನಾಡಿನಲ್ಲೂ ಗೌರವಾದರಗಳು ಸಿಕ್ಕಿದಾಗ ನನಗುಕ್ಕಿಬಂದ ಸಂತೋಷ ಈ ಪತ್ರ ಬರೆಯಲು ಪ್ರೇರೇಪಿಸಿತು, ಅಷ್ಟೆ. ನನ್ನನ್ನು ಚೆನ್ನಾಗಿ ಅರ್ಥಮಾಡಿಕೊಂಡಿರುವ (ಹೆಣ್ಣಾಗಿ ಅರ್ಥ ಮಾಡಿಕೊಂಡಿಲ್ಲವಾದರೂ ಕಲಾವಿದೆಯಾಗಿ) ನಿಮಗೆ ಇದಕ್ಕಿಂತ ಹೆಚ್ಚಿಗೆ ಏನೇನೋ ಹೇಳಲಾರೆ.

ಬೆಳಗಿನಿಂದ ಈವರೆಗೂ ಇದ್ದ ಬಿಡುವಿಲ್ಲದ ಕಾರ್ಯಕ್ರಮದಿಂದಾಗಿ ಮೈಕೈ ಸೋತು ಹೋಗಿದೆ. ಪುಟ್ಟಣ್ಣಾಜೀ, ಸುಂದರವಾದ ಪದಗಳನ್ನು ಉಪಯೋಗಿಸಿ ಅಂದವಾದ ಅಕ್ಷರಗಳನ್ನು ಪೋಣಿಸಿ, ಚಂದದ ಪತ್ರ ಬರೆಯೋಣ ಅನ್ನೋ ಆಸೆ, ಆಸೆಯಾಗೇ ಉಳಿದಿದೆ. ಕಣ್ಣು ಎಳೀತಾ ಇದೆ. ನನ್ನ ಬಗ್ಗೆ ನಿಮಗಿರುವ ತಾಳ್ಮೆ ಈ ಪತ್ರವನ್ನು ಓದುವ ಸಹನೆ ಕೊಡುತ್ತೆ ಅನ್ನೋ ನಂಬಿಕೆ ಇರೋದ್ರಿಂದ (ಇನ್ನೂ) ಅವಸರವಾಗಿ ಗೀಚಿದ್ದೀನಿ (ಅಕ್ಷರ ಮಾತ್ರ, ವಿಷಯ ಅಲ್ಲ) ಕ್ಷಮಿಸುವಿರಲ್ಲವೇ? ನಾನಿನ್ನು ಬರಲೇ, ಗುಡ್‌ನೈಟ್ ಪುಟ್ಟಣ್ಣಾಜೀ......

ನಿಮ್ಮ

ಕಲ್ಪನ

## ಜಯಂತಿ, ಪಂಚಭಾಷಾ ಚಲನಚಿತ್ರ ಕಲಾವಿದೆ

ಮದರಾಸಿನ ಪಾಮ್‌ಗ್ರೋವ್ ವಸತಿ ಗೃಹದ ಕೊಠಡಿ ನಂಬರ್ ೪೦೭ ರ ಹೊರಗಿನ ಕರೆಗಂಟೆಯನ್ನು ಮೆಟ್ಟಿದಾಗ ಜಯಂತಿಯವರ ಸೇವಕ ಹೊರಬಂದು "ಯಾರು ಬೇಕು" ಎಂದು ಕೇಳಿದ "ಜಯಂತಿಯವರನ್ನು ನೋಡಬೇಕು" ಎಂದೆ. "ಅವರನ್ನು ಈಗ ಭೇಟಿ ಮಾಡಲು ಸಾಧ್ಯವಿಲ್ಲ" ಎಂದು ಹೇಳಿ ನನ್ನ ಮುಂದಿನ ಮಾತಿಗೆ ಅವಕಾಶ ಕೊಡದೆ ಬಾಗಿಲು ಮುಚ್ಚಿಕೊಂಡು ಒಳಗೆ ಹೋಗಿಯೇ ಬಿಟ್ಟ.

ಒಂದು ಗಳಿಗೆ ಯೋಚಿಸಿ ಸ್ವಾಗತಕಾರಿಣಿ ಇದ್ದಲ್ಲಿಗೆ ಬಂದು ದೂರವಾಣಿ ಮಾಡಿದೆ, ಜಯಂತಿಯವರು "ಖಂಡಿತ, ಖಂಡಿತ ಬನ್ನಿ" ಎಂದರು. "ನಿಮ್ಮ ಸೇವಕ" ಎಂದೆ. "ಪರವಾಗಿಲ್ಲ ಬನ್ನಿ" ಎಂದು ನಕ್ಕರು. ಅವರ ಕೊಠಡಿಗೆ ಹೋದಾಗ ಅವರು ಮತ್ತು ಅವರ ಪತಿ ರಾಜಶೇಖರ್‌ರವರು ನನ್ನನ್ನು ಪ್ರೀತಿಯಿಂದ ಸ್ವಾಗತಿಸಿದರು.

"ನೀವು ಪುಟ್ಟಣ್ಣನವರ ಅಚ್ಚು ಮೆಚ್ಚಿನ ಕಲಾವಿದೆ. ಅವರ ಬಗ್ಗೆ ಏನಾದರೂ ಹೇಳಿ" ಎಂದಾಗ "ಪುಟ್ಟಣ್ಣನವರು ಕನ್ನಡ ಚಲನಚಿತ್ರ ರಂಗದಲ್ಲಿ ಒಂದು ಮೇರು ಪರ್ವತ. ಅವರ ಗರಡಿಯಲ್ಲಿ ನುರಿತ ನಾನೊಬ್ಬ ಸಣ್ಣ ಕಲಾವಿದೆ. ಒಂದು ಪುಟ್ಟ ದೀಪ ಸೂರ್ಯನ ಬಗ್ಗೆ ಏನು ಹೇಳಬಲ್ಲದು? ನಿಮ್ಮ "ಸಾವಿರ ಮೆಟ್ಟಿಲು" ಚಿತ್ರವೇ ನನಗೆ ಅವರ ಪ್ರಥಮ ಚಿತ್ರ, ಆ ಚಿತ್ರದ ಚಿತ್ರೀಕರಣದ ವೇಳೆಯಲ್ಲಿ ನಾನು ಅವರಿಂದ ಕಲಿತದ್ದು ಅಪಾರ, ಅದುವರೆವಿಗಾಗಲೇ ನಾನು ಅನೇಕ ಚಿತ್ರಗಳಲ್ಲಿ ನಟಿಸಿದ್ದರೂ ಕೂಡ ಅವರ ನಿರ್ದೇಶನದಲ್ಲಿ ಕೆಲಸ ಮಾಡುವಾಗ ಅಭ್ಯರ್ಥಿಯೊಬ್ಬ ರೀ ಓರಿಯಂಟೇಶನ್ ಕೋರ್ಸಿಗೆ ಸೇರಿದಂತೆ ಬಾಸಗೊಂಡೆ.

"ಅವರು ಬರೀ ನಿರ್ದೇಶಕರಾಗಿರಲಿಲ್ಲ, ಸಾಹಿತಿ, ನಟ, ಸಂಗೀತಗಾರ, ತಾಂತ್ರಿಕಜ್ಞ ಎಲ್ಲಾ ಆಗಿದ್ದರು. ಅವರು ಹೇಳಿಕೊಡುತ್ತಿದಾಗ ಅವರನ್ನು ಅನುಕರಿಸಿದ್ದರೇ ಸಾಕಾಗಿತ್ತು. ದೃಶ್ಯಭಾಗಗಳು ಅದ್ಭುತವಾಗಿ ಮೂಡಿಬರುತ್ತಿದ್ದವು. ಅವರು ಕಲಾವಿದರಿಗೆ ಹೇಳಿಕೊಡುತ್ತಿದ್ದ ಸಂಭಾಷಣೆಯ ರೀತಿ, ಧಾಟಿಗಳನ್ನು ನೆನಸಿಕೊಂಡರೆ ಈಗಲೂ ನನ್ನ ಚಿತ್ರಗಳಲ್ಲಿ ಸಂಭಾಷಣೆ ಮಾತನಾಡುವಾಗ ಪುಟ್ಟಣ್ಣಾಜೀ ನೆನಪಿಗೆ ಬರುತ್ತಾರೆ.

"ಸಾವಿರ ಮೆಟ್ಟಿಲು"ನಲ್ಲಿ ಅವರು ನನಗಾಗಿ ಸೃಷ್ಟಿಸಿದಂತಹ ಪಾತ್ರ ನನ್ನ ಚಲನಚಿತ್ರರಂಗದ ಜೀವನದಲ್ಲಿ ಇದುವರೆವಿಗೆ ಮತ್ತಾವ ಚಿತ್ರದಲ್ಲೂ ಸಿಕ್ಕಿಲ್ಲ. ಈಗಲೂ ನೀವು ಈ ಚಿತ್ರವನ್ನು ಪೂರ್ಣಗೊಳಿಸಿದರೆ ಅಗಲಿದ ಆ ನಿಮ್ಮ ಮಿತ್ರರಿಗೆ ಪ್ರೀತಿಯ ಕಾಣಿಕೆಯನ್ನು ಅರ್ಪಿಸಿದಂತಾಗುತ್ತದೆ. ಏಕೆಂದರೆ ಪುಟ್ಟಣ್ಣಾಜೀ ಕೈ ಹಾಕಿದ ಚಿತ್ರಗಳಲ್ಲೆಲ್ಲಾ ನಿಂತು ಹೋದುದು ಅದೊಂದೇ ಚಿತ್ರ" ಎಂದು ಅವರು ಮಾತು ಮುಗಿಸಿದರು.

◆



"ಸಾವಿರ ಮೆಟ್ಟಿಲು" ಚಿತ್ರದ ಚಿತ್ರೀಕರಣದಲ್ಲಿ ಕಲಾವಿದೆಯರುಗಳಾದ ಬಿ.ವಿ. ರಾಧ, ಜಯಂತಿ, ಬಿ. ಜಯ, ಆಶಾಲತ, ಪದ್ಮಾ ವಾಸಂತಿ, ಎಂ.ಎನ್. ಲಕ್ಷ್ಮೀದೇವಿ, ಹೇಮಾ ಚೌದರಿ ಮತ್ತು ಗಿರಿಜಾ ಲೋಕೇಶ್.

## ಆರತಿ, ಚಲನಚಿತ್ರ ಕಲಾವಿದೆ ಹಾಗೂ ಪುಟ್ಟಣ್ಣನವರ ದ್ವಿತೀಯ ಪತ್ನಿ

ಆರತಿಯವರ ಸಂದರ್ಶನದ ಬಗ್ಗೆ ಯೋಚಿಸಿದಷ್ಟು ನನ್ನ ಮನಸ್ಸು ಗೊಂದಲಕ್ಕೆ ಸಿಕ್ಕಿ ಹಾಕಿಕೊಳ್ಳುತ್ತಿತ್ತು. ಅದಕ್ಕೆ ಕಾರಣ ಈಗಾಗಲೇ ನೊಂದಿರುವ ಅವರ ಮನಸ್ಸಿಗೆ ನನ್ನ ಪ್ರಶ್ನೆಗಳಿಂದ ಇನ್ನೂ ಹೆಚ್ಚು ನೋವಾದೀತೆ ಎಂಬ ಭಯ, ಆದರೆ ಆರತಿಯವರು ಪುಟ್ಟಣ್ಣನವರ ಜೀವಿತದ ಕಥಾನಾಯಕಿಯಾಗಿದ್ದು ಅವರ ಸಂದರ್ಶನ ಮುಗಿಯದ ಹೊರತು ಈ ಪುಸ್ತಕ ಪೂರ್ಣವಾಗುವಂತಿರಲಿಲ್ಲ. ಅಂತೆಯೇ ಅವರ ಭೇಟಿಯ ಹಿಂದಿನ ದಿನ ಆರತಿಯವರಿಗೆ ದೂರವಾಣಿಯಲ್ಲಿ ಸಂಪರ್ಕಿಸಿದಾಗ ಸಂತೋಷದಿಂದ "ಬನ್ನಿ" ಎಂದರು.

ಬೆಳಿಗ್ಗೆ ನಾನು ಮತ್ತು ಸ್ನೇಹಿತ ದೊರೆಸ್ವಾಮಿಯವರು ಆರತಿಯವರ ಜೆ.ಪಿ. ನಗರದ "ಬೆಳ್ಳಿತೆರೆ" ನಿವಾಸಕ್ಕೆ ಹೋದಾಗ ಪ್ರೀತಿಯಿಂದ ಸ್ವಾಗತಿಸಿದರು. ಅವರಿಗೆ ವಿಷಯವನ್ನು ತಿಳಿಸಿ "ನಿಮ್ಮ ಮನಸ್ಸಿಗೆ ನೋವಾಗದಿದ್ದರೆ ಪುಟ್ಟಣ್ಣನವರ ಮತ್ತು ನಿಮ್ಮ ಬಗ್ಗೆ ಸ್ವಲ್ಪ ಹೇಳಿ" ಎಂದೆ. ಅವರ ಉತ್ತರ ಮತ್ತು ಧಾಟಿ ನನ್ನ ನಿರೀಕ್ಷೆಗೆ ವಿರುದ್ಧವಾಗಿತ್ತು. "ಈ ಬಗ್ಗೆ ನಾನು ಹೇಳುವುದು ಏನು ಉಳಿದಿದೆ ಹೇಳಿ, ಎಲ್ಲವೂ ಪತ್ರಿಕೆಗಳಲ್ಲಿ ಬಂದಿದೆಯಲ್ಲ" ಎಂದರು ಸಹಜವಾಗಿ. "ಆದರೂ ನಿಮ್ಮಿಂದ ನೇರವಾಗಿ ಕೇಳಬೇಕೆಂಬ ಬಯಕೆ. ಅವರು ನಿಮಗೆ ಪರಿಚಯವಾದಾಗಿನಿಂದ ಹೇಳಿ" ಎಂದೆ.

ಪುಟ್ಟಣ್ಣನವರೂ ನಾವೂ ಮೊದಲನಿಂದ ಒಂದೇ ಕುಟುಂಬದವರಿದ್ದಂತೆ, ಕಾವೇರಿ ನದಿಯ ಈಚೆ ಪುಟ್ಟಣ್ಣನವರ ಊರು ಕಣಗಾಲ್, ಈಚೆ ನನ್ನ ಊರು ಆರಗಲ್. ಪುಟ್ಟಣ್ಣನವರ ಬಂಧು ಅಚ್ಚಯ್ಯ ಎಂಬುವವರು ಕೋಣನೂರಿನಲ್ಲಿ ವಾಸವಿದ್ದರು. ಅವರು ನನ್ನ ಕುಟುಂಬಕ್ಕೆ ತುಂಬಾ ಬೇಕಾದವರು, ಒಂದು ವಿಧದಲ್ಲಿ ಅವರೇ ನನ್ನನ್ನೂ, ನನ್ನ ತಮ್ಮನನ್ನೂ ಬೆಳೆಸಿದರು. ಅವರಿಗೆ ಮಕ್ಕಳಿರಲಿಲ್ಲವಾಗಿ ನಮ್ಮನ್ನು ತುಂಬಾ ಪ್ರೀತಿಸುತ್ತಿದ್ದರು. ಅಚ್ಚಯ್ಯನವರಿಗೂ ಅವರ

ಹೆಂಡತಿ ಚೈತ್ರಕ್ಕನಿಗೂ ಪುಟ್ಟಣ್ಣನವರನ್ನು ಕಂಡರೆ ಅಪಾರವಾದ ಪ್ರೀತಿ, ಪುಟ್ಟಣ್ಣನವರು ಆಗಾಗ್ಗೆ ಅವರಲ್ಲಿಗೆ ಬಂದು ಇರುತ್ತಿದ್ದರು. ನಾವು ಹೋಗುತ್ತಿದ್ದೆವು ಹೀಗಾಗಿ ಪುಟ್ಟಣ್ಣನವರೂ ನಾನೂ ಚಿರಪರಿಚಿತರಾಗಿದ್ದೆವು.

ಪುಟ್ಟಣ್ಣನವರನ್ನು ಪತಿಯನ್ನಾಗಿ ಸ್ವೀಕರಿಸುವ ಮುನ್ನ ನಾನು ಯೋಚಿಸಬೇಕಾಗಿತ್ತು. ಅಂತೂ ಸತಿಪತಿಯರಾದೆವು, ನಾನು ಅವರ ಮಗುವಿನ ತಾಯಿಯೂ ಆದೆ, ಅವರು ಶೀಘ್ರ ಕೋಪಿಗಳಾಗಿದ್ದರು, ಸಣ್ಣಪುಟ್ಟ ವಿಷಯಕ್ಕೆಲ್ಲಾ ಜಗಳ ಕಾಯುತ್ತಿದ್ದರು. "ರಂಗನಾಯಕಿ" ಚಿತ್ರದವರೆಗೆ ಹೇಗೋ ನಡೆಯಿತು. ಆಮೇಲೆ ನನ್ನ ಜೀವನದ ದುರಂತ ಪ್ರಾರಂಭವಾಯಿತು. ನನ್ನ ಜೀವನವೂ "ರಂಗನಾಯಕಿ"ಯಂತೆಯೇ ಆಯಿತು.

"ರಂಗನಾಯಕಿ" ಚಿತ್ರ ಅಪೂರ್ವ ಕಲಾಕೃತಿಯಾಗಿ ಪುಟ್ಟಣ್ಣನವರಿಂದ ಸೃಷ್ಟಿಯಾಗಿತ್ತು. ಅದರ ಕೀರ್ತಿ ಸೃಷ್ಟಿ ಕರ್ತನಿಗೆ ಬರಬೇಕಿತ್ತು, ಆದರೆ ಅದು ಹಾಗೆ ಆಗಲಿಲ್ಲ, ಆ ಕೀರ್ತಿಯ ಬಹುಪಾಲು ನನಗೆ ಬಂದಿತ್ತು, ಸಹಜವಾಗಿ ಪುಟ್ಟಣ್ಣನವರಿಗೆ ಅದನ್ನು ಭರಿಸಲಾಗಲಿಲ್ಲವೆಂದು ತೋರುತ್ತದೆ. ತನ್ಮೂಲಕ ನಮ್ಮ ಸಂಸಾರದ ಬಿರುಕು ದೊಡ್ಡದಾಯಿತು, ನಾನು ಒಂದು ಸಲ ತಪ್ಪು ಮಾಡಿದ್ದೆ. ಹಾಗೆಯೇ ಸಾಮರಸ್ಯವಿಲ್ಲದ ಈ ಸಂಸಾರವನ್ನು ಮುಂದುವರಿಸಿಕೊಂಡು ಹೋಗುವ ದ್ವಿತೀಯ ತಪ್ಪನ್ನು ನಾವು ಮಾಡುವುದು ಬೇಡವೆಂದು, ಬೇರೆ ಮಾರ್ಗವಿಲ್ಲದೆ ಬೇರ್ಪಟ್ಟೆವು.

ಜನ ಮತ್ತು ಪತ್ರಿಕೆಯವರು ಇದನ್ನು ದೊಡ್ಡದು ಮಾಡಿದರು, ನಾನು ಬೇರೊಬ್ಬನನ್ನು ಮದುವೆಯಾಗಲು ಹೀಗೆ ಮಾಡಿದಳು ಎಂದರು. ಆದರೆ ಖಂಡಿತ ಅದು ನನ್ನ ಉದ್ದೇಶವಾಗಿರಲಿಲ್ಲ, ನಾವು ದೂರ ದೂರವಿದ್ದರೂ ಪರಸ್ಪರ ಪ್ರೀತಿಸುತ್ತಿದ್ದೆವು. ಎಷ್ಟಾದರೂ ನಾನು ಅವರ ಮಗುವಿನ ತಾಯಿ ತಾನೇ? ಅವರು ಮರೆಯಾದದ್ದು ಬಹು ಮುಖ್ಯವಾಗಿ ಕನ್ನಡ ಚಿತ್ರರಂಗಕ್ಕೂ, ವೈಯಕ್ತಿಕವಾಗಿ ನನಗೂ ತುಂಬಿ ಬರಲಾಗದಂತಹ ನಷ್ಟ ಅವರ ಆತ್ಮ ಸತ್ತಿಲ್ಲ ಚಲನಚಿತ್ರರಂಗದಲ್ಲಿ ಅವರು ಏನೇನೋ ಆಸೆಗಳನ್ನು ತುಂಬಿಕೊಂಡಿದ್ದರು. ಅವರ ಆ ಕನಸುಗಳನ್ನು ಅವರ ಮಗಳು ಯಶಸ್ವಿನಿಯ ಮುಖಾಂತರ ನನಸು ಮಾಡುವ ನನ್ನದೇ ಆದ ಯೋಜನೆಗಳನ್ನು ಹೊಂದಿದ್ದೇನೆ. ಯಶಸ್ವಿನಿ ಅವರ ಪ್ರತಿಭೆಗಳನ್ನು ಹೊತ್ತು ಹುಟ್ಟಿದ್ದಾಳೆ. ಪ್ರಯತ್ನ ನನ್ನದು ಫಲಿತಾಂಶ ನನ್ನದಲ್ಲ" ಎಂದರು ನಿರ್ಲಿಪ್ತತೆಯಿಂದ.

"ನೀವು ಚಿತ್ರರಂಗದಿಂದ ನಿವೃತ್ತಿಯಾಗುತ್ತಿರುವಿರೆಂದು ಕೇಳಿದೆ. ನಿಮ್ಮ ಈ ತೀರ್ಮಾನಕ್ಕೂ ಪುಟ್ಟಣ್ಣನವರ ಸಾವಿಗೂ ಕಾರಣವೇನಾದರೂ ಇದೆಯೇ?" ಎಂದು ನಾನು ಕೇಳಿದೆ. ಅದಕ್ಕವರು "ಹಾಗೇನಿಲ್ಲ ಪುಟ್ಟಣ್ಣನವರಿಗೂ ನನಗೂ ವಿರಸ ಬರದಿದ್ದರೆ "ರಂಗನಾಯಕಿ"ಯಾದ ಮೇಲೆ ನಾನು ಚಿತ್ರರಂಗದಿಂದ ನಿವೃತ್ತಿ ಹೊಂದಬೇಕೆಂದಿದ್ದೆ. ಬಣ್ಣದ ಬದುಕು ನನಗೆ ಸಾಕೆನಿಸಿದೆ. ನಾವು ಚಲನಚಿತ್ರದಲ್ಲಿ ಪಾತ್ರ ಮಾಡುವುದು ಕಲೆಯ ಸೇವೆಗಾಗಿ ಎನ್ನುವುದು ಡಂಬಾಚಾರದ ಮಾತು. ಅದು ಬರೀ ಹಣಕ್ಕಾಗಿ, ನನಗೆ ಏನು ಕಡಿಮೆಯಾಗಿದೆ ಹೇಳಿ, ಸುಂದರವಾದ ಮನೆ ಇದೆ. ಪ್ರೀತಿಸುವ ಮಗಳಿದ್ದಾಳೆ" ಎಂದು ಹೇಳುತ್ತಾ ಭಾವುಕರಾದರು.

◆



"ಸಾವಿರ ಮೆಟ್ಟಿಲು" ಚಲನಚಿತ್ರದ ಚಿತ್ರೀಕರಣದಲ್ಲಿ ನಿರ್ಮಾಪಕ ಡಿ.ಬಿ. ಬಸವೇಗೌಡ,
ಕಲಾವಿದರಾದ ಅಂಬರೀಷ್ ಮತ್ತು ಅನುಪ್ರಭಾಕರ್.

## ನರಸಿಂಹಯ್ಯ, ಪುಟ್ಟಣ್ಣನವರ ತಮ್ಮ

ಪುಟ್ಟಣ್ಣನವರ ಜನ್ಮಭೂಮಿ ಕಣಗಾಲು ಗ್ರಾಮಕ್ಕೂ ಹಾಸನಕ್ಕೂ ಕೇವಲ ನಲವತ್ತು ಮೈಲಿಗಳು. ಪುಟ್ಟಣ್ಣನವರು ಆಗಾಗ್ಗೆ ಕರೆಯುತ್ತಲೇ ಇದ್ದರೂ ಸಹಾ ಅವರು ಬದುಕಿದ್ದಾಗ ಹೋಗಲಾಗಿರಲಿಲ್ಲ. ಈಗ ಪುಟ್ಟಣ್ಣನವರ ಕುಟುಂಬದಲ್ಲಿ ಕೊನೆಯ ತಮ್ಮ ಒಬ್ಬ ಮಾತ್ರ ಕಣಗಾಲಿನಲ್ಲಿದ್ದು ಪುಟ್ಟಣ್ಣನವರ ಬಗ್ಗೆ ಹೆಚ್ಚು ತಿಳಿಯುವ ಸಲುವಾಗಿ ನನ್ನ ಮಿತ್ರ ಶ್ರೀಕಂಠೇಗೌಡರ ಜೊತೆ ಒಂದು ಭಾನುವಾರ ಬೆಳಿಗ್ಗೆ ಅಲ್ಲಿಗೆ ಹೊರಟು ಕಡವಿನ ಹೊಸಹಳ್ಳಿ ಗ್ರಾಮದ ಗೇಟಿನಲ್ಲಿ ಇಳಿದೆವು.

ಕಡುವಿನ ಹೊಸಹಳ್ಳಿ ಹಾಸನ ಜಿಲ್ಲೆಯ ಕೊನೆಯ ಒಂದು ಗ್ರಾಮ. ಕೊಡಗಿನಲ್ಲಿ ಹುಟ್ಟಿದ ಕಾವೇರಿ ಅದರ ಪಕ್ಕದಲ್ಲೇ ಪಶ್ಚಿಮದಿಂದ ಪೂರ್ವಕ್ಕೆ ಹರಿಯುತ್ತಾಳೆ. ನಾವು ಕಡುವಿನ ಹೊಸಹಳ್ಳಿಯಲ್ಲಿ ಕಾಲಿಟ್ಟು ವಿಚಾರಿಸಿದಾಗ ಅದೋ ಹೊಳೆಯ ದಡದ ಆಚೆಯಲ್ಲಿರುವುದೇ ಕಣಗಾಲು ಎಂದು ಅಲ್ಲಿಯ ಹಳ್ಳಿಗರು ತೋರಿಸಿದರು. ಹೊಳೆಯ ದಡಕ್ಕೆ ಹೋದೆವು.

ಕಾವೇರಿ ನದಿ ತುಂಬಿ ಹರಿಯುತ್ತಿತ್ತು. ನಾವು ಹೋದಾಗ ದೋಣಿ ಆಚೆ ದಡದಲ್ಲಿ ನಿಂತಿತ್ತು. ಈ ಕಡೆ ಬರುವಂತೆ ಕೂಗಿದೆವು, ಅಂಬಿಗ ಬರಲು ಸಾಧ್ಯವಿಲ್ಲವೆಂಬಂತೆ ಕೈ ಅಲ್ಲಾಡಿಸಿದ. ನಮಗೆ ತುಂಬಾ ನಿರಾಶೆಯಾಯಿತು. ಆದರೆ ಕಾರಣ ಕೇಳೋಣವೆಂದರೆ ಕೂಗಿದಾಗ ಮಾತು ಸ್ಪಷ್ಟವಾಗಿ ಕೇಳಿಸುತ್ತಿರಲಿಲ್ಲ. ನಮ್ಮ ಅಸಹಾಯಕತೆಯನ್ನು ನೋಡಿದ ಅಲ್ಲೇ ಸೋಪಾನ ಕಟ್ಟೆಯ ಮೇಲೆ ಬಟ್ಟೆ ಒಗೆಯುತ್ತಿದ್ದ ಹೆಂಗಸರು "ಆ ಕಡೆ ದಡದ ಊರಿಂದ ಜನ ಬಂದ್ಮೇಲೆ ಬರ್‍ತಾನೆ ಕಾಯ್ತಿರಿ" ಎಂದರು. ತಡವಾಗಿ ಬಂದ ದೋಣಿ ಹಿಡಿದು ನದಿ ದಾಟಿದೆವು. ನಾವು ಕಣಗಾಲ್ ತಲುಪಿದಾಗ ಹನ್ನೆರಡೂವರೆ ಗಂಟೆ. ಸಣ್ಣ ಸೇತುವೆಯ ಗೋಡೆಯ ಮೇಲೆ ಬೀಡಿ ಸೇದುತ್ತಾ ಕುಳಿತಿದ್ದವರಿಬ್ಬರನ್ನು ಪುಟ್ಟಣ್ಣನವರ ಮನೆ ಯಾವುದು ಎಂದು ಕೇಳಿದೆವು. "ಅದೋ ಆ ದೊಡ್ಡ ಮನೆ ಇದೆಯಲ್ಲಾ ಆ ಮನೆಯ ಬಲಭಾಗದ ಕೊನೆಯ ಭಾಗವೇ ಪುಟ್ಟಣ್ಣನವರದು" ಎಂದು ಕೈ ತೋರಿಸಿದರು.

ಮನೆ ನೋಡಲು ಭರ್ಜರಿಯಾಗಿತ್ತು. ಮೂರು ಅಂಕಣದ ಹಳೆಯ ಮಹಡಿ ಮನೆ, ಮುಂದುಗಡೆ ಎತ್ತರದ ದೊಡ್ಡ ಜಗಲಿ. ಪಕ್ಕದಲ್ಲೇ ಸಣ್ಣ ಮೆಟ್ಟಿಲುಗಳು ಅದನ್ನು ಹತ್ತಿ ಮನೆಯೊಳಗೆ ಕಾಲಿಟ್ಟೆವು.

ಎದುರುಗಡೆ ಕುರ್ಚಿಯ ಮೇಲೆ ಕುಳಿತಿದ್ದ ಪುಟ್ಟಣ್ಣನವರ ಕಿರಿಯ ತಮ್ಮ ನರಸಿಂಹಯ್ಯನವರು ನಮ್ಮನ್ನು ನೋಡಿ ಚಂಗನೆ ಮೇಲೆದ್ದು ಆನಂದಾತಿರೇಕದಿಂದ ಕೈ ಮುಗಿಯುತ್ತಾ, "ಬನ್ನಿ, ಬನ್ನಿ, ಅಣ್ಣ ಬದುಕಿದ್ದಾಗ ಅವರ ಜೊತೆಯಲ್ಲಿ ಬರುತ್ತೇನೆಂದವರು ಈಗಲಾದರೂ ಬಂದಿರಲ್ಲಾ" ಎನ್ನುತ್ತಾ ಅಣ್ಣನನ್ನು ನೆನೆದು ಬಿಕ್ಕಿ ಬಿಕ್ಕಿ ಅತ್ತರು, ಅವರು ಅಳುವುದನ್ನು ಕಂಡು ಗೋಡೆಗೊರಗಿ ಕುಳಿತಿದ್ದ ಹೆಂಗಸರೊಬ್ಬರೂ ಅಳಲು ಪ್ರಾರಂಭಿಸಿದರು. ಇಬ್ಬರನ್ನೂ ಸಮಾಧಾನ ಮಾಡಿದೆವು. ನರಸಿಂಹಯ್ಯನವರು ಅವರ ಹೆಂಡತಿ ಗೌರಮ್ಮನವರನ್ನು ಪರಿಚಯ ಮಾಡಿಸಿದರು. ಸ್ವಲ್ಪ ಹೊತ್ತು ಪುಟ್ಟಣ್ಣನವರ ಸಾವಿನ ಬಗ್ಗೆ ಮಾತನಾಡಿದೆವು.

"ನೀವು ಎಂತಹ ದಿನ ಬಂದಿದ್ದೀರಿ, ನನ್ನ ಹೆಂಡತಿ ಇಂದು ಕೋಣೆಗೆ ಹೋಗುವಂತಿಲ್ಲ, ಸ್ವಲ್ಪ ಹೊತ್ತು ಕುಳಿತುಕೊಳ್ಳಿ, ನಾನು ನಿಮಗೆ ಅಡಿಗೆ ಸಿದ್ಧತೆ ಮಾಡುತ್ತೇನೆ" ಎಂದು ಮೇಲೆದ್ದರು. "ಇಲ್ಲ ನಾವು ಕಡವಿನ ಹೊಸಹಳ್ಳಿಯಲ್ಲಿ ಈಗತಾನೆ ನಮ್ಮ ಶಾಸಕ ಮಿತ್ರ ಶ್ರೀ ಕೆ.ಬಿ. ಮಲ್ಲಪ್ಪನವರ ಮನೆಯಲ್ಲಿ ತಿಂಡಿ ಮುಗಿಸಿ ಬಂದಿದ್ದೇವೆ" ಎಂದು ಸುಳ್ಳುಹೇಳಿ ಅವರನ್ನು ಒಳಗೆ ಹೋಗಲು ಬಿಡಲಿಲ್ಲ. ನರಸಿಂಹಯ್ಯನವರ ಶ್ರೀಮತಿಯವರೂ ಸಹ ಊಟಕ್ಕೆ ಬಲವಂತ ಮಾಡಿದರೂ ನಾವು ಒಪ್ಪಲಿಲ್ಲ. ನಾವು ಬಂದ ವಿಷಯವನ್ನು ನರಸಿಂಹಯ್ಯನವರಿಗೆ ತಿಳಿಸಿ "ಪುಟ್ಟಣ್ಣನವರ ಬಗ್ಗೆ ನಿಮ್ಮ ಬಾಲ್ಯದಿಂದ ತಿಳಿದಿದ್ದನ್ನು ಹೇಳಿ" ಎಂದೆ.

ನರಸಿಂಹಯ್ಯ ಬಲುಚೂಟಿಯ ಮನುಷ್ಯ. ಅಂತಹ ಗಡದ್ದಾದ ಆಳೇನಲ್ಲ ಶಣಕಲು ಮನುಷ್ಯ. ಆದರೆ ಗಂಟಲು ಬಲುಜೋರು. ಕಬ್ಬನ್ನು ಅರೆಯುವ ಯಂತ್ರದಂತೆ, ಯಾವ ವಿಚಾರವನ್ನೇ ತೆಗೆದರೂ ಅದನ್ನು ಸರಕ್ಕನೆ ತನ್ನೆಡೆಗೆ ಎಳೆದುಕೊಂಡು ಪಟಪಟಾಂತ ಮಾತನಾಡುವ ಸ್ವಭಾವ. ಎಕ್ಸ್‌ಪ್ರೆಸ್ ರೈಲಿದ್ದಂತೆ. ನಿಲ್ದಾಣಗಳು ಬಹಳ ಕಡಿಮೆ. ಮಾತನಾಡಲು ನಮ್ಮ ಎದುರಿಗೆ ಸಿಮೆಂಟ್ ನೆಲದ ಮೇಲೆಯೇ ಕುಳಿತ ನರಸಿಂಹಯ್ಯ ಹೇಳತೊಡಗಿದರು. "ನಮ್ಮ ಊರು ಕಣಗಾಲು ಗ್ರಾಮ, ಮೊದಲು ಇದೇ ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿಗೆ ಸೇರಿತ್ತು. ಈಗ ಪಿರಿಯಾಪಟ್ಟಣದ ತಾಲ್ಲೂಕಿಗೆ ಸೇರಿದೆ. ನಮ್ಮ ತಂದೆಯವರ ಹೆಸರು ಎಸ್.ಪಿ. ರಾಮಸ್ವಾಮಯ್ಯ, ನಮ್ಮ ತಾಯಿಯ ಹೆಸರು ಸುಬ್ಬಮ್ಮ, ನಮ್ಮ ತಂದೆಗೆ ಒಟ್ಟು ಇಬ್ಬರು ಹೆಣ್ಣು ಮಕ್ಕಳು. ಐದು ಜನ ಗಂಡು ಮಕ್ಕಳು. ಎಲ್ಲರಿಗಿಂತ

ಹಿರಿಯವರಾದ ಸಾವಿತ್ರಮ್ಮ ಮತ್ತು ಅನ್ನಪೂರ್ಣಮ್ಮನವರು ಮದುವೆಯಾಗಿ ಗಂಡನ ಮನೆಯಲ್ಲಿದ್ದಾರೆ. ಐದು ಜನ ಗಂಡು ಮಕ್ಕಳಲ್ಲಿ ಬಾಲಕೃಷ್ಣ ಮೊದಲನೆಯವರು, ಬೆಂಗಳೂರಿನ ಎಸ್.ಜೆ.ಪಿ. ಇನ್‌ಸ್ಟಿಟ್ಯೂಟ್‌ನಲ್ಲಿ ಫೋಟೋಗ್ರಾಫಿ ಬಗ್ಗೆ ಡಿಪ್ಲಮೋ ಮಾಡಿಕೊಂಡಿದ್ದು, ಈಗ ಬೆಂಗಳೂರಿನಲ್ಲೇ ಫೋಟೋ ಸ್ಟುಡಿಯೋ ಇಟ್ಟುಕೊಂಡಿದ್ದಾರೆ. ಎರಡನೆಯವರು ಚಲನಚಿತ್ರ ಸಾಹಿತಿ, ನಿರ್ದೇಶಕ, ಕಣಗಾಲ್ ಪ್ರಭಾಕರ ಶಾಸ್ತ್ರಿಗಳು, ಅವರು ಈಗ ಬೆಂಗಳೂರಿನಲ್ಲಿ ವಾಸವಿದ್ದಾರೆ. ಮೂರನೆಯವರೇ ಪುಟ್ಟಣ್ಣನವರು, ನಾಲ್ಕನೇಯವರು ಶಂಕರನಾರಾಯಣ, ಅವರು ಪುಟ್ಟಣ್ಣನವರ ಚಲನಚಿತ್ರತಂಡದಲ್ಲಿ ಕೆಲಸ ಮಾಡಿಕೊಂಡು ಬೆಂಗಳೂರಿನಲ್ಲಿಯೇ ಇದ್ದಾರೆ. ನಾನೆ ಎಲ್ಲರಿಗಿಂತ ಚಿಕ್ಕವನು. ಇಲ್ಲಿಯೇ ವ್ಯವಸಾಯ ಮಾಡಿಕೊಂಡಿದ್ದೇನೆ.

"ಈ ಮನೆ ನಮ್ಮ ತಾತನ ಕಾಲದ್ದು, ನಮ್ಮ ತಾತನ ಹೆಸರೂ ಸಹ ಪುಟ್ಟಣ್ಣ ಎಂದೇ. ಅದಕ್ಕಾಗಿಯೇ ನಮ್ಮ ಮೂರನೇ ಅಣ್ಣನಿಗೂ ಸಹಾ ಪುಟ್ಟಣ್ಣ ಎಂದೇ ಹೆಸರಿಟ್ಟರಂತೆ, ಈ ಹೆಸರು ಇಡಲು ಮತ್ತೊಂದು ಕಾರಣವೂ ಇತ್ತಂತೆ. ಅದೇನೆಂದರೆ ನನ್ನ ಅಜ್ಜ ಪುಟ್ಟಣ್ಣನವರು ತುಂಬಾ ಎದೆಗಾರರೂ, ಧೈರ್ಯಶಾಲಿಯೂ, ಜೋರಿನವರೂ ಆಗಿದ್ದರಂತೆ, ನಮ್ಮ ಅಣ್ಣನ ಮುಖ ನೋಡಿದ ನಮ್ಮ ತಂದೆಯವರು ಈ ಹುಡುಗನೂ ಹಾಗೆಯೇ ಆಗಬಹುದೆಂದೆನಿಸಿ ಅಜ್ಜನ ಹೆಸರನ್ನೇ ಇಟ್ಟರಂತೆ".

"ನಮ್ಮ ಕುಟುಂಬದ ಬಗ್ಗೆ ಹಿಂದಿನದು ನನಗೆ ಗೊತ್ತಿಲ್ಲ. ನನ್ನ ಅರಿವಿಗೆ ಬಂದಾಗ ನಾವು ತುಂಬಾ ಬಡತನದಲ್ಲಿದ್ದೆವು. ಎರಡು ಹೊತ್ತು ತಿನ್ನಲೂ ಸಹಾ ಇರಲಿಲ್ಲ. ಅನೇಕ ದಿನ ಸಕ್ಕರೆ ಕುಂಬಳ ಪಲ್ಯ, ರಾಗಿರೊಟ್ಟಿ ತಿನ್ನುತ್ತಿದ್ದುದೇ ನೆನಪು ನನಗೆ ಜ್ಞಾಪಕವಿರುವಂತೆ ಒಂದು ದಿನ ಪುಟ್ಟಣ್ಣ ಎಲ್ಲಿಂದಲೋ ಮನೆಗೆ ಬಂದರು ಎಣ್ಣೆಯಿಂದ ಜಿಡ್ಡುಗಟ್ಟಿದ ಅಂಗಿ ಚಡ್ಡಿ ಹಾಕಿದ್ದರು. ನಮ್ಮ ತಂದೆ ಅವರನ್ನು ಮಾತನಾಡಿಸಲಿಲ್ಲ. ಪುಟ್ಟಣ್ಣನವರು ಬಂದವರೇ ನನ್ನನ್ನು ಎತ್ತಿ ಮುದ್ದಿಸಿದ್ದರು. ಆಮೇಲೆ "ಅಮ್ಮಾ" ಎಂದು ಕೂಗುತ್ತಾ ಕೋಣೆಗೆ ಹೋದರು. ಅವರು ಬರುವಾಗ ನನ್ನ ತಾಯಿಗೆ ಒಂದು ಸೀರೆ, ತಂದೆಗೆ ಒಂದು ಪಂಚೆ ತಂದಿದ್ದರು. ಸೀರೆಯನ್ನು ನೋಡಿ ನನ್ನ ತಾಯಿಗೆ ತುಂಬಾ ಖುಷಿಯಾಯಿತು. ಏಕೆಂದರೆ ಆಗ ಉಡಲು ನಮ್ಮ ತಾಯಿಗೆ ಸರಿಯಾಗಿ ಸೀರೆಗಳೇ ಇರಲಿಲ್ಲ. ಊಟ ಮಾಡುವಾಗ ನನ್ನ ತಾಯಿ "ನೋಡಪ್ಪ ಈ ಊರಿನ ನಿನ್ನ ವಯಸ್ಸಿನ ಹುಡುಗರೆಲ್ಲಾ ಓದುತ್ತಿದ್ದಾರೆ. ಆದರೆ ನೀನು ಓದದೆ ಪೋಲಿ ಅಲೆಯುತ್ತಿದ್ದೀಯಾ, ನಮ್ಮ ಈ ಕಿತ್ತು ತಿನ್ನುವ ಬಡತನದಲ್ಲಿ ನೀನು ಓದಿ ಮುಂದೆ ಬರದಿದ್ದರೆ ಮುಂದೆ ನಮ್ಮ ಗತಿಯೇನು?"

ಎಂದು ಬೈಯ್ದು ಅಳುತ್ತಿದ್ದರು. ಅದಕ್ಕೆ ನಮ್ಮಣ್ಣ "ನೀನೇನೂ ಯೋಚನೆ ಮಾಡಬೇಡಮ್ಮ, ನಾನೀಗ ಮೈಸೂರಿನಲ್ಲಿ ಡ್ರೈವಿಂಗ್ ಕಲಿಯುತ್ತಿದ್ದೇನೆ, ಚಾಲಕನಾದ ಮೇಲೆ ನಿಮ್ಮ ಕಷ್ಟವನ್ನೆಲ್ಲಾ ತೀರಿಸುತ್ತೇನೆ" ಎಂದರು. ಊರಿನಲ್ಲಿ ಎರಡು ದಿನ ಇದ್ದು ಮೈಸೂರಿಗೆ ಹೊರಟುಹೋದರು".

"ಇದಾದ ಒಂದು ತಿಂಗಳ ಮೇಲೆ ಪುಟ್ಟಣ್ಣನಿಂದ ನಮ್ಮ ತಂದೆ ಹೆಸರಿಗೆ ಇಪ್ಪತ್ತು ರೂಪಾಯಿ ಮನಿಯಾರ್ಡರ್ ಬಂತು. ಫಾರಂ ಮೇಲೆ ಮೈಸೂರಿನ ಪಾಲಂಜೀಸ್ ಗ್ಯಾರೇಜಿನ ವಿಳಾಸವಿತ್ತು. ಅದರ ಮರುದಿನ ವರಲಕ್ಷ್ಮೀ ಪೂಜೆ ಇತ್ತು. ಈ ಹಣದಲ್ಲಿ ಹಬ್ಬ ಮಾಡಿ ಅಂದು ಸುಖವಾಗಿ ಊಟ ಮಾಡಿದೆವು."

"ಇದಾದ ಆರು ತಿಂಗಳ ಮೇಲೆ ಪುಟ್ಟಣ್ಣನನ್ನು ನೋಡಲು ಮೈಸೂರಿನ ಪಾಲಂಜೀಸ್ ಗ್ಯಾರೇಜಿಗೆ ಹೋದೆ. ನಮ್ಮಣ್ಣ ಆಗ ಒಂದು ಕಾರಿನಡಿ ಅಂಗಾತ ಮಲಗಿಕೊಂಡು ಏನನ್ನೋ ರಿಪೇರಿ ಮಾಡುತ್ತಿದ್ದರು. ನನ್ನನ್ನು ನೋಡಿ ಅವರಿಗೆ ತುಂಬಾ ಸಂತೋಷವಾಯಿತು. "ಏನೋ ನರಸಿಂಹ ಬಂದೆ" ಎಂದು ಕೇಳಿದರು. "ಅಂಗಿ ಚಡ್ಡಿ ಇರಲಿಲ್ಲ, ಅದಕ್ಕೆ ನಿನ್ನ ಹತ್ತಿರ ಬಂದೆ" ಎಂದೆ. ನನ್ನನ್ನು ಹೋಟೆಲಿಗೆ ಕರೆದುಕೊಂಡು ಹೋಗಿ ಊಟ ಮಾಡಿಸಿದರು. ಆಮೇಲೆ ಮೈಸೂರಿನಲ್ಲೆ ಇದ್ದ ನನ್ನ ದೊಡ್ಡಮ್ಮನ ಮನೆಗೆ ಬಿಟ್ಟು "ನಾಳೆ ಬರುತ್ತೇನೆ, ಇಲ್ಲಿಯೇ ಇರು" ಎಂದು ಹೇಳಿ ಹೊರಟುಹೋದರು".

"ಆದರೆ ಬೆಳಗ್ಗೆ ಬರಲಿಲ್ಲ, ನನಗೆ ಹೆದರಿಕೆಯಾಯಿತು, ಮಾರನೇ ದಿನ ಬಂದು ನನ್ನನ್ನು ಸಯ್ಯಾಜಿರಾವ್ ರಸ್ತೆಗೆ ಕರೆದುಕೊಂಡು ಹೋಗಿ ನನಗೆ ಒಂದು ಷರಟು, ಚಡ್ಡಿ ತೆಗೆದುಕೊಟ್ಟರು. ಹಾಕಿಕೊಂಡೆ. ಆಮೇಲೆ ಅಮ್ಮನಿಗೆ ಒಂದು ಸೀರೆ, ಹೂವು, ವಿಳ್ಳೇದೆಲೆ, ರವೆ, ಕಾಫಿಪುಡಿ ಮತ್ತು ಅಪ್ಪನಿಗೆ ಒಂದು ಪಂಚೆ, ನಶ್ಯಡಬ್ಬಿ ತೆಗೆದುಕೊಟ್ಟು ನನ್ನ ಬಸ್ಸು ಹತ್ತಿಸಿದರು. ಊರಿಗೆ ಬಂದು ನಮ್ಮ ತಂದೆ ತಾಯಿಗೆ ಎಲ್ಲಾ ಹೇಳಿದೆ. "ಅದೇ ಕಾರು ತೊಳೀತಾ ಇದ್ದಾನೆ ತಾನೆ ನಿಮ್ಮಣ್ಣ" ಎಂದು ಅಣಕಿಸಿದರು. ಅದಾದ ಆರು ತಿಂಗಳಿಗೆ ಗೌರಿ ಹಬ್ಬ, ಅಪ್ಪನಿಗೆ ಪಂಚೆ, ಅಮ್ಮನಿಗೆ ಸೀರೆ, ನನಗೆ ಚಡ್ಡಿ, ಷರಟು ತೆಗೆದುಕೊಂಡು ಊರಿಗೆ ಬಂದರು. ಎರಡು ದಿನ ಇದ್ದರು. ಆಗಲೇ ಸಿಗರೇಟು ಸೇದುವುದನ್ನು ಕಲಿತಿದ್ದರು. ಅವರು ಹೊರಡೋಕೆ ಮುಂಚೆ ನಮ್ಮಪ್ಪ ದೊಡ್ಡಪ್ಪ ಮತ್ತು ದೊಡ್ಡಣ್ಣ ನಮ್ಮಣ್ಣನನ್ನು ಕೂರಿಸಿಕೊಂಡು "ಓದು" ಎಂದು ಬುದ್ಧಿ ಹೇಳಿದರು, ಬೈದರು, ಕಾರು ತೊಳೆದು ನಮ್ಮ ಬದುಕಿನ ವಂಶಕ್ಕೆ ಕೆಟ್ಟ ಹೆಸರು ತರುತ್ತೀಯಾ" ಎಂದರು. ಆದರೆ ಇದೆಲ್ಲಾ ಅವರ ತಲೆಗೆ ಹಿಡಿದ ಹಾಗೆ ಕಾಣಲಿಲ್ಲ. ಮೈಸೂರಿಗೆ ಹೊರಟು ಹೋದರು".

"ಸ್ವಲ್ಪ ದಿನ ಕಳೆದ ಮೇಲೆ ನಮ್ಮಣ್ಣ ಡ್ರೈವಿಂಗ್ ಕಲಿತುಕೊಂಡು ಮೈಸೂರಿನಿಂದ ಮಡಕೇರಿಗೆ ಹೋಗುತ್ತಿದ್ದ ಪಾಲಂಜೇಸ್ ಮೋಟಾರಿನ ಚಾಲಕರಾದರು. ಮತ್ತೊಂದು ದಿನ ಟ್ರಿಂ ಆಗಿ ಡ್ರೆಸ್ ಮಾಡಿಕೊಂಡು ಊರಿಗೆ ಬಂದರು. ಊರಿನಲ್ಲಿ ಸ್ವಲ್ಪ ದಿನವಿದ್ದರು, ಆಗ ಸೀಮೆಎಣ್ಣೆ ಡಬ್ಬ ಕತ್ತರಿಸಿ ಭೂತಕನ್ನಡಿ ತರಹ ಮಾಡಿ ಚಲನಚಿತ್ರ ತೋರಿಸ್ತೀನಿ ಅಂತಾ ಹೇಳಿ ಊರ ಹುಡುಗರನ್ನೆಲ್ಲಾ ಸೇರಿಸೋದು, ಚಲನಚಿತ್ರದಂತೆ ತೋರಿಸೋದು, ಮತ್ತೆ ಮೈಸೂರಿಗೆ ಹೋಗೋದು, ಬರೋದು, ಮಾಡ್ತಾ ಇದ್ರು".

"ನಮ್ಮ ತಂದೆಗೆ ಹೇಗಾದರೂ ಮಾಡಿ ಪುಟ್ಟಣ್ಣನನ್ನು ಒಂದು ಒಳ್ಳೆ ಮಾರ್ಗಕ್ಕೆ ಹಾಕಬೇಕೂಂತ ತುಂಬಾ ಆಸೆಯಿತ್ತು. ಆಗ ನಮ್ಮ ದೊಡ್ಡಣ್ಣ ಬಾಲಕೃಷ್ಣರವರು ಮೈಸೂರಿನಲ್ಲಿ ಛಾಯಾಗ್ರಹಣದ ಕೆಲಸ ಮಾಡುತ್ತಿದ್ದರು. ಅವರಿಗೆ ನಮ್ಮ ತಂದೆ ಇವನಿಗೇನಾದರೂ ಒಂದು ಕೆಲಸ ಹಚ್ಚಪ್ಪ ಎಂದು ತಿಳಿಸಿದರು. ಅದರಂತೆ ನಮ್ಮ ದೊಡ್ಡಣ್ಣ ಪುಟ್ಟಣ್ಣನನ್ನು ತಾವು ಕೆಲಸ ಮಾಡುತ್ತಿದ್ದ ರಾಜನ್ ಬ್ರದರ್ಸ್ ಎಂಬ ಹೆಸರಿನ ಗೋವಿಂದರಾವ್‌ರವರ ಫೋಟೋ ಸ್ಟುಡಿಯೋದಲ್ಲಿ ಕೆಲಸಕ್ಕೆ ಸೇರಿಸಿದರು".

"ಅಲ್ಲಿ ಪುಟ್ಟಣ್ಣ ಬಹಳ ದಿನ ಛಾಯಾಗ್ರಹಣ ಕಲಿತರು. ಜೊತೆಗೆ ಆ ಸ್ಟುಡಿಯೋ ಮಾಲೀಕ ಗೋವಿಂದರಾವ್‌ರವರ ಕಾರಿನ ಚಾಲಕರೂ ಆದರು. ಆದರೆ ನನ್ನ ದೊಡ್ಡಣ್ಣನಿಗೆ ತಾನು ಕೆಲಸ ಮಾಡುವ ಸ್ಟುಡಿಯೋ ಮಾಲೀಕನ ಕಾರಿಗೆ ತನ್ನ ತಮ್ಮ ಚಾಲಕನಾಗಿರುವುದು ಇಚ್ಛೆಯಾಗಲಿಲ್ಲ. ಬೈದರು. ಪುಟ್ಟಣ್ಣ ಅದನ್ನು ಬಿಟ್ಟು ಒಂದು ದಿನ ಊರಿಗೆ ಬಂದರು. ಪುನಃ ತಂದೆ ಬೈದು. "ನಾನು ಹೇಳುವ ಶ್ಲೋಕಗಳನ್ನಾದರೂ ಬರೆ" ಎಂದರು. ಪುಟ್ಟಣ್ಣನ ಅಕ್ಷರ ಬಹಳ ಮುದ್ದಾಗಿದ್ದವು. ಮೂರು ದಿನ ನಮ್ಮ ತಂದೆ ಹೇಳಿದ ಶಂಕರಾಚಾರ್ಯ ವಿರಚಿತ "ಸೌಂದರ್ಯ ಲಹರಿ"ಯ ಶ್ಲೋಕಗಳನ್ನು ಬರೆದರು. ತಂದೆ ತುಂಬಾ ಸಂತೋಷಪಟ್ಟರು".

"ಅಷ್ಟು ಹೊತ್ತಿಗೆ ನನ್ನ ಎರಡನೇ ಅಣ್ಣ ಪ್ರಭಾಕರಶಾಸ್ತ್ರಿಗಳು ಮೈಸೂರಿನಲ್ಲಿ ನಾಟಕ ಕಂಪನಿ ಸೇರಿಕೊಂಡು ಹೆಸರು ಮಾಡಿದ್ದರು. ಬಾಲಕೃಷ್ಣ, ಪ್ರಭಾಕರ ಶಾಸ್ತ್ರಿಗಳು, ಪುಟ್ಟಣ್ಣ ಎಲ್ಲರಿಗೂ ಆಗುವಂತೆ ಮೈಸೂರಿನಲ್ಲಿ ತಿಂಗಳಿಗೆ ಇಪ್ಪತ್ತು ರೂಪಾಯಿನ ಒಂದು ಬಾಡಿಗೆ ಮನೆ ಹಿಡಿದರು. ನಮ್ಮ ತಂದೆ ತಾಯಿಯನ್ನು ಸಹಾ ಅಲ್ಲಿಗೆ ಬರುವಂತೆ ಒತ್ತಾಯಿಸಿದರು. ನಮ್ಮ ತಂದೆ ಮೈಸೂರಿಗೆ

ಹೋಗಲಿಚ್ಛಿಸಲಿಲ್ಲ. ಆದರೆ ನಮ್ಮ ತಾಯಿಗೆ ಮಕ್ಕಳ ಜೊತೆ ಇರಲು ಖುಷಿಯಾಗಿತ್ತು. ಅಂತೆಯೇ ನಮ್ಮ ತಂದೆ, ತಾಯಿ ಮೈಸೂರಿಗೆ ಹೋದರು".

"ನಮ್ಮಪ್ಪ ಅಮ್ಮ ಮೈಸೂರಿಗೆ ಹೋದ ದಿನ ಅವರಿಗೆ ವಿಶೇಷ ಅಡಿಗೆ ಮಾಡುವಾಗ ನನ್ನ ದೊಡ್ಡ ಅತ್ತಿಗೆ "ಪುಟ್ಟ ಇದ್ರೆ ಚೆನ್ನಾಗಿತ್ತು. ಚಪಾತಿ ಒತ್ತಿ ಕೊಡುತ್ತಿದ್ದ" ಎಂದು ನೆನೆಸಿಕೊಂಡರು. "ಎಲ್ಲಿ ಹೋದ" ಎಂದಾಗ "ಗೊತ್ತಿಲ್ಲ. ಅವನು ಸರಿಯಾಗಿ ಮನೆಗೆ ಬರೋಲ್ಲ. ಎಲ್ಲಿ ಹೋಗ್ತಾನೋ, ಏನು ಕಥೆಯೋ" ಎಂದರು".

"ಪುಟ್ಟಣ್ಣ ಎರಡು ದಿನ ಬಿಟ್ಟು ಮನೆಗೆ ಬಂದಾಗ ಅತ್ತಿಗೆ "ಎಲ್ಲಿಗೆ ಹೋಗಿದ್ದೆಯೋ" ಎಂದು ಕೇಳಿದಾಗ "ಪುರಭವನದಲಿ ವಿಜಯನಾರಸಿಂಹ ಮತ್ತು ಹುಣಸೂರು ಕೃಷ್ಣಮೂರ್ತಿಯವರ ನಾಟಕ ನಡೆಯುತ್ತಿದೆ, ನಾನು ಕೂಡ ಅಲ್ಲಿ ಕೆಲಸ ಮಾಡಿಕೊಂಡು ಪಾರ್ಟ್ ಮಾಡುತ್ತಿದ್ದೇನೆ. ಅದಕ್ಕೆ ಅವರು ದುಡ್ಡು ಕೊಟ್ಟಿದ್ದಾರೆ ನೋಡಿ" ಎಂದು ಹೇಳಿ ರೂಪಾಯಿ ತೋರಿಸಿದ. ಇದು ನಮ್ಮ ದೊಡ್ಡಣ್ಣನಿಗೆ ಗೊತ್ತಾಗಿ ಸಿಕ್ಕಾಪಟ್ಟೆ ಬೈದರು. ನಮ್ಮ ದೊಡ್ಡಪ್ಪನವರೂ ಸಹಾ ಪುಟ್ಟಣ್ಣನಿಗೆ "ನೀನು ನಾಟಕದ ಸಹವಾಸ ಬಿಟ್ಟು ಬಿಡಪ್ಪ" ಎಂದು ಉಪದೇಶ ಮಾಡಿದರು. ಅಂದಿನಿಂದ ಒಂದು ತಿಂಗಳು ಪುಟ್ಟಣ್ಣ ನಾಪತ್ತೆಯಾದರು" ಎಂದರು.

ಅಷ್ಟರಲ್ಲಿ ಪುಟ್ಟಣ್ಣನವರ ಅಭಿಮಾನಿಗಳೂ, ಆರಾಧಕರೂ ಆದ ಛೇರ್ಮನ್ ಚಂದ್ರಶೇಖರ್ ಮತ್ತು ರವೀಂದ್ರನಾಥ್ ಬಂದರು. ಇವರುಗಳು ಸುಮಾರು ೩೦-೩೫ ವರ್ಷ ವಯಸ್ಸಿನ ಪುಟ್ಟಣ್ಣನವರ ಯುವ ಮಿತ್ರರು. ಅಷ್ಟು ಹೊತ್ತಿಗಾಗಲೇ ಗಂಟೆ ನಾಲ್ಕಾಗಿತ್ತು. ನಮಗೂ ಆಗಲೇ ಹಸಿವಾಗಿತ್ತು. ಅದು ಅವರಿಗೆ ಹೇಗೆ ಗೊತ್ತಾಯಿತೋ ತಿಳಿಯದು, ಎರಡು ದೊಡ್ಡ ತಟ್ಟೆಗಳಲ್ಲಿ ನರಸಿಂಹನವರ ಹೆಂಡತಿಯ ಗೆಳತಿ ವಿನಯ ಕುಮಾರಿ ಉಪ್ಪಿಟ್ಟು ತಂದಿಟ್ಟರು. ಆದರೆ ನರಸಿಂಹರವರ ಶ್ರೀಮತಿ ಗೌರಮ್ಮನವರು ನಮ್ಮ ಎದುರಿಗೇ ಕೂತಿದ್ದರೂ, ಅದು ಹೇಗೆ ತಿಂಡಿಗೆ ವ್ಯವಸ್ಥೆ ಮಾಡಿದರೋ ಎಂಬುದು ಅಚ್ಚರಿಯನ್ನು ಮೂಡಿಸಿತು. ಬಂದಿದ್ದವರನ್ನು "ನಿಮಗೆ ತಿಂಡಿ" ಎಂದು ಕೇಳಿದೆ. ಅವರು "ನಮ್ಮದು ಆಗಲೇ ಆಗಿದೆ. ನೀವುಗಳು ತೆಗೆದುಕೊಳ್ಳಿ" ಎಂದರು. ನರಸಿಂಹನವರು "ನಾನಿನ್ನೇನಿದ್ದರೂ ರಾತ್ರಿಯೇ ಊಟ ಮಾಡುವುದು" ಎಂದರು.

ನಾನು ನನ್ನ ಪೆನ್ನನ್ನು ಮಡಿಸಿಟ್ಟೆ, ತಿಂಡಿ ತಿನ್ನಲು ತಟ್ಟೆಗೆ ಕೈ ಹಾಕಿದೆವು. ನರಸಿಂಹನವರು ಪುನಃ ತಮ್ಮ ದೊಡ್ಡ ಗಂಟಲಿನಲ್ಲಿ ಮಾತನಾಡಲು

ಪ್ರಾರಂಭಿಸಿದರು. ತಕ್ಷಣ ನಾನು "ನರಸಿಂಹರವರೇ ದಯವಿಟ್ಟು ನಮ್ಮ ತಿಂಡಿ ತಿನ್ನುವವರೆಗೆ ನೀವು ಮಾತನಾಡಬಾರದು. ಏಕೆಂದರೆ ನನಗೆ ಬರೆದುಕೊಳ್ಳಲಾಗುವುದಿಲ್ಲ" ಎಂದೆ. "ಅದಕ್ಕೇನು ಬಿಡಿ ಸಾರ್ ಮತ್ತೊಮ್ಮೆ ಹೇಳುತ್ತೇನೆ" ಎಂದರು. "ದಯವಿಟ್ಟು ಬೇಡವೇಬೇಡಿ" ಎಂದು ಕಟ್ಟಪ್ಪಣೆ ಮಾಡಿದೆ. ಅಷ್ಟರಲ್ಲಿ ಅವರ ಹೆಂಡತಿಯೂ "ಇಗಾಗಲೇ ಮೂರು ಗಂಟೆ ಮಾತನಾಡಿದ್ದೀರಿ. ಸ್ವಲ್ಪ ಹೊತ್ತು ಸುಮ್ಮನಿರಿ" ಎಂದರು. ಇನ್ನು ನನ್ನ ಹತ್ತಿರ ಮಾತನಾಡಿ ಪ್ರಯೋಜನವಿಲ್ಲವೆಂದು ಚಂದ್ರಶೇಖರ್ ಮತ್ತು ರವೀಂದ್ರನಾಥ್‌ರವರ ಜೊತೆ ಮಾತನಾಡಲು ಶುರು ಮಾಡಿದರು.

ತಿಂಡಿ ತಿನ್ನುತ್ತಾ ಸ್ವಲ್ಪ ಹೊತ್ತು ಅಂತಃರ್ಮುಖಿಯಾದೆ, ಪುಟ್ಟಣ್ಣನವರಿಗೂ, ನರಸಿಂಹರವರಿಗೂ ವ್ಯತ್ಯಾಸವಿದ್ದಂತೆ ಕಾಣಲಿಲ್ಲ, ಶಾರೀರಿಕವಾಗಿಯೂ ಸಹ ನರಸಿಂಹರವರು ಪುಟ್ಟಣ್ಣನವರಿಗಿಂತ ಸ್ವಲ್ಪ ಎತ್ತರ ಎನ್ನುವುದೊಂದನ್ನು ಬಿಟ್ಟರೆ ತಟ್ಟನೆ ನೋಡಿದರೆ ಪುಟ್ಟಣ್ಣನವರೇ ಇರಬೇಕೇನೋ ಎನ್ನಿಸುತ್ತಿತ್ತು. ಸಾಲದ್ದಕ್ಕೆ ಪುಟ್ಟಣ್ಣರವರಂತೆ ಗಡ್ಡವನ್ನೂ ಬಿಟ್ಟಿದ್ದರು. ಪುಟ್ಟಣ್ಣನವರಿಗೆ ಹೆಚ್ಚು ಬಿಳಿ ಮಿಶ್ರಿತ ಗಡ್ಡವಿದ್ದರೆ ನರಸಿಂಹರವರಿಗೆ ಕಪ್ಪು ಗಡ್ಡವಿತ್ತು. ಮಾತಿನಲ್ಲಿಯೂ ಪುಟ್ಟಣ್ಣವರಷ್ಟೇ ವೇಗ, ಪಟಪಟಾಂತ ಹೋಗುತ್ತಿತ್ತು, ಗಂಟಲೂ ಸಹ ದೊಡ್ಡದು. ಅವರ ಮಾತಿನ ದೊಡ್ಡ ಶಬ್ದಕ್ಕೆ ಬೀದಿಯಲ್ಲಿ ಹೋಗುತ್ತಿದ್ದವರು ೩–೪ಸಲ ಇಣಕೂ ಹಾಕಿದ್ದರು. ಆಗ ನರಸಿಂಹರವರು "ನೋಡಿ, ಇವರು ಹಾಸನದ ಬಸವೇಗೌಡರು. ನಮ್ಮ ಪುಟ್ಟಣ್ಣನವರ ಆತ್ಮೀಯ ಗೆಳೆಯರು. ನಮ್ಮ ಮನೆ ನೋಡಲಿಕ್ಕೆ ಬಂದಿದ್ದಾರೆ" ಎನ್ನುತ್ತಿದ್ದರು. ಅವರು ಮಾತನಾಡುವಾಗ ಎರಡು ಕೈಗಳು ಕುಣಿಯುತ್ತಿದ್ದವು. ಪುಟ್ಟಣ್ಣನವರು ಮಾತನಾಡುತ್ತಿದ್ದ ರೀತಿಯಲ್ಲಿಯೇ ಎರಡು ಕೈಗಳನ್ನು ಮುಂದೆ ನೀಡಿ ಮೊಣಕೈಗಳನ್ನು ಅರ್ಧಮಡಿಸಿ ಹಸ್ತಗಳನ್ನು ಮೇಲೆತ್ತಿ ಬೆರಳುಗಳನ್ನು ಅಗಲಿಸಿ ಕ್ಯಾಮರಾ ದೃಷ್ಟಿ ವೀಕ್ಷಿಸುವಂತೆ ಮುಖದಲ್ಲಿ ಭಾವನೆಯನ್ನು ಹೊಮ್ಮಿಸುತ್ತಾ ಮಾತನಾಡುತ್ತಿದ್ದರು.

ತಿಂಡಿ ತಿಂದು ಮುಗಿಯಿತು "ಇನ್ನು ಹೇಳಿ" ಎಂದು ನಾನು ಕೇಳುವ ಮುನ್ನವೇ ಪ್ರಾರಂಭಿಸಿದರು. "ಒಂದು ತಿಂಗಳಿಂದ ನಮ್ಮಣ್ಣ ನಾಪತ್ತೆಯಾದ ಎಂದು ಹೇಳಿದ್ದೇನಲ್ಲವೇ, ಆಮೇಲೆ ಒಂದು ದಿನ ಗೊತ್ತಾಯಿತು. ಪುಟ್ಟಣ್ಣ ಶಿವಮೊಗ್ಗದಲ್ಲಿ ಬೋಸಿಲ್‌ಕೆಮಿಕಲ್ ಅಂಡ್ ಆಯಿಲ್ ಡಿಸ್ಟ್ರಿಬ್ಯೂಟರ್ ಸಂಸ್ಥೆಯ ಏಜೆನ್ಸಿ ಪಡೆದಿದ್ದ ತ್ರಿವೇಣಿ ಟ್ರೇಡಿಂಗ್ ಕಂಪನಿಯ ಮಾಲೀಕ ಪ್ರಹ್ಲಾದ್‌ರಾವ್‌ರವರ ವ್ಯಾನಿನಲ್ಲಿ ಚಾಲಕರಾಗಿರುವರೆಂದು. ಆಗ ಅವರ ಕೆಲಸ ವ್ಯಾನಿನಲ್ಲಿ ಸೆಂಟು

ಮುಂತಾದ ಸುಗಂಧದ ಪದಾರ್ಥಗಳನ್ನು ತುಂಬಿಕೊಂಡು ಹೋಗಿ ಹಳೇ ಕರ್ನಾಟಕದಲ್ಲೆಲ್ಲಾ ಮಾರುವ ಸಲುವಾಗಿ ಅಂಗಡಿಗಳಿಗೆ ವಿತರಣೆ ಮಾಡುವುದು. ಅಷ್ಟು ಹೊತ್ತಿಗೆ ನಮ್ಮ ತಂದೆ ತಾಯಿಯವರು ಪುನಃ ಕಣಗಾಲಿಗೆ ಬಂದಿದ್ದರು. ಇವರು ವ್ಯಾನು ಓಡಿಸುವುದನ್ನು ತಿಳಿದು ಇನ್ನು ಇವನಿಗೆ ಬುದ್ಧಿ ಹೇಳಿ ಪ್ರಯೋಜನವಿಲ್ಲವೆಂದು ಅತ್ಯಂತ ನೋವಿನಿಂದ ಕೈ ಬಿಟ್ಟರು".

"ಆದರೆ ನಮ್ಮಣ್ಣ ನಮ್ಮನ್ನು ಕೈ ಬಿಡಲಿಲ್ಲ. ಒಂದು ದಿನ ರಾಮನಾಥಪುರ ಕೊಣನೂರುಗಳಿಗೆ ಸೆಂಟ್ ವಿತರಣೆ ಮಾಡಲು ಬಂದಿದ್ದವರು ಕಡುವಿನ ಹೊಸಹಳ್ಳಿ ಹತ್ತಿರ ವ್ಯಾನ್ ನಿಲ್ಲಿಸಿ, ದೋಣಿಯಲಿ ಹೊಳೆದಾಟಿ ಊರಿಗೆ ಬಂದರು. ಬರುವಾಗ ಎಂದಿನಂತೆ ಅಮ್ಮನಿಗೆ ಸೀರೆ, ಅಪ್ಪನಿಗೆ ಪಂಚೆ, ರಾಗಿ, ಸಕ್ಕರೆ, ಕಾಫಿಪುಡಿ, ತರಕಾರಿ, ಹಣ್ಣು, ಹೂವು ಎಲ್ಲವನ್ನು ತಂದಿದ್ದರು. ಊಟ ಮಾಡಿ ಅಮ್ಮನ ಜೊತೆ ಸ್ವಲ್ಪ ಹೊತ್ತು ಮಾತನಾಡಿದರು. ನನಗೂ "ನೀನು ಚೆನ್ನಾಗಿ ಬದುಕಬೇಕು ಕಣೋ ಅಣ್ಣ" ಎಂದು ಬುದ್ಧಿಮಾತು ಹೇಳಿ ಹೊರಟು ಹೋದರು. ತಂದೆಯವರಿಗೆ ಪುಟ್ಟಣ್ಣನ ಬದುಕಿನ ರೀತಿ ಇಚ್ಛೆಯಿಲ್ಲದಿದ್ದರೂ ಅವರು ತಂದೆ ತಾಯಿಗಳಲ್ಲಿಟ್ಟಿದ್ದ ಪ್ರೀತಿ ಮತ್ತು ಅಂತಃಕರಣಕ್ಕಾಗಿ ಮಾರುಹೋಗಿದ್ದರು".

"ನಮ್ಮ ಅಜ್ಜಿಯ ತಿಥಿಯು ಮೂರ್‍ನಾಲ್ಕು ದಿನವಿದೆ ಎನ್ನುವಾಗ ಪುಟ್ಟಣ್ಣ ಅಪ್ಪನಿಗೆ ಐವತ್ತು ರೂಪಾಯಿ ಅಂಚೆ ಮೂಲಕ ಕಳುಹಿಸಿದರು. ಅಪ್ಪನಿಗೆ ತುಂಬಾ ಸಂತೋಷವಾಯಿತು. ಚೆನ್ನಾಗಿ ತಿಥಿ ಮಾಡಿ ಆನಂದವಾಗಿ ಊಟ ಮಾಡಿದರು".

"ನಮ್ಮಣ್ಣ ಬೋಸಿಲ್ ಆಯಿಲ್ ಕಂಪನಿಯ ವ್ಯಾನ್ ಚಾಲಕನ ಕೆಲಸಬಿಟ್ಟು ಮೈಸೂರು ಇಟ್ಟಿಗೆ ಗೂಡಿನ ಕೂಲಿಮಠದಲ್ಲಿ ಉಪಾಧ್ಯಾಯನಾಗಿರುವುದು ತಿಳಿಯಿತು. ಅದನ್ನು ಕೇಳಿ ನಮ್ಮ ತಂದೆ ಸ್ವಲ್ಪ ಮಟ್ಟಿಗೆ ಸಮಾಧಾನ ತಂದುಕೊಂಡರು. ಆಮೇಲೆ ಅದನ್ನೂ ಬಿಟ್ಟರು. ಒಂದು ರಾತ್ರಿ ನಾನು ಮೈಸೂರಿನ ಪುರಭವನದಲ್ಲಿ ನಮ್ಮಣ್ಣ ನಾಟಕದಲ್ಲಿ ಪಾತ್ರ ಮಾಡಿದ್ದನ್ನು ನೋಡಿದೆ. ಅದು ಡಿಕ್ಕಿ ಮಾಧವರಾವ್‌ರವರ ಕಂಪನಿ ಇರಬಹುದು. ವಿಜಯನಾರಸಿಂಹ ರಾಜನ ಪಾತ್ರ ಮಾಡಿದ್ದರು. ನಮ್ಮಣ್ಣ ರಾಣಿ ಪಾತ್ರ ಮಾಡಿದ್ದರು. ಅದಕ್ಕಾಗಿ ಪುಟ್ಟಣ್ಣ ಹೆಂಗಸರು ಬಿಡುವಂತೆ ಮುಡಿಬಿಟ್ಟು ಅದನ್ನು ಕಟ್ಟುತ್ತಿದ್ದರು. ಇದು ನನ್ನ ಅತ್ತಿಗೆಗೆ ಗೊತ್ತಾಯಿತು. ಬೈದು. "ಲೋ ಕರಿಪುಟ್ಟ, ಇನ್ನಾದರೂ ಇದನ್ನೆಲ್ಲಾ ಬಿಟ್ಟು ಬಿಡಪ್ಪ" ಎಂದರು. ನನ್ನ ಅತ್ತಿಗೆ ಅವರನ್ನು ಯಾವಾಗಲೂ ಪ್ರೀತಿಗಾಗಿ "ಕರಿಪುಟ್ಟ" ಎಂದೇ ಕರೆಯುತ್ತಿದ್ದರು. ಇವರು ನಾಟಕದಲ್ಲಿ ಪಾತ್ರ ಮಾಡುತ್ತಿದ್ದುದು ನಮ್ಮ

ದೊಡ್ಡಣ್ಣನಿಗೂ ಗೊತ್ತಾಯಿತು. ದೊಡ್ಡಣ್ಣ ಬಯ್ತಾರೆ ಎಂದು ಪುಟ್ಟಣ್ಣ ಅವರು ಮನೆಗೆ ಬರುವುದರೊಳಗೆ ಊಟ ಮಾಡಿ ಹೊರಟು ಬಿಡುತ್ತಿದ್ದರು".

"ನಮ್ಮಣ್ಣ ಮೈಸೂರು ನಾಟಕ ಕಂಪನೀಲಿ ಖಾಯಂ ಆಗಿ ಸೇರಿ ಹೋದುದ್ದನ್ನು ಕೇಳಿ ನಮ್ಮ ತಂದೆಗೆ ತುಂಬಾ ವ್ಯಥೆಯಾಯಿತು, ಅವರ ಜಾತಕವನ್ನು ತೆಗೆದುಕೊಂಡು ಹೋಗಿ ಮೈಸೂರಿನಲ್ಲಿ ಒಬ್ಬ ಜ್ಯೋತಿಷಿಗೆ ತೋರಿಸಿದರು. ಆ ಜ್ಯೋತಿಷಿ ಇವನ ಜಾತಕ ತುಂಬಾ ಚೆನ್ನಾಗಿದೆ. ಇವನಿಗೆ ಮುಂಜಿ ಮಾಡಿಸಿದರೆ ಸರಿ ಹೋಗುತ್ತಾನೆ ಎಂದರು. ಅಂತೆಯೇ ಮೈಸೂರಿನಲ್ಲಿ ಪುಟ್ಟಣ್ಣನವರ ಉಪನಯನ ಮಾಡಿ, ನಮ್ಮ ತಂದೆ ಪುಟ್ಟಣ್ಣನನ್ನು ನಮ್ಮ ಹಳ್ಳಿ ಕಣಗಾಲಕ್ಕೆ ಕರೆದುಕೊಂಡು ಬಂದರು. ಮೂರು ತಿಂಗಳು ಕಠಿಣವಾಗಿ ಸಂಧ್ಯಾವಂದನೆ ಹೇಳಿಕೊಟ್ಟರು. "ಬ್ರಹ್ಮಸ್ತೋತ್ರ ರತ್ನಾಕರ" ಎಂಬ ಪುಸ್ತಕವನ್ನು ಅವನ ಕೈಗೆ ಕೊಟ್ಟು "ಚೆನ್ನಾಗಿ ಓದಿಕೋ, ಇದು ನಿನ್ನ ಜೀವನದಲ್ಲಿ ತುಂಬಾ ಸಹಾಯ ಮಾಡುತ್ತದೆ" ಎಂದರು. ನನ್ನ ದೊಡ್ಡಪ್ಪನವರು "ನೀನು ಏನೂ ಬೇಕಾದರೂ ಮಾಡು,'ಆದರೆ ನಾಟಕದ ಕಂಪನಿ ಮಾತ್ರ ಸೇರಬೇಡ" ಎಂದರು. ಅವರು ಹೇಳಿದ ಉಪದೇಶ ನಮ್ಮಣ್ಣನಿಗೆ ಹಿಡಿಸಿತೋ ಇಲ್ಲವೋ, ಅವರು ಮೂರು ತಿಂಗಳಾದ ಮೇಲೆ ಮೈಸೂರಿಗೆ ಹೊರಟು ಹೋದರು".

"ಆ ವೇಳೆಗೆ ಸೋರೋಟ್ ಅಶ್ವತ್ಥ್‌ರವರ ನಾಟಕ ಕಂಪನಿ ಮೈಸೂರಿನಲ್ಲಿ ಕ್ಯಾಂಪ್ ಮಾಡಿತ್ತು, ನಮ್ಮ ಅಣ್ಣ ಆ ಕಂಪನಿಗೆ ಸೇರಿದರು. ಅದು ಬಹುಶಃ ೧೯೪೯ರಲ್ಲಿ, ನಾನು ಆ ದಿನ ಮೈಸೂರಿಗೆ ಹೋಗಿದ್ದೆ, ನಮ್ಮಣ್ಣ ಹಣ್ಣು ಹೂವು ತಂದು ಕೊಟ್ಟು ನಮ್ಮತ್ತಿಗೆಯನ್ನು ಪುಸಲಾಯಿಸಿ ನಾಟಕ ನೋಡಲು ಬರುವಂತೆ ಒಪ್ಪಿಸಿದರು. ನಮ್ಮ ಅದೃಷ್ಟಕ್ಕೆ ಆದಿನ ನಮ್ಮ ದೊಡ್ಡಣ್ಣ ಊರಲ್ಲಿರಲಿಲ್ಲ. ಆದುದರಿಂದ ನಮ್ಮ ಅತ್ತಿಗೆ ಮತ್ತು ನಾನು ನಾಟಕಕ್ಕೆ ಹೋದೆವು. ನಾಟಕ ಬಿಟ್ಟ ಮೇಲೆ ಮನೆಗೆ ಹೋದಾಗ ನಮ್ಮ ಗ್ರಹಚಾರ ಕಾದಿತ್ತು. ಊರಲ್ಲಿರುವುದಿಲ್ಲ ಎಂದಿದ್ದ ನಮ್ಮ ದೊಡ್ಡಣ್ಣ ಮನೆಗೆ ಬಂದು ಬಿಟ್ಟಿದ್ದರು. ಅವರು ನನ್ನ ಅತ್ತಿಗೆಯವರಿಗೆ ಚೆನ್ನಾಗಿ ಮಂಗಳಾರತಿ ಮಾಡಿದರು".

"ಒಂದು ವಾರ ಕಳೆದ ಮೇಲೆ ಪುಟ್ಟಣ್ಣ ಮನೆಗೆ ಬಂದರು. ಆಗ ದೊಡ್ಡಣ್ಣ ಮನೆಯಲ್ಲೇ ಇದ್ದರು. ವಾಚಾಮಗೋಚರವಾಗಿ ಬೈದು "ನನಗೆ ಮುಖ ತೋರಿಸಬೇಡ ಹೊರಟುಹೋಗು" ಎಂದರು. ಎಂದೂ ಅವರಿಗೆ ಎದುರು

ಮಾತನಾಡದಿದ್ದ ಪುಟ್ಟಣ್ಣ ಅಂದು ಎದುರು ವಾದಿಸಿ "ನಾನು ನಾಟಕದ ಕಂಪನಿ ಸೇರೇ ಸೇರ್ತೀನಿ" ಎಂದರು. ದೊಡ್ಡಣ್ಣ "ನಿನಗೆ ಆ ಯೋಗ್ಯತೆ ಇದೆಯೇ?" ಎಂದರು. "ಖಂಡಿತಾ ಇದೆ. ನೀನೇ ಒಂದು ದಿನ ಹೊಗಳುತ್ತೀಯೆ" ಎಂದು ಹೇಳುತ್ತಾ ಸರ್ರನೆ ಮನೆ ಬಿಟ್ಟು ಹೊರಟೇ ಹೋದರು".

"ಸ್ವಲ್ಪ ದಿನದಲ್ಲಿ ಅವರಿಂದ ನನ್ನಪ್ಪನಿಗೆ ಒಂದು ಕಾಗದ ಬಂತು, ಅದರಲ್ಲಿ "ನನಗೆ ಬ್ರಹ್ಮೋಪದೇಶವಾಗಿದ್ದರೂ ನಾನೇನು ಬದಲಾವಣೆಯಾಗಿಲ್ಲ. ನಾನು ಪಾಪಿ, ನನಗಾಗಿ ನೀವು ಚಿಂತಿಸಬೇಡಿ, ನಾನಂತೂ ನಾಟಕ ಕಂಪನಿ ಬಿಡೋಲ್ಲ" ಎಂದು ಬರೆದಿದ್ದರು. ಈ ಕಾಗದದ ಜೊತೆಯಲ್ಲಿ ಇಪ್ಪತ್ತು ರೂಪಾಯಿಗಳನ್ನು ಕಳುಹಿಸುವುದನ್ನೂ ಮರೆತಿರಲಿಲ್ಲ. ನನ್ನ ತಂದೆಯವರು ಪತ್ರವನ್ನು ಓದಿ "ನಿನ್ನ ಪ್ರಾರಬ್ಧಕರ್ಮ" ಎಂದುಕೊಂಡರು".

"ಹೊಳೆಯಾಚೆ ಶಿರಂಗಾಲ ಗ್ರಾಮದಲ್ಲಿ ನಟಭಯಂಕರ ಗಂಗಾಧರ-ರಾಯರು ಪಾತ್ರ ವಹಿಸುತ್ತಿದ್ದ ನಾಟಕದ ಕಂಪನಿ ಕ್ಯಾಂಪು ಹಾಕಿತ್ತು. ಬಹುಶಃ ಸಾರೋಟ್ ಅಶ್ವಥ್‌ನಾರಾಯಣ ಶಾಸ್ತ್ರಿಗಳ "ಕಲಾಜ್ಯೋತಿ ಸಂಘ" ಇರಬಹುದು, ಒಂದು ದಿನ ನಮ್ಮ ಪಕ್ಕದ ಮನೆ ಸೀನು ಮಾವ, ಕರಗಿದ ಹರಕಲು ಜುಬ್ಬ, ಪೈಜಾಮ ತೊಟ್ಟು ಗಡ್ಡ ಬಿಟ್ಟುಕೊಂಡು ಡಮರು ಬಡಿಯುತ್ತಾ "ಇಂದು ರಾತ್ರಿ ಹತ್ತೂ ಮೂವತ್ತಕ್ಕೆ ಶಿರಂಗಾಲದಲ್ಲಿ ನಟಭಯಂಕರ ಗಂಗಾಧರರಾಯರು ಪಾತ್ರ ಮಾಡುವ ನಾಟಕ, ನೆಲ ಇಷ್ಟು, ಚಾಪೆ ಇಷ್ಟು" ಹಾಗೆಲ್ಲಾ ಸಾರುತ್ತಾ ಬರುತ್ತಿದ್ದ ಪುಟ್ಟಣ್ಣನನ್ನು ನೋಡಿ ಊರಿಗೆ ಕರೆದುಕೊಂಡು ಬಂದರು. ನಮ್ಮಣ್ಣ ಸ್ನಾನ ಮಾಡಿ ವಾರಗಟ್ಟಲೆ ಆಗಿತ್ತು".

"ಅಷ್ಟು ಹೊತ್ತಿಗಾಗಲೇ ನಮ್ಮಣ್ಣ ಊರೂರಿಗೆ ಹೋಗಿ ಡಮರು ಬಡಿದುಕೊಂಡು ಸಾರುವುದು, ನಾಟಕದ ಚೀಟಿಗಳನ್ನು ಕೈಯಲ್ಲಿ ಬರೆದು ಬೀದಿ ಬೀದಿಯಲ್ಲಿ ಎರಚುವುದು, ತನ್ನ ಕೈಯಿಂದಲೇ ಪೋಸ್ಟರು ಬರೆದು ಅವರಿವರ ಮನೆಯ ಮೇಲೆ ಹಚ್ಚಲು ಹೋಗಿ ಬೈಸಿಕೊಳ್ಳುವುದು, ಎಲ್ಲವನ್ನೂ ನೋಡಿ ಬಂದ ನಮ್ಮ ಊರಿನವರು ನಮ್ಮ ತಂದೆಗೆ ಹೇಳುತ್ತಿದ್ದರು. ಜೊತೆಗೆ ನಮ್ಮ ದಾಯಾದಿಗಳೆಲ್ಲಾ ಊರಿನಲ್ಲಿ ಪುಟ್ಟಣ್ಣ ಡಮರುಬಡಿದುಕೊಂಡು ಸಾರುವುದನ್ನು ಕುರಿತು ರಂಗುರಂಗಾಗಿ ಮಾತನಾಡಿಕೊಂಡು ನಗುವುದನ್ನು ಕೇಳಿ ನಮ್ಮ ತಂದೆ ನೊಂದು ದೇವರ ಮುಂದೆ ಕುಳಿತು ಅತ್ತಿದ್ದರು."

"ಈ ಸ್ಥಿತಿಯಲ್ಲಿ ಬಂದ ಪುಟ್ಟಣ್ಣನನ್ನು ಕಂಡು ನನ್ನ ತಂದೆ ಮತ್ತು ದೊಡ್ಡಪ್ಪ ವಾಚಾಮಗೋಚರವಾಗಿ ಬೈದರು. ಅದನ್ನು ಪುಟ್ಟಣ್ಣ ತಲೆಗೆ

ತಾಕಿಕೊಳ್ಳದೇ "ನನಗೆ ಈ ದಿನ ನಾಟಕ ಇದೆ, ನೀನೂ ನೋಡುವೆಯಂತೆ ಬಾ" ಎಂದ. "ನಿನ್ನ ಜೊತೆ ಬಂದರೆ ಅಪ್ಪ ಬಯ್ತಾರೆ, ನಾನು ಸಾಯಂಕಾರ ಬರುತ್ತೇನೆ, ನೀನು ಹೋಗು" ಎಂದೆ. ಅವನು ಹೊರಟುಹೋದ.

"ಆ ದಿನ ರಾತ್ರಿ ಹೆಬ್ಬಾಲೆ ಗ್ರಾಮದಲ್ಲಿ "ಸತ್ಯಸಾವಿತ್ರಿ" ನಾಟಕವಿತ್ತು, ನಮ್ಮಣ್ಣ ನಾಟಕ ಮುಗಿದ ಮೇಲೆ ಹೆಬ್ಬಾಲೆ ಶಾಲೆಯಲ್ಲಿದ್ದ ಕ್ಯಾಂಪಿಗೆ ನನ್ನನ್ನೂ ಕರೆದುಕೊಂಡು ಹೋದ, ಕಂಪನಿಯವರಿಗೆಲ್ಲಾ ಅಲ್ಲೇ ಅಡಿಗೆ ಮಾಡಿಸಿದ್ದರು. ಊಟಕ್ಕೆ ಕುಳಿತೆವು, ಅನ್ನ ಬಡಿಸಿದರು. ಅದು ಪೂರಾ ಅನ್ನ ಆಗಿರಲಿಲ್ಲ. ಒಂದು ಅಗಳು ಅನ್ನ, ಒಂದು ಕಲ್ಲು ಇತ್ತು, ಅದನ್ನೇ ಊಟ ಮಾಡಿದೆವು".

"ಆಗ ಆಷಾಡದ ಕಾಲ, ಹೊಳೆ ಬೇರೆ ಹತ್ತಿರವಿತ್ತು, ತುಂಬಾ ಚಳಿ ನಮ್ಮಣ್ಣನ ಹತ್ತಿರ ಒಂದೇ ಬೆಡ್‌ಶೀಟ್ ಇತ್ತು, ನನ್ನನ್ನು ಶಾಲೆಯ ಮಣೆ ಮೇಲೆ ಮಲಗಿಸಿ ಬೆಡ್‌ಶೀಟ್ ಹೊದೆಸಿದರು. ತನಗೆ ಹಾಸಲು, ಹೊದೆಯಲು ಏನೂ ಇರಲಿಲ್ಲ. ಕುಕ್ಕರಗಾಲಿನಲ್ಲಿ ಕುಳಿತು ಸಿಗರೇಟು ಸೇದುತ್ತಾ ಬೆಳಕು ಹರಿಸಿದರು. ಬೆಳಿಗ್ಗೆ ಎದ್ದು ತೂಕಡಿಸುತ್ತಾ ಕುಳಿತಿದ್ದ ನಮ್ಮಣ್ಣನನ್ನು ನೋಡಿ ನನಗೆ ಅಯ್ಯೋ ಎನಿಸಿತ್ತು. "ನಾಟಕದ ಕಂಪನಿ ಬಿಟ್ಟು ಬಿಡಣ್ಣ" ಎಂದೆ, "ಆಗೊಲ್ಲ ಕಣೋ ಅಣ್ಣ, ನಾಟಕ ಬಿಟ್ಟು ನನಗೆ ಬದುಕೋಕ್ಕೆ ಆಗೋಲ್ಲ" ಎಂದುಬಿಟ್ಟರು".

"ಗಂಗಾಧರರಾಯರ ಪಾತ್ರ ಮಾಡುತ್ತಿದ್ದ ಕಂಪನಿ ಹೆಬ್ಬಾಲೆಯಿಂದ ಕಂಪಲಾಪುರ, ಬೆಟ್ಟದ ಪುರದ ಜಾತ್ರೆ, ಚುಂಚನಕಟ್ಟೆ ಜಾತ್ರೆ ಆ ಕಡೆ ಹೋಯಿತು. ಒಂದು ದಿನ ನಮ್ಮಣ್ಣನಿಂದ ನನ್ನ ತಂದೆಗೆ ಒಂದು ಪತ್ರ ಬಂತು. ಅದರಲ್ಲಿ ತೀ॥ ತಂದೆಯವರಿಗೆ ನಿಮ್ಮ ಪ್ರೀತಿಯ ಮಗ ಪುಟ್ಟಣ್ಣನ ಸಾಷ್ಟಾಂಗ ನಮಸ್ಕಾರಗಳು. ಈಗ ನಾಟಕದ ಕಂಪನಿಯನ್ನು ಬಿಟ್ಟು ಬಿಟ್ಟೆ, ನನ್ನ ಸ್ನೇಹಿತನೊಬ್ಬನ ಮೋಟಾರ್ ಸೈಕಲ್‌ನಲ್ಲಿ ಹೋಗುವಾಗ ನನ್ನ ಡ್ರೈವಿಂಗ್ ಲೈಸೆನ್ಸ್ ಸಹಾ ಕಳೆದು ಹೋಯಿತು. ಒಂದು ಹೊತ್ತು ತಿನ್ನಲೂ ಸಹ ನನ್ನಲ್ಲಿ ಕಾಸಿಲ್ಲ" ಎಂದು ಬರೆದಿತ್ತು. ಪತ್ರವನ್ನು ಓದಿ ನನ್ನ ತಂದೆ ಗಳಗಳನೆ ಅತ್ತರು".

"ನಮ್ಮ ಊರಿನ ಗೌಡರೊಬ್ಬರು ಒಂದು ದಿನ ನಮ್ಮ ಮನೆಯ ಹತ್ತಿರ ಬಂದು ನನ್ನ ತಂದೆಯವರ ಕೂಡಾ ನಮ್ಮ ಊರಿನ ಹತ್ತಿರದ ಕಂಪ್ಲಾಪುರದಲ್ಲಿ ಒಂದು ನಾಟಕದ ಕಂಪನಿ ಕ್ಯಾಂಪ್ ಮಾಡಿರುವುದಾಗಿಯೂ, ಆ ನಾಟಕದಲ್ಲಿ ಪುಟ್ಟಣ್ಣ ಕುಳವಾಡಿ ಪಾತ್ರ ಮಾಡಿಕೊಂಡು "ಸಾರುವೆ ಡಂಗೂರ ಊರೆಲ್ಲಾ ಕೇಳಿರಿ ಸಾರುವೆ ಡಂಗೂರ" ಎಂದು ಸಾರುತ್ತಿದ್ದನೆಂದೂ ಹೇಳಿದರು".

"ಮತ್ತೊಂದು ದಿನ ಇನ್ನೊಬ್ಬರು ಬಂದು ಪುಟ್ಟಣ್ಣ ಕಂಪ್ಲಾಪುರದಲ್ಲಿ ಯಾರೋ ಗೌಡರ ಮನೆಯಲ್ಲಿ ಕಾಫಿ ಕುಡಿದನೆಂದೂ ಅಲ್ಲಿದ್ದ ಪರಿಚಯದವರು ಪುಟ್ಟಣ್ಣನನ್ನು "ಏನಪ್ಪಾ ನೀನು ಬ್ರಾಹ್ಮಣರ ಹುಡುಗನಾಗಿ ಒಕ್ಕಲಿಗರ ಮನೆಯಲ್ಲಿ ಕಾಫಿ ಕುಡಿಯುತ್ತೀಯಾ" ಎಂದಾಗ ಪುಟ್ಟಣ್ಣ "ನನಗೆ ಜಾತಿ ಗೀತಿ ಇಲ್ಲ" ಎಂದನಂತೆ ಎಂದೂ ಹೇಳಿದರು. ಇದನ್ನೆಲ್ಲಾ ಕೇಳಿ ನನ್ನ ತಂದೆಗೆ ತುಂಬಾ ಕೋಪ ಬಂದು ಪುಟ್ಟಣ್ಣನನ್ನು ಹುಡುಕಿಕೊಂಡು ಹೋಗಿ ನಾಟಕದ ಕಂಪನಿಯಿಂದ ಮೈಸೂರಿಗೆ ಎಳೆದುಕೊಂಡು ಬಂದರು".

"ಆಗ ಪ್ರಭಾಕರಶಾಸ್ತ್ರಿಯವರು ಪ್ರೀಮಿಯರ್ ಸ್ಟುಡಿಯೋ ಮಾಲೀಕ ಬಸವರಾಜಯ್ಯನವರಿಗೆ "ನಿಜಗುಣ ಶಿವಯೋಗಿ" ಚಿತ್ರಕಥೆಯನ್ನು ಬರೆಯಬೇಕಿತ್ತು. ಶಾಸ್ತ್ರಿಗಳು ಅದಕ್ಕಾಗಿ ಪುಟ್ಟಣ್ಣನವರನ್ನು ಹಿಡಿದು ತಂದು ಕೂರಿಸಿ ತಾವು ಹೇಳುತ್ತಿದ್ದುದನ್ನು ಪುಟ್ಟಣ್ಣನಿಂದ ಬರೆಸುತ್ತಿದ್ದರು. ಅದಕ್ಕಾಗಿ ಅವರಿಗೆ ಬಸವರಾಜಯ್ಯನವರು ದಿನಕ್ಕಿಷ್ಟೊಂತ ಕೂಲಿ ಕೊಡುತ್ತಿದ್ದರು".

"ಆದರೆ ಪುಟ್ಟಣ್ಣ ಅಲ್ಲಿ ಹೆಚ್ಚು ದಿನ ನಿಲ್ಲಲಿಲ್ಲ. ನಾಟಕದ ಕಂಪನಿಯೊಂದು ಕೆ.ಆರ್. ನಗರದಲ್ಲಿ ಕ್ಯಾಂಪ್ ಹಾಕಿದ್ದು, ಅಲ್ಲಿ ಹೋಗಿಬಿಟ್ಟಿದ್ದರು. ಈ ನಡುವೆ ಒಂದು ದಿನ ಅ.ನ. ಕೃಷ್ಣರಾಯರು ಯಾವುದೋ ಚಲನಚಿತ್ರಕ್ಕೆ ನಮ್ಮಣ್ಣ ಶಾಸ್ತ್ರಿಗಳ ಕೈಯಲ್ಲಿ ಚಿತ್ರಕಥೆ ಬರೆಸುವ ಸಲುವಾಗಿ ನಮ್ಮ ಮೈಸೂರು ಮನೆಗೆ ಬಂದರು. "ನಿಜಗುಣ ಶಿವಯೋಗಿ" ಚಿತ್ರಕಥೆ ಮೇಲೆ ಕಣ್ಣಾಡಿಸಿ "ಅಕ್ಷರ ತುಂಬಾ ಚೆನ್ನಾಗಿದೆಯಲ್ಲಾ ಯಾರದು?" ಎಂದರು. ಅಂದು ಪುಟ್ಟಣ್ಣ ಸಹ ಕೆ.ಆರ್. ನಗರದಿಂದ ಬಂದಿದ್ದರು. ಶಾಸ್ತ್ರಿಗಳು ಅ.ನ. ಕೃಷ್ಣರಾಯರಿಗೆ ಪುಟ್ಟಣ್ಣನ ಪರಿಚಯ ಮಾಡಿಸಿದರು. ಅವರು ನೀವಿಬ್ಬರೂ ಚಿತ್ರರಂಗದಲ್ಲಿ ಕೆಲಸ ಮಾಡುವ ಸಲುವಾಗಿ ಬೆಂಗಳೂರಿಗೆ ಏಕೆ ಬರಬಾರದು ಎಂದರು. ಅಂತೆಯೇ ಶಾಸ್ತ್ರಿಗಳು ಬೆಂಗಳೂರಿಗೆ ಹೋದರು".

"ಆರು ತಿಂಗಳು ಕಳೆದು ಪುಟ್ಟಣ್ಣನೂ ಬೆಂಗಳೂರಿಗೆ ಹೋದರು. ಅಷ್ಟರಲ್ಲಿ ಮದರಾಸಿನ ತೆಲುಗು ನಿರ್ದೇಶಕ ಟಿ. ಪ್ರಕಾಶ್‌ರಾವ್ ಇಬ್ಬರು ನಿರ್ಮಾಪಕರೊಡನೆ ಶಾಸ್ತ್ರಿಗಳನ್ನು ನೋಡಲು ಬಂದರು. ಅವರು ತೆಗೆಯಬೇಕೆಂದಿದ್ದ "ಭಾಗ್ಯೋದಯ" ಚಿತ್ರಕ್ಕೆ ಶಾಸ್ತ್ರಿಗಳನ್ನು ಕಥೆ ಬರೆಯಲು ಒಪ್ಪಿಸಿದರು. ಆಗೊಂದು ದಿನ ಪುಟ್ಟಣ್ಣನೂ ಶಾಸ್ತ್ರಿಗಳೊಡನೆ ಕೂತು ಬರೆಯುತ್ತಿದ್ದರು. ಆಗಲೂ ಪುಟ್ಟಣ್ಣನವರು ಸುಮ್ಮನೆ ಇರುತ್ತಿರಲಿಲ್ಲ. ಶಾಸ್ತ್ರಿಗಳೊಡನೆ "ಆ ಪಾತ್ರಕ್ಕೆ ಇವರನ್ನು ಹಾಕಬೇಕು, ಈ ಪಾತ್ರವನ್ನು ಇವರಿಂದ ಮಾಡಿಸಿದರೆ ಚೆಂದ" ಹೀಗೆಲ್ಲಾ ಸೂಚನೆ ನೀಡುತ್ತಿದ್ದರು,

ಕೋಪಗೊಂಡ ಶಾಸ್ತ್ರಿಗಳು" ಸುಮ್ಮನೆ ಬಾಯ್ಮುಚ್ಚಿಕೊಂಡು ಬರೆದುಕೊಳ್ಳಯ್ಯ" ಎಂದು ಬೈಯುತ್ತಿದ್ದರು".

"ಇದ್ದಕ್ಕಿದ್ದಂತೆಯೇ ಪುಟ್ಟಣ್ಣ ಬೆಂಗಳೂರಿನಿಂದ ಮೈಸೂರಿಗೆ ಬಂದದ್ದು ನನ್ನ ದೊಡ್ಡಣ್ಣನಿಗೆ ಗೊತ್ತಾಯಿತು, ಆದರೆ ನಾಲ್ಕೈದು ದಿನವಾದರೂ ಪುಟ್ಟಣ್ಣ ಮನೆಗೆ ಬರಲಿಲ್ಲ. ದೊಡ್ಡಣ್ಣ ಅವನನ್ನು ಹುಡುಕಿಕೊಂಡು ಬಾ ಎಂದು ನನ್ನನ್ನು ಕಳುಹಿಸಿದರು. ಪುಟ್ಟಣ್ಣ ಸಿಕ್ಕಿದರು. ತುಂಬಾ ತೊಂದರೆಯಲ್ಲಿದ್ದಂತೆ ಕಂಡರು. ಸಿಗರೇಟು ಬಿಟ್ಟು ಬೀಡಿ ಸೇದುತ್ತಿದ್ದರು. ನಾನು ಮನೆಗೆ ಕರೆದೆ. "ಸಿಕ್ಕಲಿಲ್ಲ ಅಂತ ಹೇಳಿಬಿಡು" ಎಂದರು. "ನೀವು ಶಾಸ್ತ್ರಿಗಳ ಜೊತೆ ಮದರಾಸಿಗೆ ಹೋಗಲಿಲ್ಲವೆ" ಎಂದೆ. ಶಾಸ್ತ್ರಿಗಳು ನನ್ನನ್ನು ಕರೆಯಲೇ ಇಲ್ಲ" ಎಂದರು.

"ಅಷ್ಟರಲ್ಲಿ ಶಾಸ್ತ್ರಿಗಳ ಹೆಂಡತಿಗೆ ಮೊದಲನೆಯ ಹೆರಿಗೆಯಾಯಿತು. ಪುಟ್ಟಣ್ಣನಿಗೂ ಕೆಲಸವಿರಲಿಲ್ಲ. ಮಗುವಿನ ತೊಟ್ಟಿಲು ತೂಗಿಕೊಂಡು ಹಾಡುತ್ತಿದ್ದರು. ಶಾಸ್ತ್ರಿಗಳ ಮನೆಯ ಬಟ್ಟೆ ಒಗೆಯುತ್ತಿದ್ದರು. ಒಂದು ಸಲ ಶಾಸ್ತ್ರಿಗಳು ಮದರಾಸಿನಿಂದ ಬಂದರು. ಶಾಸ್ತ್ರಿಗಳು ಮದರಾಸಿಗೆ ಹೊರಟಾಗ ಪುಟ್ಟಣ್ಣ ನಾನೂ ಬರುತ್ತೇನೆಂದರು. ಆದರೆ ಶಾಸ್ತ್ರಿಗಳು ಒಪ್ಪಲಿಲ್ಲ".

"ಆದರೂ ಒಂದು ದಿನ ಪುಟ್ಟಣ್ಣ ಮದರಾಸಿಗೆ ಹಾರಿದರು. ಅವರಿಂದ ಒಂದು ವರ್ಷ ಕಳೆದ ಮೇಲೆ ನನ್ನ ದೊಡ್ಡಣ್ಣನಿಗೆ ಒಂದು ಪತ್ರ ಬಂತು. ಅದರಲ್ಲಿ "ಪ್ರಭಣ್ಣನ ಹತ್ತಿರ ಹೋದೆ. ಇಲ್ಲಿ ಕೆಡೋದಕ್ಕೆ ಬಂದೆಯಾ ಎಂದು ಬೈದರು. ಊಟಕ್ಕೆ ದುಡ್ಡಿಲ್ಲ, ಮಲಗಲೂ ಸಹ ಜಾಗವಿಲ್ಲ. ಹೀಗಾದರೆ ನಾನು ಇಲ್ಲಿಯೇ ಸಾಯುತ್ತೇನೆ" ಎಂದು ಬರೆದಿದ್ದರು".

"ಇದಾದ ಸ್ವಲ್ಪ ದಿನದ ಮೇಲೆ ಪುಟ್ಟಣ್ಣನಿಂದ ಮತ್ತೊಂದು ಪತ್ರ ಬಂತು. ಅದರಲ್ಲಿ "ಪ್ರಭಣ್ಣ ಮತ್ತು ನಾನು ಪಂತುಲೂರವರ "ರತ್ನಗಿರಿ ರಹಸ್ಯ" ಚಿತ್ರಕ್ಕಾಗಿ ಕೆಲಸ ಮಾಡುತ್ತಿದ್ದೇವೆ" ಎಂದು ಬರೆದಿತ್ತು.

"ಪುಟ್ಟಣ್ಣನಿಂದ ನಮ್ಮ ತಂದೆಗೆ ಒಂದು ಪತ್ರ ಮತ್ತು ಅದರ ಜೊತೆ ನೂರು ರೂಪಾಯಿ ಮನಿಯಾರ್ಡರ್ ಸಹಾ ಬಂತು. ಅದರಲ್ಲಿ ಪಂತಲುರವರ "ರತ್ನಗಿರಿ ರಹಸ್ಯ"ದಲ್ಲಿ ತಾನು ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿರುವುದನ್ನು ಬರೆದು ಆ ಚಿತ್ರ ಮೈಸೂರಿನ "ರಾಜಕಮಲ್"ನಲ್ಲಿ ಬಿಡುಗಡೆಯಾಗುವುದಾಗಿ ತಿಳಿಸಿದ್ದರು".

"ರತ್ನಗಿರಿ ರಹಸ್ಯ" ನೋಡಲು ನಾನು ಮೈಸೂರಿನ "ರಾಜಕಮಲ್" ಟಾಕೀಸಿಗೆ ಹೋದೆ, ಚಿತ್ರ ಪ್ರಾರಂಭವಾಯಿತು. ಚಿತ್ರಶೀರ್ಷಿಕೆಯಲಿ ಸಾಹಿತಿ

ಪ್ರಭಾಕರಶಾಸ್ತ್ರಿಗಳೆಂದೂ, ಮೂರನೇ ಸಹಾಯಕ ನಿರ್ದೇಶಕ ಎಸ್.ಆರ್. ಪುಟ್ಟಣ್ಣನೆಂದೂ ಬಂತು, ನನಗೆ ಖುಷಿಯೋ ಖುಷಿ. ಊರಿಗೆ ಹೋದವನೇ ನಮ್ಮಪ್ಪನಿಗೆ ಎಲ್ಲಾ ಹೇಳಿದೆ. ನಮ್ಮಪ್ಪ ನಂಬಲಿಲ್ಲ. "ಅವನ್ಯಾರೋ ಬೇರೆ ಪುಟ್ಟಣ್ಣ ಇರಬೇಕು" ಎಂದರು".

"ಆಮೇಲೆ ಕ್ರಮವಾಗಿ ಬಿಡುಗಡೆಯಾದ ಪಂತುಲುರವರ "ಸ್ಕೂಲ್ ಮಾಸ್ಟರ್", ಚಿತ್ರದ ಶೀರ್ಷಿಕೆಯಲ್ಲಿ ಎಸ್.ಆರ್. ಪುಟ್ಟಣ್ಣ ದ್ವಿತೀಯ ಸಹಾಯಕ ನಿರ್ದೇಶಕನೆಂದೂ, "ಮಕ್ಕಳ ರಾಜ್ಯ"ದಲ್ಲಿ ಪ್ರಥಮ ಸಹಾಯಕ ನಿರ್ದೇಶಕನೆಂದೂ ಬಂದುದನ್ನು ನೋಡಿ ನನಗೆ ಹಿಡಿಯಲಾರದಷ್ಟು ಸಂತೋಷವಾಯಿತು".

"ಇದ್ದಕ್ಕಿದ್ದಂತೆಯೇ ಪ್ರಭಾಕರ ಶಾಸ್ತ್ರಿಗಳು ಒಂದು ದಿನ ಮದರಾಸಿನಿಂದ ಕಣಗಾಲಿಗೆ ಬಂದರು. ಊಟವಾದ ಮೇಲೆ ನನ್ನ ತಂದೆಯೊಡನೆ ಪುಟ್ಟಣ್ಣನ ಮದುವೆ ಬಗ್ಗೆ ಪ್ರಸ್ತಾಪಿಸಿ ಹೋದರು, ಅಪ್ಪರಲ್ಲಿ ಮದರಾಸಿನಿಂದ ಬಿ.ಆರ್. ಪಂತುಲುರವರು ಅಪ್ಪನಿಗೆ ಬರೆದ ಒಂದು ಕಾಗದ ಬಂತು, ಅದರಲ್ಲಿ ಕ್ಷೇಮ ಸಮಾಚಾರ ಬರೆದು, ಪುಟ್ಟಣ್ಣನ ಕಾರ್ಯನಿಷ್ಠೆ ಹೊಗಳಿ, ಕೊನೆಯಲ್ಲಿ ಆದಷ್ಟು ಜಾಗ್ರತೆ ಅವನಿಗೆ ಮದುವೆ ಮಾಡಿ ಎಂದು ಬರೆದಿದ್ದರು".

"ಇದಾದ ಒಂದು ವಾರದ ಮೇಲೆ ಪುಟ್ಟಣ್ಣ ಕಣಗಾಲಿಗೆ ಬಂದರು. ಅಪ್ಪ ಮದುವೆ ವಿಚಾರ ಎತ್ತಿದರು. ಪುಟ್ಟಣ್ಣ "ಸಿನಿಮಾದಲ್ಲಿರೋ ನನಗ್ಯಾರಪ್ಪಾ ಹೆಣ್ಣು ಕೊಡ್ತಾರೆ ಮದುವೆಯಾಗಲಿಕ್ಕೆ" ಎಂದರು. ಆಗ ಅಪ್ಪ ಜೇಬಿನಿಂದ ಒಂದು ಹುಡುಗಿ ಭಾವಚಿತ್ರ ತೆಗೆದು ತೋರಿಸಿ "ಈ ಹುಡುಗಿ ನಂಜನಗೂಡಿನವಳು, ನೀನು ಒಪ್ಪಿದರೆ ಈ ಹುಡುಗಿ ತಂದು ಮದುವೆ ಮಾಡ್ತೀನಿ" ಎಂದರು. ನೋಡುವ ಕಾರ್ಯ ಮುಗಿದ ಮೇಲೆ ನಂಜನಗೂಡಿನ ಅರಮನೆ ಬೀದಿಯಲ್ಲಿರುವ ಸಾಂಬಶಿವಭಟ್ಟರ ಮಗಳು ನಾಗಲಕ್ಷ್ಮೀಯ ಜೊತೆ ಮದುವೆ" ನಿಶ್ಚಯವಾಯಿತು".

"ಮದುವೆಯ ಹಿಂದಿನ ದಿನ ನಮ್ಮಣ್ಣ ಮದರಾಸಿನಿಂದ ಪಂತುಲುರವರ ಕಾರನ್ನು ತಾನೇ ಚಾಲನೆ ಮಾಡಿಕೊಂಡು ಬಂದರು. ನಮ್ಮಣ್ಣನಿಗೆ ಯಾವಾಗಲೂ ಡ್ರೈವಿಂಗ್ ಹುಚ್ಚು. ಗ್ರಾಮದ ಶಕ್ತಿದೇವತೆ ಗಿಡ್ಡಮ್ಮನ ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡಿಸಿ, ನಂಜನಗೂಡಿಗೆ ಹೊರಟೆವು. ಪ್ರಭಾಕರಶಾಸ್ತ್ರಿಯವರು ಮದುವೆಯನ್ನು ಭರ್ಜರಿಯಾಗಿ ನೆರವೇರಿಸಿದರು. ಮದುವೆಗೆ ಪಂತುಲು, ರಾಜಮ್ಮ, ಗುಬ್ಬಿವೀರಣ್ಣ, ಜಯಮ್ಮ, ಬಾಲಕೃಷ್ಣ, ನರಸಿಂಹರಾಜು ಇನ್ನೂ ಅನೇಕ ಜನ ಚಿತ್ರರಂಗದ ಪ್ರಮುಖರು ಬಂದಿದ್ದರು.

ಮದುವೆಯಾದ ಸ್ವಲ್ಪ ದಿನಗಳಲ್ಲೇ ನಮ್ಮಣ್ಣ ಮದರಾಸಿನ ಇಲಿಯಟ್ ರಸ್ತೆಯಲ್ಲಿ ಜಿಂಕ್ ಶೀಟಿನ ಮನೆಯೊಂದನ್ನು ಬಾಡಿಗೆಗೆ ಹಿಡಿದು ಪತ್ನಿಯನ್ನು ಕರೆತಂದು ಮನೆಯನ್ನು ತುಂಬಿಕೊಂಡರು. ಅವರಿಗೆ ಬರುತ್ತಿದ್ದ ಸಂಬಳ ಯಾವುದಕ್ಕೂ ಸಾಲುತ್ತಿರಲಿಲ್ಲ. ನಿನ್ನನ್ನು ಕಾರಿನಲ್ಲಿಯೇ ಓಡಾಡಿಸುತ್ತೇನೆಂದು ಹೆಂಡತಿಯ ಹತ್ತಿರ ಜಂಬ ಕೊಚ್ಚಿಕೊಂಡಿದ್ದರಿಂದ ಪ್ರೊಡಕ್ಷನ್ ಕಾರುಗಳನ್ನು ತಾನೇ ಡ್ರೈವ್ ಮಾಡಿಕೊಂಡು ಬಂದು ಮನೆಯ ಹತ್ತಿರ ನಿಲ್ಲಿಸುತ್ತಿದ್ದರು. ಪತ್ನಿಯನ್ನು ಕರೆದುಕೊಂಡು ಬಂದ ಹೊಸತರಲ್ಲಿ ಸ್ನೇಹಿತರನ್ನು ಮನೆಗೆ ಕರೆದು ಊಟ ಹಾಕುವ ಆಸೆಯಿತ್ತು. ಹೆಂಡತಿಯನ್ನು ಕರೆದುಕೊಂಡು ಹೋಗಿ ಸಿನಿಮಾ ತೋರಿಸುವ ಬಯಕೆ ಇತ್ತು. ಆದರೆ ಇದಕ್ಕೆಲ್ಲಾ ಹಣ ತರುವುದೆಲ್ಲಿ ಎಂಬ ಕೊರಗು ನಿರಂತರವಾಗಿತ್ತು".

"ಇದು ಸಾಲದೆಂಬಂತೆ ಮೈಸೂರು, ಬೆಂಗಳೂರಿನಿಂದ ಮದರಾಸಿಗೆ ಯಾವ ನಾಟಕದ ಹಾಗೂ ಚಲನಚಿತ್ರ ಕಲಾವಿದರು ಬಂದರೂ ಅಣ್ಣನ ಮನೆಗೆ ಭೇಟಿ ಕೊಡದೆ ಹೋಗುತ್ತಿರಲಿಲ್ಲ. ಅತ್ತಿಗೆ, ಅವರಿಗೆ ಊಟ ಹಾಕದೆ ಕಳುಹಿಸುತ್ತಿರಲಿಲ್ಲ. ಒಟ್ಟಿನಲ್ಲಿ ಅವರ ಸಂಸಾರ ಆರ್ಥಿಕವಾಗಿ ಜರ್ಜರಿತವಾಗಿತ್ತು. ಪುಟ್ಟಣ್ಣನವರು ಮದುವೆಯಾದ ಮೇಲೆ ಪಂತುಲುರವರು ಅವರ ತಿಂಗಳ ಸಂಬಳವನ್ನು ಐವತ್ತು ರೂಪಾಯಿನಿಂದ ಮುನ್ನೂರೈವತ್ತು ರೂಪಾಯಿಗೆ ಏರಿಸಿದರು. ಆದರೆ ಮದರಾಸಿನ ಜೀವನಕ್ಕೆ ಅದೂ ಸಾಕಾಗುತ್ತಿರಲಿಲ್ಲ. ಆರ್ಥಿಕ ತೊಂದರೆ ಏನೇ ಇದ್ದರೂ ಪುಟ್ಟಣ್ಣನವರು ಕರ್ತವ್ಯದಲ್ಲಿ ಲೀನವಾಗುತ್ತಿದ್ದರು".

"ಅಷ್ಟೊಂದು ಕೆಲಸದ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದರೂ, ತಾನಿನ್ನೂ "ಸಹ ನಿರ್ದೇಶಕ" ಎಂಬ ಕೊರಗು ಪುಟ್ಟಣ್ಣನವರನ್ನು ಕಾಡುತ್ತಿತ್ತು".

"ಒಂದು ದಿನ ಪಂತುಲುರವರು ಪುಟ್ಟಣ್ಣನವರಿಗೆ ಹೇಳಿ ಕಳುಹಿಸಿದರು. ಓಡುತ್ತಾ ಬಂದ ಪುಟ್ಟಣ್ಣನವರಿಗೆ ಪಂತುಲುರವರು "ನೋಡಪ್ಪಾ ನಿನಗೆ ಅದೃಷ್ಟ ಹುಡುಕಿಕೊಂಡು ಬಂದಿದೆ" ಎಂದು ಹೇಳಿ ಅಲ್ಲಿ ಕುಳಿತಿದ್ದವರ ಕಡೆ ಕೈತೋರಿಸಿ "ಇವರು ನಿನ್ನನ್ನು ಕಾಣಲು ಬಂದಿದ್ದಾರೆ. ಇಲ್ಲಿ ಬೆಳ್ಳಿ ತಟ್ಟೆಯಲ್ಲಿ ಭಾಗ್ಯಲಕ್ಷ್ಮಿಯನ್ನು ಕೂರಿಸಿದ್ದಾರೆ. ಇವರು ನಿರ್ಮಿಸಲಿರುವ "ಮಲೆಯಾಳಂ" ಚಿತ್ರಕ್ಕೆ ನೀನೇ ನಿರ್ದೇಶಕ. ನಿನ್ನ ಪರವಾಗಿ ನಾನು ಆಗಲೇ ಮಾತನಾಡಿದ್ದೇನೆ" ಎಂದರು. ಪುಟ್ಟಣ್ಣನವರಿಗೆ ನಂಬಲಾಗಲಿಲ್ಲ. "ಗುರುಗಳೇ, ನಿಮ್ಮ ಆಶ್ರಯದ ಭಾಗ್ಯಲಕ್ಷ್ಮಿ ನನಗೆ ಸ್ಥಿರವಾಗಿದ್ದರೆ ಸಾಕು. ನನಗೆ ಬೇರೆ ಯಾವ ಲಕ್ಷ್ಮಿಯೂ ಬೇಡ" ಎಂದು ಕಣ್ಣೀರು ಒರೆಸಿಕೊಂಡರು. ಪಂತುಲುರವರು "ಅಯ್ಯೋ ಹುಚ್ಚಪ್ಪ, ನಿನ್ನ ಪರವಾಗಿ ನಾನು

ಒಪ್ಪಿಕೊಂಡಿದ್ದೀನಿ. ಒಲ್ಲೆ ಎನ್ನಬಾರದು ಸುಮ್ನೆ ಹೂ ಅನ್ನು" ಎಂದು ಒತ್ತಾಯ ಮಾಡಿದರು. ನಿಜವೆಂದರೆ ಆ ಮಲೆಯಾಳಿ ನಿರ್ಮಾಪಕರು ಪಂತಲುರವರಿಂದ ಅವರ ಕನ್ನಡದ "ಸ್ಕೂಲ್ ಮಾಸ್ಟರ್" ಚಿತ್ರವನ್ನು ಮಲೆಯಾಳಂನಲ್ಲಿ ನಿರ್ದೇಶನ ಮಾಡಿಸಲು ಕೇಳಲು ಬಂದಿದ್ದರು".

ಪುಟ್ಟಣ್ಣನವರಿಗೆ ಒಂದು ಭಯವಿತ್ತು. ಅದೇನೆಂದರೆ ಬೇರೆ ಕಡೆ ಚಿತ್ರ ನಿರ್ದೇಶನಕ್ಕೆ ಒಪ್ಪಿಕೊಂಡರೆ ಮುಂದೆ ಹೇಗೋ, ಏನೋ, ಪದ್ಮಿನಿ ಪಿಕ್ಚರ್ ಸಂಬಂಧ ಕಡಿದು ಹೋದರೆ ಜೀವನದ ಗತಿಯೇನು? ಎಂಬುದು. ಅವರ ಶಂಕೆಯನ್ನು ಅರಿತ ಪಂತುಲುರವರು "ನೀನು ಎಲ್ಲಿ ಹೋದರೂ ನಮ್ಮ ಕಂಪನಿಯ ಆಳು. ೧ನೇ ತಾರೀಖು ಸಂಬಳ ಪಡೆಯುತ್ತೀಯಾ. ಅದಕ್ಕೇಕೆ ಯೋಚನೆ" ಎಂದಾಗ ಪುಟ್ಟಣ್ಣನವರು ನಿಟ್ಟುಸಿರು ಬಿಟ್ಟು ಒಪ್ಪಿಗೆ ಸೂಸಿದರು.

ಹೀಗೆ ಮಲೆಯಾಳಂ ಭಾಷೆಯ "ಸ್ಕೂಲ್ ಮಾಸ್ಟರ್" ಚಿತ್ರದಿಂದ ೧೯೬೪ರಲ್ಲಿ ಪುಟ್ಟಣ್ಣನವರು ಪ್ರಪ್ರಥಮವಾಗಿ ಪೂರ್ಣ ಪ್ರಮಾಣದ ಸ್ವತಂತ್ರ್ಯ ನಿರ್ದೇಶಕರಾದರು. ಈ ಚಿತ್ರ ಅದ್ಭುತ ಯಶಸ್ಸು ಗಳಿಸಿ ಪುಟ್ಟಣ್ಣನವರ ಹೆಸರು ಕೇರಳ ನಾಡಿನಲ್ಲೆಲ್ಲಾ ಜನಜನಿತವಾಯಿತು. ಆದರೆ ಆರ್ಥಿಕವಾಗಿ ಪುಟ್ಟಣ್ಣನವರಿಗೇನೂ ಇದರಿಂದ ಸಹಾಯವಾಗಲಿಲ್ಲ. ಆ ಕಾಲದಲ್ಲಿ ಒಂದು ಚಿತ್ರ ನಿರ್ದೇಶನಕ್ಕೆ ಒಂದೆರಡು ಸಾವಿರಗಳು ಮಾತ್ರ ಸಿಗುತ್ತಿತ್ತು.

ಐದು ಮಲೆಯಾಳಂ ಚಿತ್ರಗಳು ಹಾಗೂ ಒಂದು ತೆಲುಗು ಚಿತ್ರವನ್ನು ನಿರ್ದೇಶಿಸಿದ ಮೇಲೆ ತನ್ನ ಬಹು ದಿನದ ಬಯಕೆಯಾಗಿದ್ದ ಕನ್ನಡ ಚಿತ್ರವೊಂದನ್ನು ನಿರ್ದೇಶಿಸುವ ಅವಕಾಶ ಸಿಕ್ಕಿ ಪುಟ್ಟಣ್ಣನವರಿಗೆ ಹಿಡಿಸಲಾರದಷ್ಟು ಸಂತೋಷ-ವಾಯಿತು. ಆ ಚಿತ್ರವೇ ತ್ರಿವೇಣಿಯವರ "ಬೆಳ್ಳಿಮೋಡ".

"ಬೆಳ್ಳಿಮೋಡ" ಚಿತ್ರದ ಯಶಸ್ಸಿನಿಂದಾಗಿ ಆ ಚಿತ್ರದ ಮಲಯಾಳಂ ಮತ್ತು ತೆಲುಗು ಭಾಷೆಯ ಅವತರಣಿಕೆಯನ್ನು ಮಾಡುವ ಅವಕಾಶ ಬಂತು. ಆ ಅವಧಿಯಲ್ಲೇ ನೀವು ನಿಮ್ಮ "ಸಾವಿರ ಮೆಟ್ಟಿಲು" ಚಿತ್ರಕ್ಕಾಗಿ ಅವರನ್ನು ಸಂಪರ್ಕಿಸಿದ್ದೀರಿ. ಇನ್ನು ಮುಂದಿನದೆಲ್ಲಾ ನಿಮಗೆ ಗೊತ್ತಿದೆಯಲ್ಲಾ" ಎಂದು ತನ್ನ ಮಾತನ್ನು ಸಧ್ಯಕ್ಕೆಂಬಂತೆ ನಿಲ್ಲಿಸಿದರು".

ಅಷ್ಟು ಹೊತ್ತಿಗೆ ಬಸ್ಸು ಬಂದ ಸದ್ದು ಕೇಳಿಸಿತು. ನರಸಿಂಹರವರ ದೀರ್ಘವಾದ ಮಾತು ಕೇಳುತ್ತಾ ಕುಳಿತಿದ್ದ ನಮಗೆ ವಾಪಸ್ಸು ಹೋಗುವ ಬಸ್ಸಿನ ವೇಳೆ ಮರೆತು ಹೋಗಿತ್ತು. ಧಡಕ್ಕನೆ ಎದ್ದು ಹೊರಗೆ ಬರುವ ವೇಳೆಗೆ ಬಸ್ಸು

ನಮ್ಮ ಕಣ್ಣೆದುರಿಗೇ ಹೊರಟು ಹೋಯಿತು. ಬಸ್ಸು ಹೋದರೇನಂತೆ, ದೋಣಿಯಲ್ಲಿ ಹೊಳೆದಾಟಿ ಆ ಕಡೆ ಬಸ್ಸು ಹಿಡಿಯಬಹುದಲ್ಲಾ ಎಂದುಕೊಂಡು ಗಾಬರಿಗೊಳ್ಳಲಿಲ್ಲ. ಆದರೆ ಸಂಜೆ ಆರು ಗಂಟೆಯ ಮೇಲೆ ದೋಣಿ ಬಿಡುವುದಿಲ್ಲ ಎಂದು ತಿಳಿದು ನಿರಾಸೆಯಾಯಿತು. ನರಸಿಂಹಯ್ಯ ಮತ್ತು ಮಿತ್ರರು ಈ ದಿನ ಇದ್ದು ಹೋಗಬೇಕೆಂದು ಒತ್ತಾಯ ಹಾಕಿದರು. ಬಸ್ಸು ತಪ್ಪಿದುದು ಒಂದು ವಿಧದಲ್ಲಿ ಒಳ್ಳೆಯದೇ ಆಯಿತೆಂದುಕೊಂಡೆವು. ಕಾರಣ ಪುಟ್ಟಣ್ಣನವರು ಹುಟ್ಟಿದ ಊರು, ಪರಿಸರ ಮತ್ತು ಅದರ ಸುತ್ತಮುತ್ತಲಿನ ನೈಸರ್ಗಿಕ ಸೌಂದರ್ಯ ಇವೆಲ್ಲವನ್ನೂ ನೋಡಬೇಕೆನಿಸಿತು.

ಅಷ್ಟರಲ್ಲಿ ನರಸಿಂಹರವರು ಮತ್ತೇನೊ ನೆನಪು ಮಾಡಿಕೊಂಡವರಂತೆ "ನಾನು ಇದುವರೆವಿಗೂ ಹೇಳಿದ್ದು ನನಗೆ ಬುದ್ಧಿಬಂದ ಮೇಲೆ ತಿಳಿದದ್ದು, ಆದರೆ ಹಿಂದಿನದು ಬೇಕಾದರೆ ನಮ್ಮ ಸೀನು ಮಾವ ಅಲಿಯಾಸ್ ಅಣ್ಣಯ್ಯ ಮಾಸ್ಟರು ಇದ್ದಾರೆ. ಪುಟ್ಟಣ್ಣನಿಗೆ ಅವರುಗಳ ನಿಕಟ ಸಂಪರ್ಕವಿತ್ತು, ಆದ್ದರಿಂದ ಅವರನ್ನು ನೋಡೋಣ" ಎಂದರು. ನಮಗೂ ಅದೇ ಬೇಕಿತ್ತು, ಆದ್ದರಿಂದ ಕೆ.ಆರ್. ರಾಮಚಂದ್ರಶಾಸ್ತ್ರಿಗಳು ಉರುಫ್ ಅಣ್ಣಯ್ಯ ಮಾಸ್ಟರು ಅಲಿಯಾಸ್ ಸೀನು ಮಾವನವರ ಮನೆಗೆ ಹೋದೆವು.

ನಾವು ಸೀನು ಮಾವನ ಮನೆಗೆ ಹೋದಾಗ ಅವರು ಮನೆಯಲ್ಲೇ ಇದ್ದರು. ಸುಮಾರು ಎಪ್ಪತ್ತೈದರ ವಯಸ್ಸಿನ ಆರು ಅಡಿಯ ಗಟ್ಟಿಮುಟ್ಟಾದ ಆಳು. ತಲೆ ಮಾತ್ರ ಪೂರ್ಣ ನೆರೆತು ಬೆಳ್ಳಗಾಗಿತ್ತು. ನಾವು ಬಂದ ವಿಷಯ ಕೇಳಿ ತುಂಬಾ ಸಂತೋಷಗೊಂಡರು. ಪುಟ್ಟಣ್ಣನವರ ನಿಧನವನ್ನು ನೆನೆಸಿಕೊಂಡು ದುಃಖಪಟ್ಟರು. "ಹೇಗೂ ರಾತ್ರಿ ಇರುವಿರಲ್ಲಾ, ಈಗ ಊರು ನೋಡಿಕೊಂಡು ಬನ್ನಿ. ಬೇಗ ಹೋಗಿ ಕತ್ತಲಾಗುತ್ತದೆ" ಎಂದರು. ನಾವು ಊರ ಹೊರಗೆ ದೊಡ್ಡ ಹೆಜ್ಜೆ ಹಾಕಿದೆವು.

ಹಿಂದೆ ಪುಟ್ಟಣ್ಣನವರು ಹೆಮ್ಮೆಯಿಂದ ತನ್ನ ಊರಿನ ಬಗ್ಗೆ ಹೇಳಿಕೊಂಡಂತೆ ಕಣಗಾಲು ಗ್ರಾಮ ನಿಸರ್ಗ ಸೌಂದರ್ಯದ ಕೇಂದ್ರ ಬಿಂದುವಾಗಿತ್ತು. ವೃತ್ತಾಕಾರದ ವಿಶಾಲವಾದ ಹಾಗೂ ಎತ್ತರವಾದ ಸ್ಥಳ, ಊರಿನ ನಾಲ್ಕು ದಿಕ್ಕಿನಿಂದ ನೋಡಿದರೂ ಮೈಲುಗಟ್ಟಲೆ ಹರಡಿದ ಅರ್ಧ ಮಲೆನಾಡು ಪ್ರದೇಶ ಹಸಿರಿನಿಂದ ಕಂಗೊಳಿಸುತ್ತಿತ್ತು. ಅಲ್ಲಲ್ಲಿ ಅಡಿಕೆ, ತೆಂಗು, ಬಾಳೆಯ ತೋಟದಿಂದ ತುಂಬಿದ ನೆಲ ಹೋಗುತ್ತಾ ತಗ್ಗಾಗಿ ಹೊಳೆಯ ದಡದೊಡನೆ ಮಿಲನವಾಗಿತ್ತು.

ಪಶ್ಚಿಮದ ಮಡಿಕೇರಿಯ ತಲಕಾವೇರಿಯಲ್ಲಿ ಜನಿಸಿದ ಕಾವೇರಿನದಿ ಪಶ್ಚಿಮದಿಂದ ಪೂರ್ವಕ್ಕೆ ಕಣಗಾಲು ಗ್ರಾಮವನ್ನು ಅರ್ಧಭಾಗ ಸುತ್ತಿ ಅಂಕುಡೊಂಕಾಗಿ ೪೨ ಮೈಲಿ ಹರಿದಿತ್ತು. ಪೂರ್ವ ಪಶ್ಚಿಮ ದಿಕ್ಕಿನ ಕೊಡಗಿನ ತೊರೆಯೂರು, ಅಂಕುಡೊಂಕಾಗಿ ಸಿರಂಗಾಲ, ಅದರ ಹಿಂದೆ ಜೇನುಕಲ್ಲು ಬೆಟ್ಟ, ಅದರ ಬಲಗಡೆಗೆ ಹಾರಂಗಿ ಅಣೆಕಟ್ಟಿನ ತಾಣ, ಸಿರಂಗಾಲಿನ ಪಕ್ಕದಲ್ಲಿ ಕ್ರಮವಾಗಿ ಉತ್ತರಕ್ಕೆ ಮೂಡನಕೊಪ್ಪಲು, ಕಡುವಿನ ಹೊಸಹಳ್ಳಿ, ಮನಗನಹಳ್ಳಿ, ಐಚನಹಳ್ಳಿ, ಕಟ್ಟಿನಕೊಪ್ಪಲು, ಮಾದಾಪುರ, ಕಟ್ಟೆಪುರ ಮತ್ತು ಕಟ್ಟೆಪುರ ಅಣೆಕಟ್ಟು, ದಕ್ಷಿಣಕ್ಕೆ ಚಪ್ಪರದಹಳ್ಳಿ, ಹಾರನಹಳ್ಳಿಗಳು ಹಸುರಿನಿಂದ ಕಂಗೊಳಿಸುತ್ತಿದ್ದವು. ಊರಿನಿಂದ ಶುದ್ಧ ಪಶ್ಚಿಮಕ್ಕೆ ದೂರದಲ್ಲಿ ತಲೆಯೆತ್ತಿ ನಿಂತು ಕಾಶ್ಮೀರದ ಹಿಮಾಲಯವೋ ಎಂಬಂತೆ ಕಾಣುತ್ತಿದ್ದ ಪಶ್ಚಿಮ ಘಟ್ಟಗಳು ಕಣ್ಣು ತಣಿಸುವ ನೋಟಗಳಾಗಿದ್ದವು.

ನರಸಿಂಹರವರು ಗ್ರಾಮದ ಪಶ್ಚಿಮ ಮತ್ತು ಉತ್ತರ ದಿಕ್ಕಿನ ನಡುವಿನ ಮೂಲೆ ಕಡೆಗೆ ಕೈ ತೋರಿ, "ಕಾವೇರಿ ಹೊಳೆಯ ಆಚೆಯ ದಂಡೆಯಲ್ಲಿ ವಿಶಾಲವಾಗಿ ಕಾಣುವ ಆ ಜಾಗವೇ ಕೊಡಗಿನ ರಾಜ ಚಿಕ್ಕವೀರರಾಜೇಂದ್ರ ಆಂಗ್ಲರ ಮೇಲೆ ಯುದ್ಧ ಮಾಡಿ ಗೆದ್ದ ವಿಶಾಲವಾದ ಜಾಗ. ಅಲ್ಲಿ ವೀರಗಲ್ಲಿದೆ, ಪುಟ್ಟಣ್ಣ ಹಿರಿಯ ಕವಿ ಮಾಸ್ತಿಯವರ "ಚಿಕ್ಕವೀರ ರಾಜೇಂದ್ರ" ಕಾದಂಬರಿಯ ಚಿತ್ರೀಕರಣ ಮಾಡುವಾಗ ಈ ಜಾಗದಲ್ಲೇ ಯುದ್ಧದ ದೃಶ್ಯವನ್ನು ತೆಗೆಯುತ್ತೇನೆ. ಇಲ್ಲಿಯೇ ಕ್ಯಾಮರಾ ಇಡುತ್ತೇನೆ" ಎಂದು ತೋರಿಸಿದ್ದರೆಂದು ಹೇಳಿದರು..

ಅಲ್ಲಿಂದ ಊರಿನ ಮೇಲುಗಡೆಯಿಂದ ಸುತ್ತಿ ಪುಟ್ಟಣ್ಣನವರು ಕಟ್ಟಲು ಆಶಿಸಿದ್ದ ಕಲ್ಯಾಣಮಂಟಪ, ಸಂಕಲನ ಕೊಠಡಿ ಇವುಗಳಿಗಾಗಿ ಸರ್ಕಾರದಿಂದ ಕೇಳಿದ್ದ ಭೂಮಿಯ ಕಡೆ ಹೊರಟೆವು. ಕಣಗಾಲು ಗ್ರಾಮ ಬೆಟ್ಟದ ತಪ್ಪಲಿನಂತೆ ಕಾಣಲು ಅದರ ಹಿಂದೆ ತಲೆಯೆತ್ತಿ ನಿಂತಿದ್ದ ಗರಿಗೆ ಬೆಟ್ಟ, ಬೆಟ್ಟದಪುರದ ಬೆಟ್ಟ ಅವುಗಳ ಬಗ್ಗೆ ಹೇಳಿದರು. ಗಿಡ್ಡಮ್ಮನ ಗುಡಿ ತೋರಿಸಿದರು.

ಊರಿನಿಂದ ಸುಮಾರು ಒಂದು ಕಿ.ಮೀ. ದಾರಿ ಸವೆಸಿದ ಮೇಲೆ ಪುಟ್ಟಣ್ಣನವರ ಹತ್ತು ಸಾವಿರ ರೂಪಾಯಿಂದ ತಲೆಯೆತ್ತಿದ್ದ ಪ್ರೌಢಶಾಲಾ ಕಟ್ಟಡವನ್ನು ತೋರಿಸಿದರು. ಊರಿನ ಹಲವು ದಾನಿಗಳು ಸಹ ಅದಕ್ಕೆ ಹಣ ಸಹಾಯ ಮಾಡಿದ್ದು, ಕಟ್ಟಡ ಪೂರ್ಣವಾಗುವ ಹಂತದಲ್ಲಿತ್ತು. ಆ ಕಟ್ಟಡದ ಶಂಕುಸ್ಥಾಪನೆಯ ದಿನ ನಡೆದ ಒಂದು ಘಟನೆಯನ್ನು ನರಸಿಂಹರವರು ಸ್ವಾರಸ್ಯವಾಗಿ ವಿವರಿಸಿದರು.

ಅಂದು ಅಲ್ಲಿನ ಶಾಸಕರಿಂದ ಆ ಕಟ್ಟಡದ ಶಂಕುಸ್ಥಾಪನೆ, ಪುಟ್ಟಣ್ಣನವರದೇ ಅಧ್ಯಕ್ಷತೆ. ಆಗ ಶಾಸನ ಸಭೆಯ ಚುನಾವಣಾ ಕಾಲ, ಆ ಶಾಸಕರೂ ಚುನಾವಣೆಗೆ ಪುನಃ ನಿಂತಿದ್ದರು. ಸ್ವಾಭಾವಿಕವಾಗಿ ಆ ಕಟ್ಟಡ ಆತಂಕವಿಲ್ಲದೆ ಪೂರ್ಣಗೊಳ್ಳುವ ವಿಷಯದಲ್ಲಿ ಶಾಸಕರು ಅನೇಕ ಭರವಸೆಗಳನ್ನು ನೀಡಿದರು. ಪುಟ್ಟಣ್ಣನವರು ತಮ್ಮ ಅಧ್ಯಕ್ಷ ಭಾಷಣದಲಿ "ಈ ಶಾಸಕರು ಬಹಳ ಭರವಸೆ ನೀಡಿದ್ದಾರೆ. ಈಗ ಇವರನ್ನು ನಂಬೋಣ. ಇವರಿಗೆ ನಿಮ್ಮ ಮತ ನೀಡಿ. ಒಂದು ವೇಳೆ ಇವರು ತನ್ನ ಮಾತಿಗೆ ತಪ್ಪಿದರೆ ಈ ಶಾಸಕರ ಕತ್ತಿನಪಟ್ಟಿ ಹಿಡಿದುಕೊಳ್ಳೋಣ" ಎಂದರಂತೆ. ಇದನ್ನು ಕೇಳಿ ಬೆಚ್ಚಿದ ಶಾಸಕರು ತಕ್ಷಣ ತಮ್ಮ ಕತ್ತಿನಪಟ್ಟಿಯನ್ನು ಮುಟ್ಟಿ ನೋಡಿಕೊಂಡರಂತೆ. ಅದನ್ನು ಕೇಳಿ ಎಲ್ಲರೂ ಬಿದ್ದು ಬಿದ್ದು ನಕ್ಕೆವು.

ಮುಂದುವರೆದು ನಡೆಯುತ್ತ "ಆರತಿಯವರ ವಿಚಾರವನ್ನು ತಿಳಿಸುವಿರಾ" ಎಂದೆ. "ದಯವಿಟ್ಟು ಈ ಬಗ್ಗೆ ನನ್ನನ್ನು ಏನೂ ಕೇಳಬೇಡಿ. ಆದರೂ ಇಷ್ಟು ಹೇಳುತ್ತೇನೆ. ನಮ್ಮಣ್ಣ ಸಾಯಲು ಆರತಿಯವರ ಪ್ರಕರಣವೂ ಸ್ವಲ್ಪ ಮಟ್ಟಿಗೆ ಕಾರಣವೆಂದು, ನಮ್ಮ ದೇಶದ ಅನೇಕ ಪತ್ರಿಕೆಗಳು ಹೇಳಿವೆ. ಆದರೆ ನಮ್ಮಣ್ಣ ಸಾಯಲು ಅವರ ಆಯಸ್ಸು ಕಡಿಮೆಯಾಗಿದ್ದೇ ಕಾರಣ" ಎಂದರು.

ನಾವು ಊರೆಲ್ಲಾ ಸುತ್ತಿ ವಾಪಸ್ಸು ಪುಟ್ಟಣ್ಣನವರ ಮನೆ ಹತ್ತಿರ ಬಂದಾಗ ಗಂಟೆ ಏಳೂವರೆ ಆಗಿತ್ತು. ಕತ್ತಲೆಯಾಗಿದ್ದರಿಂದ "ಇಂದು ವಿದ್ಯುಚ್ಛಕ್ತಿ ಇಲ್ಲವೇನೊ" ಎಂದೆ. ನರಸಿಂಹರವರು "ಇಂದೇನು ಎಂದೂ ಇರುವುದಿಲ್ಲ. ನೋಡಿ ನಿಮ್ಮ ಹಾಸನ ಜಿಲ್ಲೆಯಲ್ಲಿ ಮತ್ತು ಕೊಡಗು ಜಿಲ್ಲೆಯಲ್ಲಿ ಹೇಗೆ ಲೈಟು ಉರಿಯುತ್ತಿವೆ" ಎಂದು ಆ ದಿಕ್ಕಿಗೆ ಕೈ ತೋರಿಸಿದರು. "ಆದರೂ ನಿರಾಶೆಯಾಗಬೇಕಿಲ್ಲ ಉಂಡು ಮಲಗುವ ಸುಮಾರು ಒಂಭತ್ತೂವರೆಯ ಹೊತ್ತಿಗೆ ಬರುತ್ತದೆ" ಎಂದು ಹೇಳಿ "ತಡೆಯಿರಿ ಜಮಖಾನಾ ತರುತ್ತೇನೆ, ಜಗಲಿಯ ಮೇಲೆ ಕೂರೋಣ" ಎಂದು ಒಳಗೆ ಹೋಗಿ ಜಮಖಾನಾ ತಂದರು. ಆಗಲೂ ಅವರು ಸುಮ್ಮನೆ ಜಮಖಾನಾ ಹಾಸಲಿಲ್ಲ "ಇದು ಯಾವ ಕಾಲದ್ದು ಗೊತ್ತೆ, ನಮ್ಮ ಅಜ್ಜನ ಕಾಲದ್ದು, ಮೊದಲು ಇದು ಒಂದು ದೊಡ್ಡ ಇಡೀ ಜಮಖಾನಾ, ನಮ್ಮ ದೊಡ್ಡ ಅಜ್ಜ ಪುಟ್ಟಣ್ಣ ಮತ್ತು ಚಿಕ್ಕಜ್ಜ ಸೀತಾರಾಮಯ್ಯನವರು ಬೇರೆಯಾದಾಗ ದೊಡ್ಡ ಜಗಳ ಆಗಿ ಇದನ್ನು ಅರ್ಧಕ್ಕೆ ಕೋಯ್ದು ಹಂಚಿಕೊಂಡರಂತೆ" ಎಂದು ಕೋಯ್ದ ಜಾಗವನ್ನು ತೋರಿಸಿ, ಹಾಸುತ್ತಾ "ಪುಟ್ಟಣ್ಣನವರು ಇದೇ ಜಮಖಾನವನ್ನು ಹಾಸಿ ಇಲ್ಲಿ ಗೋಡೆಗೆ ಒರಗಿ ಕುಳಿತುಕೊಳ್ಳುತ್ತಿದ್ದರು. ಆದ್ದರಿಂದ ನೀವು ಇದೇ ಜಾಗದಲ್ಲಿ ಕೂರಿ" ಎಂದರು. ನಾನು ಉತ್ತರಕ್ಕೆ ಮುಖಮಾಡಿ, ನನ್ನ ಮಿತ್ರ ಶ್ರೀಕಂಠೇಗೌಡರು

ಪಶ್ಚಿಮಕ್ಕೆ ಮುಖಮಾಡಿ ಗೋಡೆಗೊರಗಿ ಕುಳಿತುಕೊಂಡೆವು. ಛೇರ್ಮನ್ ಚಂದ್ರಶೇಖರ್ ಮತ್ತು ರವೀಂದ್ರನಾಥ್ ಅವರು ನಮ್ಮ ಕಡೆ ಮುಖಮಾಡಿ ಜಗುಲಿಯ ದಡದಲ್ಲಿ ಕುಳಿತರು.

ನರಸಿಂಹರವರು ಮಾತ್ರ ನಿಂತೇ ಮಾತಿಗೆ ಶುರುಮಾಡಿದರು. ಅವರಾಗಲೇ ಸುಮಾರು ಎಂಟು ಗಂಟೆಗಳ ಕಾಲ ಸತತವಾಗಿ ಮಾತನಾಡಿದ್ದರು. ಬರೇ ಮಾತನಾಡಿದ್ದರೆ ಚಿಂತೆಯಿರಲಿಲ್ಲ. ಗಂಟೆ ಹೊಡೆದಹಾಗೆ ಅಷ್ಟು ಕಾಲವೂ ಜೋರಾಗಿ ಮಾತನಾಡಿದ್ದರು. ನಾವು ಊರು ಸುತ್ತುವಾಗ ಇವರ ಮಾತು ಕೇಳಿ ಸುಮಾರು ಒಂದು ಫರ್ಲಾಂಗ್ ದೂರದಲ್ಲಿ ಇದ್ದವರೂ ಸಹ ನಮ್ಮ ಕಡೆ ಕತ್ತೆತ್ತಿ ನೋಡುತ್ತಿದ್ದರು. ಆಗಲೂ ನರಸಿಂಹರವರು ಸುಮ್ಮನೆ ಮುಂದುವರಿಯುತ್ತಿರಲಿಲ್ಲ. "ಇವರು ನಮ್ಮ ಪುಟ್ಟಣ್ಣನವರ ಆತ್ಮೀಯ ಸ್ನೇಹಿತರು, ನಮ್ಮ ಮನೆಯವರಿದ್ದಂತೆ. ಊರನ್ನು ನೋಡಲು ಬಂದಿದ್ದಾರೆ" ಎಂದು ಅಭಿಮಾನದಿಂದ ಹೇಳುತ್ತಿದ್ದರು.

ಅವರು ಮಧ್ಯಾಹ್ನ ಊಟ ಬೇರೆ ಮಾಡಿರಲಿಲ್ಲ. ಅವರಿಗೆ ಇನ್ನು ಹೆಚ್ಚು ಶ್ರಮ ಕೊಡಬಾರದೆಂದು ಭಾವಿಸುತ್ತಿದ್ದ ನಾನು "ನರಸಿಂಹರವರೆ ದಯವಿಟ್ಟು ನೀವು ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಿ, ಬೆಳಿಗ್ಗೆಯಿಂದ ಮಾತನಾಡಿ ಸುಸ್ತಾಗಿದ್ದೀರಿ" ಎಂದೆ. "ನೋಡಿ ನನಗೆ ಇರೋದೆ ಇದೊಂದು, ಆದರೂ ನೀವು ಹೇಳಿದ ಮೇಲೆ ಇನ್ನು ಮಾತನಾಡುವುದಿಲ್ಲ. ಅಲ್ಲದೆ ನಿಮ್ಮೊಡನೆ ಮಾತನಾಡಲು ನನಗೆ ವೇಳೆಯಿಲ್ಲ, ನಾನು ನಿಮಗೆ ಸ್ವಲ್ಪ ಅಡಿಗೆ ಸಿದ್ಧ ಮಾಡತ್ತೇನೆ" ಎಂದು ಹೇಳಿ ಒಳಹೋದರು.

ನಾನು ಚಂದ್ರಶೇಖರ್‌ರವರನ್ನು ಕುರಿತು "ಈ ಊರಿನಲ್ಲಿ ಎಷ್ಟು ಬ್ರಾಹ್ಮಣರ ಮನೆಗಳಿವೆ" ಎಂದು ಕೇಳಿದೆ. ಚಂದ್ರಶೇಖರ್‌ರವರು ಬಾಯಿ ಬಿಡುವ ಮುನ್ನವೇ ನರಸಿಂಹರವರ ಕಂಚಿನಕಂಠ ಕೇಳಿ ಬಂತು. "ಆಗ ಬಹಳ ಮನೆಗಳಿತ್ತು ಸಾರ್, ಈಗ ಮಕ್ಕಳಿಗೆ ಕೆಲಸ ಸಿಕ್ಕಿದ ಮೇಲೆ ಅನೇಕ ಜನ ಊರು ಬಿಟ್ಟರು. ಆಗಿನ ನಮ್ಮ ವಂಶದ ಕಥೆ ಕೇಳಬೇಕು, ನಕ್ಕು ನಕ್ಕು ಹೊಟ್ಟೆ ಹುಣ್ಣಾಗುತ್ತದೆ. ಪುಟ್ಟಣ್ಣ ಊರಿಗೆ ಬಂದಾಗ ಹೀಗೆಯೇ ಸಂಜೆ ಹೊತ್ತು ನೀವು ಕೂತಿರುವ ಸ್ಥಳದಲ್ಲಿಯೇ ಕುಳಿತು "ನರಸಿಂಹ ಹಜಾಮರ ಬೈರನನ್ನು ಕರೆಯೋ" ಎಂದು ಅವನನ್ನು ಕರೆಸಿಕೊಂಡು ಅವನ ಬಾಯಿಂದ ಆ ಘಟನೆಯನ್ನು ಕೇಳಿ ಬಿದ್ದು ಬಿದ್ದು ನಗುತ್ತಿದ್ದರು" ಎಂದರು.

ನನ್ನ ಕಿವಿ ನಿಮಿರಿತು, ಶ್ರೀಕಂಠೇಗೌಡರೂ ನನ್ನ ಕಡೆ ನೋಡಿದರು. "ನರಸಿಂಹರವರೆ ದಯವಿಟ್ಟು ಆ ನಿಮ್ಮ ವಂಶಧ ಕಥೆಯನ್ನು ನಾವು ಕೇಳಬಹುದೆ" ಎಂದೆ. ಈ ಘಟನೆಯಿಂದೇನಾದರೂ ಪುಟ್ಟಣ್ಣನವರ ವ್ಯಕ್ತಿತ್ವ ರೂಪಿತವಾದ ಎಳೆ ಯಾವುದಾದರೂ ಸಿಕ್ಕೀತೇ ಎಂಬ ಆಸೆಯಿಂದ, ಅದಕ್ಕೆ ನರಸಿಂಹರವರು

"ಅದಕ್ಕೇನು ಸಾರ್. ನಮ್ಮ ವಂಶದ ಚರಿತ್ರೆ ತೆರೆದಿಟ್ಟ ಪುಸ್ತಕದಂತೆ, ಈ ಘಟನೆಯನ್ನು ನೀವು ಕೇಳುವುದರಿಂದ ನಮ್ಮ ವಂಶದಲ್ಲಿ ದುರ್ಯೋಧನನ ಛಲವನ್ನು ನೀವು ಕಾಣಬಹುದು" ಎಂದರು. "ಹೇಳಿ" ಎಂದೆ ಪ್ರಾರಂಭಿಸಿದರು.

"ನಮ್ಮ ಅಜ್ಜ ಪುಟ್ಟಣ್ಣನವರಿಗೂ ಅವರ ತಮ್ಮ ಸೀತಾರಾಮಯ್ಯನವರಿಗೂ ಒಳ್ಳೇಯ ಪ್ರಾಯದ ಕಾಲ. ದೊಡ್ಡ ಶ್ರೀಮಂತಿಕೆ ಬೇರೆ. ಆಗ ತಾನೇ ಇಬ್ಬರೂ ಬೇರೆ ಬೇರೆಯಾಗಿದ್ದರು, ನಮ್ಮಜ್ಜ ಪುಟ್ಟಣ್ಣನವರ ಪಾಲಿಗೆ ನಾವು ಕುಳಿತಿರುವ ಮನೆ ಬಂತು. ಚಿಕ್ಕಜ್ಜ ಸೀತಾರಾಮಯ್ಯನವರ ಪಾಲಿಗೆ ಆಗೋ ಅಲ್ಲಿ ಸ್ವಲ್ಪ ಕೆಳಗಡೆ ಇದೆಯೆಲ್ಲಾ ಅದು ಹೋಯಿತು. ಜಮಖಾನಾ ಕೊಯ್ದು ಹಂಚಿಕೊಂಡ ಕಾವು ಇನ್ನೂ ಆರಿರಲಿಲ್ಲ. ಬೇರೆಯಾದ ಹೊಸದರಲ್ಲಿ ಊರಿನಲ್ಲಿ ನಾನು ಹೆಚ್ಚು, ನಾನು ಹೆಚ್ಚು ಎಂಬ ಹುಂಬುತನ ಇಬ್ಬರಲ್ಲೂ ತಾಂಡವವಾಡುತ್ತಿತ್ತು".

"ಒಂದು ದಿನ ಇಬ್ಬರಿಗೂ ಕ್ಷೌರ ಮಾಡಿಸಿಕೊಳ್ಳುವ ಬಯಕೆಯಾಯಿತು. ಅಜ್ಜ ಪುಟ್ಟಣ್ಣನವರು ಬೆಳಿಗ್ಗೆ ತೋಟದ ಕಡೆಯಿಂದ ಬರುತ್ತಾ ಎದುರಿಗೆ ಸಿಕ್ಕ ಕ್ಷೌರಿಕ ಬೈರನನ್ನು "ಲೋ ಹಡಪ ತೆಗೆದುಕೊಂಡು ಮನೆಯ ಹತ್ತಿರ ಬಾ" ಎಂದು ಅಪ್ಪಣೆ ಕೊಡಿಸಿ ಮನೆ ಕಡೆ ನಡೆದರು. ಇದನ್ನು ಕೇಳಿ ಎದುರುಗಡೆಯಿಂದ ಬರುತ್ತಿದ್ದ ಚಿಕ್ಕಜ್ಜ ಸೀತಾರಾಮಯ್ಯನವರ ಚುರುಕು ಬುದ್ಧಿ ಕೆಲಸ ಮಾಡಿತು. ಹೇಗೂ ಹಜಾಮರ ಬೈರ ಪುಟ್ಟಣ್ಣನವರ ಮನೆಗೆ ಹೋಗಲು ಸೀತಾರಾಮಯ್ಯನವರ ಮನೆಯ ಮುಂದಿನಿಂದಲೇ ಹೋಗಬೇಕಿತ್ತು. ಅವನು ಬರುವುದನ್ನೇ ಕಾಯುತ್ತಿದ್ದ ಸೀತಾರಾಮಯ್ಯನವರು ಅವನು ಅವರ ಮನೆಯ ಬಾಗಿಲ ಹತ್ತಿರ ಬಂದಾಗ ಹಿಡಿದು ಬಿಟ್ಟರು. ಪಾಪ ಬೈರ ಅನ್ಯ ಮಾರ್ಗವಿಲ್ಲದೆ ಸೀತಾರಾಮಯ್ಯನವರಿಗೆ ಕ್ಷೌರ ಮಾಡಲು ಶುರುಮಾಡಿದ.

"ಈ ಕಡೆ ಅಜ್ಜ ಪುಟ್ಟಣ್ಣನವರು ನೀರು ಕಾಯಿಸಿಕೊಂಡು ಕಾಯ್ದೇ ಕಾದರು. ಬೈರ ಬರಲಿಲ್ಲ. ದೊಡ್ಡ ಗಂಟಲಿನಿಂದ ಮಗನನ್ನ ಅಂದರೆ ನಮ್ಮಪ್ಪನನ್ನ ಕೂಗಿ "ಬೈರನ ಮನೆಯ ಹತ್ತಿರ ಹೋಗಿ ಅವನನ್ನು ತಕ್ಷಣ ಕರೆದುಕೊಂಡು ಬಾ" ಎಂದು ಕಳುಹಿಸಿದರು. ನಮ್ಮಪ್ಪ ಹೋಗೋ ದಾರಿಯಲ್ಲಿಯೇ ಇದ್ದ ಚಿಕ್ಕಜ್ಜನ ಜಗುಲಿಯ ಮೇಲೆ ಬೈರ ಸೀತಾರಾಮಯ್ಯನವರಿಗೆ ಕ್ಷೌರ ಮಾಡುತ್ತಾ ಕುಳಿತಿರುವುದನ್ನು ಕಂಡು ಬೆಚ್ಚಿಬಿದ್ದು, ಹಾಗೆಯೇ ಹಿಂತಿರುಗಿ ಮನೆಯ ಹತ್ತಿರ ಬಂದು, ಅಜ್ಜ ಪುಟ್ಟಣ್ಣನವರಿಗೆ ಇರುವ ವಿಚಾರ ನಿವೇದಿಸಿದರು. ವಿಚಾರ ತಿಳಿದ ಅಜ್ಜ ಪುಟ್ಟಣ್ಣನವರು ರೌದ್ರಾವತಾರ ತಾಳಿ, "ಹೋಗೋ, ಎಳಕೊಂಡು ಬಾರೋ ಅವನ್ನ" ಎಂದು ಅಬ್ಬರಿಸಿದರು. ನಮ್ಮಪ್ಪ ಹೆದರಿ ಹಾಗೆಯೇ ನಿಂತುಕೊಂಡರು.

ಕಿಡಿ ಕಿಡಿಯಾದ ಅಜ್ಜ ಪುಟ್ಟಣ್ಣ "ಮುಟ್ಠಾಳ" ಎಂದು ಮಗನನ್ನು ಬೈದು, "ನಾನೇ ಅವನನ್ನು ಎಳೆದುಕೊಂಡು ಬರ್ತೇನೆ ನೋಡು" ಎಂದು ದಾಪುಗಾಲು ಹಾಕುತ್ತಾ ಸೀತಾರಾಮಯ್ಯನವರ ಮನೆ ಕಡೆ ಹೊರಟರು".

"ಅಷ್ಟರಲ್ಲಿ ಸೀತಾರಾಮಯ್ಯನವರಿಗೆ ಅರ್ಧ ಕ್ಷೌರ ಮಾಡಿ ಆಗಿತ್ತು. ಪುಟ್ಟಣ್ಣನವರು "ಬೈರಾ" ಎಂದು ಬೀದಿಯಲ್ಲಿ ನಿಂತು ಅಬ್ಬರಿಸಿದರು. ಬೈರ ಹೆದರಿ ಗಡಗಡನೆ ನಡುಗುತ್ತಾ ಮೆಲ್ಲನ್ನೆ ಮೇಲೆದ್ದ. ಸೀತಾರಾಮಯ್ಯನವರೇನು ಕಡಿಮೆಯೇ, ಅವರು ಸಹ ಮೇಲೇಳುತ್ತಿದ್ದ ಬೈರನಿಗೆ "ಬೈರಾ" ಎಂದು ಗುಟುರು ಹಾಕಿದರು, ಜಗುಲಿಯ ಹಂಚು ಹಾರಿಹೋಗುವಂತೆ. ಬೈರನಿಗೆ ಅತ್ತದರಿ ಇತ್ತಪುಲಿ, ಪಾಪ ಅಜ್ಜ ಪುಟ್ಟಣ್ಣನವರು ಒಂದು ರಟ್ಟೆ ಹಿಡಿದು ಮೇಲೆಳೆದಾಗ ಮೇಲೆ ಬರುತ್ತಿದ್ದ. ಸೀತಾರಾಮಯ್ಯನವರು ಕೂತಲ್ಲಿಂದಲೇ ಇನ್ನೊಂದು ರಟ್ಟೆ ಹಿಡಿದು ಕೆಳಗೆಳೆದಾಗ ಕೆಳಗೆ ಬರುತ್ತಿದ್ದ. ಒಂದು ವಿಚಿತ್ರವೆಂದರೆ ನಮ್ಮ ಅಜ್ಜಂದಿರು ಒಬ್ಬರ ಮೇಲೊಬ್ಬರು ಕೈ ಮಾಡುವ ಅವಿವೇಕಕ್ಕೆ ಹೋಗಲಿಲ್ಲ.

"ಅಷ್ಟು ಹೊತ್ತಿಗೆ ಊರಿನ ಜನರೆಲ್ಲಾ ಸೇರಿದರು. ಎದ್ದು, ಕೂತು, ಎದ್ದು, ಕೂತು, ಬೈರ ಸುಸ್ತಾಗಿದ್ದ, ಹೀಗೆಂಯೇ ಮುಂದುವರಿದರೆ ಬೈರ ಉಳಿಯುವುದಿಲ್ಲವೆಂದು ತಿಳಿದ ಊರ ಜನ ಅವರಿಬ್ಬರ ಕೈಕಾಲು ಕಟ್ಟಿಕೊಂಡು ಸೀತಾರಾಮಯ್ಯನವರನ್ನು ಅವರ ಮನೆಗೆ ನೂಕಿ– ಪುಟ್ಟಣ್ಣನವರನ್ನು ನಮ್ಮ ಮನೆಗೆ ಎಳೆದುಕೊಂಡು ಬಂದರು. ಆಗಲೂ ಅವರಿಬ್ಬರೂ ಸುಮ್ಮನಿರದೆ "ನನ್ನ ಆಸ್ತಿಯೆಲ್ಲಾ ಖರ್ಚಾಗಲಿ ಕಣೋ ನಿನ್ನನ್ನು ಚೂರು ಚೂರು ಮಾಡದೆ ಬಿಡುವುದಿಲ್ಲ" ಎಂದು ಒಬ್ಬರಿಗೊಬ್ಬರು ಆಣೆ ಇಟ್ಟುಕೊಂಡರಂತೆ. ಕಾರಣ ಇದೇನೋ ಅಥವಾ ಬೇರೆಯೋ, ನಾವುಗಳು ಕಣ್ಣು ಬಿಡುವುದರೊಳಗಾಗಿ ನಮ್ಮ ವಂಶದ ಆಸ್ತಿಯೆಲ್ಲಾ ಚೂರಾಗಿದ್ದುದು ನಿಜ" ಎಂದು ಬಹಳ ಸ್ವಾರಸ್ಯಕರವಾಗಿ ಹೇಳಿದರು. ಎಲ್ಲರೂ ಬಿದ್ದು ಬಿದ್ದು ನಕ್ಕೆವು. ಶ್ರೀಕಂಠೇಗೌಡರು ಮೆಲುದನಿಯಲ್ಲಿ "ನೋಡಿದಿರಾ ಕಣಗಾಲ ಪುಟ್ಟಣ್ಣನವರಲ್ಲಿ ಮೈವೆತ್ತಿದ್ದ ಛಲದ ಸ್ವಭಾವಕ್ಕೆ ಇಲ್ಲಿದೆ ಮೂಲ" ಎಂದರು.

ಇಷ್ಟು ಹೊತ್ತಿಗೆ ಗಂಟೆ ಒಂಭತ್ತಾಗಿತ್ತು. ನರಸಿಂಹರವರು ನಮ್ಮ ನಗುವನ್ನು ಕೇಳಿ ಅತ್ತಲಿಂದ ಬಂದ ಗ್ರಾಮಸ್ಥರೊಡನೆ "ಇವರು ನಮ್ಮಣ್ಣನ ಸ್ನೇಹಿತರು....." ಎಂದು ಮಾತನಾಡುತ್ತಲೇ ಇದ್ದರು. ಅಡಿಗೆ ಸಿದ್ಧಪಡಿಸುತ್ತೇನೆ ಎಂದವರು ಹಾಗೆಯೇ ಮಾತನಾಡುತ್ತಾ ನಿಂತರಲ್ಲಾ ಎಂಬುದರ ಜೊತೆಗೆ ಸೀನು ಮಾವ ಮಲಗಿಬಿಟ್ಟರೇ ಎಂಬ ಯೋಚನೆ ನನಗೆ ಬಂತು. "ನರಸಿಂಹರವರೇ ನಮ್ಮ

ಊಟದ ಗತಿ" ಎಂದೆ ಅವರಲ್ಲಾಗಲೇ ನನಗೆ ಬೆಳೆದ ಸಲಿಗೆಯಿಂದ "ಎಲ್ಲಾ ಸಿದ್ಧವಾಗಿದೆ. ಏಳಿ ಕೈಕಾಲು ತೊಳೆದುಕೊಳ್ಳಿ" ಎಂದರು. ಬಚ್ಚಲು ಮನೆಗೆ ಹೋಗುವ ಮುನ್ನ ಹಿಂಭಾಗದ ಹಿತ್ತಲಿಗೆ ಕರೆದುಕೊಂಡು ಹೋದರು. ತುಳಸಿ ಕಟ್ಟೆ ತೋರಿಸಿ "ಇಲ್ಲಿಯೇ ಪುಟ್ಟಣ್ಣ ಬಹಳ ಹೊತ್ತು ಪೂಜೆಗೆ ಕೂರುತ್ತಿದ್ದರು" ಎಂದರು. ಮೂವರೂ ಊಟಕ್ಕೆ ಕುಳಿತೆವು.

ಊಟಕ್ಕೆ ಬಡಿಸಿದವರು ಮಧ್ಯಾಹ್ನ ನಮಗೆ ಉಪ್ಪಿಟ್ಟು ಮಾಡಿಕೊಟ್ಟ ಪಕ್ಕದ ಮನೆಯ ಹೆಣ್ಣು ಮಗಳು ವಿನಯಕುಮಾರಿ, ನರಸಿಂಹರವರ ಶ್ರೀಮತಿಯವರ ಸ್ನೇಹಿತೆ. ವಿನಯಕುಮಾರಿ ಬಿಸಿ ಬಿಸಿ ಅನ್ನ, ಉಪ್ಪಿನಕಾಯಿ, ಸಪ್ಪಸೀಗೆಸೊಪ್ಪಿನ ಸಾರು, ಜೊತೆಗೆ ಪುಟ್ಟಣ್ಣನವರ ಶ್ರಾದ್ಧವಾದ ಮೇಲೆ ಉಳಿದಿದ್ದ ಹುಳಿಯನ್ನದ ಗೊಜ್ಜು ಎಲ್ಲವನ್ನೂ ಬಡಿಸಿದರು. ಊಟ ಬಹಳ ರುಚಿಯಾಗಿತ್ತು, ಪಕ್ಕದಲ್ಲಿ ಕುಳಿತ ನರಸಿಂಹಯ್ಯ, ದೂರದಲ್ಲಿ ನಿಂತ ಅವರ ಹೆಂಡತಿ ಗೌರಮ್ಮನವರು ತುಂಬಾ ಒತ್ತಾಯ ಮಾಡಿ ಬೇಡ ಬೇಡವೆಂದರೂ ಬಡಿಸಿದರು. "ನಮ್ಮಣ್ಣನಿಗೆ ಸಪ್ಪೆಸೀಗೆಸೊಪ್ಪಿನ ಸಾರು ಎಂದರೆ ಇಷ್ಟ" ಹಾಗೆ ಹೀಗೆ ಎಂದು ನರಸಿಂಹರವರು ಉಪಚಾರ ಮಾಡುತ್ತಲೇ ಇದ್ದರು. ನಾವು ಊಟ ಮುಗಿಸುವುದಕ್ಕೂ ವಿದ್ಯುಚ್ಛಕ್ತಿ ಬರುವುದಕ್ಕೂ ಸರಿಹೋಯಿತು. ಸರಸರನೆದ್ದು ಕೆ.ಆರ್. ರಾಮಚಂದ್ರಶಾಸ್ತ್ರಿ ಉರುಫ್ ಸೀನು ಮಾವನ ಮನೆಯ ಕಡೆ ಹೊರಟೆವು.

◆

## ಕೆ.ಆರ್. ರಾಮಚಂದ್ರಶಾಸ್ತ್ರಿ, ಪುಟ್ಟಣ್ಣನವರ ಬಂಧು ಹಾಗೂ ಮಾಸ್ತರು

ಕೆ.ಆರ್. ರಾಮಚಂದ್ರಶಾಸ್ತ್ರಿಗಳು ನಮ್ಮ ಬರುವಿಕೆಗಾಗಿ ಕಾಯುತ್ತಿದ್ದರು. "ಊಟ ಮಾಡಿ" ಎಂದರು. "ಆಯಿತು" ಎಂದೆವು. "ಮೊದಲೆ ಹೇಳಬಾರದೇನೋ ನರಸಿಂಹ, ಇಲ್ಲಿ ನಾನು ಅಡಿಗೆ ಸಿದ್ಧ ಮಾಡಿದ್ದೇನಲ್ಲಾ" ಎಂದು ಲಘುವಾಗಿ ಬೈದು "ಹಾಗಾದರೆ ನೀವು ಕುಳಿತಿರಿ, ನಾನು ಊಟ ಮಾಡಿ ಬರುತ್ತೇನೆ" ಎಂದು ಎದ್ದು ಒಳಗೆ ಹೋದರು.

ಅವರು ಬರುವವರೆಗೂ ನರಸಿಂಹರವರು ತನ್ನಣ್ಣನ ಬಗ್ಗೆ ಮಾತನಾಡುತ್ತಲೇ ಇದ್ದರು. ನಾನು "ನರಸಿಂಹರವರೆ ದಯವಿಟ್ಟು ನೀವು ಮಾತನಾಡದೆ ವಿಶ್ರಾಂತಿ ತೆಗೆದುಕೊಳ್ಳಿ" ಎಂದೆ. "ನೋಡಿ ಸಾರ್ ನನ್ನಣ್ಣ ಹೋದ ಮೇಲೆ ವಿಶ್ರಾಂತಿ ತೆಗೆದುಕೊಂಡು ನಾನು ಏನು ಮಾಡಬೇಕಾಗಿದೆ" ಎಂದು ಮಾತನಾಡುತ್ತಲೇ ಇದ್ದರು.

ಊಟ ಮಾಡಿ ಬಂದ ಸೀನು ಮಾವ "ನರಸಿಂಹ ನಿನ್ನ ಹೆಂಡತಿ ಒಬ್ಬಳೇ ಇದ್ದಾಳೆ. ನೀನಿನ್ನು ಹೋಗು. ಇವರು ಇಲ್ಲೇ ಮಲಗಿಕೊಳ್ಳುತ್ತಾರೆ" ಎಂದರು. "ಇಲ್ಲ ಮಾವ ನಮ್ಮ ವಂಶದ ಚರಿತ್ರೆಯನ್ನು ನಾನೂ ಕೇಳಬೇಕು. ಕೇಳಿಕೊಂಡೇ ಹೋಗುತ್ತೇನೆ" ಎಂದು ಕೂತೇಬಿಟ್ಟರು. ಸೀನು ಮಾವ ವಿಳ್ಳೇದೆಲೆ ತಟ್ಟೆ ನಮ್ಮ ಮುಂದಿಟ್ಟರು. ಎಲ್ಲರೂ ವಿಳ್ಳೇದೆಲೆ ಹಾಕಿಕೊಂಡೆವು. ಅಷ್ಟರಲ್ಲಿ ನನಗಾಗಲೇ ಚಳಿಯ ಚುರುಕು ಸರಿಯಾಗೇ ಮುಟ್ಟಿತ್ತು.

ಅದು ವಿಶಾಲವಾದ ನಾಡ ಹೆಂಚಿನ ಮನೆ. ಆಷಾಡದ ಗಾಳಿ ಹೊಳೆಯ ಮೇಲೆ ಹಾದು ಹಂಚಿನೊಳಗಿನಿಂದ ಎರಚಿದಂತೆ ನುಗ್ಗಿ ಬಂದು ನಮ್ಮನ್ನು ಅಪ್ಪಳಿಸುತ್ತಿತ್ತು. ವಿಳ್ಳೆದೆಲೆ ಹಾಕಿ ಮುಗಿದ ಮೇಲೆ ಸೀನು ಮಾವ ಹಾಸಿಗೆಯ ಮೇಲೇ ಕುಳಿತು ಮಾತನಾಡೋಣ ಎಂದು ಹೇಳುತ್ತಾ ಅವರಿಗೆ ಒಂದು ಕಡೆ, ನಮ್ಮಿಬ್ಬರಿಗೆ ಒಂದು ಕಡೆ ಹಾಸಿಗೆ ಹಾಕಿದರು. ನಮಗೆ ಹಾಸಿಗೆಗಿಂತ ಹೊದಿಕೆಯ ಮೇಲೇ ಕಣ್ಣು ನಾಟಿತ್ತು. ನಮ್ಮ ಮನಸ್ಸಿನ ಪರದಾಟವನ್ನು ತಿಳಿದವರಂತೆ

ಸೀನುಮಾವ ಇಬ್ಬರಿಗೂ ಒಂದೊಂದು ನೂಲಿನ ಬೆಡ್‌ಶೀಟು, ಆಮೇಲೆ ಒಂದೊಂದು ಉಲ್ಲನ್ ರಗ್, ಕೊನೆಯಲ್ಲಿ ಒಂದೊಂದು ಕಂಬಳಿ ತಂದು ಹಾಕಿದರು. ನಮಗೆ ಹಿಡಿಸಲಾರದಷ್ಟು ಸಂತೋಷವಾಯಿತು.

ಮೂವರೂ ನಮ್ಮ ನಮ್ಮ ಹಾಸಿಗೆಯ ಮೇಲೆ ಕುಳಿತೆವು. ನರಸಿಂಹ ಕುರ್ಚಿಯ ಮೇಲೆ ಕುಳಿತರು. ತಕ್ಷಣ ಕಥೆ ಶುರು ಮಾಡಲಿ ಎಂಬುದು ನಮ್ಮ ಆಸೆ. ಆದರೆ ಸೀನುಮಾವ ಯಾವ ಕಾತುರವೂ ಇಲ್ಲದೆ ನಶ್ಯ ತೀಡಿ ಉಂಡೆ ಮಾಡಲು ಪ್ರಾರಂಭಿಸಿದರು. ನನಗೂ ಬೇರೆಯವರ ನಶ್ಯ ಕಂಡಾಗ ಹಾಕುವ ಅಭ್ಯಾಸವಿತ್ತು, ಅದರಲ್ಲೂ ಉಂಡೆ ನಶ್ಯ ಎಂದರೆ ಬಲು ಸೊಗಸು. ಸೀನುಮಾವ ಅದು ಹೇಗೆ ನನ್ನ ಮನಸ್ಸಿನ ಒಳಮರ್ಮವನ್ನು ಅರಿತರೋ ಗೊತ್ತಿಲ್ಲ. ಎರಡು ಉಂಡೆ ನಶ್ಯವನ್ನು ಬಲಗೈನ ಎರಡು ಬೆರಳಲ್ಲಿ ಹಿಡಿದು "ತೆಗೆದುಕೊಳ್ಳಿ" ಎಂದರು, ನನಗೆ ಬಹಳ ಖುಷಿಯಾಯಿತು. ಅದರಲ್ಲಿ ಒಂದನ್ನು ಒಂದು ಚೂರು ಕಾಗದದಲ್ಲಿಟ್ಟು ಇನ್ನೊಂದನ್ನು ಎರಡು ಬೆರಳಿನ ತುದಿಯಲ್ಲಿ ಹಿಡಿದು ಮೂಗಿಗೆ ಏರಿಸಿ, ಕಾಲು ನೀಡಿ ಹೊದಿಕೆಯನ್ನು ಜೋಡಿಸಿ ಹೊದ್ದು ಗೋಡೆಗೊರಗಿ "ದಯವಿಟ್ಟು ಇನ್ನು ಕಥೆ ಶುರುಮಾಡಿ ಯಜಮಾನರೆ" ಎಂದೆ. ಅವರ ಮುಖ ಒಂದು ಕ್ಷಣ ಮ್ಲಾನವಾಯಿತು. "ನೀವು ಬಂದಿರುವ ವಿಷಯ ತಿಳಿದು ನನ್ನ ಹೆಂಡತಿಯೂ ಕಣ್ಣೀರು ಹಾಕಿದಳು" ಎಂದು ಹೇಳಿ ಅವರ ಮಾತು ಪ್ರಾರಂಭಿಸಿದರು.

"ಇದು ಮೊದಲು ಕಣ್ವಗಾಲ ಗ್ರಾಮ. ಅಂದರೆ ಕಣ್ವಋಷಿಗಳಿದ್ದ ಜಾಗ. ಈಗ ಅದು ಹೋಗಿ ಕಣಗಾಲು ಆಗಿದೆ. ನಮ್ಮೂರು ಸುಮಾರು ೪೦೦ ಮನೆಯ ಗ್ರಾಮ. ಇಲ್ಲಿ ಸಕಲ ಜಾತಿಯವರೂ ಇದ್ದಾರೆ. ಅಂದರೆ ಒಕ್ಕಲಿಗರು, ಹರಿಜನರು, ಶೆಟ್ಟರು, ಬ್ರಾಹ್ಮಣರು, ಕ್ಷತ್ರಿಯರು, ಕುಂಬಾರರು, ಮಗ್ಗದವರು ಎಲ್ಲರೂ ಇದ್ದಾರೆ". "ನಾವು ಬ್ರಾಹ್ಮಣರಿರುವುದು ಈಗ ಕೇವಲ ೧೩ ಮನೆಯವರು. ಹಿಂದೆ ಇಡೀ ಊರೇ ಬ್ರಾಹ್ಮಣರಿಂದ ತುಂಬಿತ್ತು" ಎಂದು ಹೇಳುತ್ತಿದ್ದವರನ್ನು ನಾನು ತಡೆದು "ದಯವಿಟ್ಟು ಪೂರ್ವದಿಂದ ಹೇಳಿ, ಏಕೆಂದರೆ ಪುಟ್ಟಣ್ಣನವರ ಪೂರ್ವಜರು ಆಂಧ್ರದಿಂದ ಬಂದವರೆಂದು ಕೇಳಿದ್ದೇನೆ" ಎಂದೆ. "ಆಗಲಿ" ಎಂದು ಪೂರ್ವದಿಂದ ಪ್ರಾರಂಭಿಸಿದರು.

"ಹಿಂದೆ ಕೊಡಗು ಜಿಲ್ಲೆ ವಿಜಯನಗರ ಸಾಮ್ರಾಜ್ಯಕ್ಕೆ ಸೇರಿತ್ತು. ಆ ಕಾಲಕ್ಕೆ ಆಂಧ್ರದ ಗಡಿಯಲ್ಲಿ ಬಹಳ ಜನ ವೈಧಿಕರಿದ್ದರು. ಇದನ್ನರಿತ ವಿಜಯನಗರ ಸಾಮ್ರಾಜ್ಯದ ಅರಸರು ಆ ಕಡೆಯ ವೈಧಿಕರಲ್ಲಿ ಕೆಲವು ಬ್ರಾಹ್ಮಣರನ್ನು ಕೊಡಗು

ಜಿಲ್ಲೆಗೆ ಕಳುಹಿಸಿದರು. ಹಾಗೆ ಬಂದವರಲ್ಲಿ ಶಾಸ್ತ್ರಿಗಳು, ಅಯ್ಯಗಳು, ಸಂಕೇತಿಗಳು, ಕಮ್ಮೆಗಳು ಮತ್ತು ಪುಟ್ಟಣ್ಣನವರ ವಂಶಸ್ತರಾದ ಮುರುಕು ನಾಡು ಬ್ರಾಹ್ಮಣರು ಎಲ್ಲರೂ ಸೇರಿದ್ದಾರೆ. ಬಂದ ಹೊಸತರಲ್ಲಿ ಕೆಲವರು ಕಟ್ಟೆಪುರದಲ್ಲಿ ಕಟ್ಟೆ ಕೆಲಸ ಮಾಡಿದ್ದರಿಂದ ಕಟ್ಟೆಬ್ರಾಹ್ಮಣರಾದರು. ಕೆಲವರು ಪೂಜಾರಿಗಳ ಕೆಲಸ ಹಿಡಿದು ಗುಡಿ ಕಟ್ಟಿದ್ದರಿಂದ ಗುಡಿ ಕಟ್ಟಿಗರಾದರು."

"ಇವರೆಲ್ಲರೂ ಬರುವಾಗ ಬೇಕಾದಷ್ಟು ದುಡ್ಡು ತಂದಿದ್ದರು. ಇಲ್ಲಿ ಲೇವಾದೇವಿ ಮಾಡಿದರು. ಇನ್ನೂ ಹೆಚ್ಚು ಸಂಪಾದಿಸಿ ಕಣಗಾಲು, ಅಡಗೂರು, ಗಂಗನಕುಪ್ಪೆ ರಾಜನ ಬೆಳಗುಲಿ, ಚಾಮರಾಯನಕೋಟೆ ಇಲ್ಲೆಲ್ಲಾ ನೂರಾರು ಎಕರೆ ಜಮೀನು ಕೊಂಡರು. ಇವರು ಆಂಧ್ರದ ಗಡಿಯಿಂದ ಹಣದ ಜೊತೆ ವಿದ್ಯಾ ಸಂಪತ್ತನ್ನೂ ತಂದಿದ್ದರು".

"ಆಗ್ಗೆ ನರಸಿಂಹಭಟ್ಟರೆಂಬುವವರು ಬಹು ದೊಡ್ಡ ಸಂಸ್ಕೃತ ವಿದ್ವಾಂಸರು ಮತ್ತು ಜೋತಿಷಿಗಳು. ಅವರು ಯಜ್ಞ ಯಾಗಾದಿಗಳನ್ನು ಮಾಡುವುದರಲ್ಲೂ, ವೈದಿಕದಲ್ಲೂ ನಿಸ್ಸೀಮರಾಗಿದ್ದರು. ಕೊಡಗಿನಲ್ಲಿ ಚಿಕ್ಕವೀರ ರಾಜೇಂದ್ರನ ಉಪಟಳವನ್ನು ತಾಳಲಾರದೇ ಮೊದಲು ಕೋಣನೂರಿಗೆ ಬಂದು ಪುನಃ ಹೆದರಿ ಕಾವೇರಿ ದಡದಲ್ಲಿ ಬಂದು ಕಣಗಾಲು ಗ್ರಾಮಕ್ಕೆ ಸೇರಿದರು. ಆಗ ಮುಮ್ಮಡಿ ಕೃಷ್ಣರಾಜ ಒಡೆಯರವರು ಇವರನ್ನು ಗುರ್ತಿಸಿ ದಿವಾನ್ ಪೂರ್ಣಯ್ಯನವರ ಮೂಲಕ ಜಮೀನನ್ನು ಬಳುವಳಿಯಾಗಿ ಕೊಡಿಸಿ ಇವರುಗಳನ್ನು ಇಲ್ಲಿಯೇ ನೆಲೆಸುವಂತೆ ಮಾಡಿದರು. ಅವರ ಮೂವರು ಮಕ್ಕಳೂ ಕೂಡಾ ಸಂಸ್ಕೃತ ಪಂಡಿತರಾಗಿದ್ದರು. ಶೃಂಗೇರಿಯಲ್ಲಿ ಜಗದ್ಗುರುಗಳಲ್ಲೊಬ್ಬರಾದ ಸಚ್ಚಿದಾನಂದ ಶಿವಾಭಿನವ ನರಸಿಂಹಭಾರತಿಯವರು ಅವರ ವಂಶಸ್ಥರು. ಅವರ ಶಿಷ್ಯರೇ ಆಮೇಲೆ ಬಂದ ಶೃಂಗೇರಿ ಜಗದ್ಗುರು ಚಂದ್ರಶೇಖರ ಭಾರತಿಯವರು. ಹೀಗೆ ಕರ್ನಾಟಕಕ್ಕೆ ಬಂದ ವೈಧಿಕ ಬ್ರಾಹ್ಮಣರುಗಳಲ್ಲಿ ಸರ್.ಎಂ. ವಿಶ್ವೇಶ್ವರಯ್ಯನವರ ವಂಶಸ್ಥರೂ ಸೇರಿದ್ದರು".

"ಐಶ್ವರ್ಯ ವಿದ್ಯೆ ಎರಡರ ಸುಗಮವಾದ ಕಣಗಾಲು ಗ್ರಾಮ ಆಗ್ಗೆ ನಳಂದ ವಿಶ್ವವಿದ್ಯಾಲಯದ ತರಹವಿತ್ತು. ಮಹಾ ಮಹಾ ಸಂಸ್ಕೃತ ಪಂಡಿತರು, ದೈವಿಕರು, ಜ್ಯೋತಿಷಿಗಳು, ಯಜ್ಞಯಾಗಾದಿಗಳನ್ನು ಬಲ್ಲವರಿಂದ ಕಣಗಾಲು ತುಂಬಿತ್ತು. ಪ್ರತಿ ವರ್ಷ ೮೦-೯೦ ವಿದ್ಯಾರ್ಥಿಗಳು ದೇಶದ ನಾನಾ ಭಾಗಗಳಿಂದ ಬಂದು ಇಲ್ಲಿ ಸಂಸ್ಕೃತ, ವೇದಾಂತ, ಸಾಹಿತ್ಯ, ತರ್ಕ, ಜ್ಯೋತಿಷ್ಯ ಎಲ್ಲವನ್ನೂ ಕಲಿಯುತ್ತಿದ್ದರು. ಇದೇ ಅವಧಿಯಲ್ಲಿ ಶೃಂಗೇರಿಯಲ್ಲಿ ದೇಶವಿದೇಶದ ಎಲ್ಲಾ

ಕಡೆಗಳಿಂದ ಬಂದ ವಿದ್ವಾಂಸರು ಸೇರಿ ಅನೇಕ ವಿಷಯಗಳ ಬಗ್ಗೆ ಚರ್ಚೆ ನಡೆಸುತ್ತಿದ್ದರು. ಅಲ್ಲಿ ಉತ್ತರ ಸಿಗದಿದ್ದರೆ ಇಲ್ಲಿಗೆ ಬಂದು ಅನುಮಾನವನ್ನು ಬಗೆಹರಿಸಿಕೊಳ್ಳುತ್ತಿದ್ದರು. ಹೊರಗಡೆಯಿಂದ ಯಾರು ಬಂದರೂ ಇಲ್ಲಿನ ವಿದ್ವತ್ ಮುಂದೆ ಗೆದ್ದು ಹೋಗಲಾಗುತ್ತಿರಲಿಲ್ಲ".

"ಇಂತಹ ವಂಶದಲ್ಲಿ, ಇಂತಹ ಊರಿನಲ್ಲಿ ಪುಟ್ಟಣ್ಣ ಹುಟ್ಟಿದ್ದು. ಇವರ ಮೂಲಪುರುಷ ಲಕ್ಷ್ಮೀರಮಣಯ್ಯನವರಿಗೆ ಪುಟ್ಟಣ್ಣ (ಅಂದರೆ ಪುಟ್ಟಣ್ಣ ಕಣಗಾಲ್ ಅವರ ಅಜ್ಜ) ಸೀತಾರಾಮಯ್ಯ ಮತ್ತು ಲಕ್ಷ್ಮೀಪತಿ ಮೂರು ಜನ ಮಕ್ಕಳು. ಕೊನೆಯವರು ದತ್ತು ಆಗಿ ಬೇರೆ ಊರಿಗೆ ಹೋದರು".

"ಲಕ್ಷ್ಮೀರಮಣಯ್ಯನವರು ಆಗರ್ಭ ಶ್ರೀಮಂತರು, ಆಗಿನ ಕಾಲದಲ್ಲೇ ಲಕ್ಷಾಂತರ ರೂಪಾಯಿ ಲೇವಾದೇವಿ, ನೂರಾರು ಎಕರೆ ಜಮೀನಿನ ವಹಿವಾಟು, ೫೦ ಖಂಡುಗದವರೆವಿಗೆ ಅಡಿಕೆ ಬೆಳೆಯುತ್ತಿದ್ದರು. ೫೦೦ ಖಂಡುಗದವರೆಗೆ ಬತ್ತ ಬೆಳೆಯುತ್ತಿದ್ದರು. ಬೇಕಾದಷ್ಟು ದಾನ ಧರ್ಮ ಸಹಾ ಮಾಡುತ್ತಿದ್ದರು. ಅವರ ಮೊದಲನೇ ಮಗ ಪುಟ್ಟಣ್ಣನವರು, ತಂದೆ ಲಕ್ಷ್ಮೀರಮಣಯ್ಯನವರ ಹೆಸರಿನಲ್ಲಿ ಕಾವೇರಿ ನದಿಯ ದಂಡೆಯಲ್ಲಿ ಕಟ್ಟಿಸಿದ ಧ್ಯಾನ ಮಂಟಪ ಮತ್ತು ಸೋಪಾನ ಕಟ್ಟೆಗಳು ಈಗಲೂ ಇವೆ".

"ಲಕ್ಷ್ಮೀರಮಣಯ್ಯನವರು ಸ್ವರ್ಗಸ್ಥರಾದ ಮೇಲೆ ಪುಟ್ಟಣ್ಣನವರೂ, ಸೀತಾರಾಮಯ್ಯನವರೂ ವಿಭಾಗ ಮಾಡಿಕೊಂಡರು. ಆಗ ಅವರ ಐಶ್ವರ್ಯ ಎಷ್ಟಿತ್ತೆಂದರೆ ೨೦ ಕೊಳಗ ರೂಪಾಯಿಗಳನ್ನು ಅಳೆದು ಹಂಚಿಕೊಂಡರು. ಆಗಿನಿಂದಲೇ ಅವರಿಬ್ಬರಿಗೂ ವೈಮನಸ್ಯ ಪ್ರಾರಂಭವಾಯಿತು. ಚರಾಸ್ತಿಗಳನ್ನು ವಿಭಾಗ ಮಾಡಿ ಕೊಳ್ಳುವಾಗ ಸಣ್ಣಪುಟ್ಟದ್ದಕ್ಕೂ ಜಗಳವಾಡಿದರು. ಉದಾಹರಣೆಗೆ ಒಂದು ಜಮಖಾನೆಯನ್ನೂ ೨ ಭಾಗ ಮಾಡಿ ಹಂಚಿಕೊಂಡರು".

"ಪುಟ್ಟಣ್ಣನವರು ಆಮೇಲೂ ತಾವು ಕೊಟ್ಟ ಹಣದ ವಸೂಲಿಗಾಗಿ ಇಬ್ಬರು ಛೇರಿಗಳನ್ನು ನೇಮಿಸಿಕೊಂಡಿದ್ದರು. ಆದರೆ ಇವರ ಐಶ್ವರ್ಯ ಸ್ಥಿರವಾಗಿ ಉಳಿಯುವಂತೆ ಕಾಣಲಿಲ್ಲ. ದಿನೇ ದಿನೇ ಅಣ್ಣ ತಮ್ಮಂದಿರಲ್ಲಿ ವೈಮನಸ್ಸಿನ ವ್ಯವಹಾರ ಪ್ರಾರಂಭವಾಗಿ, ಅದು ಊರನ್ನೇ ಆವರಿಸಿತು. ಊರಿನಲ್ಲಿ ಅಣ್ಣ ಒಬ್ಬನನ್ನು ಕಟ್ಟಿಕೊಂಡರೆ ತಮ್ಮ ಒಬ್ಬನನ್ನು ಕಟ್ಟಿಕೊಂಡರು. ಕೋರ್ಟಿಗೆ ಬಿದ್ದರು, ವ್ಯವಹಾರ ಹಾಳುಬಿತ್ತು, ಲೇವಾದೇವಿ ನಿಂತಿತು. ಇದೆಲ್ಲದರ ಜೊತೆಗೆ ಪುಟ್ಟಣ್ಣನವರಿಗೆ ಮಕ್ಕಳು ಜಾಸ್ತಿ. ನಾಲ್ಕು ಗಂಡು ಮಕ್ಕಳು, ಏಳು ಹೆಣ್ಣು ಮಕ್ಕಳು. ಇವರೆಲ್ಲರ ಓದು, ಮದುವೆ, ಮುಂಜಿ, ತಮ್ಮನ ಮೇಲೆ ವ್ಯವಹಾರ ಹೀಗಾಗಿ ಇದ್ದ ಹಣ, ಆಸ್ತಿ ಎಲ್ಲಾ ಕರಗಿಹೋಯಿತು".

"ನನಗೀಗ ೭೨ ವರ್ಷ. ಈಗ್ಗೆ ೬೬ ವರ್ಷಗಳ ಹಿಂದೆ ಪುಟ್ಟಣ್ಣನವರ ಮನೆ ಅರಮನೆಯ ತರಹ ಜಗಜಗಿಸುತ್ತಿತ್ತು. ಆ ದೊಡ್ಡ ಮನೆಯನ್ನು ವಾಸದ ಮನೆ, ಹಣದ ಖಜಾನೆ, ಬತ್ತದ ಕಣಜ, ರಾಗಿ ಕಣಜ ಹೀಗೆ ವಿಂಗಡಿಸಲಾಗಿತ್ತು. ಹಣದ ಖಜಾನೆಯಾಗಿದ್ದ ಮನೆಯ ಭಾಗದ ಮುಂದೆ ದೊಡ್ಡ ಗರುಡಗಂಭವನ್ನಿಟ್ಟು ಎಣ್ಣೆ ಸುರಿದು ದೀಪ ಹಚ್ಚಿ ರಾತ್ರಿಯೆಲ್ಲಾ ಉರಿಸುತ್ತಿದ್ದುದು ಈಗಲೂ ನೆನಪಿನಲ್ಲಿದೆ. ಇಷ್ಟೆಲ್ಲಾ ಇದ್ದವರು ಕೊನೆಗೆ ಎಲ್ಲಿಗೆ ಹೋದರೆಂದರೆ ಕಣಜದ ಕಲ್ಲು ಕಿತ್ತು ಮಾರಿದರು, ಮನೆಯ ಮುಂದೆ ಅದ್ದಿದ್ದ ಕಲ್ಲು ಕಿತ್ತು ಮಾರಿದರು. ಪುಟ್ಟಣ್ಣ ಕಣಗಾಲರ ತಂದೆ ರಾಮಸ್ವಾಮಿಯವರು ಸಂಸಾರಕ್ಕೆ ಹೆಗಲು ಕೊಡುವ ಹೊತ್ತಿಗೆ ಹೆಚ್ಚೇನೂ ಉಳಿದಿರಲಿಲ್ಲ".

"ಎಸ್.ಆರ್. ಪುಟ್ಟಣ್ಣ ಕಣಗಾಲರ ತಂದೆ ಜ್ಞಾನಿ, ಸಾತ್ವಿಕ, ಸೋತ ಮನಸ್ಸಿನ ನೊಂದ ಜೀವಿ. ಎರಡು ಹೆಣ್ಣು, ಐದು ಗಂಡು ಮಕ್ಕಳು. ಗಂಡು ಮಕ್ಕಳ ವಿದ್ಯಾಭ್ಯಾಸ, ಹೆಣ್ಣು ಮಕ್ಕಳಿಗೆ ಮದುವೆ ಮುಗಿಸುವ ಹೊತ್ತಿಗೆ ಇದ್ದಬದ್ದ ಆಸ್ತಿ ಎಲ್ಲಾ ಮಾರಲ್ಪಟ್ಟು ಒಂದು ಎಕರೆ ಮಾತ್ರ ಉಳಿದಿತ್ತು. ಒಟ್ಟಿನಲ್ಲಿ ಪುಟ್ಟಣ್ಣ ಹುಟ್ಟುವ ಹೊತ್ತಿಗೆ ಅವರು ಕಡು ಬಡತನದಲ್ಲಿದ್ದರು".

"ಹುಡುಗ ಚಿಕ್ಕಂದಿನಲ್ಲೇ ಬಹಳ ಚೂಟಿ. ಅವನಿಗೆ ಒಂದು ವರ್ಷ ಎರಡು ತಿಂಗಳಿದ್ದಾಗಲೇ ಕನ್ನಡದ ಪರಿಸರದಲ್ಲೂ ಚೆನ್ನಾಗಿ ತೆಲುಗು ಮಾತನಾಡುವುದನ್ನು ಕಲಿತಿದ್ದ. ಅವನ ಓರಿಗೆಯ ಹುಡುಗರು ತಮ್ಮ ಮನೆಯಲ್ಲಿ ಮಾತನಾಡುತ್ತಿದ್ದರೂ ಸಹ ತೆಲುಗು ಭಾಷೆಯನ್ನು ಸರಿಯಾಗಿ ಮಾತನಾಡಲು ಕಲಿತಿರಲಿಲ್ಲ".

"ನಾನು ಕೆಲವು ವರ್ಷ ಪುಟ್ಟಣ್ಣನಿಗೆ ಮತ್ತು ನನ್ನ ಊರಿನ ಇತರೆ ಹುಡುಗರಿಗೆ ಪಾಠ ಹೇಳಿಕೊಡುತ್ತಿದ್ದೆ. ನಾನು ಯಾವುದೇ ವಿಷಯವನ್ನು ೨-೩ ಸಲ ಹೇಳಿಕೊಡುವುದರೊಳಗೆ ಕಲಿಯುತ್ತಿದ್ದ. ಹಾಗೆಯೇ ಕೆಟ್ಟ ಹುಡುಗರ ಸಹವಾಸದಲ್ಲಿ ಕೆಟ್ಟ ಮಾತನ್ನೂ ಕಲಿತಿದ್ದ. ಒಂದು ಸಲ ಅವರಪ್ಪನನ್ನು "ಬೋಳಿ ಮಗ" ಎಂದು ಬೈದಿದ್ದ. ಅವರಪ್ಪ ನನ್ನಲ್ಲಿಗೆ ಬಂದು "ನನ್ನ ಮಗನಿಗೆ ಬೈಯ್ಯುವುದನ್ನೂ ಕಲಿಸಿದ್ದೀಯಾ" ಎಂದು ಹುಸಿ ಜಗಳವಾಡಿದ್ದರು. ಒಂದೊಂದು ಸಲ ನನ್ನ ಕನ್ನಡಕ, ಬೀಗದ ಕೈಗಳನ್ನು ಮುಚ್ಚಿಟ್ಟು ಸತಾಯಿಸುತ್ತಿದ್ದ".

"ಅವನಲ್ಲಿ ಚಿಕ್ಕಂದಿನಿಂದ ಕೆಲವು ವೈವಿಧ್ಯಗುಣಗಳಿದ್ದವು. ತಕ್ಷಣ ಯಾರನ್ನಾದರೂ ಮೆಚ್ಚುತ್ತಿದ್ದ ಅಥವಾ ತಿರಸ್ಕರಿಸುತ್ತಿದ್ದ. ಕೋಪ, ತಾಪ, ದುಃಖ, ನಗು ಬೇಕೆಂದ ತಕ್ಷಣವೇ ಬಂಧು ಮಾಯವಾಗುತ್ತಿದ್ದವು. ಅವನ ವಿದ್ಯಾಭ್ಯಾಸ ಪ್ರಾಥಮಿಕ ಶಾಲೆಯವರೆಗೆ ಕಣಗಾಲಿನಲ್ಲಿ ನಡೆಯಿತು. ಆಮೇಲೆ ವಿದ್ಯಾಭ್ಯಾಸ

ಮುಂದುವರೆಸುವ ಸಲುವಾಗಿ ಮೈಸೂರಿಗೆ ಹೋದ. ಅಂದರೆ ೧೯೪೩-೪೪ ರಲ್ಲಿ ಮೈಸೂರಿನ ಡಿ. ಬನುಮಯ್ಯ ಮಾಧ್ಯಮಿಕ ಶಾಲೆಗೆ ಸೇರಿ ವಾರಾನ್ನ, ಭಿಕ್ಷಾನ್ನಾ ಮಾಡಿಕೊಂಡು ಓದಲು ಪ್ರಾರಂಭಿಸಿದ. ಆದರೆ ಓದಿನ ಮೇಲೆ ಅಂತಹ ಆಸಕ್ತಿಯೇನಿರಲಿಲ್ಲ. ಮಿಗಿಲಾಗಿ ಬಂದ ಬಂದ ಸಿನಿಮಾ ನೋಡುತ್ತಾ, ಅವಕಾಶ ಸಿಕ್ಕಿದಾಗಲೆಲ್ಲಾ ಸ್ಟುಡಿಯೋ ಕಡೆ ಹೋಗಿ ಫೋಟೋಗ್ರಫಿ ಕಲಿಯಲು ಪ್ರಾರಂಭಿಸಿದ. ಅಂತು ಇಂತು ಮಾಧ್ಯಮಿಕ ಶಾಲೆ ಮುಗಿಸಿ, ಹೈಸ್ಕೂಲ್ ಸೇರಿ, ಅಂತಿಮ ವರ್ಷದ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಫೇಲಾಗಿ ಅತೀವ ಆನಂದ ಪಟ್ಟು, ಬರೇ ಓದುವುದರಲ್ಲೇ ಕಾಲ ಕಳೆದರೆ ಸಿನಿಮಾ ಮಾಡುವುದು ಯಾವಾಗ ಎಂದು ಯೋಚಿಸುತ್ತಾ, ಓದುವುದೇ ಬೇಡವೆಂದು ತೀರ್ಮಾನ ತೆಗೆದುಕೊಂಡ".

"ಅದನ್ನು ಕೇಳಿದ ತಂದೆ ರಾಮಸ್ವಾಮಯ್ಯನವರು, ನೊಂದುಕೊಂಡು ತಕ್ಷಣ ಊರಿಗೆ ಬರುವಂತೆ ಹೇಳಿ ಕಳುಹಿಸಿದರು. ಆದರೆ ಪುಟ್ಟಣ್ಣ ಹೋಗಲಿಲ್ಲ. ಸದ್ಯದ ಹೊಟ್ಟೆಪಾಡಿಗಾಗಿ ಸಿ.ಪಿ.ಸಿ. ಕಂಪನಿಯ ಪೆಟ್ರೋಲ್ ಬಂಕಿನಲ್ಲಿ ಪೆಟ್ರೋಲ್ ಹಾಕುವ ಕೆಲಸಕ್ಕೆ ಸೇರಿಕೊಂಡ. ಆಮೇಲೆ ಪಾಲಂಜೀಸ್ ಗ್ಯಾರೇಜಿನಲಿ ಕ್ಲೀನರ್ ಆಗಿ ಸೇರಿಕೊಂಡ. ನಂತರ ಬಸ್‌ಡ್ರೈವರ್ ಆದ. ಇತ್ಯಾದಿ ಆದಮೇಲೆ ನಾಟಕದ ಕಂಪನಿಗಳನ್ನು ಸೇರಿದ. ಈ ಬಗ್ಗೆ ಎಲ್ಲಾ ನರಸಿಂಹನಿಗೆ ಹೆಚ್ಚು ಗೊತ್ತಿದೆ. ಎಲ್ಲಾ ಹೇಳಿರಬೇಕಲ್ಲಾ" ಎಂದು ಹೇಳಿ ತಮ್ಮ ಮಾತು ಮುಗಿಸಿದರು.

ಆಗಲೇ ರಾತ್ರಿ ೧.೦೦ ಗಂಟೆಯಾಗಿತ್ತು. ನರಸಿಂಹಯ್ಯನವರು ಬೆಳಿಗ್ಗೆ ೬.೩೦ಕ್ಕೆ ಬಸ್ ಇರುವುದಾಗಿ ಹೇಳಿ ತಾನು ಬಂದು ಎಬ್ಬಿಸುವುದಾಗಿ ತಿಳಿಸಿ ತಮ್ಮ ಮನೆಗೆ ಹೋದರು. ನಾವು ಮಲಗಿದೆವು.

ಬೆಳಿಗ್ಗೆ ನಮಗೆ ೫.೩೦ಕ್ಕೆ ಎಚ್ಚರವಾಯಿತು. ಹೊರಡಲು ಸಿದ್ಧರಾಗಿ ಕುಳಿತೆವು. ೬.೧೫ ಆದರೂ ನರಸಿಂಹಯ್ಯನವರು ಬರಲಿಲ್ಲ. ಇನ್ನು ತಡ ಮಾಡುವುದು ಸರಿಯಲ್ಲವೆಂದು ಬಸ್ ನಿಲ್ದಾಣದ ಕಡೆ ಹೋಗಲು ಮನೆಯಿಂದ ಹೊರಗಡೆ ಬಂದೆವು. ಅಷ್ಟರಲ್ಲಿ ಬಸ್ ಶಬ್ದಮಾಡುತ್ತಾ, ನಮ್ಮ ಕಣ್ಣೆದುರೇ ಹೊರಟುಹೋಯಿತು. ಇನ್ನೂ ದೋಣಿಯೇ ಗತಿಯೆಂದು ಯೋಚಿಸಿ ಪುಟ್ಟಣ್ಣನವರ ಅಜ್ಜ ಪುಟ್ಟಣ್ಣನವರು ಅವರ ತಂದೆಯ ಹೆಸರಿನಲ್ಲಿ ಹೊಳೆಯ ದಂಡೆಯಲ್ಲಿ ಕಟ್ಟಿಸಿದ್ದ ಧ್ಯಾನಮಂಟಪ ಮತ್ತು ಸೋಪಾನ ಕಟ್ಟೆಯನ್ನು ನೋಡಿಕೊಂಡು ದೋಣಿ ಹತ್ತಿದೆವು.

◆



# ನಾನು ಓದಿದ್ದು ತಿಳಿದಿದ್ದು

ಕನ್ನಡದಲ್ಲಿ ೨೩ ಚಿತ್ರಗಳನ್ನೂ, ಇತರ ಭಾಷೆಗಳಲ್ಲಿ ೧೩ ಚಿತ್ರಗಳನ್ನೂ ನಿರ್ದೇಶಿಸಿದ ಪುಟ್ಟಣ್ಣನವರು ಪ್ರತಿ ಚಿತ್ರದಲ್ಲೂ ಹೊಸತನ ತುಂಬಲು ಯತ್ನಿಸಿದರು. ವಿಚಿತ್ರ ಸ್ವಭಾವದ ಅವರಿಗೆ ಚಿತ್ರ ತಯಾರಿಕೆಯ ವಿವಿಧ ಅಂಗಗಳಲ್ಲೂ ಅಪಾರವಾದ ಪ್ರತಿಭೆಯಿತ್ತು. ಈ ನಿಟ್ಟಿನಲ್ಲಿ ಅವರಲ್ಲಿದ್ದ ಚಿತ್ರಕಥಾ ರಚನೆ, ಪ್ರತಿಭಾನ್ವೇಷಣೆ, ಪಾತ್ರಧಾರಿಗಳಿಗೆ ಕಲಿಸುತ್ತಿದ್ದ ಪಾಠ, ಶಿಸ್ತಿನ ಪಾಲನೆ, ಉಪಯೋಗಿಸುತ್ತಿದ್ದ ಸಂಕೇತಗಳು, ಬಳಸಿಕೊಳ್ಳುತ್ತಿದ್ದ ಪ್ರತಿಮೆಗಳು, ಮಾರ್ಮಿಕ ಸಂಭಾಷಣೆ, ಇವೆಲ್ಲಾ ಅನುಕರಣೀಯ. ಅವರು ತನ್ನ ಚಿತ್ರಗಳಲ್ಲಿ ಮಹಿಳಾ ಲೋಕದ ಅತಿಮಾನವರಾಗಿದ್ದರು.

ಈ ಮಾತುಗಾರ ತನ್ನ ಚಿತ್ರಗಳೊಡನೆ ಸವೆಸಿದ ದಾರಿ ಸುಲಭದ್ದಾಗಿರಲಿಲ್ಲ. ಕನ್ನಡ ಚಿತ್ರೋದ್ಯಮದವರು ಪುಟ್ಟಣ್ಣನವರನ್ನು ಸಮರ್ಪಕವಾಗಿ ಗುರುತಿಸದಿದ್ದರೂ ಕನ್ನಡದ ಜನ ಅವರನ್ನು ಮರೆಯಲಿಲ್ಲ.

ಇವೆಲ್ಲಾ ಮುಂದಿವೆ....

# ವಿಚಿತ್ರ ಸ್ವಭಾವದ ವ್ಯಕ್ತಿತ್ವ

ಪುಟ್ಟಣ್ಣನವರು ದೈಹಿಕವಾಗಿ ಅಂತಹ ಆಕರ್ಷಕ ವ್ಯಕ್ತಿಯೇನಲ್ಲ. ಎತ್ತರವೂ ಅಲ್ಲದ, ಕುಳ್ಳೂ ಅಲ್ಲದ, ದಪ್ಪ ಅಥವಾ ಸಣ್ಣವೂ ಅಲ್ಲದ ಶಾರೀರಿಕ ರಚನೆ ಅವರದು. ಬಣ್ಣ ಕಪ್ಪು, ಸ್ವಭಾವ ಪಾದರಸದಂತೆ. ಸದಾ ಚಟುವಟಿಕೆಯ ಬೀಡು. ಸುಮ್ಮನೆ ಕುಳಿತೇ ಅವರಿಗೆ ಗೊತ್ತಿರಲಿಲ್ಲ. ಪ್ರತಿಯೊಂದನ್ನೂ ಶ್ರದ್ಧೆಯಿಂದ ಮಾಡುತ್ತಿದ್ದರು.

ಅವರ ಮಾತಿನ ವೇಗ ಬಲು ಜೋರು, ಮೆಲ್ಲಗೆ ಅಥವಾ ನಯವಾಗಿ ಮಾತನಾಡಿ ಅಭ್ಯಾಸವೇ ಇರಲಿಲ್ಲ. ತೆರೆದ ಹೃದಯ ಅವರದು. ಗುಟ್ಟೆಂಬುದೇ ಗೊತ್ತಿರಲಿಲ್ಲ. ಅವರು ತುಂಬಾ ಭಾವೋದ್ವೇಗದ ವ್ಯಕ್ತಿ. ಸಣ್ಣ ಪುಟ್ಟದಕ್ಕೆಲ್ಲ ಮುಕ್ತವಾದ ನಗೆ ಬೀರುತ್ತಿದ್ದರು. ಹಾಗೇ..ಹೋ..ಹೋ, ಎಂದೇ ಅವರ ನಗೆ ಪ್ರಾರಂಭವಾಗುತ್ತಿತ್ತು. ಹಾಗೆಯೇ ಅವರ ನಗೆ ದೀರ್ಘ.

ಪುಟ್ಟಣ್ಣನವರು ಶೀಘ್ರ ಕೋಪಿಷ್ಠ, ತಟ್ಟನೆ ರೇಗುತ್ತಿದ್ದರು, ಮಾತುಗಳು ಸಿಡಿಯುತ್ತಿದ್ದವು. ನಕ್ಕರೂ, ಕೋಪಗೊಂಡರೂ ದೂರದವರು ತಿರುಗಿ ನೋಡಬೇಕು ಹಾಗಿರುತ್ತಿತ್ತು, ಅವರ ದಾಟಿ.

ಅವರು ತೀರ ಹಠವಾದಿ, ಛಲವಾದಿ, ರಾಜಿ ಎಂಬುದೇ ಗೊತ್ತಿರಲಿಲ್ಲ. ತನಗೆ ಸರಿ ಎಂದು ಕಂಡು ಬಂದರೆ ಮುಗಿಯಿತು. ಬೇರೆಯವರಿಗೆ ಸರಿಯಿರಲಿ, ಬಿಡಲಿ ಅದಕ್ಕೂ ಅವರಿಗೂ ಸಂಬಂಧವಿಲ್ಲ.

ಪುಟ್ಟಣ್ಣನವರು ಜಗಳಗಂಟಿಯೂ ಹೌದು. ಅವರು ಹೊಸಬರಿರಲಿ, ಹಳಬರಿರಲಿ, ಯಾವುದೇ ವಿಷಯದಲ್ಲಿ ತಮಗೂ, ಬೇರೆಯವರಿಗೂ ಭಿನ್ನಾಭಿಪ್ರಾಯ ಬಂದಲ್ಲಿ ತನ್ನದೇ ಸರಿಯೆಂದು ತೀವ್ರವಾಗಿ ವಾದ ಮಾಡುತ್ತಿದ್ದರು.

ಅವರು ಮಹಾ ಧೈವ ಭಕ್ತ. "ಏನೇ ಮಾಡಿದರೂ ಯೋಗವಿದ್ದಷ್ಟೇ ನಮಗೆ ಲಭ್ಯ" ಎನ್ನುತ್ತಿದ್ದರು.

ಅವರೊಬ್ಬ ಕನಸುಗಾರ. ಇಡೀ ವಿಶ್ವವೇ ತನ್ನ ಕ್ಷೇತ್ರವಾಗಬೇಕೆಂಬ ಮಹಾದಾಸೆ ಅವರದಾಗಿತ್ತು. ರಸಿಕ ಕೂಡ. ಊಟದಲ್ಲಿ, ಬಟ್ಟೆಯಲ್ಲಿ, ಮಾತಿನಲ್ಲಿ, ಅಷ್ಟೇಕೆ ಹೆಣ್ಣಿನ ಸಂಗದಲ್ಲಿ ಹಾಗೂ ಜೀವನದ ರೀತಿಯಲ್ಲಿ ಅವರಿಗೆ ತನ್ನದೇ ಆದ ಮೋಜಿನ ದಾಟಿಯಿತ್ತು.

◆



"ಸಾವಿರ ಮೆಟ್ಟಿಲು" ಚಿತ್ರದ ಚಿತ್ರೀಕರಣದಲ್ಲಿ ನಿರ್ಮಾಪಕ ಡಿ.ಬಿ. ಬಸವೇಗೌಡ ಮತ್ತು ಕಲಾವಿದೆ ಜಯಂತಿ.

# ಮಾತುಗಾರ ಮತ್ತು ಮುಗ್ಧ ಹುಂಬ

ಪುಟ್ಟಣ್ಣನವರು ನಿಧನರಾದ ಕೆಲವೇ ದಿನಗಳಲ್ಲಿ ಪುಟ್ಟಣ್ಣನವರ ಪತ್ರಕರ್ತ ಮಿತ್ರರೊಬ್ಬರು ಪುಟ್ಟಣ್ಣನವರ ಬಗ್ಗೆ ಆತ್ಮೀಯವಾಗಿ ಬರೆಯುತ್ತಾ "ಪುಟ್ಟಣ್ಣನವರ ಒಂದು ಭೇಟಿಯ ವೇಳೆಯಲ್ಲಿ ಒಂದು ವರ್ಷಕ್ಕಾಗುವಷ್ಟು ಮಾತು ಕೇಳಿದ್ದೆ. ಇಂತಹ ವಾಚಾಳಿಯನ್ನು ಯಾರೂ ಎದುರಿಸಲಾಗುತ್ತಿರಲಿಲ್ಲ" ಎಂದಿರುವುದು ಅಕ್ಷರಶಃ ನಿಜ. ಪುಟ್ಟಣ್ಣನವರು ಮಹಾ ವಾಚಾಳಿ. ಎಂತಹವರನ್ನೂ ತಮ್ಮ ಮಾತಿನಿಂದ ಮರುಳು ಮಾಡುತ್ತಿದ್ದರು. ಮತ್ತು ಸುಮ್ಮನಾಗಿಸುತ್ತಿದ್ದರು. ಪತ್ರಿಕೆಯವರೂ ಕೂಡ ಇದರಿಂದ ಹೊರತಾಗಿರಲಿಲ್ಲ.

ಪುಟ್ಟಣ್ಣನವರ ಪ್ರತಿ ಚಿತ್ರಗಳು ಬಿಡುಗಡೆಯಾದಾಗ ಅವರನ್ನು ಆಹ್ವಾನಿಸಿ ಸತ್ಕರಿಸಿಯಾದ ಮೇಲೆ ಚರ್ಚಾಗೋಷ್ಠಿಯನ್ನು ಇಟ್ಟುಕೊಳ್ಳುತ್ತಿದ್ದರು. ಈ ಗೋಷ್ಠಿಗಳಲ್ಲಿ ಬಿಸಿ ಬಿಸಿಯಾದ ವಿವಾದಗಳಿರುತ್ತಿದ್ದವು ಮತ್ತು ವಿವಾದದಲ್ಲಿಯೇ ಮುಕ್ತಾಯವಾಗುತ್ತಿದ್ದವು. ತಮ್ಮ ಚಿತ್ರಗಳ ಬಗ್ಗೆ ಪತ್ರಿಕೆಯವರು ಒಳ್ಳೆಯದನ್ನು ಬರೆದಾಗ ಪುಟ್ಟಣ್ಣನವರು ಸಂತೋಷದಿಂದ ಬೀಗುತ್ತಿದ್ದರು. ಅದೇ ವಿರುದ್ಧವಾಗಿ ಬರೆದಾಗ ಪತ್ರಿಕೆಯವರನ್ನು ಸಿಕ್ಕಾಪಟ್ಟೆ ಟೀಕಿಸುತ್ತಿದ್ದರು. ಆದರೆ ಎಂದೂ ಪತ್ರಕರ್ತರೊಡನೆ ಮನಸ್ಸು ಕಹಿ ಮಾಡಿಕೊಳ್ಳುತ್ತಿರಲಿಲ್ಲ. ಅವರನ್ನು ಕಟುವಾಗಿ ಟೀಕಿಸಿದವರನ್ನೂ ತಾವಾಗಿಯೇ ಮಾತನಾಡಿಸುತ್ತಿದ್ದರು. ಇಂತಹ ವೇಳೆಯಲ್ಲಿ ಪತ್ರಿಕೆಯವರನ್ನು ತಮ್ಮ ಮನೆಗೆ ಚಹಾ ಗೋಷ್ಠಿಗೆ ಕರೆದು "ಸ್ವಲ್ಪ ಚೆನ್ನಾಗಿ ಬರೀರಪ್ಪ, ನಾವೆಲ್ಲಾ ಸಾಧುಗಳು, ಪಾಪದವರು, ಯಾರಿಗೂ ಅನ್ಯಾಯ ಮೋಸ ಮಾಡುವವರಲ್ಲ, ಭಾವನಾ ಜೀವಿಗಳು. ಸುಲಭದಲ್ಲಿ ನೊಂದುಕೊಳ್ಳುತ್ತೇವೆ" ಎನ್ನುತ್ತಿದ್ದರು. ಹಾಗೆಯೇ ವಿವಾದವನ್ನು ಸುಖಾಂತ್ಯದಲ್ಲಿ ಕಾಣಲು ಇಚ್ಛಿಸುತ್ತಿದ್ದರು.

ಭೇಟಿಯಾದಾಗಲೆಲ್ಲಾ ಕಾಲು ಕೆರೆದು, ಮಾತು ತೆಗೆದು, ಪ್ರತಿ ವಿಚಾರಕ್ಕೂ ಗೊಂದಲ, ಸಿದ್ಧಾಂತ ಸೃಷ್ಟಿಸಿ, ಬರೀ ಮಾತಿನಲ್ಲಿ ಮೇಲುಗೈ ಸಾಧಿಸುವ ಹಟಮಾರಿತನ ಅವರಲ್ಲಿತ್ತು. ಇವರ ಜೊತೆ ಮಾತನಾಡುತ್ತಾ ಕುಳಿತರೆ ಗಂಟೆ

ಕಳೆದುದೇ ಕಾಣುತ್ತಿರಲಿಲ್ಲ. ಡಂಬಾಚಾರದ ಮಾತುಗಳಿಂದ ಹಿಡಿದು ಗಾಢವಾದ ತತ್ವಗಳವರೆಗೂ, ತಮ್ಮ ಗ್ಯಾರೇಜಿನ ಕಂಪನಿಯ ಅನುಭವಗಳು, ಅಲ್ಲಿನ ವಿವಿಧ ರೀತಿಯ ನೋವಿನ ಪ್ರಸಂಗಗಳು, ತಮ್ಮ ಪ್ರೇಮಗಳ ಹಿನ್ನೋಟ ಇಂತಹ ನೂರಾರು ಕಥೆಗಳನ್ನು ಕಣ್ಣಿಗೆ ಕಟ್ಟುವಂತೆ ಹೇಳುತ್ತಾ, ನಗುತ್ತಾ, ತಮಾಷೆ ಮಾಡುತ್ತಾ ಮಾತನಾಡುತ್ತಿದ್ದರು.

ಪುಟ್ಟಣ್ಣನವರು ಯಾವುದೇ ಚಿತ್ರವನ್ನು ನಿರ್ಮಿಸಿದಾಗಲೂ ಅದರ ಬಿಡುಗಡೆಯ ಮುನ್ನವೇ ಅದರ ಬಗ್ಗೆ ವಿಚಿತ್ರ, ಕುತೂಹಲವನ್ನು ಸೃಷ್ಟಿಸುತ್ತಿದ್ದರು. ಅದು ಅವರ ವೈಶಿಷ್ಟ್ಯವಾಗಿತ್ತು. ಇದು ಕಲಾವಿದರಿಗೆ ಸಹಜವಾದರೂ ಪುಟ್ಟಣ್ಣನವರು ತಮ್ಮ ಕೃತಿಗಳಿಗೆ ಬಣ್ಣ ಕಟ್ಟುತ್ತಿದ್ದುದೇ ಬೇರೆ ರೀತಿಯಲ್ಲಿ. ಅವರು ತಯಾರಿಸಿದ ಚಿತ್ರ ಎಂಥದ್ದಾದರೂ ತಾನೊಂದು ಅದ್ಭುತ ಕಲಾಕೃತಿಯನ್ನು ತಯಾರಿಸಿದ್ದೇನೆಂಬ ಬಿಂಕ ಸದಾ ಅವರಲ್ಲಿ ತುಂಬಿರುತ್ತಿತ್ತು.

"ಸಾಕ್ಷಾತ್ಕಾರ" ಸೋಲನ್ನು ಅನುಭವಿಸಿದಾಗ "ಈ ಚಿತ್ರದಲ್ಲಿ ವೈಚಾರಿಕತೆಗೆ ಪ್ರಾಧಾನ್ಯತೆ ನೀಡಿದ್ದೇನೆ" ಎಂದು ಏನನ್ನೋ ಹೇಳಿ ಪತ್ರಿಕೆಯವರ ವಿರೋಧ ಕಟ್ಟಿಕೊಂಡರು. ಅಂತೆಯೇ ಅವರ "ಕಾಲೇಜುರಂಗ" ಚಿತ್ರ ಸೋತು ಅದರಿಂದ ಅವರಿಗೆ ಹೆಚ್ಚು ನೋವಾಗಿದ್ದರೂ ಅವರು ಹೇಳುತ್ತಿದ್ದುದ್ದೇ ಬೇರೆ. "ಈ ಚಿತ್ರ ಮಾಡಿ ಸುಮಾರು ಒಂದೂವರೆ ವರ್ಷಗಳ ಕಾಲ ಕಾಫಿ ಕುಡಿಯಲು ಕಾಸಿಲ್ಲದಂತಾಗಿ ಬಿಟ್ಟೆ ಆದರೆ ಇಂದಿಗೂ ನನಗೆ ಅತ್ಯಂತ ಖುಷಿ ಕೊಟ್ಟ ಚಿತ್ರಗಳಲ್ಲಿ ಅದೂ ಒಂದು" ಎನ್ನುತ್ತಿದ್ದರು. "ಧರಣಿಮಂಡಲ" ಸೋತಾಗಲೂ ಸಹ ತಮ್ಮ ಸೋಲನ್ನೊಪ್ಪದೆ ಪತ್ರಿಕೆಯವರ ಟೀಕೆಗೆ ಉತ್ತರವಾಗಿ "ನಾನೊಂದು ಹಿಂದೂ ಚಿತ್ರ ಮಾಡಿದೆ. ಅದನ್ನು ಹಿಂದೂ ಪತ್ರಿಕೆಯವರೇ ಬಯ್ದಿದ್ದಾರೆ. ಅದು ನನ್ನ ಮಾನವ ಸಂದೇಶದ ಚಿತ್ರ" ಎನ್ನುತ್ತಿದ್ದರು.

ಅವರು ಆಗಾಗ್ಗೆ ತನ್ನ ಚಿತ್ರಗಳ ಬಗ್ಗೆಯೇ ಮಾತನಾಡುತ್ತಾ "ನನ್ನ ಚಿತ್ರಗಳಲ್ಲಿನ ಆದರ್ಶ ಬೇರೆ ಅಲ್ಲ ನಾನು ಬೇರ ಅಲ್ಲ" ಅನ್ನುತ್ತಿದ್ದರು. ನಿರ್ದೇಶಕನ ಸ್ಥಾನಮಾನ ಪ್ರತಿಭೆಯ ವಿಚಾರದಲ್ಲಿ ಪುಟ್ಟಣ್ಣನವರಿಗೆ ತಮ್ಮ ಬಗ್ಗೆ ಅತಿಯಾದ ಹೆಮ್ಮೆಯಿತ್ತು. ನಾನು ಖ್ಯಾತ ನಿರ್ದೇಶಕರಾದ ಸತ್ಯಜಿತ್‌ರಾಯ್, ಮೃಣಾಲ್‌ಸೇನ್ ಮತ್ತು ಅಂತರಾಷ್ಟ್ರೀಯ ಆಂಗ್ಲ ನಿರ್ದೇಶಕ ಆ್ಯಟನ್‌ಬರೋಗಿಂತ ಯಾವ ರೀತಿಯಲ್ಲೂ ಕಡಿಮೆಯಿಲ್ಲವೆನ್ನುತ್ತಿದ್ದರು. ಚಿತ್ರರಂಗದ ಜನ ತನ್ನನ್ನು ಡ್ಯೂಪ್ ಮಾಡುತ್ತಾರೆಂದು ಗೊತ್ತಿದ್ದರೂ ಅವರ ಹೊಗಳಿಕೆಯಿಂದ ಮೋಸ ಹೋಗುತ್ತಿದ್ದರು. ಹಲವರು ಅವರನ್ನು ಹೊಗಳಿ ಹೊಗಳಿ ಹೊನ್ನ ಶೂಲಕ್ಕೇರಿಸಿದರು. ◆

# ವೈರುದ್ಧ ವ್ಯಕ್ತಿತ್ವ

ಪುಟ್ಟಣ್ಣನವರು ದ್ವಂದ್ವ ವ್ಯಕ್ತಿತ್ವದ ಮನುಷ್ಯ ಎಂಬುದಾಗಿ ಅವರನ್ನು ಹೆಚ್ಚು ತಿಳಿದವರಿಂದ ಅನ್ನಿಸಿಕೊಳ್ಳುತ್ತಿದ್ದರು. ಅಂದರೆ "ಅವರು ಹೇಳುವುದೇ ಒಂದು. ಮಾಡುವುದೇ ಮತ್ತೊಂದು" ಎಂಬ ಟೀಕೆಗೆ ಗುರಿಯಾಗುತ್ತಿದ್ದರು. ಅವರ ಜೀವನದ ಅನೇಕ ನಿದರ್ಶನಗಳನ್ನು ನೋಡಿದರೆ ಅದು ವ್ಯಕ್ತವಾಗುತ್ತದೆ.

ಅವರು ಸಾಮಾನ್ಯವಾಗಿ ತಮ್ಮ ಚಿತ್ರಗಳಿಗೆ ಹೊಸ ಕಲಾವಿದರನ್ನು ಆಯ್ಕೆ ಮಾಡುವ ಪ್ರವೃತ್ತಿಯನ್ನು ಹೊಂದಿದ್ದರು. ಯಾರಾದರೂ ಅವರನ್ನು ಏಕೆ ನೀವು ನಿಮ್ಮ ಚಿತ್ರಗಳಿಗೆ ಹೊಸ ಕಲಾವಿದರನ್ನು ತೆಗೆದುಕೊಳ್ಳುತ್ತೀರಿ? ಎಂದು ಪ್ರಶ್ನಿಸಿದರೆ "ಹೊಸ ಕಲಾವಿದರು ಸ್ಲೇಟ್ ಇದ್ದಂತೆ. ಹೇಗೆ ಬೇಕದರೂ ತಿದ್ದಿ ಅದನ್ನು ಬರೆಯಬಹುದು" ಎಂದು ಹೇಳುತ್ತಿದ್ದರು. ಆದರೆ ನಿಮ್ಮ ಚಿತ್ರದ ನಾಯಕಿಯರನ್ನು ಮಾತ್ರ ಏಕೆ ರಿಪಿಟ್ ಮಾಡುತ್ತೀರಿ ಎಂದು ಪ್ರಶ್ನಿಸಿದಾಗ "ರಿಪಿಟ್ ಮಾಡದೆ ಎಲ್ಲರನ್ನೂ ಹೊಸಬರನ್ನೇ ತೆಗದುಕೊಳ್ಳಲಾಗುವುದಿಲ್ಲ, ಪ್ರತಿಯೊಬ್ಬರನ್ನೂ ಹೊಸದಾಗಿ ತೆಗೆದುಕೊಂಡು ಅವರನ್ನು ಮೌಲ್ಡ್ ಮಾಡುವುದು ಕಷ್ಟವಾಗುತ್ತದೆ. ಆದ್ದರಿಂದ ಈಗಾಗಲೇ ಮೌಲ್ಡ್ ಆಗಿರುವವರಿಗೆ ಹೊಸ ರೂಪ ಕೊಡುತ್ತೇನೆ" ಎನ್ನುತ್ತಿದ್ದರು.

ಸ್ತ್ರೀಯರ ಗೌರವದ ಪ್ರಶ್ನೆ ಬಂದಾಗ "ಭಾರತೀಯ ಸಂಸ್ಕೃತಿ ಉಳಿದಿರುವುದು ಭಾರತೀಯ ನಾರಿಯರಿಂದ. ಆದುದರಿಂದ ನನಗೆ ಅವರ ಬಗ್ಗೆ ಪೂಜ್ಯ ಭಾವನೆ ಇದೆ" ಎಂದು ಪ್ರತಿಪಾದಿಸುತ್ತಿದ್ದರು. ಕಲ್ಪನಾರವರ ಐದನೇ ಪುಣ್ಯ ತಿಥಿಯ ದಿನ ಮಾತನಾಡುತ್ತಾ "ಬರಿಯ ಕಲ್ಲಾಗಿ ಬರುವ ತಾರೆಯರನ್ನು ಕಡೆದು ಅಂದವಾದ ಶಿಲ್ಪವಾಗಿ ಮಾಡುವ ರೂವಾರಿಗಳು ನಾವು. ಶಿಲ್ಪಿ ತಾನು ಕಡೆದ ಶಿಲ್ಪವನ್ನು ಮೋಹಿಸುವುದರಲ್ಲಿ ತಪ್ಪೇನು" ಎಂದು ಹೇಳಿ ಅವರ ನಿಜ ಜೀವನದಲ್ಲೇ ತೋರಿಸಿದರು.

ಅವರೇ ತಮ್ಮ ಆತ್ಮೀಯರೊಬ್ಬರಲ್ಲಿ ಹೇಳಿಕೊಂಡಂತೆ "ನಾನು ಹೆಣ್ಣನ್ನು ದೇವಿ ಎನ್ನುತ್ತೇನೆ. ವಿಭೂತಿ ಧರಿಸುತ್ತೇನೆ. ಲಲಿತ ಸಹಸ್ರನಾಮ ಓದಿ ಕುಂಕುಮ ಹಚ್ಚಿಕೊಳ್ಳುತ್ತೇನೆ. ಇವೆಲ್ಲಾ ಹೊರ ರೂಪವಾಯಿತು. ಆದರೆ ಅಂತರಂಗದಲ್ಲಿ ನಾನು ಸಂಪೂರ್ಣವಾಗಿ ಹಾಗಿಲ್ಲವೆಂಬುದು ನನಗೆ ಗೊತ್ತು".

ತಮ್ಮ ಚಿತ್ರಗಳಿಗೆ ಸುಮಾರು ಹದಿನೆಂಟು ಕಥೆ, ಕಾದಂಬರಿಗಳನ್ನು ಉಪಯೋಗಿಸಿಕೊಂಡು ಚಿತ್ರರಂಗವನ್ನು ಕಾದಂಬರಿಯ ಯುಗವಾಗಿ ಪರಿವರ್ತಿಸಿದ ಪುಟ್ಟಣ್ಣನವರು "ನಾನು ಉಪಯೋಗಿಸುವುದು ಕೇವಲ ನಾಲ್ಕು ಸಾಲು ಮಾತ್ರ" ಎಂದು ಹೇಳುತ್ತಿದ್ದರು.

ಅವರು "ಮಾನಸ ಸರೋವರ" ಚಿತ್ರವನ್ನು ಮಾಡಿದಾಗ ಅವರನ್ನು ಸಮೀಪದಿಂದ ಬಲ್ಲ ಎಲ್ಲರೂ ಇದು ಪುಟ್ಟಣ್ಣನವರ ಸ್ವಂತ ಕಥೆ ಎಂದು ಅವರನ್ನೇ ಪ್ರಶ್ನಿಸಿದಾಗ, ಖಂಡಿತಾ ಅಲ್ಲವೆಂದು ಉರಿದು ಬಿದ್ದರು. ಆದರೆ ದೆಹಲಿಯ ದೂರದರ್ಶನ ಸಂದರ್ಶನ ಸಂದರ್ಭವೊಂದರಲ್ಲಿ "ಅದು ನನ್ನ ಜೀವನದಲ್ಲಿ ನಡೆದ ಕಥೆ" ಎಂದು ಒಪ್ಪಿಕೊಂಡರು.

ಚಿತ್ರರಂಗದಲ್ಲಿ ಪುಟ್ಟಣ್ಣನವರು ಅತ್ಯಂತ ಹೆಚ್ಚು ಅವಲಂಭಿಸಿದ ವ್ಯಕ್ತಿಗಳೆಂದರೆ ಅವರ ಪ್ರೇಕ್ಷಕರು. "ಪ್ರೇಕ್ಷಕರು ನನ್ನ ಚಿತ್ರಗಳ ಸೋಲು ಗೆಲುವನ್ನು ನಿರ್ಣಯಿಸುವ ನ್ಯಾಯಾಧೀಶರು" ಎನ್ನುತ್ತಿದ್ದರು. ಅವರ "ಧರಣಿಮಂಡಲ" ಮತ್ತು "ಕಾಲೇಜು ರಂಗ" ಚಿತ್ರಗಳು ಸೋತಾಗ "ಪ್ರೇಕ್ಷಕರು ನನ್ನ ಈ ಚಿತ್ರಗಳನ್ನು ಅರ್ಥ ಮಾಡಿಕೊಳ್ಳುವ ಹೃದಯ ಶ್ರೀಮಂತಿಕೆಯನ್ನು ಹೊಂದಿಲ್ಲ. ಈ ಚಿತ್ರಗಳಲ್ಲಿ ನೋಡುವವರ ಮನಸ್ಸಿನ ವಿಚಾರವಂತಿಕೆಯನ್ನು ಕೆದಕಿದ್ದೇನೆ" ಎಂದರು.

ಪುಟ್ಟಣ್ಣನವರು ಚಲನಚಿತ್ರರಂಗದ ತಾಂತ್ರಿಕ ವರ್ಗದಲ್ಲಿ ಹೆಚ್ಚು ಬೆಲೆ ಕೊಡುತ್ತಿದ್ದುದು. ಸಾಹಿತಿಗಳಿಗೆ ಮಾತ್ರ ಆ ಸಾಹಿತಿಗಳು ಇವರು ಹೇಳಿದಂತೆ ಬರೆಯದಿದ್ದಾಗ "ಸಾಹಿತ್ಯರಂಗವೇ ಬೇರೆ, ಚಿತ್ರರಂಗವೇ ಬೇರೆ" ಎಂದು ನುಣುಚಿಕೊಳ್ಳುವ ಮಾತನಾಡುತ್ತಿದ್ದರು.

◆

# ಅಪೂರ್ವ ನಿರ್ದೇಶಕ

ಪುಟ್ಟಣ್ಣನವರು ಕನ್ನಡ ಚಲನಚಿತ್ರರಂಗಕ್ಕೆ ಬರುವ ವೇಳೆಗೆ ಕೇವಲ ಅತ್ಯಲ್ಪ ಚಿತ್ರಗಳು ಮಾತ್ರ ಕಾದಂಬರಿಯಾಧಾರಿತವಾಗಿದ್ದರೂ ಅವರು ತ್ರಿವೇಣಿಯವರ "ಬೆಳ್ಳಿಮೋಡ" ಕಾದಂಬರಿಯನ್ನು ಚಿತ್ರೀಕರಿಸಿದ ಮೇಲೆ ಕನ್ನಡ ಚಲನಚಿತ್ರ ರಂಗದಲ್ಲಿ ಕಾದಂಬರಿಯಾಧಾರಿತ ಚಿತ್ರಗಳ ಯುಗವೇ ಪ್ರಾರಂಭವಾಯಿತು. ಪುಟ್ಟಣ್ಣನವರೇ ಮಾಡಿದ ೨೩ ಕನ್ನಡ ಚಿತ್ರಗಳಲ್ಲಿ (ಮಸಣದ ಹೂವುಸೇರಿ) ೧೮ ಚಿತ್ರಗಳನ್ನು ಕಾದಂಬರಿ ಮತ್ತು ಸಣ್ಣ ಕಥೆಗಳ ಆಧಾರಿತವಾಗಿಸಿದ್ದಾರೆ.

ಕನ್ನಡ ಚಿತ್ರ ಎಂದರೆ ಮೂಗು ಮುರಿಯುತ್ತಿದ್ದ ಕಾಲದಲ್ಲಿ ಥಟ್ಟನೆ ಕನ್ನಡ ಚಲನಚಿತ್ರೋದ್ಯಮಕ್ಕೊಂದು ಹೊಸ ಬಾಗಿಲು ತೆರೆದು ಹೊಸ ಗಾಳಿಯ ಉಸಿರಾಡಿಸಿದರು. ಅವರ ಮುಂದಿನ ೧೮ ವರ್ಷಗಳಲ್ಲಿ ತನ್ನ ಒಟ್ಟು ೨೩ ಕನ್ನಡ ಚಿತ್ರಗಳಲ್ಲಿ ಕನ್ನಡದ ನಾವು, ನಮ್ಮ ಜನ, ನಮ್ಮ ನಾಡು ನಮ್ಮ ಸಂಸ್ಕೃತಿ ಇದನ್ನೆಲ್ಲಾ ತುಂಬಿದರು. ಹಳೇ ಪರಂಪರೆಯಲ್ಲಿ ಬೆಳೆದು ಬಂದ ಪುಟ್ಟಣ್ಣನವರು ಕಥೆಯನ್ನು ಕಲಾತ್ಮಕವಾಗಿ ಹೇಳಲು ಪ್ರಾರಂಭಿಸಿ ಅನೇಕ ವರ್ಷಗಳ ಚಲನಚಿತ್ರಗಳ ಶೈಲಿಯಿಂದ ಒಂದು ಸಂಪ್ರದಾಯವನ್ನು ಬೆಳೆಸಿಕೊಂಡಿದ್ದ ಪ್ರೇಕ್ಷಕರ ನಿಲುವನ್ನು ತಿದ್ದಿ ಅವರ ಗಮನವನ್ನು ಹೊಸ ವಿಚಾರಗಳತ್ತ ಸೆಳೆಯುವುದರ ಜತೆಗೆ ಸದಭಿರುಚಿಯನ್ನು ಬೆಳೆಸುವಲ್ಲಿ ಸಫಲರಾದರು.

ಪುಟ್ಟಣ್ಣನವರು ಕನ್ನಡ ಚಲನಚಿತ್ರ ರಂಗದಲ್ಲೇ ಅಪೂರ್ವ ಪ್ರತಿಭಾಶಾಲಿ ನಿರ್ದೇಶಕ. ಅವರು ಕನ್ನಡ ಚಿತ್ರಗಳಿಗೆ ಹೊಸ ತಿರುವು ಕೊಟ್ಟ ರೂವಾರಿ. ನಿರ್ದೇಶಕನಿಗೆ ತನ್ನದೇ ಆದ ಸ್ಥಾನ ಕಲ್ಪಿಸಿಕೊಟ್ಟ ಮೊದಲಿಗ. ಅವರು ನಿರ್ದೇಶಿಸಿದ್ದ ಚಿತ್ರಗಳು ವೈವಿಧ್ಯತೆಯಿಂದ ಕೂಡಿದ್ದು, ತಾಂತ್ರಿಕತೆಯ ದೃಷ್ಟಿಯಿಂದಲೂ ಕಣ್ಣಿಗೆ ಹಬ್ಬದಂತಿದ್ದವು. ಕೇಳಲಿಂಪಾದ ಗೀತೆಗಳು, ಸುಮಧುರ ಸಂಗೀತ, ಅರ್ಥಪೂರ್ಣ

ಸಂಭಾಷಣೆ ಇವುಗಳು ಅವರ ಚಿತ್ರಗಳ ವೈಶಿಷ್ಟ್ಯಗಳಾಗಿದ್ದವು. ಸಮಾಜದ ಸಮಕಾಲೀನ ಸಮಸ್ಯೆಗಳನ್ನು ಜನರ ಮನಕ್ಕೆ ನೇರವಾಗಿ ಮುಟ್ಟುವಂತೆ ಕಲಾತ್ಮಕವಾಗಿ ಚಿತ್ರಿಸುತ್ತಿದ್ದರು. ಚಲನಚಿತ್ರ ಮಾಡುವ ತಂತ್ರವನ್ನು ರಕ್ತಗತ ಮಾಡಿಕೊಂಡಿದ್ದ ಅವರಿಗೆ ಎಂತಹ ದೃಷ್ಯವನ್ನಾದರೂ ಸಮರ್ಥವಾಗಿ ಮಾಡಬಲ್ಲೆ ಎಂಬ ಗತ್ತುಗಾರಿಕೆ ಇತ್ತು. "ನನ್ನ ಕನಸಿನಲ್ಲೂ ಕ್ಯಾಮರಾ ಕಾಣಿಸುತ್ತದೆ" ಎನ್ನುತ್ತಿದ್ದ ಪುಟ್ಟಣ್ಣನವರಿಗೆ ದೃಶ್ಯ ಸಂಯೋಜನೆ ಮತ್ತು ಕ್ಯಾಮರಾ ಬಳಕೆಯಲ್ಲಿ ತುಂಬಾ ವಿವೇಚನೆ ಇತ್ತು ಮತ್ತು ನಾಟಕ, ಸಂಗೀತ, ಉದ್ಯಮಗಳ ಬಗ್ಗೆ ಖಚಿತವಾದ ಹಾಗೂ ಆಳವಾದ ಜ್ಞಾನವಿತ್ತು.


ಕನ್ನಡ ಚಿತ್ರರಂಗವನ್ನು ಚೆನ್ನಾಗಿ ತಿಳಿದಿದ್ದ ಅವರಿಗೆ ಮಧ್ಯಮ ವರ್ಗದವರ ನಾಡಿಯ ಮಿಡಿತ ಗೊತ್ತಿತ್ತು. ಪುಟ್ಟಣ್ಣನವರು ಅವರುಗಳಿಗಾಗಿ ಸುಂದರ ಚಿತ್ರಗಳನ್ನು ಮಾಡಬಲ್ಲವರಾಗಿದ್ದರು. ಅವರು ತಮ್ಮ ಚಿತ್ರಗಳಿಗೆ ಹೆಚ್ಚು ಭಾವೋದ್ರೇಕ ಮತ್ತು ಆದಷ್ಟು ಭಾವನೆಗಳನ್ನು ತುಂಬುತ್ತಿದ್ದರು. ಪ್ರೇಕ್ಷಕರ ಹೃದಯ ಸ್ಪಂದಿಸುವಂತೆ ಚಿತ್ರ ತೆಗೆಯುತ್ತಿದ್ದರು. ಅವರ ಬಹುಪಾಲು ಚಿತ್ರಗಳಲ್ಲಿ ಭಾವನಾತ್ಮಕ ಸಂಕಟಗಳೇ ಹಂದರ. ಯಾವ ಸಣ್ಣ ಅಂಶವನ್ನೂ ಕೈಬಿಡದೆ, ಅತ್ಯುತ್ತಮಕ್ಕಾಗಿಯೇ ಯಾವಾಗಲೂ ಪ್ರಯತ್ನ ಪಡುತ್ತಿದ್ದ ವ್ಯಕ್ತಿ ಪುಟ್ಟಣ್ಣ. ಮನಸ್ಸಿನಲ್ಲಿ ಅನಿಸಿದ್ದು ಬರುವವರೆಗೂ ಅವರು ಬಿಡುತ್ತಿರಲಿಲ್ಲ.

ಪುಟ್ಟಣ್ಣನವರ ಚಿತ್ರಗಳಲ್ಲಿ ಪ್ರತಿ ಚೌಕಟ್ಟಿನಲ್ಲಿಯೂ ಅವರೇ ನಿಂತು ಮಾತನಾಡಿದಂತಿತ್ತು. ಪ್ರಥಮ ಚಿತ್ರ "ಬೆಳ್ಳಿಮೋಡ"ದಲ್ಲೇ ಕರ್ನಾಟಕದ ಮಲೆನಾಡಿನ ಪ್ರಕೃತಿ ಸಿರಿಯನ್ನು ಹಿಂದೆಲ್ಲೂ ಇಲ್ಲದಂತೆ ತುಂಬಿದರು. "ನಾಗರಹಾವು" ಚಿತ್ರದಲ್ಲಿ ಚಿತ್ರದುರ್ಗದ ಐತಿಹಾಸಿಕ ಕೋಟೆಗಳಿಗೆ ಜೀವ ತುಂಬಿದರು. "ಫಲಿತಾಂಶ" ಚಿತ್ರದಲ್ಲಿ ಬಿಜಾಪುರ ಗೋಳಗುಮ್ಮಟದ ವೈಭವವನ್ನು ಮೆರೆಸಿದರು. ಸೊಂಡೂರನ್ನು ಅದುವರೆವಿಗೂ ಸಾವಿರಾರು ಜನ ನೋಡಿದ್ದರೂ ಪುಟ್ಟಣ್ಣನವರ "ಮಾನಸ ಸರೋವರ" ಚಿತ್ರದಲ್ಲಿ ಸೊಂಡೂರನ್ನು ಕಂಡ ಸೊಂಡೂರ ಜನರೇ "ನಮ್ಮೂರು ಇಷ್ಟು ಚೆನ್ನಾಗಿದೆಯೆಂದು ನಮಗೇ ಗೊತ್ತಿರಲಿಲ್ಲ" ಎಂದು ಆಶ್ಚರ್ಯಪಡುವಂತೆ ಮಾಡಿದರು. ಅದಲ್ಲದೆ "ರಂಗನಾಯಕಿ" ಚಿತ್ರದ ಮುಖಾಂತರ ಕನ್ನಡ ನಾಡಿನ ನಾಟಕ ರಂಗದಲ್ಲಿ ಮೆರೆದು ಮರೆಯಾದ ರಂಗಭೂಮಿಯ ವೈಭವವನ್ನೂ "ಕಾಲೇಜು ರಂಗ" ಚಿತ್ರದಲ್ಲಿ ಸಮಕಾಲೀನ ಸಮಸ್ಯೆಗಳಲ್ಲೊಂದಾದ ವಿದ್ಯಾರ್ಥಿ ವಸತಿ ಗೃಹಗಳಲ್ಲಿ ನಡೆಯುವ ಅನ್ಯಾಯಗಳನ್ನೂ "ಪಡುವಾರಹಳ್ಳಿ ಪಾಂಡವರು"

ಚಿತ್ರದಲ್ಲಿ ಯುವಜನರಲ್ಲಿ ಇರುವ ಕ್ರಾಂತಿ ಮನೋಭಾವವನ್ನು ಒಳ್ಳೆಯ ಕೆಲಸಗಳಿಗಾಗಿ ಉಪಯೋಗಿಸುವ ಮನೋಭಾವವನ್ನೂ "ಧರಣಿ ಮಂಡಲ"ದಲ್ಲಿ ಸಂಘರ್ಷವನ್ನೂ ಚಿತ್ರಿಸಿದ್ದರು.

ಅವರು ಆರಿಸಿಕೊಂಡ ವಸ್ತು ವೈವಿಧ್ಯತೆ, ಉತ್ತಮ ಪರಿಸರಗಳು, ತಾಂತ್ರಿಕತೆ ಇವೆಲ್ಲಕ್ಕಿಂತ ಮಿಗಿಲಾಗಿ ತಾವು ಆಯ್ಕೆ ಮಾಡಿಕೊಂಡ ನಟ ವರ್ಗದ ಪೂರ್ಣ ಪ್ರತಿಭೆಯ ಉಪಯೋಗ ಅವರ ನಿರ್ದೇಶನಕ್ಕೆ ಪೂರಕವಾಗಿದ್ದವು. ಅದಕ್ಕಾಗಿಯೇ ದಕ್ಷಿಣ ಭಾರತದ ನಿರ್ದೇಶಕರ ಸಂಘ ಅವರನ್ನು "ನಿರ್ದೇಶಕರ ನಿರ್ದೇಶಕ" ಎಂದು ಆಯ್ಕೆ ಮಾಡಿತು.

◆



"ಸಾವಿರ ಮೆಟ್ಟಿಲು" ಚಲನಚಿತ್ರದ ಚಿತ್ರೀಕರಣದಲ್ಲಿ ನಿರ್ಮಾಪಕ ಡಿ.ಬಿ. ಬಸವೇಗೌಡ ಮತ್ತು ಕಲಾವಿದೆ ಅನುಪ್ರಭಾಕರ್.

# ಮಹಿಳಾ ಲೋಕದ ಅತಿಮಾನವ

---

ಪುಟ್ಟಣ್ಣನವರು ತಮ್ಮ ಚಿತ್ರಗಳ ಮುಖಾಂತರ ನಾರೀಲೋಕದ ನಾಯಕರಾಗಿದ್ದರು. ಮಹಿಳೆಯರ ಮೇಲೆ ಇಷ್ಟೊಂದು ಪ್ರಭಾವ ಬೀರಿದ ನಿರ್ದೇಶಕ ಮತ್ತೊಬ್ಬನಿಲ್ಲ. ತಾಯಿ, ಅಕ್ಕ, ತಂಗಿಯರ ಅಪಾರ ಕಷ್ಟಗಳನ್ನು ಕಂಡು ಹೆಂಗಸರ ಬಗ್ಗೆ ಹೆಚ್ಚು ಸಹಾನುಭೂತಿ ಬೆಳೆಸಿಕೊಂಡಿದ್ದ ಇವರು ಹೆಣ್ಣನ್ನು ಪ್ರೇಮಿಯಾಗಿ, ಕಾಮಿಯಾಗಿ, ಪತ್ನಿಯಾಗಿ, ತಾಯಿಯಾಗಿ ತೆರೆಯ ಮೇಲೆ ಅನನ್ಯವಾಗಿ ಬಿಂಬಿಸಿದರು.

ಹೆಣ್ಣು ಪ್ರೀತಿಯಿಂದ ವಂಚಿತಳಾದರೆಂದರೆ ಪ್ರೇಕ್ಷಕರ ಮನಸ್ಸು ಕರಗುತ್ತದೆಂಬ ಸೂಕ್ಷ್ಮವನ್ನು ಬಹಳ ಚೆನ್ನಾಗಿ ಅರ್ಥಮಾಡಿಕೊಂಡಿದ್ದ ಪುಟ್ಟಣ್ಣನವರು ಹೆಣ್ಣಿನ ವ್ಯಕ್ತಿತ್ವಕ್ಕೆ ಧಕ್ಕೆ ಬರದಂತೆ ಹೆಣ್ಣು ಪಾತ್ರಗಳನ್ನು ತಮ್ಮ ಚಿತ್ರದಲ್ಲಿ ಕಡೆಯುತ್ತಿದ್ದರು. ಮಹಿಳೆಯರ ಸಮಸ್ಯೆ, ಅಸಹಾಯಕತೆ ಮತ್ತು ಅವರ ಸ್ಥಿತಿಗತಿಗಳನ್ನು ಕುರಿತ ಅವರ ಬಹುತೇಕ ಚಿತ್ರಗಳು ಸ್ತ್ರೀ ಸಮುದಾಯವನ್ನು ಅಪಾರವಾಗಿ ಆಕರ್ಷಿಸಿದ್ದವು. ಪುಟ್ಟಣ್ಣನವರು ಮಹಿಳೆಯರ ಮನಸ್ಸನ್ನು ಆಳವಾಗಿ ಅರಿತಿದ್ದರಲ್ಲದೆ ತಮ್ಮ ಚಿತ್ರಗಳಲ್ಲಿ ಅವರ ವಿವಿಧ ಮಾನಸಿಕ ಆಂದೋಲನಗಳನ್ನು ಸೂಕ್ಷ್ಮವಾಗಿ ಚಿತ್ರಿಸುವುದರ ಮೂಲಕ ಅವರ ಹೃದಯವನ್ನು ಸೂರೆಗೊಂಡಿದ್ದರು.

"ಬೆಳ್ಳಿಮೋಡ" ಚಿತ್ರದಲ್ಲಿ ನಾಯಕಿ ತಾನು ಪ್ರೀತಿಸಿದವನು, ನಿಜವಾಗಿ ತನ್ನನ್ನು ಪ್ರೀತಿಸದೆ ಕೇವಲ ತನ್ನ ಐಶ್ವರ್ಯಕ್ಕಾಗಿ ಪ್ರೀತಿಸಿದುದನ್ನು ತಿಳಿದು ಜಿಗುಪ್ಸೆ ಹೊಂದಿ ವಿವಾಹ ಮಾಡಿಕೊಳ್ಳದೆ ಅವಿವಾಹಿತಳಾಗಿಯೇ ಉಳಿಯಲು ನಿರ್ಧರಿಸಿದ ನೈತಿಕ ಮೌಲ್ಯದ ಹೆಣ್ಣಾಗಿಸಿದ್ದಾರೆ.

"ಮಲ್ಲಪ್ಪನ ಪವಾಡ" ಚಿತ್ರದಲ್ಲಿ ನಾಯಕಿ ಬೆಪ್ಪು ಗಂಡನನ್ನು ಕಟ್ಟಿಕೊಂಡರೂ ಧೃತಿಗೆಡದೆ ಅವನನ್ನೇ ತಿದ್ದಿ ಬುದ್ಧಿವಂತನನ್ನಾಗಿ ಪರಿವರ್ತಿಸಿ ಹೆಣ್ಣು ಕೇವಲ ಆಟಲೆ ಮಾತ್ರವಲ್ಲ, ದಿಟ್ಟಳು ಸಹ ಎಂಬುದಕ್ಕೆ ನಿದರ್ಶನವಾದ ದಿಟ್ಟ ಹೆಣ್ಣನ್ನಾಗಿಸಿದ್ದಾರೆ.

"ಗೆಜ್ಜೆಪೂಜೆ" ಚಿತ್ರದಲ್ಲಿ ನಾಯಕಿ ಸಮಾಜದ ಅನಿಷ್ಟ ಪದ್ಧತಿಯಾದ ವೇಶ್ಯಾ ವೃತ್ತಿಯಿಂದ ದೂರ ಹೋಗಿ ಸಂಸಾರಿಯಾಗುವ ಕನಸು ಕಂಡು, ಸಂದರ್ಭದ ಒತ್ತಡಕ್ಕೆ ಬಲಿಯಾಗಿ ತಾನೂ ವೇಶ್ಯೆಯಾಗಿ ದೇಹಾರ್ಪಣೆ ಮಾಡುವುದಕ್ಕಿಂತ ಪ್ರಾಣಾರ್ಪಣೆ ಮಾಡುವುದೇ ಲೇಸೆಂದು, ಪ್ರಾಣಾರ್ಪಣೆ ಮಾಡಿದ ತ್ಯಾಗಮಯಿ ಹೆಣ್ಣಾಗಿಸಿದ್ದಾರೆ.

"ಶರಪಂಜರ" ಚಿತ್ರದಲ್ಲಿ ನಾಯಕಿ ಎಂದೋ ತನಗೆ ಹೆಚ್ಚು ಅರಿವಿಲ್ಲದಾಗ ಕಳೆದುಕೊಂಡ ಶೀಲದ ಬಗ್ಗೆ ಹೆರಿಗೆ ವೇಳೆಯಲ್ಲಿ ಚಿಂತಿಸಿ, ಹಿಸ್ಟೀರಿಯಾ ಕ್ಕೊಳಗಾಗಿ ಹುಚ್ಚಾಸ್ಪತ್ರೆ ಸೇರಿ, ಕಾಯಿಲೆ ವಾಸಿಯಾದ ಮೇಲೂ ತನ್ನ ಗಂಡ, ಮಕ್ಕಳು ಮತ್ತು ಮನೆಯವರೆಲ್ಲರೂ ಅವಳನ್ನು ಹುಚ್ಚಿ ಎಂದೇ ಭಾವಿಸಿ ನಡೆಸಿಕೊಂಡಿದ್ದರಿಂದ ನಿಜವಾಗಿಯೂ ಹುಚ್ಚಿಯಾಗಿಯೇ ಆಸ್ಪತ್ರೆಯನ್ನು ಸೇರುವ ದುರಾದೃಷ್ಟ ಹೆಣ್ಣಾಗಿಸಿದ್ದಾರೆ.

"ನಾಗರ ಹಾವು" ಚಿತ್ರದಲ್ಲಿ ಒಬ್ಬಾಕೆ ತನ್ನನ್ನು ಪ್ರೀತಿಸಿದವನನ್ನು ಪಡೆದುಕೊಳ್ಳುವಲ್ಲಿ ಯಶಸ್ವಿಯಾದರೂ, ತಾವು ಸತಿ ಪತಿಗಳಾಗಿ ಬದುಕಲು ಸಾಧ್ಯವಾಗದ ಒಂದು ಅದೃಷ್ಟಹೀನ ಹೆಣ್ಣಾದರೇ, ಮತ್ತೊಬ್ಬಾಕೆ ಪ್ರೀತಿಸಿದವನನ್ನು ಪಡೆಯಲು ಸಾಧ್ಯವಾಗದೆ ಬೇರೊಬ್ಬ ಗಂಡಿನೊಡನೆ ಮದುವೆಯಾಗಿ ತನ್ನ ಗಂಡನಿಂದಲೇ ಸೂಳೆಯಾಗಬೇಕಾದ ದುರಂತ ಹೆಣ್ಣಾಗಿಸಿದ್ದಾರೆ.

"ಎಡಕಲ್ಲು ಗುಡ್ಡದ ಮೇಲೆ" ಚಿತ್ರದಲ್ಲಿ ಪುರುಷತ್ವವನ್ನು ಕಳೆದುಕೊಂಡು ತನ್ನ ಗಂಡನಿಂದ ಪಡೆಯಲಾದ ಅಂಗ ಸುಖವನ್ನು ಬೇರೊಬ್ಬ ಯುವಕನಲ್ಲಿ ಪಡೆಯುವ ಕಾಮಿಯಾದ ದುರ್ಬಲತೆಯನ್ನು ಅಕ್ಕನಲ್ಲೂ, ಅದೇ ಅನೀತಿಯುತ ಯುವಕ ತನ್ನ ಸೌಂದರ್ಯಕ್ಕೆ ಮನಸೋತು ಪ್ರಣಯಭಿಕ್ಷೆ ಬೇಡಿದಾಗ ಅವನನ್ನು ಕಾಲಕಸದಂತೆ ಧಿಕ್ಕರಿಸಿದ ದಿಟ್ಟತನವನ್ನು ತಂಗಿಯಲ್ಲೂ ತೋರಿಸಿದ್ದಾರೆ.

"ಉಪಾಸನೆ" ಚಿತ್ರದಲ್ಲಿ ನಾಯಕಿ ಸಂಗೀತ ಕಲೆಗಾಗಿ ತನ್ನ ಸಂಸಾರವನ್ನೇ ತ್ಯಾಗ ಮಾಡಿ ಸಾಗರಸಂಗಮ ಸ್ಥಳವಾದ ಕನ್ಯಾಕುಮಾರಿಯಲ್ಲಿ ಪ್ರಶಾಂತತೆಯನ್ನು ಹೊಂದುವ ಸಾಧಕಿ ಹೆಣ್ಣಾಗಿಸಿದ್ದಾರೆ.

"ಶುಭಮಂಗಳ" ಚಿತ್ರದಲ್ಲಿ ನಾಯಕಿ ಯಾರ ಹಂಗೂ ಇಲ್ಲದೆ ಜೀವಿಸಲೆತ್ನಿಸುವ ಈ ಶತಮಾನದ ಸ್ವಾಭಿಮಾನದ ಮಾದರಿ ಹೆಣ್ಣಾಗಿಸಿದ್ದಾರೆ.

"ಬಿಳಿಹೆಂಡ್ತೀ" ಚಿತ್ರದಲ್ಲಿ ತಾನು ಪ್ರೀತಿಸಿ ಮದುವೆಯಾಗಬೇಕೆಂದಿದ್ದ ಗಂಡು ವಿದೇಶಕ್ಕೆ ತೆರಳಿ, ಅಲ್ಲಿಯ ಬಿಳಿಯ ಹುಡುಗಿಯೊಂದನ್ನು ಮದುವೆಯಾಗಿ

ಕರೆದುಕೊಂಡು ಬಂದಾಗ ಅವಳನ್ನೂ ತನ್ನವರಂತೆಯೇ ಆದರದಿಂದ ಕಾಣುವ ತ್ಯಾಗಮಯಿ ಹೆಣ್ಣನ್ನಾಗಿಸಿದ್ದಾಳೆ.

"ಋಣಮುಕ್ತಳು" ಚಿತ್ರದಲ್ಲಿ ನೀತಿಗೆಟ್ಟ ಗಂಡನ ಕೈಹಿಡಿದು, ವಿಧವೆಯಾಗಿ ಮಕ್ಕಳ ಮತ್ತು ಸೊಸೆಯರ ಸುಖದಿಂದ ವಂಚಿತಳಾಗಿ, ಛಿದ್ರವಾದ ಸಂಸಾರವನ್ನು ನೆಲೆಯೂರುವಂತೆ ಮಾಡಿ, ಋಣಮುಕ್ತಳಾಗಿ ಮಾತೃತ್ವದ ಹಿರಿಮೆಯನ್ನು ಎತ್ತಿ ಹಿಡಿಯುವ ಹೆಣ್ಣನ್ನಾಗಿಸಿದ್ದಾರೆ.

ಪುಟ್ಟಣ್ಣನವರು ಹೆಚ್ಚಾಗಿ ಸ್ತ್ರೀ ಪ್ರಧಾನವಾದ ಚಿತ್ರಗಳನ್ನೇ ತಯಾರಿಸುತ್ತಾರೆಂದೂ, ಸ್ತ್ರೀ ಪಾತ್ರಗಳು ಪ್ರಮುಖವಾಗಿರುವಂತಹ ಚಿತ್ರಗಳಲ್ಲಿ ಪುರುಷ ಪಾತ್ರಗಳು ಅಲಕ್ಷಿತವಾಗಿ, ಅವು ಸರಿಯಾಗಿ ಪೋಷಿತವಾಗುವುದಿಲ್ಲವೆಂದೂ ಆರೋಪವಿತ್ತು. ಅದಕ್ಕೆ ಅಪವಾದವೆಂಬಂತೆ ಅವರು ನಾಯಕ ಪ್ರಧಾನವಾದ ಚಿತ್ರಗಳನ್ನೂ ನಿರ್ಮಿಸಿ ತೋರಿಸಿದ್ದಾರೆ.

"ನಾಗರಹಾವು" ಚಿತ್ರದಲ್ಲಿ ನಾಯಕ ತನ್ನ ಆದರ್ಶಕ್ಕೆ ಅಡ್ಡ ಬಂದ ಸಮಾಜಕ್ಕೆ ಹೆದರದೆ ತನ್ನ ಆತ್ಮಾರ್ಪಣೆ ಮಾಡಿಕೊಂಡ ಧೀರ ಗಂಡನ್ನಾಗಿಸಿದ್ದಾರೆ.

"ಮಾನಸ ಸರೋವರ" ಚಿತ್ರದಲ್ಲಿ ನಾಯಕ ಮಾನಸಿಕ ಆಘಾತಕ್ಕೊಳಗಾದ ಒಬ್ಬ ಹುಡುಗಿಗೆ ಚಿಕಿತ್ಸೆ ಮಾಡಿ ಮೊದಲ ಸ್ಥಿತಿಗೆ ತಂದು, ಅವಳನ್ನೇ ಪ್ರೀತಿಸಿ, ಆಮೇಲೆ ಅವಳ ಪ್ರೀತಿಯಿಂದ ವಂಚಿತನಾದಾಗ ತಾನೇ ಮಾನಸಿಕ ಆಘಾತಕ್ಕೊಳಗಾದ ಮೆದು ಹೃದಯದ ಗಂಡನ್ನಾಗಿಸಿದ್ದಾರೆ.

"ಶರಪಂಜರ" ಮತ್ತು "ಮಾನಸ ಸರೋವರ" ಚಿತ್ರಗಳು ಕನ್ನಡ ಚಿತ್ರರಂಗದಲ್ಲಿ ಪುಟ್ಟಣ್ಣನವರ ಅಪರೂಪದ ಮನೋ ವಿಶ್ಲೇಷಣಾತ್ಮಕ ಚಿತ್ರಗಳು.

◆

# ಸಂಕೇತ, ಪ್ರತಿಮೆ, ಮಾರ್ಮಿಕ ಸಂಭಾಷಣೆಗಳ ಹರಿಕಾರ

ಪುಟ್ಟಣ್ಣನವರು ತಮ್ಮ ಚಿತ್ರಗಳಲ್ಲಿ ಅಪರೂಪವಾದ ಸಂಕೇತ, ಪ್ರತಿಮೆ ಮತ್ತು ಮಾರ್ಮಿಕ ಸಂಭಾಷಣೆಗಳ ಮುಖಾಂತರ ಜನರ ಮನಸ್ಸಿನ ಮೇಲೆ ಚಿತ್ರ ಅಚ್ಚೊತ್ತುವಂತೆ ಮಾಡುತ್ತಿದ್ದರು.

"ಬೆಳ್ಳಿಮೋಡ" ಚಿತ್ರದಲ್ಲಿ ಕಥಾನಾಯಕಿ ಭಗ್ನ ಪ್ರೇಮಿಯಾದುದನ್ನು ಒಡೆದ ಕನ್ನಡಿಯ ಮೂಲಕವೂ, ಆಕೆಯ ಭ್ರಮನಿರಸನವನ್ನು ಮೋಡದ ಬೆಳ್ಳಿಯ ಅಪೂರ್ಣ ಕರಗಿ ಹೋಗುವುದರ ಮೂಲಕವೂ ಚಿತ್ರಿಸಿದ್ದಾರೆ.

"ಗೆಜ್ಜೆಪೂಜೆ" ಚಿತ್ರದಲ್ಲಿ ತಿರುಮಲ ಕೂಡ ಸಾಹುಕಾರ, ಮನೆಯ ಮೆಟ್ಟಿಲುಗಳನ್ನು ಏರಿ ಇಳಿಯುವುದನ್ನು ಶೀಘ್ರವಾಗಿ ತೋರಿಸುವುದರ ಮುಖಾಂತರ ಹಲವು ವರುಷಗಳು ಕಳೆದವೆಂಬುದನ್ನೂ, "ಧರ್ಮೇಚ ಅರ್ಥೇಚ, ಕಾಮೇಚ ನಾತಿಚರಾಮಿ" ಶ್ಲೋಕವನ್ನು ಹೇಳಿಸುವ ಮುಖಾಂತರ ಕಥಾ ನಾಯಕಿಗೆ ದಾಂಪತ್ಯ ಜೀವನ ಧರ್ಮ ಪರಿಚಯಿಸಲ್ಪಟ್ಟಿತ್ತೆಂಬುದನ್ನೂ ತೋರಿಸಿದ್ದಾರೆ.

"ಕರುಳಿನ ಕರೆ" ಚಿತ್ರದಲ್ಲಿ ಒಂದು ದೀಪದಿಂದ ಸಾವಿರ ಜ್ಯೋತಿಗಳನ್ನು ಬೆಳಗಿಸಿ ಪ್ರೇಮದಿಂದ ಸಾವಿರ ಹೃದಯಗಳನ್ನು ಗೆಲ್ಲಬಹುದು ಎಂಬುದನ್ನು ತೋರಿಸಿದ್ದಾರೆ.

"ಶರಪಂಜರ" ಚಿತ್ರದಲ್ಲಿ ತೆರೆಯ ಮೇಲೆ ಕೇವಲ ಒಂದು ಪುರುಷಾ-ಕೃತಿಯನ್ನು ನೆರಳಿನಂತೆ ತೋರಿಸುವುದರ ಮುಖಾಂತರ ಕಥಾ ನಾಯಕಿ ತನ್ನ ಶೀಲ ಹರಣಕ್ಕೆ ಪುರುಷ ಕಾರಣ ಎನ್ನುವುದನ್ನು ಸೂಕ್ಷ್ಮವಾಗಿ ಹೇಳಿದ್ದಾರೆ.

"ನಾಗರಹಾವು" ಚಿತ್ರದಲ್ಲಿ ಹಾವಿನ ಲಾಂಛನದ ಮೂಲಕ ಚಿತ್ರದ ನಾಯಕ ರಾಮಾಚಾರಿಯ ರೋಷ ದ್ವೇಷಗಳನ್ನು ತೋರಿಸಿದ್ದಾರೆ.

"ಎಡಕಲ್ಲು ಗುಡ್ಡದ ಮೇಲೆ" ಚಿತ್ರದಲ್ಲಿ ಉರಿಯೋ ಬೆಂಕಿಗೆ ನೀರು ಹಾಕಿ ನಂದಿಸುವ ಮುಖಾಂತರ ನಾಯಕಿಯ ಗಂಡ ಪುರುಷತ್ವವನ್ನು ಕಳೆದುಕೊಂಡಿರುವುದನ್ನು ತಿಳಿಸಿದ್ದಾರೆ.

"ಶುಭಮಂಗಳ" ಚಿತ್ರದಲ್ಲಿ ಗಡಿಯಾರದ ಲೋಲಕವನ್ನು ತಟ್ಟನೆ ನಿಲ್ಲಿಸುವುದರ ಮುಖಾಂತರ ಹೇಮಾಳ ತಂದೆ ಶ್ರೀನಿವಾಸಯ್ಯನವರು ಹೃದಯಾಘಾತದಿಂದ ಸತ್ತಿರುವುದನ್ನು ತಿಳಿಸುತ್ತಾರೆ.

"ಪಡುವಾರಹಳ್ಳಿಯ ಪಾಂಡವರು" ಚಿತ್ರದಲ್ಲಿ ಮತಿಭ್ರಮಣೆಗೊಳಗಾದ ಹೆಣ್ಣು ಚಿತ್ರದ ಕೊನೆಯಲಿ "ಅವರ ಬರುತ್ತಾನೆ ಇರ‍್ತಾರೆ. ನೀವು ಒಡಿಸ್ತಾನೆ ಇರ‍್ತೀರಿ" ಎಂದು ಮಾರ್ಮಿಕವಾಗಿ ನುಡಿಸುವ ಮುಖಾಂತರ ಜಮೀನ್ದಾರನಿಂದ ಆಕೆ ಶೀಲ ಕಳೆದುಕೊಂಡಿರುವುದನ್ನು ತಿಳಿಸುತ್ತಾರೆ.

"ಮಾನಸ ಸರೋವರ" ಚಿತ್ರದಲ್ಲಿ ಕಥಾನಾಯಕನ ಗೆಳತಿ ಮತ್ತೊಬ್ಬನಲ್ಲಿ ಅನುರಕ್ತಳಾಗುವಾಗಿನ ಆಕೆಯ ಮನಸ್ಸಿನ ಹೊಯ್ದಾಟವನ್ನು ತೂಗುಯ್ಯಾಲೆಯ ಮುಖಾಂತರವೂ, ನಾಯಕ ಹಂತಹಂತವಾಗಿ ಚಿತ್ತಭ್ರಮಣೆಗೊಳಗಾಗುವುದನ್ನು ತಿಳಿಸಲು ಸರೋವರವು ನೆತ್ತರ ಕೊಳವಾಗಿ ಮಾರ್ಪಡುವ ಮುಖಾಂತರವೂ ತೋರಿಸಿದ್ದಾರೆ.

"ಅಮೃತ ಘಳಿಗೆ" ಚಿತ್ರದಲ್ಲಿ ನಾಯಕ ನಾಯಕಿಯರು ಪ್ರೇಮದ ಭಾವೋದ್ವೇಗಕ್ಕೆ ಒಳಗಾಗಿ ಜೊತೆ ಜೊತೆಯಾಗಿ ಮಹಡಿಯ ಪಾವಟಿಕೆಗಳನ್ನು ಏರಿಸುವುದರ ಮುಖಾಂತರ ಅವರ ದೈಹಿಕ ಸಮಾಗಮವನ್ನೂ, ಮುಟ್ಟ ಅಲೋಕ ಜೋಗದ ಜಲಪಾತದ ಧಾರೆಗಳನ್ನು ಲೆಕ್ಕ ಹಾಕುವುದರ ಮುಖಾಂತರ ದ್ವಿತೀಯ ನಾಯಕನ ಸಾವಿನ ಸೂಚನೆಯನ್ನೂ ತೋರಿಸಿದ್ದಾರೆ.

◆

# ಚಿತ್ರ ಬ್ರಹ್ಮನ ಅಂಕೆಯಲ್ಲಿ ಚಿತ್ರಕಥಾ ರಚನೆ

ಪುಟ್ಟಣ್ಣನವರು ತಮ್ಮ ಚಿತ್ರಗಳಿಗಾಗಿ ಹೆಚ್ಚಾಗಿ ಕಾದಂಬರಿಗಳನ್ನೇ ತೆಗೆದುಕೊಂಡಿದ್ದರೂ ಸಹ ಪೂರ್ಣ ಕಾದಂಬರಿಯನ್ನು ಉಪಯೋಗಿಸಿದವರಲ್ಲ. ಈ ಬಗ್ಗೆ ಅನೇಕ ಸಲ ಕಾದಂಬರಿಕರರಿಗೂ ಪುಟ್ಟಣ್ಣನವರಿಗೂ ಭಿನ್ನಾಭಿಪ್ರಾಯ ಬಂದದ್ದು ನಿಜ. ಅವರು ತಮ್ಮ ಯಾವ ಚಿತ್ರದಲ್ಲೂ ಸಂಭಾಷಣೆಕಾರರು ಬರೆದ ಮಾತುಗಳನ್ನು ಬರೆದಂತೆಯೇ ಬಳಸಿದ್ದು, ಇಲ್ಲವೇ ಇಲ್ಲ. ಅವು ಚಿತ್ರೀಕರಣದ ವೇಳೆಯಲ್ಲಿ ಬಹಳ ಬದಲಾವಣೆ ಹೊಂದಿ ಹೆಚ್ಚು ಕಡಿಮೆ ಅವು ಅವರ ಮಾತುಗಳೇ ಆಗಿ ಬಿಡುತ್ತಿದ್ದವು.

ಪುಟ್ಟಣ್ಣನವರು ಸ್ವತಃ ಸೃಜನಶೀಲ ಕಥೆಗಾರ ಮತ್ತು ಲೇಖಕ. ಅವರ ಚಿತ್ರೀಕರಣದ ರೀತಿಯಲ್ಲಿ ಮೂಲ ಸಾಮಗ್ರಿ ಮಾತ್ರ ಇರುತ್ತಿತ್ತು. ಸಾಮಾನ್ಯವಾಗಿ ನಿರ್ದೇಶಕರು ಚಿತ್ರಕಥೆಯನ್ನು ನಿಖರವಾಗಿ ಬರೆದುಕೊಂಡು ಅದಕ್ಕೆ ಅಂಟಿಕೊಂಡೇ ಚಿತ್ರೀಕರಣ ನಡೆಸುತ್ತಾರೆ. ಚಿತ್ರೀಕರಣ ಸಮಯದಲ್ಲಿ ಪರಿಸ್ಥಿತಿಗಳ ಅವಶ್ಯಕತೆಗನು-ಗುಣವಾಗಿ ಅಲ್ಪ ಸ್ವಲ್ಪ ಬದಲಾವಣೆಗಳನ್ನಷ್ಟೇ ಮಾಡಿಕೊಳ್ಳುತ್ತಾರೆ. ಆದರೆ ಪುಟ್ಟಣ್ಣನವರು ಹಾಗಿರಲಿಲ್ಲ. ಚಿತ್ರೀಕರಣದ ವೇಳೆಯಲ್ಲಿ ಸನ್ನಿವೇಶಗಳ ಮೂಲ ಚೌಕಟ್ಟನಷ್ಟೇ ಗಮನದಲ್ಲಿಟ್ಟುಕೊಂಡು ಕಥೆ ಮತ್ತು ಪಾತ್ರ ಪೋಷಣೆಗಳಿಗೆ ಧಕ್ಕೆ ಬರದಂತೆ ಬದಲಾವಣೆ ಮಾಡುತ್ತಾ ಹೋಗುತ್ತಿದ್ದರು. ಅನೇಕ ವೇಳೆ ಹೊಸದೊಂದು ದೃಶ್ಯವೇ ಸೃಷ್ಟಿಯಾಗಿ ಬೇರೊಂದು ಪಾತ್ರವೇ ಸೇರಿಕೊಳ್ಳುತ್ತಿತ್ತು.

ಸೆಟ್‌ಗೆ ಹೋಗಿ ಅಲ್ಲಿ ದೀಪಗಳನ್ನು ಬೆಳಗಿಸಿ, ಪಾತ್ರಧಾರಿಗಳಿಗೆ ಚಲನವಲನ ಹೇಳಿಕೊಡುತ್ತಿರುವಂತೆಯೇ ಅವರಿಗೆ ಪಾತ್ರಧಾರಿಗಳ ಮಾತುಗಳು ತಲೆಯಲ್ಲಿ ಹೊಳೆಯುತ್ತಿದ್ದವು. ಹಾಗೆಯೇ ಅವುಗಳನ್ನು ಹೇಳಿಸುತ್ತಲೂ, ಉತ್ತಮ ಪಡಿಸುತ್ತಲೂ ಹೋಗುತ್ತಿದ್ದರು. ಆದುದರಿಂದ ಅವರನ್ನು ಸಂಪೂರ್ಣವಾಗಿ

ಅರಿತುಕೊಂಡಿದ್ದ ಹಲವು ಲೇಖಕರು "ಪುಟ್ಟಣ್ಣನವರು ಎಷ್ಟು ಹೇಳಿದರೂ ಮೊದಲೇ ಸಂಭಾಷಣೆ ಮುಂತಾದವುಗಳನ್ನು ಸಂಪೂರ್ಣವಾಗಿ ಬರೆಯದೇ ಸೆಟ್‌ನಲ್ಲಿಯೇ ಬರೆಸುತ್ತಿದ್ದರು" ಎನ್ನುತ್ತಾರೆ.

ಈ ಬಗ್ಗೆ ಕನ್ನಡ ಚಲನಚಿತ್ರರಂಗದ ಅತ್ಯಂತ ಹಿರಿಯ ನಿರ್ದೇಶಕ ಎಂ.ಆರ್. ವಿಠ್ಠಲ್‌ರವರು ಪುಟ್ಟಣ್ಣನವರನ್ನು ಕುರಿತು "ಪುಟ್ಟಣ್ಣನವರ ನಿರ್ದೇಶನವೆಂದರೆ ಸಂಗೀತ ಕಛೇರಿಯಲ್ಲಿ ವೈದ್ಯನಾಥ ಅಯ್ಯರ್‌ರವರ ಸ್ವರ ಪ್ರಸಾರವಿದ್ದಂತೆ. ಸೆಟ್ ಮೇಲೆ ತಾತ್ಕಾಲಿಕ ಮನೋಧರ್ಮಕ್ಕನುಗುಣವಾಗಿ ಕ್ಷಣ ಕ್ಷಣಕ್ಕೂ ವಿಸ್ತರಿಸುವಂತಾದದ್ದು. ಚಲನಚಿತ್ರದ ಬಗ್ಗೆ ಯಾವುದೇ ಪಠ್ಯ ಪುಸ್ತಕದ ಅಂಕೆಗೂ ಬದ್ಧವಾಗುವಂತಹುದಲ್ಲ. ಎಂತಲೇ ಪುಟ್ಟಣ್ಣನವರ ಚಿತ್ರ ಪೂರ್ಣವಾಗಿ ಮುಗಿಯುವವರೆವಿಗೂ ಅದು ಹೇಗಿರುತ್ತದೆಂಬ ಕಲ್ಪನೆ ಯಾರಿಗೂ ಬರುತ್ತಿರಲಿಲ್ಲ" ಎನ್ನುತ್ತಾರೆ.

ಇಷ್ಟಾದರೂ ಅನೇಕ ಲೇಖಕರು ತಮ್ಮ ಕೃತಿಗಳನ್ನು ಪುಟ್ಟಣ್ಣನವರು ಚಿತ್ರಕ್ಕೆ ತೆಗೆದುಕೊಂಡಿಲ್ಲವಲ್ಲ ಎಂದು ಗೊಣಗುತ್ತಿದ್ದರು ಮತ್ತು ತಮ್ಮದೊಂದು ಕೃತಿ ಪುಟ್ಟಣ್ಣನವರಿಂದ ಚಿತ್ರವಾದರೆ ಬದುಕು ಸಾರ್ಥಕ ಎಂದು ಭಾವಿಸಿದ್ದರು. ಪುಟ್ಟಣ್ಣನವರಿಗೆ ಚಿತ್ರ ಮಾಡಲು ಕಥೆ ಕಾದಂಬರಿಗಳೇ ಬೇಕೆಂದಿರಲಿಲ್ಲ. ಅನೇಕ ಸಲ ಯಾವುದೇ ಕವಿಗಳ ದಾರ್ಶನಿಕರ ಒಂದೆರಡು ಆಣಿಮುತ್ತುಗಳೇ ಸಾಕಾಗಿತ್ತು. ಅವರ "ಧರಣಿ ಮಂಡಲ ಮಧ್ಯದೊಳಗೆ" ಚಿತ್ರಕ್ಕೆ ಪ್ರಚೋದನೆ ನೀಡಿದ್ದು ಹೆಸರಾಂತ ಕವಿಗಳಾದ ಖಲೀಲ್ ಗಿಬ್ರಾನ್‌ರವರ ಆಯ್ದ ಆಣಿ ಮುತ್ತುಗಳ ಪುಸ್ತಕವೊಂದರ ನಾಲ್ಕು ಸಾಲುಗಳು.

## ಪ್ರತಿಭಾನ್ವೇಷಣೆ

ಪುಟ್ಟಣ್ಣನವರು ಅನೇಕ ನಟನಟಿಯರನ್ನು ಬೆಳಕಿಗೆ ತಂದರು. ಅವರಿಂದ ತಿರುವು ಪಡೆದ ಕಲಾವಿದರೂ ಅಪಾರ. ತಾವು ಬದುಕಿದ್ದರೆ ಇನ್ನೆಂದೂ ಕನ್ನಡ ಚಲನಚಿತ್ರ ರಂಗದಲ್ಲಿ ನಾಯಕ ನಾಯಕಿಯರ ಕೊರತೆಯಿಲ್ಲವೆಂಬಂತೆ ಮಾಡಬೇಕೆಂಬ ಆಸೆ ಅವರಿಗಿತ್ತು. ಹತ್ತಾರು ಚಿತ್ರಗಳಲ್ಲಿ ಅಭಿನಯಿಸಿ ಜನಪ್ರಿಯರಾಗಿರುವ ನಟ ನಟಿಯರೂ ಕೂಡಾ ಒಮ್ಮೆಯಾದರೂ ಪುಟ್ಟಣ್ಣನವರ ಚಿತ್ರಗಳಲ್ಲಿ ಅಭಿನಯಿಸಲು ಹಾತೊರೆಯುತ್ತಿದ್ದರು. ನೈಜತೆಗಾಗಿ "ಬಿಳಿ ಹೆಂಡ್ತಿ"

ಚಿತ್ರಕ್ಕೆ ಅಮೇರಿಕನ್ ತರುಣಿಯೊಬ್ಬಳಿಂದ ಪಾತ್ರ ಮಾಡಿಸಿದ್ದು, ಅವರ ಪಾತ್ರಕ್ಕೆ ಸೂಕ್ತ ಕಲಾವಿದರನ್ನು ಮಾತ್ರ ಆಯ್ಕೆ ಮಾಡುತ್ತಿದ್ದರೆಂಬುದಕ್ಕೊಂದು ಉದಾಹರಣೆ.

ಪುಟ್ಟಣ್ಣನವರ ಗರಡಿಯಲಿ ಫಳಗಿದ ಕಲಾವಿದರಿಗೆ ಉತ್ತಮವಾದ ಭವಿಷ್ಯವಿರುತ್ತಿತ್ತು. ಒಮ್ಮೆ ಇವರ ಚಿತ್ರದಲ್ಲಿ ಪಾತ್ರ ವಹಿಸಿದ ನಾಯಕ ನಾಯಕಿಯರಿಗೆ ಉತ್ತಮವಾದ ಬೇಡಿಕೆ ಬಂದು ಆರ್ಥಿಕವಾಗಿ ಅವರ ಸ್ಥಿತಿ ಉತ್ತಮಗೊಳ್ಳುತ್ತಿತ್ತು. ಅವರ ಚಿತ್ರದ ಎರಡು ದೃಶ್ಯಗಳಲ್ಲಿ ಅಭಿನಯಿಸಿದರೆ ದೊಡ್ಡ ಕಲಾವಿದರಾಗುತ್ತಿದ್ದರು. ಈ ಕಾರಣಕ್ಕಾಗಿ ಪುಟ್ಟಣ್ಣನವರ ಚಿತ್ರದಲ್ಲಿ ಪಾತ್ರ ವಹಿಸಲು ಕಲಾವಿದರು ಹಾತೊರೆಯುತ್ತಿದ್ದರು. ಒಮ್ಮೆ ಕನ್ನಡ ಚಲನಚಿತ್ರ ರಂಗದ ಕನಸಿನ ಕನ್ಯೆಯಾಗಿದ್ದ ಭಾರತಿಯವರೂ ಕೂಡಾ ಪುಟ್ಟಣ್ಣನವರ ಚಿತ್ರದಲ್ಲಿ ತಾವೂ ಪಾತ್ರ ವಹಿಸಬೇಕೆಂದಿದ್ದ ಆಸೆ "ಋಣ ಮುಕ್ತಳು" ಚಿತ್ರದಿಂದ ಕೈಗೂಡಿದೆ ಎಂದಿದ್ದಾರೆ.

## ಪಾತ್ರಧಾರಿಗಳಿಗೆ ಪಾಠ

ಅನೇಕ ವರ್ಷಗಳ ಕಾಲ ಚಿತ್ರರಂಗದಲ್ಲಿ ಕೆಲಸ ಮಾಡಿ ಅನುಭವವಿದ್ದ ಪುಟ್ಟಣ್ಣನವರಿಗೆ ನಟನಟಿಯರಿಗೆ ಸಂಭಾಷಣೆ ಹೇಳಿಕೊಡುವುದರಲ್ಲಿ ಅಪಾರವಾದಂತಹ ಸಹನೆಯಿತ್ತು. ಪಾತ್ರಧಾರಿಗಳು ಮಾತು ಕಲಿತ ನಂತರ ಆ ಮಾತಿನ ಶೈಲಿ, ಹಾವಭಾವಗಳನ್ನು ತಿದ್ದುವುದರಲ್ಲಿ ಎಷ್ಟೇ ಹೊತ್ತಾದರೂ ತಮ್ಮ ನಿರೀಕ್ಷೆಯ ಮಟ್ಟಕ್ಕೆ ಬರುವವರೆವಿಗೆ ಬಿಡುತ್ತಿರಲ್ಲಿಲ್ಲ. ನಂತರ ಟೇಕ್‌ನಲ್ಲಿಯೂ ಸಹ ನಿರೀಕ್ಷಿಸಿದ ಮಟ್ಟ ಕಾಣಧಿದ್ದರೆ ಎಷ್ಟೇ ಟೆಕ್ ಆದರೂ ತೆಗೆಯುತ್ತಿದ್ದರು. ಈ ಕಾರಣದಿಂದಾಗಿಯೇ ಅವರ ಚಿತ್ರೀಕರಣದಲ್ಲಿ ಹೆಚ್ಚು ಫಿಲಂ ಬಳಸಬೇಕಾಗಿ ಬರುತ್ತಿತ್ತು. ಇದರಿಂದಾಗಿ ಪುಟ್ಟಣ್ಣನವರು ಒಂದಕ್ಕೆ ಹತ್ತರಷ್ಟು ಫಿಲಂ ವೆಚ್ಚ ಮಾಡುತ್ತಾರೆಂಬ ಅಪವಾದಕ್ಕೆ ಗುರಿಯಾಗಿದ್ದರು.

ಪುಟ್ಟಣ್ಣನವರು ಚಿತ್ರೀಕರಿಸುವಾಗ ಸಹಜವಾಗಿ ಚಿತ್ರೀಕರಿಸಲು ಪ್ರಯತ್ನಿಸುತ್ತಿದ್ದರು. ಕಥೆಗೆ, ಮಾತುಗಳಿಗೆ ಜೀವಕಳೆ ತುಂಬುತ್ತಿದ್ದರು. ಪಾತ್ರಧಾರಿಗಳಿಗೆ ಸಂಭಾಷಣೆಗಳನ್ನು ಹೇಳಿಕೊಡುವಾಗ ಪ್ರತಿಯೊಂದು ಪದದಲ್ಲೂ ಇರಬೇಕಾದ ಸುಖ, ದುಃಖ, ರೋಷಗಳನ್ನು ಒತ್ತಿ ಹೇಳಿ ತೋರಿಸುತ್ತಿದ್ದರು. ಪಾತ್ರ ವಹಿಸುವಾಗ ಮುಖಭಾವನೆಗಳು ಹೇಗಿರಬೇಕು, ಕ್ಯಾಮರಾಕ್ಕೆ ಎದುರಾಗಿ ಹೆಜ್ಜೆಗಳನ್ನು ಹೇಗೆ ಹಾಕಬೇಕು. ಮುಖವನ್ನು ಹೇಗೆ ತಿರುಗಿಸಿ ನೋಡಬೇಕೆಂಬುದನ್ನು ಸ್ವತಃ ಮಾಡಿ ತೋರಿಸುತ್ತಿದ್ದರು.

ಪುಟ್ಟಣ್ಣನವರು ಸೆಟ್‌ನ ಮೇಲೆ ನಟರಿಗೆ ಅಭಿನಯ ಮಾಡಿಸುತ್ತಿದ್ದ ರೀತಿ ಅನನ್ಯ. ಭಾವಪ್ರದರ್ಶನ ಬರೇ ನೈಜವಾಗಿದ್ದರೆ ಸಾಲದು. ಅದು ಹೆಚ್ಚು ಪ್ರಭಾವ ಪೂರ್ಣ ಆಗಿರಬೇಕು. ಅದರ ಜೊತೆಗೆ ಇಡೀ ಸನ್ನಿವೇಶ ಕ್ಯಾಮರಾದ ವಿವಿಧ ರೀತಿಯ ಉಪಯೋಗಗಳಿಂದ ದಟ್ಟವಾಗುತ್ತಾ ಹೋಗಬೇಕು. ಮತ್ತು ದೃಶ್ಯ ನಡೆಸುತ್ತಿರುವಾಗಲೇ ಅವರ ಮನಸ್ಸಿನಲ್ಲೇ ಯೋಚಿಸುತ್ತಿದ್ದ ಹಿಂಬದಿಯ ಸದ್ದು, ಸಂಗೀತ ಇದೆಲ್ಲ ಪೂರಕವಾಗಬೇಕೆಂಬುದು ಅವರ ರೀತಿಯಾಗಿತ್ತು.



"ಸಾವಿರ ಮೆಟ್ಟಲು" ಚಲನಚಿತ್ರದ ಚಿತ್ರೀಕರಣದಲ್ಲಿ ನಿರ್ಮಾಪಕ ಡಿ.ಬಿ. ಬಸವೇಗೌಡ ಮತ್ತು ಕಲಾವಿದೆ ಅನುಪ್ರಭಾಕರ್.

# ಕಠಿಣ ಶಿಸ್ತಿನ ಪರಿಪಾಲನೆ

ಪುಟ್ಟಣ್ಣನವರು ತನ್ನ ಎಲ್ಲಾ ಕಲಾವಿದರಿಂದ ಚಿತ್ರೀಕರಣದ ವೇಳೆಯಲ್ಲಿ ಅತ್ಯಂತ ಶಿಸ್ತನ್ನು ನಿರೀಕ್ಷಿಸುತ್ತಿದ್ದರು. ಶ್ರೀಮತಿ ಭಾರತಿಯವರನ್ನು "ಋಣಮುಕ್ತಳು" ಚಿತ್ರಕ್ಕೆ ಆಯ್ಕೆ ಮಾಡಿದಾಗ ಆಕೆಗೆ ಪುಟ್ಟಣ್ಣನವರು "ಸುಮಾರು ಐವತ್ತು ದಿನಗಳ ಕಾಲ ನೀವು ನಮ್ಮೊಡನಿರಬೇಕಾಗುತ್ತದೆ. ಬೆಳಗಿನಿಂದ ಸಂಜೆಯವರೆಗೆ ತಂಡದಲ್ಲಿಯೇ ಇರಬೇಕು. ನಿಮ್ಮ ಪಾಲಿನ ದೃಶ್ಯಗಳನ್ನು ಯಾವ ಸಮಯದಲ್ಲಿ ಚಿತ್ರಿಸುತ್ತೇನೆಂದು ಹೇಳಲಾರೆ. ಈ ನಿಯಮಗಳಿಗೆ ಒಪ್ಪುವುದಾದರೆ ಬನ್ನಿ" ಎಂದು ಸ್ಪಷ್ಟವಾಗಿ ಹೇಳಿದ್ದರಂತೆ.

ಅದರಂತೆ ಭಾರತಿಯವರು ಬೆಳಿಗ್ಗೆ ಎಂಟು ಗಂಟೆಗೆ ಬಂದು ಬಣ್ಣ ಹಾಕಿ ಕುಳಿತರೆ ಸಂಜೆ ಎಲ್ಲರೂ ಹೊರಡುವಾಗಲೇ ಮನೆಗೆ ಹೋಗುತ್ತಿದ್ದರಂತೆ.

◆

# ನಿರಂಕುಶ ಪ್ರಭು

ಪುಟ್ಟಣ್ಣನವರ ಚಿತ್ರ ತಂಡಕ್ಕೆ ಆತನೇ ಬ್ರಹ್ಮ ಮತ್ತು ನಿರಂಕುಶ ಪ್ರಭು. ಚಿತ್ರ ಪ್ರಾರಂಭವಾಗಿ ಮುಗಿಯುವವರೆಗೂ ಯಾರೂ ಮಧ್ಯೆ ಪ್ರವೇಶಿಸುವಂತಿಲ್ಲ. ಅವರು ಕೇಳಿದುದನ್ನು ಒದಗಿಸುವುದಷ್ಟೆ ನಿರ್ಮಾಪಕರ ಕರ್ತವ್ಯವಾಗಿತ್ತು. ಸಾಮಾನ್ಯವಾಗಿ ಚಿತ್ರಕಥೆ ತಯಾರಿಸುವಾಗ ನಿರ್ಮಾಪಕರು ಜೊತೆಯಲ್ಲಿ ಕೂಡುತ್ತಾರೆ. ತಮ್ಮ ಸಲಹೆಗಳನ್ನೂ ಕೊಡುತ್ತಾರೆ. ಇದಾದ ಮೇಲೆ ವಿತರಕರ ಸಲಹೆಯನ್ನೂ ಸ್ವೀಕರಿಸಬೇಕಾಗುತ್ತದೆ. ಅವರು ಇಂತಹದು ಸರಿ, ತಪ್ಪು ಎಂದು ಹೇಳಬಹುದು. ಇಂತಹ ಪಾತ್ರಕ್ಕೆ ಇಂತಹ ಕಲಾವಿದರನ್ನು ಹಾಕಬೇಕೆಂದು ಸೂಚಿಸಬಹುದು. ಆದರೆ ಪುಟ್ಟಣ್ಣನವರಲ್ಲಿ ಇದೊಂದಕ್ಕೂ ಅವಕಾಶವಿರಲಿಲ್ಲ.

ನಿರ್ಮಾಪಕರಿಗೆ ತಾವು ಹಾಕಿದ ಬಂಡವಾಳ ವಾಪಸ್ಸು ಬರಬೇಕೆನ್ನುವ ಆಸೆ. ಇದರಲ್ಲಿ ಯಾರದು ಸರಿ, ಯಾರದು ತಪ್ಪು ಎನ್ನುವುದು ಒಂದು ಸಮಸ್ಯೆಯಾಗಿತ್ತು. ಈ ಕಾರಣಕ್ಕಾಗಿಯೇ ಅನೇಕ ಸಲ ಪುಟ್ಟಣ್ಣನವರಲ್ಲಿ ಒಮ್ಮೆ ಚಿತ್ರ ಮಾಡಿಸಿದ ನಿರ್ಮಾಪಕರು ಮತ್ತೊಮ್ಮೆ ಮಾಡಿಸುತ್ತಿರಲಿಲ್ಲ. ಇದರಿಂದ ಪುಟ್ಟಣ್ಣನವರು ಸಹ "ಒಮ್ಮೆ ಬಂದು ನನ್ನಲ್ಲಿ ದುಡ್ಡು ಮಾಡಿಸಿಕೊಂಡು ಹೋದ ನಿರ್ಮಾಪಕರು ಮತ್ತೆ ಬರುತ್ತಿಲ್ಲ" ಎಂದು ದೂರುತ್ತಿದ್ದರು. ಹೀಗಾಗಿ ಅನೇಕ ಸಲ ವಿತರಕರಿಗೂ ಪುಟ್ಟಣ್ಣನವರಿಗೂ ಸಾಮರಸ್ಯವಿರುತ್ತಿರಲಿಲ್ಲ.

ಪುಟ್ಟಣ್ಣನವರು ಕಲಾವಿದರಿಗೆ ಅವಶ್ಯಕತೆಗಿಂತ ಹೆಚ್ಚು ಬೆಲೆ ಕೊಡುತ್ತಿರಲಿಲ್ಲ. ಎಲ್ಲಾ ನಿರ್ದೇಶಕರೂ ಚಿತ್ರೀಕರಣದ ಸಮಯದಲ್ಲಿ ಸ್ಟಾರ್‌ಗಳಿಗೆ ಅತ್ಯಂತ ಗೌರವ ತೋರಿಸುತ್ತಿದ್ದರೆ ಇವರು ಸ್ವಲ್ಪವೂ ಅನಾವಶ್ಯಕವಾಗಿ ಕಿಮ್ಮತ್ತು ಕೊಡುತ್ತಿರಲಿಲ್ಲ. ಕಲಾವಿದರನ್ನು ಸದಾ ಹದ್ದುಬಸ್ತಿನಲ್ಲಿಟ್ಟುಕೊಳ್ಳುತ್ತಿದ್ದರು. ತನ್ನ ಚಿತ್ರಗಳ ಮೂಲಕ ದೊಡ್ಡ ನಟನಟಿಯರಾಗಿ ಬೆಳೆದ ಕಲಾವಿದರು ಸದಾ ತಮ್ಮನ್ನು ಓಲೈಸಬೇಕೆಂಬ

ತಾನು ಹಾಕಿದ ಗಡಿ ದಾಟಬಾರದೆಂಬ, ಒಟ್ಟಿನಲ್ಲಿ ತಾನು ಹೇಳುವಂತೆ ಕೇಳುವವರಾಗಿರಬೇಕೆಂಬ ಆಸೆ ಪುಟ್ಟಣ್ಣನವರಲ್ಲಿ ಸದಾ ಇತ್ತು. ತನ್ನ ಚಿತ್ರದ ಕಲಾವಿದರು ಅವರ ಅಪ್ಪಣೆಯಿಲ್ಲದೆ ಪತ್ರಿಕೆಯವರಿಗೆ ಸಂದರ್ಶನ ಕೂಡ ನೀಡುವಂತಿರಲಿಲ್ಲ. ಆದರೆ ಪುಟ್ಟಣ್ಣನವರಿಂದ ಛಾಯಾಗ್ರಾಹಕರಿಗೆ, ಸಾಹಿತಿಗಳಿಗೆ ಮತ್ತು ತಾಂತ್ರಿಕಜ್ಞರಿಗೆ ತುಂಬಾ ಬೆಲೆ ಸಿಕ್ಕುತ್ತಿತ್ತು. ◆



"ಸಾವಿರ ಮೆಟ್ಟಿಲು" ಚಿತ್ರದ ಚಿತ್ರೀಕರಣದಲ್ಲಿ ನಟಿ ಅನುಪ್ರಭಾಕರ್
ಮತ್ತು ನಿರ್ಮಾಪಕ ಡಾ. ಡಿ.ಬಿ. ಬಸವೇಗೌಡ

# ಚಿತಬ್ರಹ್ಮ ತನ್ನ ಚಿತ್ರಗಳೊಡನೆ ಸವೆಸಿದ ದಾರಿ

ಪುಟ್ಟಣ್ಣನವರು ಕನ್ನಡ ಚಲನಚಿತ್ರ ರಂಗಕ್ಕೆ ಬರುವ ಮುನ್ನ ಅವರು ನಡೆದು ಬಂದ ದಾರಿ ಅತ್ಯಂತ ದುರ್ಗಮವಾದದ್ದು.

ಪ್ರಕೃತಿಯ ನಡುವಿನ ಸುಂದರಹಳ್ಳಿಯೊಂದರ ಅತೀ ಬಡ ಕುಟುಂಬ ಒಂದರಲ್ಲಿ ಅಪಾರ ಮಕ್ಕಳಲ್ಲಿ ಒಬ್ಬನಾಗಿ ಹುಟ್ಟಿ, ಪ್ರಾಥಮಿಕ ಶಾಲೆ ಮುಗಿದ ತಕ್ಷಣ ಮುಂದಿನ ವಿದ್ಯಾದಾಹದಿಂದ ಊರು ಬಿಟ್ಟು, ಪಟ್ಟಣ ಸೇರಿ, ವಾರಾನ್ನ ಮಾಡಿಕೊಂಡು ಮಾಧ್ಯಮಿಕ. ವಿದ್ಯಾಭ್ಯಾಸದ ಜೊತೆಯಲ್ಲಿಯೇ ಆ ಚಿಕ್ಕ ವಯಸ್ಸಿನಲ್ಲೇ, ಛಾಯಾಗ್ರಹಣದಿಂದ, ನಟನೆಯಿಂದ, ಸಂಗೀತದಿಂದ, ನಿರ್ದೇಶನ-ದಿಂದ ಆಕರ್ಷಿತನಾಗಿ, ಕೇವಲ ೮ನೇ ವಯಸ್ಸಿನಲ್ಲಿಯೇ ದಿಗ್ದರ್ಶಕನಾಗಬೇಕೆಂಬ ಆಸೆಯ ಬೀಜವನ್ನು ತನ್ನ ಮನಸ್ಸಿನಲ್ಲಿ ಬಿತ್ತಿಕೊಂಡು, ಯಾವುದೋ ಗ್ಯಾರೇಜಿನಲ್ಲಿ ಕ್ಲೀನರಾಗಿ, ಬಸ್ಸು ಮತ್ತು ಕಾರಿನ ಚಾಲಕರಾಗಿ, ಸ್ವತಃ ತಾನೇ ವ್ಯಾನ್ ನಡೆಸಿ ಸೆಂಟ್ ಮತ್ತು ರಾಸಾಯನಿಕ ವಸ್ತುಗಳನ್ನು ದೇಶದ ಎಲ್ಲೆಡೆಯ ಅಂಗಡಿಗಳಿಗೂ ಮಾರಿ, ಖಾಸಗಿ ಶಾಲೆಯ ಉಪಾಧ್ಯಾಯನಾಗಿ, ನಾಟಕ ಕಂಪನಿ ಸೇರಿ, ಬೆನ್ನ ಹಿಂದೆ ಬ್ಯಾನರ್ ಕಟ್ಟಿಕೊಂಡು ಹಳ್ಳಿ ಹಳ್ಳಿಗಳಲ್ಲಿ ಮತ್ತು ಜಾತ್ರೆಗಳಲ್ಲಿ ಡೋಲು ಬಡಿದುಕೊಂಡು, ಚೀಟಿ ಹಂಚಿ ನಾಟಕದ ಪ್ರಚಾರ ಮಾಡುತ್ತಾ, ಸೈಕಲ್ ಮೇಲೆ ನಾಟಕದ ಪರದೆ ಮತ್ತು ವಸ್ತ್ರಗಳನ್ನು ಸಾಗಿಸುತ್ತಾ, ಬಣ್ಣದ ಬದುಕನ್ನು ಕಲಿತು, ತನ್ನ ೨೧ನೇ ವಯಸ್ಸಿನಲ್ಲಿ ಸಂಭಾಷಣಾ ಶಿಕ್ಷಕನಾಗಿ, ಆಮೇಲೆ ಸಹಾಯಕ ನಿರ್ದೇಶಕನಾಗಿ, ೧೯೬೪ರಲ್ಲಿ ತನ್ನ ೩೧ನೇ ವಯಸ್ಸಿನಲಿ ನಿರ್ದೇಶಕನ ಹುದ್ದೆಗೇರಬೇಕಾದರೆ ಅವರು ಅನುಭವಿಸಿದ ಕಷ್ಟ ಅಪಾರ ಹಾಗೂ ಸಹನಾತೀತ.

ಪುಟ್ಟಣ್ಣನವರು ಕನ್ನಡ ಚಲನಚಿತ್ರ ರಂಗಕ್ಕೆ ಬರುವ ಮುನ್ನ ಹಲವು ಅನ್ಯ ಭಾಷಾ ಚಿತ್ರಗಳನ್ನು ಸ್ವತಂತ್ರವಾಗಿ ನಿರ್ದೇಶಿಸುತ್ತಿದ್ದರು. ಅವುಗಳಲ್ಲಿ ಬಹುಪಾಲು ಯಶಸ್ವಿಯಾಗಿದ್ದವು. ಇಂತಹ ಪರಿಸ್ಥಿತಿಯಲ್ಲಿದ್ದಾಗ ೧೯೬೭ರಲ್ಲಿ ತಮಿಳು ನಿರ್ಮಾಪಕರೊಬ್ಬರಿಗೆ ಕನ್ನಡದ "ಬೆಳ್ಳಿಮೋಡ" ಚಿತ್ರ ನಿರ್ದೇಶನ ಮಾಡಿ, ತಮ್ಮ

ಜೀವನದಲ್ಲಿ ತಿರುವು ಪಡೆದರು. ಇಲ್ಲಿಂದ ಅವರ ಜೀವನದ ಮತ್ತೊಂದು ರೀತಿಯ ಏರುಪೇರು ಪ್ರಾರಂಭವಾಯಿತು.

"ಬೆಳ್ಳಿಮೋಡ"ದ ಇಂದಿರಾಳ ಪಾತ್ರಕ್ಕೆ ಕಲ್ಪನಾ ಅವರನ್ನು ಆರಿಸಿಕೊಂಡರು. ಆ ಚಿತ್ರ ಮುಗಿಯುವುದರೊಳಗೆ ಪುಟ್ಟಣ್ಣನವರಿಗೂ ಕಲ್ಪನಾರವರಿಗೂ ಗಾಢ ಸ್ನೇಹ ಬೆಳೆಯಿತು. ಚಿತ್ರದ ನಿರ್ಮಾಪಕ ಶ್ರೀನಿವಾಸನ್‌ರವರೊಡನೆ ನಿರ್ಮಾಣದ ಹಂತದಲ್ಲಿ ವಿರಸ ಬಂತು. ಚಿತ್ರ ಜಯಪ್ರದವಾದರೂ ಮುಂದೆ ಚಿತ್ರಗಳ ನಿರ್ದೇಶನಕ್ಕೆ ಪುಟ್ಟಣ್ಣನವರನ್ನು ಯಾವ ಕನ್ನಡಿಗರೂ ಆಹ್ವಾನಿಸಲಿಲ್ಲ. ಇದಾದ ಮೇಲೆ ಅವರು ಮಹಾದಾಸೆ ಇಟ್ಟುಕೊಂಡು ಬಂದಿದ್ದ "ಮೈಸೂರು ಮೈತ್ರಿ ಫಿಲಂ"ರವರ "ಸಾವಿರ ಮೆಟ್ಟಿಲು" ಕನ್ನಡ ಚಿತ್ರ ಸಹ ಅರ್ಧದಲ್ಲಿ ನಿಂತು ಹೋಯಿತಾದರೂ ಕನ್ನಡದ ನೆಲ ಅವರನ್ನು ಮೈದುಂಬಿಸಿಕೊಂಡಿತು.

ಆಮೇಲೆ ಬಂದ "ಮಲ್ಲಮ್ಮನ ಪವಾಡ", "ಕಪ್ಪು ಬಿಳುಪು" ಇವು ಪುಟ್ಟಣ್ಣನವರ ಪ್ರಥಮ ಹಂತದ ಯಶಸ್ವಿ ಚಿತ್ರಗಳು. ಇವುಗಳಿಂದ ಪುಟ್ಟಣ್ಣನವರ ಹೆಸರು ಚಿತ್ರರಂಗದಲ್ಲೇ ಜನಜನಿತವಾಯಿತು. ತರುವಾಯ ಬಂದ "ಗೆಜ್ಜೆ ಪೂಜೆ" ಚಿತ್ರವಂತೂ ಪುಟ್ಟಣ್ಣನವರಿಗೆ ಅಪೂರ್ವ ಯಶಸ್ಸನ್ನು ತಂದಿತು. ಈ ಚಿತ್ರದ ಚಿತ್ರೀಕರಣದ ವೇಳೆಯಲ್ಲೇ ಅವರಿಗೆ ಆರತಿಯವರ ಪರಿಚಯವಾದದ್ದು. ಈ ನಾಲ್ಕು ಚಿತ್ರಗಳಿಂದ ಪುಟ್ಟಣ್ಣನವರ ಚಿತ್ರಗಳೆಂದರೆ ಕಾದಂಬರಿಯಾಧಾರಿತ ಚಿತ್ರಗಳು ಎಂಬ ಭಾವನೆ ಮೂಡಿತು. ಅವರು ಅದನ್ನೊಂದು ಸವಾಲೆಂದು ಪರಿಗಣಿಸಿ, "ಕರುಳಿನ ಕರೆ" ಚಿತ್ರ ಕಥೆಯನ್ನು ಬರೆದು ಸೃಷ್ಟಿಸಿದರು. ಇದು ಕೆಲವು ಕಡೆ ಶತದಿನೋತ್ಸವ ಆಚರಿಸಿತು. ಇದಾದ ಮೇಲೆ ಬಂದ "ಶರಪಂಜರ" ಅದ್ಭುತ ಯಶಸ್ಸನ್ನು ಗಳಿಸಿತು. ಮುಂದಿನ ಚಿತ್ರ "ಸಾಕ್ಷಾತ್ಕಾರ" ಹಿಂದಿಯ ಬಹು ದೊಡ್ಡ ನಟ ಪೃಥ್ವೀರಾಜ್ ಕಪೂರ್ ಪಾತ್ರ ವಹಿಸಿದ್ದರೂ ಸೋತು ಕಟುವಾದ ಪತ್ರಿಕಾ ವಿಮರ್ಶೆಗೆ ಗುರಿಯಾಯಿತು.

ಆಮೇಲೆ ಬಂದ "ನಾಗರ ಹಾವು", "ಎಡಕಲ್ಲು ಗುಡ್ಡದ ಮೇಲೆ", "ಉಪಾಸನೆ", "ಶುಭ ಮಂಗಳ", "ಬಿಳೀ ಹೆಂಡ್ತಿ" ಚಿತ್ರಗಳು ಹಲವು ವಿಶಿಷ್ಟಗಳಿಂದ ಕೂಡಿ ಮೆರೆದವು. ಈ ಚಿತ್ರಗಳಿಂದ "ಪುಟ್ಟಣ್ಣನವರು ಕೇವಲ ಕಾದಂಬರಿಗಳನ್ನಷ್ಟೇ ಅದ್ಭುತವಾಗಿ ತೆರೆಯ ಮೇಲೆ ಮೂಡಿಸಬಲ್ಲರೇ ಹೊರತು ಹೊಸತೇನನ್ನೂ ಕೊಡಲಾರರು, ಅಲ್ಲದೆ ಅವರು ಹೆಚ್ಚು ಬಂಡವಾಳದ ಚಿತ್ರಗಳನ್ನು ಮಾತ್ರ ತೆಗೆಯಬಲ್ಲರು" ಎಂದರು ಹಲವರು. ಈ ಅಭಿಪ್ರಾಯಕ್ಕೆ ಸವಾಲು ಎಸೆಯುವಂತೆ ಪುಟ್ಟಣ್ಣನವರು ಮೂರು ಸಣ್ಣ ಕಥೆಗಳ ಆಧಾರಿತ ಮೂರು

ಕಿರುಚಿತ್ರಗಳ "ಕಥಾ ಸಂಗಮ" ವನ್ನು ನಿರ್ಮಿಸಿ ಕನ್ನಡ ಚಿತ್ರರಂಗದಲ್ಲಿ ಒಂದು ಅದ್ಭುತವನ್ನು ಸಾಧಿಸಿದರು.

ಇದಾದ ಮೇಲೆ ತೆರೆ ಕಂಡ "ಕಾಲೇಜು ರಂಗ" ಸಂಪೂರ್ಣವಾಗಿ ಕುಸಿಯಿತು. "ಫಲಿತಾಂಶ"ಕ್ಕೆ ಮಂಕುಹಿಡಿಯಿತು. "ಪಡುವಾರಹಳ್ಳಿ ಪಾಂಡವರು" ಅದ್ಭುತ ಯಶಸ್ಸು ಗಳಿಸಿತು. "ಧರ್ಮಸೆರೆ" ಅಂಥಹ ಯಶಸ್ಸನ್ನೇನೂ ತರಲಿಲ್ಲ. ಈ ಚಿತ್ರ ಆರತಿಯವರ ಸ್ವಂತ ಚಿತ್ರವಾಗಿದ್ದು, ಅದನ್ನು ಹೆಚ್ಚು ಯಶಸ್ವಿಗೊಳಿಸುವ ಸಲುವಾಗಿ ಪುಟ್ಟಣ್ಣನವರು ತುಂಬಾ ಶ್ರಮ ತೆಗೆದುಕೊಂಡಿದ್ದರು. ಹಾಗೆ ಹೆಚ್ಚು ಕೆಲಸದ ಒತ್ತಡದಿಂದಾಗಿ ಅವರಿಗೆ ಪ್ರಪ್ರಥಮವಾಗಿ ಹೃದಯಾಘಾತವಾಯಿತು.

ಅಲ್ಲಿಂದ ಅವರ ನಡಿಗೆ ಸ್ಥಗಿತವಾಗಿ, ಈ ಚಿತ್ರಗಳ ಸೋಲಿನಿಂದ ಪುಟ್ಟಣ್ಣನವರಿಗೆ ಏನಾಯಿತೆಂದು ಕೇಳುವಂತಾಯಿತು. ಆನಂತರದ ದಿನಗಳಲ್ಲಿ ಚಿಂತೆಗಳು, ಸಮಸ್ಯೆಗಳು ಪ್ರಾರಂಭವಾದವು. ಆ ಮೇಲೆ ತೆರೆ ಕಂಡ "ರಂಗನಾಯಕಿ" ಕನ್ನಡ ರಂಗಭೂಮಿಯ ಕಲಾ ವೈಭವವನ್ನು ಹೊತ್ತು ಒಂದು ಅದ್ಭುತ ಕಲಾಕೃತಿಯಾಗಿ ಹೊರಬಂತು. ಈ ಚಿತ್ರದ ನಂತರ ಆರತಿಯವರಿಗೂ, ಪುಟ್ಟಣ್ಣನವರಿಗೂ ವಿರಸವಾಯಿತು. ಇಲ್ಲಿಂದ ಪುಟ್ಟಣ್ಣನವರ ಕಷ್ಟದ ದಿನಗಳು ಪ್ರಾರಂಭವಾದುವು. ಬೆಂಗಳೂರಿನಲ್ಲಿ ಆರತಿಯವರ ಮನೆಯಿಂದ ಹೊರ ಬಂದ ಮೇಲೆ ವಾಸಕ್ಕೆ ನೆಲೆ ಇಲ್ಲವಾಯಿತು. ಆರ್ಥಿಕ ತೊಂದರೆಯಿಂದ ಒಂದು ಹೊತ್ತು ಊಟಕ್ಕೂ ಗತಿಯಿಲ್ಲವಾಯಿತು. ಅವರು ಮಾನಸಿಕವಾಗಿ ಮತ್ತು ದೈಹಿಕವಾಗಿ ಸೋತು ಹೋದರು.

"ರಂಗನಾಯಕಿ" ಚಿತ್ರದ ಬಳಿಕ ಅವರು ಇನ್ನೊಂದು ಚಿತ್ರಕ್ಕಾಗಿ ಅವರಿವರನ್ನು ಕೇಳಬೇಕಾಗಿ ಬಂತು. ಮುಂದೆ ತೆರೆ ಕಂಡ "ಮಾನಸ ಸರೋವರ" ಒಂದು ರೀತಿಯಲ್ಲಿ ಅವರ ಮಾನಸಿಕ ಆಘಾತದ ಪರಿಣಾಮವಾಗಿ ಮೂಡಿ ಬಂದ ಅವರದೇ ಜೀವನ ಚರಿತ್ರೆಯ ಒಂದು ಅಧ್ಯಾಯ, ಈ ಚಿತ್ರ ಆರ್ಥಿಕವಾಗಿಯೂ ತುಂಬಾ ಯಶಸ್ವಿಯಾಯಿತು. ಇದರಿಂದ ಮುದುಡಿ ಹೋಗಿದ್ದ ಪುಟ್ಟಣ್ಣ ಸಂತೋಷದಿಂದ ಬೀಗಿ ಹೋದರು. ಅಂದು ಅವರಿಂದ ದೂರವಾದ ನಿರ್ಮಾಪಕರು ಇಂದು ಮತ್ತೆ ಹತ್ತಿರ ಬರತೊಡಗಿದರು.

ಆದರೆ ಆಮೇಲೆ ಬಂದ "ಧರಣಿ ಮಂಡಲ ಮಧ್ಯದೊಳಗೆ" ನೆಲಕಚ್ಚಿತು. ಪುನಃ ಪುಟ್ಟಣ್ಣ ಕುಗ್ಗಿ ಹೋದರು. ಒಂದು ರೀತಿಯಲ್ಲಿ "ರಂಗನಾಯಕಿ"ಯ ನಂತರ ಪುಟ್ಟಣ್ಣನವರ ಚಿತ್ರಗಳು ಮೊದಲಿದ್ದ ಹೊಳಪನ್ನು ಸಂಪೂರ್ಣವಾಗಿ ಕಳೆದುಕೊಂಡಿದ್ದವು. ಪುಟ್ಟಣ್ಣನವರನ್ನು ಆಧ್ಯಾತ್ಮಿಕದ ಮುಸುಕು ಕವಿದಿತ್ತು.

"ಹಿಂದೂ ದೇಶ", "ಹಿಂದೂ ಸಂಸ್ಕೃತಿ", "ಹಿಂದೂ ನಾರಿ" ಎಂಬ ಪದ ಪುಂಜಗಳಸುತ್ತ ಪುಟ್ಟಣ್ಣನವರ ಮನಸ್ಸು ಓಲಾಡುತ್ತಿತ್ತು. ಆಮೇಲೆ ಬಂತು "ಅಮೃತ ಘಳಿಗೆ" ಈ ಚಿತ್ರ ಪತ್ರಿಕೆಯವರ ಟೀಕೆಗೆ ಗುರಿಯಾದರೂ ಆರ್ಥಿಕವಾಗಿ ಜಯಗಳಿಸಿತ್ತು.

ಮುಂದಿನ ಚಿತ್ರ "ಋಣಮುಕ್ತಳು" ಅವರ ಸ್ವಂತ ಚಿತ್ರ, ಈ ಚಿತ್ರದ ಬಿಡುಗಡೆಯಲ್ಲಿ ಪುಟ್ಟಣ್ಣನವರಿಗೂ ಈ ಚಿತ್ರದ ವಿತರಕರಿಗೂ ವ್ಯವಹಾರ ಬಂದು ಪ್ರದರ್ಶನಕ್ಕೆ ಸ್ವಲ್ಪ ತೊಂದರೆಯಾಯಿತು. ಈ ಚಿತ್ರಕ್ಕಾಗಿ ಪುಟ್ಟಣ್ಣನವರು ತಮ್ಮ ಜೀವನದ ಸಂಪಾದನೆಯ ಕಟ್ಟಕಡೆಯ ರೂಪಾಯಿಯನ್ನೂ ಸಹ ಪಣವಾಗಿಟ್ಟಿದ್ದರಿಂದ ಚಿತ್ರದ ಬಿಡುಗಡೆಯ ಆತಂಕವನ್ನು ತಡೆದುಕೊಳ್ಳಲಾರದೆ ಎರಡನೇಯ ಬಾರಿ ಲಘು ಹೃದಯಾಘಾತಕ್ಕೊಳಗಾಗಿ, ಬಿಡುಗಡೆಯ ದಿನ ಅಂದರೆ ೧೯೮೪ನೇ ಸೆಪ್ಟಂಬರ್ ಮಾಹೆ ತಾರೀಖು ಇಪ್ಪತ್ತೊಂದರಂದು ಬೆಂಗಳೂರಿನ ಒಂದು ಶುಶ್ರೂಷಾಗೃಹ ಸೇರಿದರು. ಆ ಚಿತ್ರ ಸುಮಾರಾಗಿದೆ ಎಂಬ ಅಭಿಪ್ರಾಯ ತಂದಿತಷ್ಟೆ.

ಹೀಗೆಯೇ ಪುಟ್ಟಣ್ಣನವರ ಜೀವನದುದ್ದಕ್ಕೂ ಏರಿಳಿತಗಳು ಪ್ರಬಲವಾಗಿ ಇದ್ದವು. ಅವರ ಚಿತ್ರರಂಗದ ಬದುಕಿನಲ್ಲೇ ಹೆಣ್ಣು ಮಹತ್ತರವಾದ ಪಾತ್ರವನ್ನು ವಹಿಸಿತ್ತು. ತಮ್ಮ ನಾಯಕಿಯರೊಂದಿಗಿನ ನಂಟು ಅವರ ಜೀವನವನ್ನು ಅಲ್ಲೋಲ ಕಲ್ಲೋಲವನ್ನಾಗಿ ಮಾಡಿತ್ತು. ಹೆಣ್ಣಿನ ಮುಖವನ್ನೇ ಮುಖ್ಯವಾಗಿ ಕಾಣಿಸುವ ಹೆಚ್ಚು ಚಿತ್ರಗಳು ಅವರದಾಗಿದ್ದವು. ಪ್ರಾರಂಭದಲ್ಲಿ ಕಲ್ಪನಾ, ನಂತರ ಆರತಿ, ಆನಂತರ ಪದ್ಮಾವಾಸಂತಿ ಅವರ ಚಿತ್ರಗಳ ನಾಯಕಿಯರಾದರು. ಹೀಗಾಗಿ ತಮ್ಮ ಚಿತ್ರದ ಕೆಲವು ನಾಯಕಿಯರ ಜೊತೆ ಗಾಢವಾದ ಸಂಬಂಧ ಪ್ರಾರಂಭವಾಗುತ್ತಿತ್ತು ಮತ್ತು ಅದು ಕಹಿಯಾಗಿಯೇ ಮುಗಿಯುತ್ತಿತ್ತು. ರಾಷ್ಟ್ರಮಟ್ಟದ ನಿರ್ದೇಶಕ ಶಾಂತಾರಾಂ, ಬಿ.ಆರ್. ಪಂತುಲುರವರುಗಳು ತಾರಾಪತ್ನಿಯರನ್ನು ಹೊಂದಿದ್ದು ಪುಟ್ಟಣ್ಣನವರಿಗೂ ಸಹಾ ತಾವು ಹಾಗೆಯೇ ಆಗಬೇಕೆನ್ನಿಸಿತ್ತೇನೋ? ಒಟ್ಟಿನಲ್ಲಿ ತನ್ನ ಚಿತ್ರದ ನಾಯಕಿಯರೊಡನೆ ಒಂದಲ್ಲ ಒಂದು ವಿಧದಲ್ಲಿ ಸಂಬಂಧ ಗಂಟು ಬೀಳುತ್ತಿತ್ತು.

ಆಸ್ಪತ್ರೆ ಖರ್ಚು, ಹಣಕಾಸಿನ ತೊಂದರೆ, ಚಿತ್ರಗಳಿಲ್ಲದಾಗ ನಿರ್ಮಾಪಕರು ಮಾಡುತ್ತಿದ್ದ ಅವಮಾನ, ಹಿಂಸಿಸುತ್ತಿದ್ದ ನೆನಪುಗಳು ಇವೆಲ್ಲವುಗಳ ಮಧ್ಯೆ ಮೂರೇ ತಿಂಗಳಲ್ಲಿ ತಲೆ ತುಂಬಾ ಇದ್ದ ಕೂದಲು ಮತ್ತು ಗಡ್ಡ ನೆರತು ಮುಪ್ಪು ಕವಿಯಲು ಪ್ರಾರಂಭವಾಯಿತು. ಹಣೆಯ ಮೇಲೆ ಅಗಲವಾದ ಕುಂಕುಮವನ್ನು ಇಟ್ಟುಕೊಂಡು

ಪ್ರತಿಯೊಂದು ವಿಷಯಕ್ಕೂ ಕ್ರಾಂತಿಯ ಮಾತನ್ನಾಡಲು ಪ್ರಾರಂಭಿಸಿದರು. ಆದರೆ ಅವುಗಳಿಗೆ ಕೊಂಚವಾದರೂ ಸಾಮಾಜಿಕ ಬದ್ಧತೆಗಳಾಗಲೀ, ರಾಜಕೀಯ ತತ್ವಗಳಾಗಲೀ ಇರಲಿಲ್ಲ. ಪುಟ್ಟಣ್ಣ ಮೇಲ್ನೋಟಕ್ಕೆ ಸ್ವಲ್ಪ ಕ್ರಾಂತಿಕಾರಿಯಂತೆ ಕಂಡರೂ ಆಳದಲ್ಲಿ ಸಂಪ್ರದಾಯಸ್ಥರಾಗಿದ್ದರು.

ತನ್ನಿಂದ ಬೆಳೆದ ನಟ, ನಟಿಯರು, ತನ್ನಿಂದ ದೊಡ್ಡವರಾದ ನಿರ್ಮಾಪಕರು, ತನ್ನ ಮೂಲಕ ಖ್ಯಾತಿ ಪಡೆದ ಯಾರೂ ತನ್ನ ಕೆಟ್ಟ ದಿನಗಳಲ್ಲಿ ತನ್ನ ನೆರವಿಗೆ ಬರಲಿಲ್ಲವೆನ್ನುವುದು ಇವರ ಕಡೆಯ ದಿನಗಳಲ್ಲಿ ಹೆಚ್ಚು ಕಹಿಯನ್ನೂ, ನೋವನ್ನೂ ತಂದಿತ್ತು. ಅನೇಕರನ್ನು ಲಕ್ಷಾಧಿಪತಿಯನ್ನಾಗಿ ಮಾಡಿದ ಇವರಿಗೆ ದುರ್ದೆಶೆಯ ಕಾಲದಲ್ಲಿ ಊಟ ಮಾಡಲು ಕಾಸಿರಲಿಲ್ಲ.

ಕೆಲವರು ಪಿಸುಗುಟ್ಟುತ್ತಿದ್ದ ಹಾಗೆ ಪುಟ್ಟಣ್ಣನವರಿಗೆ ವೃತ್ತಿಯ ಹೊರೆ, ಆರತಿಯವರೊಡಗಿನ ಜಂಜಾಟ, ರಾಮಕೃಷ್ಣ ಮತ್ತು ಮಂಗಳರವರ ಮಗುವಿನ ವಿವಾದ ಇತ್ಯಾದಿಗಳಷ್ಟೆ ಅವರ ನೋವಿಗೆ ಕಾರಣವಾಗಿರಲಿಲ್ಲ. ಅದಕ್ಕಿಂತಾ ಮಹತ್ತರವಾದ ಎಲ್ಲೋ ಅವರಿಗೆ ಎದಿರೇಟಾಗಿ ನಿಂತ ಕೆಲವು ತೀರ ವೈಯಕ್ತಿಕ ಸಮಸ್ಯೆಗಳು ಅವರ ಕುಟುಂಬದಲ್ಲಿ ತಲೆದೋರಿದ್ದವು. ಅವರು ಅವುಗಳನ್ನು ಬಹಳವಾಗಿ ಹಚ್ಚಿಕೊಂಡಿದ್ದರು. "ತಾನು ಏಕಾಂಗಿ" ಎಂಬ ಭಾವನೆಯಿಂದ ಭಯಗೊಂಡಿದ್ದರು.

ಕನ್ನಡ ಚಿತ್ರರಂಗದ ಈ ಪುಟ್ಟ ನೆಲದಲ್ಲಿ ವಿವಾದವೆಬ್ಬಿಸಿ, ತನ್ನ ತನವನ್ನು ಗಟ್ಟಿಯಾಗಿ ಬೆಳೆಸಿಕೊಂಡಿದ್ದ ಪ್ರತಿಭಾನ್ವಿತ ನಿರ್ದೇಶಕನೊಬ್ಬ ಕೇವಲ ತನ್ನ ೫೨ ವರ್ಷಕ್ಕೆ ಕಣ್ಮರೆಯಾದದ್ದು ತುಂಬಾ ನೋವಿನ ಸಂಗತಿ ಹಾಗೂ ಕನ್ನಡ ಚಲನಚಿತ್ರ ರಂಗಕ್ಕೆ ಬಹು ದೊಡ್ಡ ನಷ್ಟ. ಇವರು ತಾವೇ ಸೃಷ್ಟಿಸಿಕೊಂಡ ಕಲಾಲೋಕದ ಬಲೆಯಲ್ಲಿ ಸಿಕ್ಕಿ ಹಾಕಿಕೊಂಡು ಸುಖ ದುಃಖ, ಬದುಕು, ಮುಪ್ಪು ರೋಗಗಳನ್ನೆಲ್ಲಾ ಒಟ್ಟಿಗೆ ಅನುಭವಿಸಿ "ಬೆಳ್ಳಿಮೋಡ"ದಲ್ಲಿ ಉದ್ಭವಿಸಿದರೂ "ಮಸಣದ ಹೂವು" ಚಿತ್ರದಲ್ಲಿ ಆ ಚಿಕ್ಕ ವಯಸ್ಸಿನಲ್ಲಿ ಮರಣ್ಣಾದದ್ದು ಒಂದು ದೊಡ್ಡ ದುರಂತ.

# ಅನುಬಂಧ

## ಪುಟ್ಟಣ್ಣನವರ ನಿರ್ದೇಶನದ ಕನ್ನಡ ಚಿತ್ರಗಳು
(೩೫ ಎಂ.ಎಂ.ನಲ್ಲಿ)

| ಕ್ರ.ಸಂ. | ಚಿತ್ರದ ಹೆಸರು | ಲಾಂಛನ | ಬಿಡುಗಡೆ ವರ್ಷ |
|---|---|---|---|
| ೧. | ಬೆಳ್ಳಿಮೋಡ | ಶ್ರೀನಿವಾಸ ಆರ್ಟ್ಸ್ ಪ್ರೊಡಕ್ಷನ್ | ೧೯೬೭ |
| ೨. | ಮಲ್ಲಮ್ಮನ ಪವಾಡ | ಎ.ಎಲ್.ಎಸ್.ಪ್ರೊಡಕ್ಷನ್ | ೧೯೬೯ |
| ೩. | ಕಪ್ಪು ಬಿಳುಪು | ರವಿಕುಮಾರ್ ಮೂವೀಸ್ | ೧೯೬೯ |
| ೪. | ಗೆಜ್ಜೆಪೂಜೆ | ಚಿತ್ರ ಜ್ಯೋತಿ ಫಿಲಂಸ್ | ೧೯೭೦ |
| ೫. | ಕರುಳಿನ ಕರೆ | ಶ್ರೀಕಾಂತ್ ಮತ್ತು ಶ್ರೀಕಾಂತ್ ಎಂಟರ್‌ಪ್ರೈಸಸ್ | ೧೯೭೦ |
| ೬. | ಶರಪಂಜರ | ವರ್ಧಿನಿ ಆರ್ಟ್ಸ್ | ೧೯೭೧ |
| ೭. | ಸಾಕ್ಷಾತ್ಕಾರ | ಮಲ್ಲಿಕ್ ಪ್ರೊಡಕ್ಷನ್ | ೧೯೭೧ |
| ೮. | ನಾಗರಹಾವು | ಈಶ್ವರಿ ಪ್ರೊಡಕ್ಷನ್ | ೧೯೭೨ |
| ೯. | ಎಡಕಲ್ಲು ಗುಡ್ಡದ ಮೇಲೆ | ಶ್ರೀಕಾಂತ್ ಮತ್ತು ಶ್ರೀಕಾಂತ್ ಎಂಟರ್‌ಪ್ರೈಸಸ್ | ೧೯೭೩ |
| ೧೦. | ಉಪಾಸನೆ | ಚಿತ್ರಜ್ಯೋತಿ | ೧೯೭೪ |
| ೧೧. | ಶುಭಮಂಗಳ | ರಘುನಂದನ್ ಇಂಟರ್‌ನ್ಯಾಷನಲ್ | ೧೯೭೫ |
| ೧೨. | ಬಿಳೀಹೆಂಡ್ತಿ | ಎಂ.ಜಿ.ಎಂ. ಪ್ರೊಡಕ್ಷನ್ | ೧೯೭೫ |
| ೧೩. | ಕಥಾಸಂಗಮ | ವರ್ಧಿನಿ ಆರ್ಟ್ಸ್ ಪಿಕ್ಚರ್ಸ್ | ೧೯೭೬ |
| ೧೪. | ಕಾಲೇಜುರಂಗ | ಪದ್ಮಿನಿ ಪಿಕ್ಚರ್ಸ್ | ೧೯೭೬ |
| ೧೫. | ಫಲಿತಾಂಶ | ಎ.೧ ಮೂವಿಟೋನ್ | ೧೯೭೬ |

| | | | |
|---|---|---|---|
| ೧೬. | ಪಡುವಾರಹಳ್ಳಿ ಪಾಂಡವರು | ಕಣಗಾಲ್ ಕ್ರಿಯೇಷನ್ಸ್ | ೧೯೭೮ |
| ೧೭. | ಧರ್ಮಸೆರೆ | ಶ್ರೀ ಅಂಬಾ ಫಿಲಂಸ್ | ೧೯೭೯ |
| ೧೮. | ರಂಗನಾಯಕಿ | ಮಂಗಳ ಮೂವೀಸ್ | ೧೯೮೧ |
| ೧೯. | ಮಾನಸ ಸರೋವರ | ಮಿತ್ರವೃಂದ ಮೂವೀಸ್ | ೧೯೮೨ |
| ೨೦. | ಧರಣಿ ಮಂಡಲ ಮಧ್ಯದೊಳಗೆ | ಮಿತ್ರವೃಂದ ಮೂವೀಸ್ | ೧೯೮೩ |
| ೨೧. | ಅಮೃತ ಘಳಿಗೆ | ಜಯಭೇರಿ ಫಿಲಂಸ್ | ೧೯೮೪ |
| ೨೨. | ಋಣಮುಕ್ತಳು | ಕಣಗಾಲ್ ಕ್ರಿಯೇಷನ್ಸ್ | ೧೯೮೪ |
| ೨೩. | ಮಸಣದ ಹೂವು | ಅನುಗ್ರಹ ಮೂವಿ ಮೇಕರ್ಸ್ | ೧೯೮೫ |
| ೨೪. | ಸಾವಿರ ಮೆಟ್ಟಿಲು | ಪದ್ಮಾಂಬ ಪ್ರೊಡಕ್ಷನ್ಸ್ | ೨೦೦೬ |



"ಸಾವಿರ ಮೆಟ್ಟಿಲು" ಚಲನಚಿತ್ರದ ಚಿತ್ರೀಕರಣದಲ್ಲಿ ಕಲಾವಿದೆ ಅನುಪ್ರಭಾಕರ್ ಮತ್ತು ನಿರ್ಮಾಪಕ ಡಿ.ಬಿ. ಬಸವೇಗೌಡ.

## ಪುಟ್ಟಣ್ಣನವರ ನಿರ್ದೇಶನದ ಇತರ ಭಾಷಾ ಚಿತ್ರಗಳು

(೩.೫. ಎಂ.ಎಂ. ನಲ್ಲಿ)

| ಕ್ರ.ಸಂ. | ಚಿತ್ರದ ಹೆಸರು | ಲಾಂಛನ | ಬಿಡುಗಡೆ ವರ್ಷ |
|---|---|---|---|
| | | **ಮಲೆಯಾಳಂ** | |
| ೧. | ಸ್ಕೂಲ್ ಮಾಸ್ಟರ್ | ಸಾವಿತ್ರಿ ಪಿಕ್ಚರ್ಸ್ | ೧೯೬೪ |
| ೨. | ಕಳಂಚು ಕಿಟ್ಟಿ ತಂಗಂ | ಸಾವಿತ್ರಿ ಪಿಕ್ಚರ್ಸ್ | ೧೯೬೪ |
| ೩. | ಚೇಟತ್ತಿ | ಕಲ್ಪನಾ ಪ್ರೊಡಕ್ಷನ್ಸ್ | ೧೯೬೫ |
| ೪. | ಪೂಚಿಕಣ್ಣಿ | ಎ.ಎಲ್.ಎಸ್. ಪ್ರೊಡಕ್ಷನ್ | ೧೯೬೬ |
| ೫. | ಮೇಯರ್ ನಾಯರ್ | ಕಲ್ಪನಾ ಪ್ರೊಡಕ್ಷನ್ಸ್ | ೧೯೬೬ |
| ೬. | ಸ್ವಪ್ನಭೂಮಿ | ಸುಜಾತ ಪಿಕ್ಚರ್ಸ್ | ೧೯೬೭ |
| | | **ತೆಲುಗು** | |
| ೧. | ಪಕ್ಕಲೋಬಲ್ಲೆಂ | ಶಿವಶಕ್ತಿ ಮೂವೀಸ್ | ೧೯೬೫ |
| ೨. | ಪಾಲ ಮನಸುಲು | ಗೌರಿ ಪ್ರೊಡಕ್ಷನ್ | ೧೯೬೮ |
| ೩. | ಇದ್ದರು ಅಮ್ಮಾಯಿಲು | ಪ್ರೊಡ್ಯೂಸರ್ ಕಂಬೈನ್ಸ್ | ೧೯೭೦ |
| | | **ತಮಿಳು** | |
| ೧. | ಟೀಚರಮ್ಮ | ಸುಬ್ಬಲಕ್ಷ್ಮೀ ಪಿಕ್ಚರ್ಸ್ | ೧೯೬೮ |
| ೨. | ಸುಡರುಂ ಸುರಾವಳಿಯುಂ | ಚಿತ್ರಮಾಲಾ ಕಂಬೈನ್ಸ್ | ೧೯೭೧ |
| ೩. | ಇರುಳುಂ ವಳಯುಂ | ಪ್ರೊಡ್ಯೂಸರ್ ಕಂಬೈನ್ಸ್ | ೧೯೭೧ |
| | | **ಹಿಂದಿ** | |
| ೧. | ಝುಹ್ರೀಲಾ ಇನ್ಸಾನ್ | ಪ್ರಗತಿ ಇಂಟರ್‌ನ್ಯಾಷನಲ್ | ೧೯೭೩ |

## ಪುಟ್ಟಣ್ಣನವರ ಚಿತ್ರಗಳು ಪಡೆದ ರಾಜ್ಯಪ್ರಶಸ್ತಿಗಳು

| ಕ್ರ.ಸಂ. | ಚಿತ್ರದ ಹೆಸರು | ಪ್ರಶಸ್ತಿಯ ವಿವರ | ವರ್ಷ |
|---|---|---|---|
| ೧. | ಬೆಳ್ಳಿಮೋಡ | ದ್ವಿತೀಯ ಅತ್ಯುತ್ತಮ ಚಿತ್ರ | ೧೯೬೭ |
| ೨. | ಗೆಜ್ಜೆಪೂಜೆ | ಪ್ರಥಮ ಅತ್ಯುತ್ತಮ ಚಿತ್ರ | ೧೯೭೦ |
| ೩. | ಶರಪಂಜರ | ಪ್ರಥಮ ಅತ್ಯುತ್ತಮ ಚಿತ್ರ | ೧೯೭೧ |
| ೪. | ನಾಗರಹಾವು | ದ್ವಿತೀಯ ಅತ್ಯುತ್ತಮ ಚಿತ್ರ | ೧೯೭೨ |
| ೫. | ಉಪಾಸನೆ | ಪ್ರಥಮ ಅತ್ಯುತ್ತಮ ಚಿತ್ರ | ೧೯೭೪ |
| ೬. | ಕಥಾಸಂಗಮ | ಚತುರ್ಥ ಅತ್ಯುತ್ತಮ ಚಿತ್ರ | ೧೯೭೬ |
| ೭. | ರಂಗನಾಯಕಿ | ಪ್ರಥಮ ಅತ್ಯುತ್ತಮ ಚಿತ್ರ | ೧೯೮೧ |

## ಪುಟ್ಟಣ್ಣನವರ ಚಿತ್ರಗಳು ಪಡೆದ ರಾಷ್ಟ್ರಪ್ರಶಸ್ತಿಗಳು

| ಕ್ರ.ಸಂ. | ಚಿತ್ರದ ಹೆಸರು | ಪ್ರಶಸ್ತಿಯ ವಿವರ | ವರ್ಷ |
|---|---|---|---|
| ೧. | ಗೆಜ್ಜೆಪೂಜೆ | ರಾಷ್ಟ್ರಪತಿಯವರ ರಜತ ಪದಕ | ೧೯೭೦ |
| ೨. | ಶರಪಂಜರ | ರಾಷ್ಟ್ರಪತಿಯವರ ರಜತ ಪದಕ | ೧೯೭೩ |

## ಪುಟ್ಟಣ್ಣನವರಿಗೆ ಅತ್ಯುತ್ತಮ ಚಿತ್ರನಾಟಕ ಕರ್ತೃ ಪ್ರಶಸ್ತಿ ತಂದ ಚಿತ್ರಗಳು

| ಕ್ರ.ಸಂ. | ಚಿತ್ರದ ಹೆಸರು | ವರ್ಷ |
|---|---|---|
| ೧. | ಬೆಳ್ಳಿಮೋಡ | ೧೯೬೭-೬೮ |
| ೨. | ಗೆಜ್ಜೆಪೂಜೆ | ೧೯೬೯-೭೦ |
| ೩. | ಶರಪಂಜರ | ೧೯೭೦-೭೧ |
| ೪. | ನಾಗರಹಾವು | ೧೯೭೨-೭೩ |
| ೫. | ಉಪಾಸನೆ | ೧೯೭೪-೭೫ |
| ೬. | ಅಮೃತ ಘಳಿಗೆ | ೧೯೮೩-೮೪ |

## ಪುಟ್ಟಣ್ಣನವರು ಆಮದು ಮಾಡಿಕೊಂಡ ಹೆಸರಾಂತ ಕಲಾವಿದರು

| ಕ್ರ.ಸಂ. | ಕಲಾವಿದರ ಹೆಸರು | ಚಿತ್ರದ ಹೆಸರು | ವರ್ಷ |
|---|---|---|---|
| ೧. | ಪೃಥ್ವಿರಾಜ್ ಕಪೂರ್ | ಸಾಕ್ಷಾತ್ಕಾರ | ೧೯೭೧ |
| ೨. | ಜಮುನ | ಸಾಕ್ಷಾತ್ಕಾರ | ೧೯೭೧ |
| ೩. | ಮಾರ್ಗರೇಟ್ ಥಾಂಸನ್ | ಬಿಳೀಹೆಂಡ್ತಿ | ೧೯೭೫ |
| ೪. | ಅಮರೀಶ್ ಪುರಿ | ಫಲಿತಾಂಶ | ೧೯೭೬ |
| ೫. | ಅರುಣಾ ಇರಾನಿ | ಫಲಿತಾಂಶ | ೧೯೭೬ |

## ಪುಟ್ಟಣ್ಣನವರಿಂದ ಪರಿಚಯಿಸಲ್ಪಟ್ಟ ಲೇಖಕರು

ಹೆಚ್.ವಿ ಸುಬ್ಬರಾವ್

ಟಿ.ಎನ್. ಸೀತಾರಾಂ

ಟಿ.ಜಿ. ಅಶ್ವಥ್‌ನಾರಾಯಣ

ಯೋಗಾನರಸಿಂಹ

ನವರತ್ನರಾಂ

## ಪುಟ್ಟಣ್ಣನವರಿಂದ ಪರಿಚಯಿಸಲ್ಪಟ್ಟ ಛಾಯಾಗ್ರಾಹಕ

ಬಿ.ಎಸ್. ಬಸವರಾಜ್ "ಮಾನಸ ಸರೋವರ" ಚಿತ್ರದಿಂದ.

## ಪುಟ್ಟಣ್ಣನವರಿಂದ ಪರಿಚಯಿಸಲ್ಪಟ್ಟ ಹಿನ್ನೆಲೆಗಾಯಕಿ

ಬಿ.ಆರ್. ಛಾಯ "ಅಮೃತ ಘಳಿಗೆ" ಚಿತ್ರದಿಂದ.

## ಪುಟ್ಟಣ್ಣನವರು ಚಿತ್ರ ಮಾಡಿದ ಕಾದಂಬರಿ ಮತ್ತು ಸಣ್ಣ ಕಥೆಗಳು

| ಕ್ರಸಂ. | ಚಿತ್ರದ ಹೆಸರು | ಕೃತಿಗಳ ಹೆಸರು | ಬರಹಗಾರರ ಹೆಸರು |
|---|---|---|---|
| ೧. | ಬೆಳ್ಳಿಮೋಡ | "ಬೆಳ್ಳಿಮೋಡ" ಕಾದಂಬರಿ | ತ್ರಿವೇಣಿ |
| ೨. | ಮಲ್ಲಮ್ಮನ ಪವಾಡ | "ಮಲ್ಲಮ್ಮನ ಪವಾಡ" | ಬಿ. ಪುಟ್ಟಸ್ವಾಮಯ್ಯ |
| ೩. | ಕಪ್ಪು ಬಿಳುಪು | "ಕಪ್ಪುಬಿಳುಪು" | ಆರ್ಯಾಂಬ ಪಟ್ಟಾಭಿ |
| ೪. | ಗೆಜ್ಜೆ ಪೂಜೆ | "ಗೆಜ್ಜೆಪೂಜೆ" | ಎಂ.ಕೆ. ಇಂದಿರಾ |
| ೫. | ಶರಪಂಜರ | "ಶರಪಂಜರ" | ತ್ರಿವೇಣಿ |
| ೬. | ನಾಗರಹಾವು | "ಸರ್ಪಮತ್ಸರ" | |
| | | "ಎರಡು ಹೆಣ್ಣು ಒಂದು ಗಂಡು" | |
| | | "ನಾಗರಹಾವು" | ತ.ರಾ.ಸು. |
| ೭. | ಎಡಕಲ್ಲು ಗುಡ್ಡದ ಮೇಲೆ | "ಎಡಕಲ್ಲು ಗುಡ್ಡದ ಮೇಲೆ" | ಭಾರತೀಸುತ |
| ೮. | ಉಪಾಸನೆ | "ಉಪಾಸನೆ" | ದೇವಕೀಮೂರ್ತಿ |
| ೯. | ಶುಭಮಂಗಳ | "ಶುಭಮಂಗಳ" | ವಾಣಿ |
| ೧೦. | ಬಿಳೀಹೆಂಡ್ತಿ | "ಬಿಳೀಹೆಂಡ್ತಿ" | ಮನ. ಮೂರ್ತಿ |
| ೧೧. | ಕಥಾಸಂಗಮ | "ಅತಿಥಿ" ಸಣ್ಣಕಥೆ | ಡಾ. ವೀಣಾ ಶಾಂತೇಶ್ವರ್ |
| | | "ಮುನಿತಾಯಿ" ಸಣ್ಣಕಥೆ | ಈಶ್ವರಚಂದ್ರ |
| | | "ಹಂಗು" ಸಣ್ಣಕಥೆ | ಡಾ. ಗಿರಡ್ಡಿ ಗೋವಿಂದರಾಜ್ |
| ೧೨. | ಕಾಲೇಜುರಂಗ | "ಕಾಲೇಜುರಂಗ" | ಬಿ.ಜಿ.ಎಲ್. ಸ್ವಾಮಿ |
| ೧೩. | ಫಲಿತಾಂಶ | "ಫಲಿತಾಂಶ" ಸಣ್ಣಕಥೆ | ಶ್ರೀನಿವಾಸ ಕುಲಕರ್ಣಿ |
| ೧೪. | ಧರ್ಮಸೆರೆ | "ಧರ್ಮಸೆರೆ" | ಜಡಭರತ |
| ೧೫. | ರಂಗನಾಯಕಿ | "ರಂಗನಾಯಕಿ" | ಅಶ್ವತ್ಥ್ |
| ೧೬. | ಅಮೃತ ಘಳಿಗೆ | "ಅವಧಾನ" | ಡಾ. ಡಿ. ವೆಂಕಟರಾವ್ |
| ೧೭. | ಋಣಮುಕ್ತಳು | "ಋಣ" | ಡಾ. ಅನುಪಮಾ ನಿರಂಜನ್ |
| ೧೮. | ಮಸಣದ ಹೂವು | "ಮಸಣದ ಹೂವು" | ತ.ರಾ.ಸು. |

## ಪುಟ್ಟಣ್ಣನವರಿಂದ ನೇರವಾಗಿ ಕನ್ನಡ ಚಿತ್ರರಂಗಕ್ಕೆ ಪರಿಚಯಿಸಲ್ಪಟ್ಟ ಕಲಾವಿದರು

| ಕ್ರ.ಸಂ. | ಕಲಾವಿದರ ಹೆಸರು | ಚಿತ್ರದ ಹೆಸರು | ವರ್ಷ |
|---|---|---|---|
| ೧. | ವಜ್ರಮುನಿ | ಸಾವಿರ ಮೆಟ್ಟಿಲು (ಅಪೂರ್ಣ ಚಿತ್ರ) | ೧೯೬೮ |
| ೨. | ಆರತಿ | ಗೆಜ್ಜೆಪೂಜೆ | ೧೯೭೦ |
| ೩. | ಸುಂದರಕೃಷ್ಣ ಅರಸ್ | ಗೆಜ್ಜೆಪೂಜೆ | ೧೯೭೦ |
| ೪. | ಗಂಗಾಧರ್ | ಗೆಜ್ಜೆಪೂಜೆ | ೧೯೭೦ |
| ೫. | ಲೋಕನಾಥ್ | ಗೆಜ್ಜೆಪೂಜೆ | ೧೯೭೦ |
| ೬. | ವಿಷ್ಣುವರ್ಧನ್ | ನಾಗರಹಾವು | ೧೯೭೨ |
| ೭. | ಅಂಬರೀಶ್ | ನಾಗರಹಾವು | ೧೯೭೨ |
| ೮. | ಧೀರೇಂದ್ರ ಗೋಪಾಲ್ | ನಾಗರಹಾವು | ೧೯೭೨ |
| ೯. | ಶುಭಾ | ನಾಗರಹಾವು | ೧೯೭೨ |
| ೧೦. | ಚಂದ್ರಶೇಖರ್ | ಎಡಕಲ್ಲು ಗುಡ್ಡದ ಮೇಲೆ | ೧೯೭೩ |
| ೧೧. | ಡಾ. ಮಣ್ಣೂರ್ | ಉಪಾಸನೆ | ೧೯೭೪ |
| ೧೨. | ಸೀತಾರಾಂ | ಉಪಾಸನೆ | ೧೯೭೪ |
| ೧೩. | ಅನಿಲ್‌ಕುಮಾರ್ | ಬಿಳೀಹೆಂಡ್ತಿ | ೧೯೭೫ |
| ೧೪. | ಮಾರ್ಗರೇಟ್ ಥಾಂಸನ್ | ಬಿಳೀಹೆಂಡ್ತಿ | ೧೯೭೫ |
| ೧೫. | ರಜನೀಕಾಂತ್ | ಕಥಾಸಂಗಮ (ಮುನಿತಾಯಿ) | ೧೯೭೬ |
| ೧೬. | ಜಯಸಿಂಹ | ಕಾಲೇಜುರಂಗ | ೧೯೭೬ |
| ೧೭. | ಜೈಜಗದೀಶ್ | ಫಲಿತಾಂಶ | ೧೯೭೬ |
| ೧೮. | ಪದ್ಮಾವಾಸಂತಿ | ಮಾನಸ ಸರೋವರ | ೧೯೮೨ |

| | | | |
|---|---|---|---|
| ೧೯. | ತ್ರಿವೇಣಿ ಕಣಗಾಲ್ | ಧರಣಿ ಮಂಡಲ ಮಧ್ಯದೊಳಗೆ | ೧೯೮೩ |
| ೨೦. | ರಾಮು ಕಣಗಾಲ್ | ಧರಣಿ ಮಂಡಲ ಮಧ್ಯದೊಳಗೆ | ೧೯೮೩ |
| ೨೧. | ಶ್ರೀಧರ್ | ಅಮೃತ ಘಳಿಗೆ | ೧೯೮೪ |
| ೨೨. | ಅಪರ್ಣ | ಮಸಣದ ಹೂವು | ೧೯೮೫ |

ಈ ಮೊದಲೇ ವಿಷ್ಣುವರ್ಧನ್ "ವಂಶವೃಕ್ಷ"ದಲ್ಲೂ ಗಂಗಾಧರ್ "ಲಗ್ನಪತ್ರಿಕೆ" ಯಲ್ಲೂ ಮತ್ತು ರಜನೀಕಾಂತ್ ತಮಿಳಿನಲ್ಲೂ ಕಾಣಿಸಿಕೊಂಡಿದ್ದರು.



"ಸಾವಿರ ಮೆಟ್ಟಿಲು" ಚಲನಚಿತ್ರದ ಚಿತ್ರೀಕರಣದಲ್ಲಿ ಕಲಾವಿದೆ ಅನುಪ್ರಭಾಕರ್ ಮತ್ತು ನಿರ್ಮಾಪಕ ಡಿ.ಬಿ. ಬಸವೇಗೌಡ.

## ಪುಟ್ಟಣ್ಣನವರಿಂದ ತಿರುವು ಪಡೆದ ಕಲಾವಿದರು

| ಕ್ರ.ಸಂ. | ಕಲಾವಿದರ ಹೆಸರು | ಚಿತ್ರದ ಹೆಸರು | ವರ್ಷ |
|---|---|---|---|
| ೧. | ಕಲ್ಪನಾ | ಬೆಳ್ಳಿಮೋಡ | ೧೯೬೭ |
| ೨. | ರಾಜೇಶ್ | ಕಪ್ಪು ಬಿಳುಪು | ೧೯೬೯ |
| ೩. | ಸುದರ್ಶನ್ | ಕಪ್ಪು ಬಿಳುಪು | ೧೯೬೯ |
| ೪. | ಲೀಲಾವತಿ | ಗೆಜ್ಜೆಪೂಜೆ | ೧೯೭೦ |
| ೫. | ದಿನೇಶ್ | ಕರುಳಿನ ಕರೆ | ೧೯೭೦ |
| ೬. | ಶಿವರಾಂ | ಶರಪಂಜರ | ೧೯೭೧ |
| ೭. | ಚಿಂದೋಡಿ ಲೀಲಾ | ಶರಪಂಜರ | ೧೯೭೧ |
| ೮. | ಅಶ್ವಥ್ | ನಾಗರಹಾವು | ೧೯೭೨ |
| ೯. | ಜಯಂತಿ | ನಾಗರಹಾವು | ೧೯೭೨ |
| ೧೦. | ಎಂ.ಪಿ. ಶಂಕರ್ | ನಾಗರಹಾವು | ೧೯೭೨ |
| ೧೧. | ರಂಗ | ಎಡಕಲ್ಲು ಗುಡ್ಡದ ಮೇಲೆ | ೧೯೭೩ |
| ೧೨. | ಶ್ರೀನಾಥ್ | ಶುಭಮಂಗಳ | ೧೯೭೫ |
| ೧೩. | ಬಿ.ವಿ. ರಾಧ | ಶುಭಮಂಗಳ | ೧೯೭೫ |
| ೧೪. | ಉಮೇಶ್ | ಕಥಾಸಂಗಮ | ೧೯೭೬ |
| ೧೫. | ಮುಸುರಿ ಕೃಷ್ಣಮೂರ್ತಿ | ಪಡುವಾರಹಳ್ಳಿ ಪಾಂಡವರು | ೧೯೭೮ |
| ೧೬. | ರಾಮಕೃಷ್ಣ | ರಂಗನಾಯಕಿ | ೧೯೮೧ |
| ೧೭. | ರಾಜಾನಂದ್ | ರಂಗನಾಯಕಿ | ೧೯೮೧ |
| ೧೮. | ಭಾರತಿ | ಋಣಮುಕ್ತಳು | ೧೯೮೪ |
| ೧೯. | ಮಾಸ್ಟರ್ ಹಿರಣ್ಣಯ್ಯ | ಋಣಮುಕ್ತಳು | ೧೯೮೪ |

## ಪುಟ್ಟಣ್ಣನವರು ಕಾಣಿಸಿಕೊಂಡ ಚಿತ್ರಗಳು

೧. ರತ್ನಗಿರಿ ರಹಸ್ಯ ೨. ಸ್ಕೂಲ್ ಮಾಸ್ಟರ್ ೩. ಮಕ್ಕಳ ರಾಜ್ಯ

೪. ಶರಪಂಜರ ೫. ಕಥಾ ಸಂಗಮ ೬. ಧರಣಿ ಮಂಡಲ ಮಧ್ಯದೊಳಗೆ

'ನಾ ಕಂಡ ಪುಟ್ಟಣ್ಣ ಕಣಗಾಲ್' ಡಾ. ಡಿ.ಬಿ. ಬಸವೇಗೌಡರು ಸುಮಾರು ೨೬ ವರ್ಷಗಳ ಹಿಂದೆಯೇ ಪ್ರಕಟಿಸಿದ ಕೃತಿ. ಶ್ರೀಯುತರು ಅಂದು ನನಗೆ ಈ ಕೃತಿಯ ಪ್ರತಿಯನ್ನು ಕಳುಹಿಸಿದಾಗ ಅದನ್ನು ಮೈ ಮರೆತು ಓದಿದೆ. ಕನ್ನಡದ ಒಬ್ಬ ಚಲನಚಿತ್ರ ನಿದೇಶಕರ ಬಗ್ಗೆ ೨೫ ವರ್ಷಗಳಷ್ಟು ಹಿಂದೆಯೇ ಬಹಳ ಆತ್ಮೀಯತೆಯಿಂದ ಬರೆದ ಕೃತಿ ಇದು. ಓದಿದ ಎಷ್ಟೋ ಕಾಲ ಈ ಪುಸ್ತಕದ ಗುಂಗಿನಿಂದ ನನಗೆ ಹೊರಬರಲಾಗಲಿಲ್ಲ. ಪ್ರಕಟವಾದ ಒಂದು ವರ್ಷದಲ್ಲೇ ಮರುಮುದ್ರಣಗೊಂಡ ಈ ಕೃತಿಯ ಪ್ರತಿಗಳು ಮುಗಿದುಹೋಗಿ ಕನ್ನಡ ಓದುಗರಿಗೆ ಲಭ್ಯವಿಲ್ಲದಂತಾದವು. ಪುಟ್ಟಣ್ಣ ಕಣಗಾಲ್ ಅಭಿಮಾನಿಗಳಲ್ಲಿ ನಾನೂ ಒಬ್ಬ. ಕನ್ನಡ ಚಿತ್ರನಿರ್ದೇಶಕರಿಗೆ ತಾರಾ ವರ್ಚಸ್ಸನ್ನು ತಂದುಕೊಟ್ಟ ಪ್ರಪ್ರಥಮ ನಿರ್ದೇಶಕರಿವರು ಎಂದರೆ ತಪ್ಪಾಗಲಾರದು. 'ಕ್ಲಾಸ್ ಮತ್ತು ಮಾಸ್' ಎರಡೂ ಬಗೆಯ ಪ್ರೇಕ್ಷಕರ ಮನಸೂರೆಗೊಂಡ ಈ ನಿರ್ದೇಶಕ ಭಾರತೀಯ ಚಿತ್ರರಂಗಕ್ಕೆ ನೀಡಿದ ಕೊಡುಗೆ ಅಪಾರ. ಬಡತನದಲ್ಲಿ ಹುಟ್ಟಿ, 'ಸ್ವಂತ ಪ್ರತಿಭೆಯಿಂದ ಕನ್ನಡಿಗರ ಮನೆಮಾತಾಗಿದ್ದ ಇವರು ದುರಾದೃಷ್ಟವಶಾತ್ ಅಕಾಲ ಮರಣಕ್ಕೆ ತುತ್ತಾದ ಮಹಾನ್ ಚೇತನ. ಇವರ ಅತ್ಯಂತ ಸಮೀಪವರ್ತಿಯಾಗಿದ್ದ ಲೇಖಕರು ಪುಟ್ಟಣ್ಣನವರ ವ್ಯಕ್ತಿತ್ವವನ್ನು ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಪುಟ್ಟಣ್ಣನವರು ೧೯೬೮ರಲ್ಲಿ ನಿರ್ದೇಶಿಸಲು ಪ್ರಾರಂಭಿಸಿದ 'ಸಾವಿರ ಮೆಟ್ಟಿಲು' ಚಿತ್ರವು ಅನಿರೀಕ್ಷಿತ ಕಾರಣಗಳಿಂದ ನಿಂತು ಹೋದಾಗ ಅದನ್ನು ೨೦೦೬ರಲ್ಲಿ ಅವರ ನಿಧನಾನಂತರ ಪೂರ್ಣಗೊಳಿಸಿದ ಸಾಹಸಿ ಡಾ. ಡಿ.ಬಿ. ಬಸವೇಗೌಡರು.

ಡಾ. ಸಿದ್ಧಲಿಂಗಯ್ಯ
ಅಧ್ಯಕ್ಷರು

ಕನ್ನಡ ಪುಸ್ತಕ ಪ್ರಾಧಿಕಾರ

ಬೆಲೆ : ₹ ೧೫೦/-